prajavani.net prajavani | ಬುಧವಾರ, ಮಾರ್ಚ್ 18, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 77 | ಪುಟ 18 | www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸೆನ್ಸೆಕ್ಸ್ 76,070 | ನಿಫ್ಟಿ 23,581 | $/₹ 92.40



ಅಗ್ರಸ್ಥಾನ ಅಬಾಧಿತ
ಭಾರತ ತಂಡದ ಉಪನಾಯಕಿ ಸ್ಮೃತಿ ಮಂದಾನ ಅವರು ಮಂಗಳವಾರ ಬಿಡುಗಡೆಯಾದ ಐಸಿಸಿ ಮಹಿಳಾ ಏಕದಿನ ಬ್ಯಾಟಿಂಗ್ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನ ಉಳಿಸಿಕೊಂಡಿದ್ದಾರೆ

‘ಇರಾನ್ ಭದ್ರತಾ ಮುಖ್ಯಸ್ಥನ ಹತ್ಯೆ’

ಅಲಿ ಲಾರೀಜಾನಿ ಹತ್ಯೆ • ಇಸ್ರೇಲ್ ರಕ್ಷಣಾ ಸಚಿವ ಕಾಟ್ಜ್ ಹೇಳಿಕೆ

ದುಬೈ/ಜೆರುಸಲೇಂ (ರಾಯಿಟರ್ಸ್): ‘ತನ್ನ ಸೇನಾಪಡೆಗಳು ಸೋಮವಾರ ತಡರಾತ್ರಿ ನಡೆಸಿದ ವೈಮಾನಿಕ ದಾಳಿಯಲ್ಲಿ ಇರಾನ್‌ನ ಭದ್ರತಾ ಮುಖ್ಯಸ್ಥ ಅಲಿ ಲಾರೀಜಾನಿ ಹತರಾಗಿದ್ದಾರೆ’ ಎಂದು ಇಸ್ರೇಲ್ ಮಂಗಳವಾರ ಹೇಳಿದೆ.

‘ಈ ದಾಳಿಯಲ್ಲಿ ಅರೆಸೇನಾ ಪಡೆ ಬಸೀಜ್‌ನ ಕಮಾಂಡರ್ ಗುಲಾಮ್ ರೆಜಾ ಸುಲೈಮಾನಿ ಕೂಡ ಹತರಾಗಿದ್ದಾರೆ’ ಎಂದು ಇಸ್ರೇಲ್‌ನ ರಕ್ಷಣಾ ಸಚಿವ ಇಸ್ರೇಲ್ ಕಾಟ್ಜ್ ಹೇಳಿಕೊಂಡಿದ್ದಾರೆ.

ಇಸ್ರೇಲ್ ದಾಳಿಯಲ್ಲಿ ಸುಲೈಮಾನಿ ಮೃತಪಟ್ಟಿರುವುದನ್ನು ಇರಾನ್ ಖಚಿತಪಡಿಸಿದೆ. ಆದರೆ ಲಾರೀಜಾನಿ ಹತ್ಯೆ ಅಥವಾ ಗಾಯಗೊಂಡಿರುವ ಕುರಿತು ಈವರೆಗೆ ಏನನ್ನೂ ಹೇಳಿಲ್ಲ.

ಲಾರೀಜಾನಿ ಅವರ ಹತ್ಯೆ ಖಚಿತ ಪಟ್ಟರೆ, ಇಸ್ರೇಲ್– ಅಮೆರಿಕ ನಡೆಸಿದ್ದ ದಾಳಿಯಲ್ಲಿ ಇರಾನ್‌ನ ಪರಮೋಚ್ಚ ನಾಯಕ ಆಯತೊಲ್ಲಾ ಖಮೇನಿ ಮೃತಪಟ್ಟ ನಂತರ ಹತ್ಯೆಯಾದ ಅತ್ಯಂತ ಹಿರಿಯ ಅಧಿಕಾರಿ ಇವರೇ ಆಗಲಿದ್ದಾರೆ.

ಲಾರೀಜಾನಿ ಅವರು ಟೆಹರಾನ್‌ನಲ್ಲಿ ‘ಖುದ್ಸ್ ದಿನ’ದ ಅಂಗವಾಗಿ ಶುಕ್ರವಾರ ಹಮ್ಮಿಕೊಂಡಿದ್ದ ರ‍್ಯಾಲಿಯಲ್ಲಿ ಕೊನೆಯ ಬಾರಿಗೆ ಕಾಣಿಸಿಕೊಂಡಿದ್ದರು. ಲಾರೀಜಾನಿ ಸೇರಿದಂತೆ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ಸ್ ಕೋರ್‌ನೊಂದಿಗೆ ಸಂಪರ್ಕ ಹೊಂದಿರುವ ಹಾಗೂ ಗುಪ್ತಚರ ವಿಭಾಗದ 10 ಹಿರಿಯ ಅಧಿಕಾರಿಗಳ ಬಗ್ಗೆ ಮಾಹಿತಿ ನೀಡಿದವರಿಗೆ 1 ಕೋಟಿ ಡಾಲರ್ (₹92.56 ಕೋಟಿ) ಬಹುಮಾನ ನೀಡುವುದಾಗಿ ಅಮೆರಿಕ ಘೋಷಿಸಿತ್ತು.

▶12



ಲಾರೀಜಾನಿ



ಸುಲೈಮಾನಿ

> ಇಸ್ರೇಲ್ ಪಡೆಗಳು ನಡೆಸಿದ ದಾಳಿಯಲ್ಲಿ ಅಲಿ ಲಾರೀಜಾನಿ ಹತ್ಯೆ ಮಾಡಲಾಗಿದೆ. ತಮ್ಮ ಭವಿಷ್ಯವನ್ನು ತಾವೇ ರೂಪಿಸಿಕೊಳ್ಳಲು ಇರಾನ್ ಜನರಿಗೆ ಅವಕಾಶ ಒದಗಿಬಂದಂತಾಗಿದೆ
> **ಬೆಂಜಮಿನ್ ನೆತನ್ಯಾಹು,** ಇಸ್ರೇಲ್ ಪ್ರಧಾನಿ

ಜೋ ಕೆಂಟ್ ರಾಜೀನಾಮೆ



ಜೋ ಕೆಂಟ್

ವಾಷಿಂಗ್ಟನ್ (ಎಪಿ): ಅಮೆರಿಕದ ರಾಷ್ಟ್ರೀಯ ಭಯೋತ್ಪಾದನಾ ನಿಗ್ರಹ ದಳದ ನಿರ್ದೇಶಕ ಜೋ ಕೆಂಟ್ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಘೋಷಿಸಿದ್ದಾರೆ.

‘ಇರಾನ್ ವಿರುದ್ಧ ಟ್ರಂಪ್ ಆಡಳಿತ ನಡೆಸುತ್ತಿರುವ ಯುದ್ಧ ಬೆಂಬಲಿಸುವುದನ್ನು ನನ್ನ ಆತ್ಮಸಾಕ್ಷಿ ಒಪ್ಪುತ್ತಿಲ್ಲ’ ಎಂದು ಅವರು ಹೇಳಿದ್ದಾರೆ.

‘ಇರಾನ್ ನಮ್ಮ ದೇಶಕ್ಕೆ ಯಾವುದೇ ಬೆದರಿಕೆಯನ್ನು ಒಡ್ಡಿಲ್ಲ. ಇಸ್ರೇಲ್ ಮತ್ತು ಅಮೆರಿಕದ ಲಾಬಿಯ ಒತ್ತಡದಿಂದಾಗಿ ನಾವು ಈ ಯುದ್ಧವನ್ನು ಪ್ರಾರಂಭಿಸಿದ್ದೇವೆ ಎಂಬುದು ಸ್ಪಷ್ಟವಾಗಿದೆ’ ಎಂದು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಾರೆ.

ಭಯೋತ್ಪಾದಕ ಸಂಘಟನೆಗಳಿಂದ ಎದುರಾಗುವ ಬೆದರಿಕೆಗಳನ್ನು ಪತ್ತೆ ಹಚ್ಚುವುದು ಹಾಗೂ ವಿಶ್ಲೇಷಿಸುವುದು ರಾಷ್ಟ್ರೀಯ ಭಯೋತ್ಪಾದನಾ ದಳದ ಕೆಲಸ. ಕೆಂಟ್ ಅವರು ಬಲಪಂಥೀಯ ತೀವ್ರವಾದಿ ಗುಂಪುಗಳೊಂದಿಗೆ ನಂಟು ಹೊಂದಿದ್ದ ರಾಜಕಾರಣಿ. ಇವರನ್ನು 2025ರ ಜುಲೈ 30ರಂದು ಅಮೆರಿಕದ ಸೆನೆಟ್ 52–44 ಮತಗಳ ಅಂತರದಿಂದ ಆಯ್ಕೆ ಮಾಡಿತ್ತು.

ದಾಳಿ ಅನಿರೀಕ್ಷಿತ: ಅಧ್ಯಕ್ಷ ಟ್ರಂಪ್

ಟೆಲ್ ಅವೀವ್/ವಾಷಿಂಗ್ಟನ್: ಯುಎಇ ಹಾಗೂ ಇತರ ಕೊಲ್ಲಿ ದೇಶಗಳ ಮೇಲೆ ಇರಾನ್ ಮಂಗಳವಾರ ಹೊಸದಾಗಿ ವಾಯು ದಾಳಿ ನಡೆಸಿದೆ. ಈ ಕುರಿತು ಪ್ರತಿಕ್ರಿಯಿಸಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ‘ಮಿತ್ರ ರಾಷ್ಟ್ರಗಳ ಮೇಲಿನ ಇರಾನ್ ದಾಳಿಯನ್ನು ಯಾರೂ ಅಂದಾಜು ಮಾಡಿರಲಿಲ್ಲ’ ಎಂದಿದ್ದಾರೆ.

▶12

ಗುಜರಾತ್ ತಲುಪಿದ ‘ನಂದಾದೇವಿ’

ಅಹಮದಾಬಾದ್: ಎಲ್‌ಪಿಜಿ ಹೊತ್ತ ಭಾರತದ ‘ನಂದಾದೇವಿ’ ಹಡಗು ಮಂಗಳವಾರ ಗುಜರಾತ್‌ನ ವಾಡಿನಾರ್ ಬಂದರು ತಲುಪಿತು.

ಈ ಹಡಗು 46,500 ಮೆಟ್ರಿಕ್ ಟನ್ ಇಂಧನವನ್ನು ಹೊತ್ತು ತಂದಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಯುದ್ಧಪೀಡಿತ ಪ್ರದೇಶದಿಂದ ಸುರಕ್ಷಿತವಾಗಿ ಹೊರಬಂದಿರುವ ಭಾರತದ ಐದನೇ ಹಡಗು ಇದಾಗಿದೆ. 1,000 ಟನ್ ಎಲ್‌ಪಿಜಿ ವರ್ಗಾವಣೆಗೆ ಒಂದು ಗಂಟೆ ಹಿಡಿಯುತ್ತದೆ’ ಎಂದು ತಿಳಿಸಿದ್ದಾರೆ.

‘ಪಾಕ್ ದಾಳಿಯಲ್ಲಿ 400 ಮಂದಿ ಸಾವು’

ಕಾಬೂಲ್‌ನಲ್ಲಿರುವ ಮಾದಕವಸ್ತು ವ್ಯಸನ ಮುಕ್ತಿ ಹಾಗೂ ಪುನಶ್ಚೇತನ ಕೇಂದ್ರದ ಮೇಲೆ ಸೋಮವಾರ ತಡರಾತ್ರಿ ಪಾಕಿಸ್ತಾನ ಪಡೆಗಳು ನಡೆಸಿದ ವೈಮಾನಿಕ ದಾಳಿಯಲ್ಲಿ 400 ಮಂದಿ ಮೃತಪಟ್ಟಿದ್ದಾರೆ.

ವಿವರ ▶12

ದೊಡ್ಡ ಮಗುವಿನ ದತ್ತು ಪಡೆದರೂ ತಾಯ್ತನ ರಜೆ: ಸುಪ್ರೀಂ ಕೋರ್ಟ್



ನವದೆಹಲಿ (ಪಿಟಿಐ): ದತ್ತು ಸ್ವೀಕರಿಸಿದ ಮಗು ಜೈವಿಕ ಮಗುವಿಗಿಂತ ಭಿನ್ನವಲ್ಲ ಎಂದು ಹೇಳಿರುವ ಸುಪ್ರೀಂ ಕೋರ್ಟ್, ಮೂರು ತಿಂಗಳಿಗೂ ಕಡಿಮೆ ವಯಸ್ಸಿನ ಮಗುವನ್ನು ದತ್ತು ತೆಗೆದುಕೊಳ್ಳುವ ಮಹಿಳೆ ಮಾತ್ರ ತಾಯ್ತನ ರಜೆಗೆ ಅರ್ಹರಾಗುತ್ತಾರೆ ಎಂಬ ಕಾನೂನನ್ನು ಮಂಗಳವಾರ ರದ್ದುಗೊಳಿಸಿದೆ.

‘ಮಗುವನ್ನು ಕಾನೂನುಬದ್ಧವಾಗಿ ದತ್ತು ಪಡೆದುಕೊಂಡ ಮಹಿಳೆಯು ಮಗುವಿನ ವಯಸ್ಸನ್ನು ಪರಿಗಣಿಸದೆ 12 ವಾರಗಳ ಮಾತೃತ್ವ ರಜೆಗೆ ಅರ್ಹರಾಗಿರುವರು’ ಎಂದು ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ ಮತ್ತು ಆರ್.ಮಹಾದೇವನ್ ಅವರ ಪೀಠ ತೀರ್ಪು ನೀಡಿದೆ.

ಸಾಮಾಜಿಕ ಭದ್ರತೆ ಸಂಹಿತೆ–2020ರ ಸೆಕ್ಷನ್ 60 (4)ರ ಅಡಿಯಲ್ಲಿ ವಯಸ್ಸಿನ ಆಧಾರದ ವರ್ಗೀಕರಣವು ಸಂವಿಧಾನದ 14 ಮತ್ತು 21ನೇ ವಿಧಿಗಳ ಉಲ್ಲಂಘನೆಯಾಗಿದೆ ಎಂದು ಹೇಳಿದ ಪೀಠ, ‘ಈಗ ಇರುವ ಕಾನೂನು ತಾರತಮ್ಯದಿಂದ ಕೂಡಿದೆ’ ಎಂದಿತು. 3 ತಿಂಗಳಿಗೂ ಕಡಿಮೆ ವಯೋಮಾನದ ಮಗುವನ್ನು ದತ್ತು ತೆಗೆದುಕೊಳ್ಳುವ ಮಹಿಳೆ ಮಾತ್ರ ತಾಯ್ತನದ ರಜೆ ತೆಗೆದು ಕೊಳ್ಳಲು ಅರ್ಹ ಎಂಬ ನಿಬಂಧನೆಯನ್ನು ಪ್ರಶ್ನಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್ ಈ ತೀರ್ಪು ನೀಡಿದೆ.

▶9

ನೀರಾವರಿ: ಪ್ರಧಾನಿ ಬಳಿಗೆ ಸರ್ವಪಕ್ಷ ನಿಯೋಗ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ನೀರಾವರಿ ಯೋಜನೆಗಳಿಗೆ ಶೀಘ್ರ ಅನುಮೋದನೆ ಪಡೆಯಲು ಐದು ವಿಧಾನಸಭೆಗಳ ಚುನಾವಣೆ ಬಳಿಕ ಸರ್ವಪಕ್ಷ ನಿಯೋಗ ತೆರಳಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಜಲಶಕ್ತಿ ಸಚಿವ ಸಿ.ಆರ್. ಪಾಟೀಲ ಅವರ ಮೇಲೆ ಒತ್ತಡ ಹೇರಲು ರಾಜ್ಯದ ಸಂಸದರ ಸಭೆಯಲ್ಲಿ ತೀರ್ಮಾನಿಸಲಾಯಿತು.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ಕರ್ನಾಟಕ ಭವನದಲ್ಲಿ ಮಂಗಳವಾರ ನಡೆದ ಸಭೆಯಲ್ಲಿ ರಾಜ್ಯದ ಹಿತ ಕಾಪಾಡಲು ಒಗ್ಗಟ್ಟಿನಿಂದ ಹೆಜ್ಜೆ ಇಡಲು ನಿರ್ಧರಿಸಲಾಯಿತು. ವಿಧಾನಸಭಾ ಉಪಚುನಾವಣೆ ಮುಗಿದ ಬಳಿಕ ಮತ್ತೊಮ್ಮೆ ಸಂಸದರ ಸಭೆ ಕರೆಯಲು ಸಮ್ಮತಿ ವ್ಯಕ್ತವಾಯಿತು.

‘ರಾಜ್ಯದಲ್ಲಿ ಉಪಚುನಾವಣೆ ಘೋಷಣೆಯಾಗಿದೆ. ಈಗ ನೀರಾವರಿ ಯೋಜನೆಗಳ ಬಗ್ಗೆ ವಿಸ್ತೃತವಾಗಿ ಚರ್ಚೆ ನಡೆಸುವುದು ಬೇಡ. ಚುನಾವಣೆ ಮುಗಿದ ಬಳಿಕ ಮತ್ತೊಮ್ಮೆ ಸಭೆ ಕರೆಯಿರಿ. ರಾಜ್ಯದ ಪ್ರಯತ್ನಕ್ಕೆ ನಾವೆಲ್ಲ ಸಂಪೂರ್ಣ ಸಹಕಾರ ನೀಡುತ್ತೇವೆ’ ಎಂದು ಸಂಸದರಾದ ಗೋವಿಂದ ಕಾರಜೋಳ, ಜಗದೀಶ ಶೆಟ್ಟರ್ ಮತ್ತಿತರ ಸದಸ್ಯರು ಸಲಹೆ ನೀಡಿದರು.

ಡಿ.ಕೆ. ಶಿವಕುಮಾರ್ ಮಾತನಾಡಿ, ‘ಕೃಷ್ಣಾ ಮೇಲ್ದಂಡೆ ಯೋಜನೆಗೆ ನೆರೆ ರಾಜ್ಯಗಳಾದ ಆಂಧ್ರ ಪ್ರದೇಶ ಹಾಗೂ ಮಹಾರಾಷ್ಟ್ರ ಅನಗತ್ಯವಾಗಿ ತಕರಾರು ಎತ್ತಿವೆ. ಬಿಕ್ಕಟ್ಟು ಬಗೆಹರಿಸಲು ಕೇಂದ್ರ ಜಲಶಕ್ತಿ ಸಚಿವರು ಎರಡು ಸಲ ಕರೆದ ಸಭೆಗಳಿಗೆ ಅಲ್ಲಿನ ಮುಖ್ಯಮಂತ್ರಿಗಳು ಗೈರುಹಾಜರಾಗಿ ಅಸಹಕಾರ ತೋರಿದ್ದಾರೆ. ಆಲಮಟ್ಟಿ ಜಲಾಶಯದ ಎತ್ತರ ಹೆಚ್ಚಳ ಮಾಡದಂತೆ ನಿರ್ದೇಶನ ನೀಡಬೇಕು ಎಂದು ಆಂಧ್ರದ ಮುಖ್ಯಮಂತ್ರಿ ಜಲಶಕ್ತಿ ಸಚಿವಾಲಯಕ್ಕೂ ಪತ್ರ ಬರೆದಿದ್ದಾರೆ’ ಎಂದರು.

▶6

ಸಂಭ್ರಮ ಮೂಡಿಸಿದ ಬೇಸಿಗೆ ಮಳೆ



ಕಲಘಟಗಿ–ಮುಂಡಗೋಡ ಹೆದ್ದಾರಿಯಲ್ಲಿ ರಾಶಿಗಟ್ಟಲೆ ಆಲಿಕಲ್ಲುಗಳು ಆವರಿಸಿದ್ದವು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ/ಬೀದರ್/ಚಾಮರಾಜನಗರ: ಕಿತ್ತೂರು ಕರ್ನಾಟಕ, ಕಲ್ಯಾಣ ಕರ್ನಾಟಕದ ವಿವಿಧ ಜಿಲ್ಲೆಗಳು ಹಾಗೂ ಮೈಸೂರು ಭಾಗದ ಚಾಮರಾಜನಗರ ಜಿಲ್ಲೆಯಲ್ಲಿ ಸೋಮವಾರ ಗುಡುಗು, ಮಿಂಚುಸಹಿತ ಆಲಿಕಲ್ಲು ಮಳೆಯಾಗಿದೆ.

ಕೆಲವೆಡೆ ರಸ್ತೆ, ಜಮೀನುಗಳಲ್ಲಿ ರಾಶಿಗಟ್ಟಲೆ ಆಲಿಕಲ್ಲು ಕಂಡುಬಂದಿದ್ದು ನಾಗರಿಕರಲ್ಲಿ ಸಂಭ್ರಮಮೂಡಿಸಿತು. ಆದರೆ, ಆಲಿಕಲ್ಲು ಮತ್ತು ಅಕಾಲಿಕ ಮಳೆಯಿಂದಾಗಿ ಮಾವು ಸೇರಿದಂತೆ ವಿವಿಧ ಬೆಳೆ ಹಾನಿ ಭೀತಿಯೂ ರೈತರಿಗೆ ಕಾಡಿತು.

ಕಿತ್ತೂರು ಕರ್ನಾಟಕ ಪ್ರದೇಶ ವ್ಯಾಪ್ತಿಯ ಧಾರವಾಡ, ಗದಗ, ಉತ್ತರ ಕನ್ನಡ, ಬಾಗಲಕೋಟೆ, ಬಳ್ಳಾರಿ, ಬೆಳಗಾವಿ, ವಿಜಯಪುರ ಮತ್ತು ಹಾವೇರಿ ಜಿಲ್ಲೆಯಲ್ಲಿ ಮಂಗಳವಾರ ಧಾರಾಕಾರ ಮಳೆಯಾಯಿತು. ಬಹುತೇಕ ಕಡೆ ರಾಶಿಗಟ್ಟಲೇ ಆಲಿಕಲ್ಲು ರಸ್ತೆಗಳನ್ನು ಆವರಿಸಿದ್ದವು.

ಧಾರವಾಡ ಜಿಲ್ಲೆಯ ಕಲಘಟಗಿ ತಾಲ್ಲೂಕಿನ ಮಾಚಾಪುರ ಬಳಿ ಹೆದ್ದಾರಿಯಲ್ಲಿ ಆಲಿಕಲ್ಲುಗಳ ರಾಶಿಯಿಂದ ವಾಹನಗಳ ಸಂಚಾರಕ್ಕೆ ತೊಂದರೆಯಾಯಿತು. ಕುಂದಗೋಳ ತಾಲ್ಲೂಕಿನ ವಿವಿಧೆಡೆ ಚರಂಡಿ, ಮನೆ ಚಾವಣಿ, ಹೊಲಗಳು ಸೇರಿ ಎಲ್ಲೆಡೆ ಆಲಿಕಲ್ಲುಗಳು ಕಂಡುಬಂದವು.

ಬೆಳಗಾವಿ ನಗರ ಹಾಗೂ ತಾಲ್ಲೂಕಿನ ಕೆಲ ಗ್ರಾಮಗಳಲ್ಲಿ ಇಂತಹದೇ ಚಿತ್ರಣ ಕಂಡುಬಂತು. ಬಸವನ ಕುಡಚಿ ದೇವರ ಕಿಚ್ಚು ಹಾಯುವ ಉತ್ಸವಕ್ಕಾಗಿ ಹಾಕಿದ್ದ ಕಿಚ್ಚು ನಂದಿಹೋಯಿತು.

▶13

ಶಿಕ್ಷಣ, ಆರೋಗ್ಯ, ಕ್ರೀಡೆ ಮತ್ತು ಮಹಿಳಾ ಸಬಲೀಕರಣ ಕ್ಷೇತ್ರದಲ್ಲಿನ ಸೇವೆ ಗುರುತಿಸಿ ಪುರಸ್ಕಾರ, ಶ್ರೀಲಂಕಾದ ನೊಬೆಲ್ ಪ್ರಶಸ್ತಿ ವಿಜೇತ ಮೋಹನ್ ಮುನಾಸಿಂಘೆಯವರಿಂದ ಪ್ರಶಸ್ತಿ ಪ್ರದಾನ

ನೀತಾ ಅಂಬಾನಿಯವರಿಗೆ ಪ್ರತಿಷ್ಠಿತ 'ಕಳಿಂಗ ವಿವಿ ಮಾನವತಾವಾದಿ ಪ್ರಶಸ್ತಿ 2025' ಗೌರವ

ಭುವನೇಶ್ವರ್: ರಾಷ್ಟ್ರ ಮಟ್ಟದಲ್ಲಿ ತನ್ನ ಸಾಮಾಜಿಕ ಸೇವಾ ಕಾರ್ಯಗಳಿಂದಲೇ ಗುರುತಿಸಿಕೊಂಡಿರುವ ರಿಲಯನ್ಸ್ ಫೌಂಡೇಶನ್‌ನ ಸಂಸ್ಥಾಪಕಿ ಮತ್ತು ಅಧ್ಯಕ್ಷರಾದ ನೀತಾ ಎಂ. ಅಂಬಾನಿಯವರಿಗೆ ಒಡಿಶಾದ ಭುವನೇಶ್ವರದಲ್ಲಿರುವ ಕಳಿಂಗ ಇನ್‌ಸ್ಟಿಟ್ಯೂಟ್ ಆಫ್ ಸೋಶಿಯಲ್ ಸೈನ್ಸಸ್ (ಕೆಐಎಸ್‌ಎಸ್) ಆವರಣದಲ್ಲಿ ಅತ್ಯಂತ ಪ್ರತಿಷ್ಠಿತ 'ಕೆಐಎಸ್‌ಎಸ್ ಮಾನವತಾವಾದಿ ಪ್ರಶಸ್ತಿ 2025' ನೀಡಿ ಗೌರವಿಸಲಾಯಿತು. ಶಿಕ್ಷಣ, ಆರೋಗ್ಯ, ಕ್ರೀಡೆ ಮತ್ತು ಮಹಿಳಾ ಸಬಲೀಕರಣದ ಮೂಲಕ ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆ ತರುತ್ತಿರುವ ನಿಸ್ವಾರ್ಥ ಸೇವೆಯನ್ನು ಗುರುತಿಸಿ ಈ ಪ್ರಶಸ್ತಿ ಪ್ರದಾನ ಮಾಡಲಾಗಿದೆ. ಶ್ರೀಲಂಕಾದ ನೊಬೆಲ್ ಪ್ರಶಸ್ತಿ ವಿಜೇತ ಮೋಹನ್ ಮುನಾಸಿಂಘೆಯವರು ಈ ಗೌರವವನ್ನು ನೀತಾ ಅಂಬಾನಿಯವರಿಗೆ ಹಸ್ತಾಂತರಿಸಿದರು. ಕಾರ್ಯಕ್ರಮದಲ್ಲಿ ಕೆಐಐಟಿ, ಕೆಐಎಸ್‌ಎಸ್ ಸಂಸ್ಥೆಗಳ ಸಂಸ್ಥಾಪಕ ಹಾಗೂ ಮಾಜಿ ಸಂಸದರಾದ ಡಾ.ಅಚ್ಯುತ ಸಮಂತ ಉಪಸ್ಥಿತರಿದ್ದರು.

ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ನೀತಾ ಅಂಬಾನಿ, 'ಮಹಿಳೆಯರು ಯಾವುದೇ ಕೆಲಸದಲ್ಲೂ ಕಡಿಮೆಯಿಲ್ಲ. ಪುರುಷರು ಮಾಡಬಹುದಾದ ಪ್ರತಿಯೊಂದು ಕೆಲಸವನ್ನು ಮಹಿಳೆಯರು ಮಾಡಬಲ್ಲರು. ಗಂಡು ಮತ್ತು ಹೆಣ್ಣು ಮಕ್ಕಳ ನಡುವೆ ಯಾವುದೇ ವ್ಯತ್ಯಾಸವಿಲ್ಲ. ಸಮಾಜದಲ್ಲಿ ಲಿಂಗ ತಾರತಮ್ಯ ಸರಿಯಲ್ಲ. ಪ್ರತಿಯೊಬ್ಬರಲ್ಲೂ ಸಮಾನ ಸಾಮರ್ಥ್ಯ, ಪ್ರತಿಭೆಯಿರುತ್ತದೆ. ಪ್ರಸ್ತುತ ಜಗತ್ತಿನಲ್ಲಿ ಎಲ್ಲರೂ ಸಿಗುವ ಅವಕಾಶಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಇಂದು ನಾವಿರುವ ಸ್ಥಾನ ಕೇವಲ ಆರಂಭ. ಇದೇ ನಮ್ಮ ಅಂತಿಮ ಗುರಿಯಾಗಬಾರದು. ದೊಡ್ಡ ಕನಸುಗಳೊಂದಿಗೆ ಸದಾ ಪ್ರಯತ್ನ ಮುಂದಿವರೆಸಬೇಕು. ನಿಮ್ಮ ಕನಸುಗಳು, ನಿಮ್ಮ ಕಠಿಣ ಪರಿಶ್ರಮ ಮತ್ತು ಮುನ್ನುಗ್ಗುವ ಧೈರ್ಯ ಮಾತ್ರ ನೀವು ಜೀವನದಲ್ಲಿ ಎಷ್ಟು ಎತ್ತರಕ್ಕೆ ಬೆಳೆಯುತ್ತೀರಿ ಎಂಬುದನ್ನು ನಿರ್ಧರಿಸುತ್ತದೆ ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು. ಜತೆಗೆ, ಭಾರತದ ಭವಿಷ್ಯವು ಈ ಬುಡಕಟ್ಟು ಮಕ್ಕಳ ಕೈಯಲ್ಲಿ ಸುಭದ್ರವಾಗಿದೆ ಎಂಬ ವಿಶ್ವಾಸವನ್ನು ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಗಣ್ಯರು, ಈ ಪ್ರಶಸ್ತಿ ಪ್ರದಾನ ಸಮಾರಂಭವು ಕೇವಲ ಒಂದು ಗೌರವದ ಸಂಕೇತವಾಗಿರದೆ, ಲಕ್ಷಾಂತರ ಬುಡಕಟ್ಟು ವಿದ್ಯಾರ್ಥಿಗಳಿಗೆ ದೊಡ್ಡ ಕನಸುಗಳನ್ನು ಕಾಣಲು ಮತ್ತು ಅವುಗಳನ್ನು ನನಸು ಮಾಡಿಕೊಳ್ಳಲು ನೀಡಿದ ಒಂದು ದೊಡ್ಡ ಪ್ರೇರಣೆಯಾಗಿದೆ. ನೀತಾ ಅಂಬಾನಿಯವರ ಸರಳತೆ ಮತ್ತು ಸಮಾಜ ಸೇವೆಯ ತುಡಿತವು ಇಂದಿನ ಯುವ ಪೀಳಿಗೆಗೆ ಮಾದರಿಯಾಗಿದೆ ಎನ್ನುವ ಅಭಿಪ್ರಾಯ ವ್ಯಕ್ತಪಡಿಸಿದರು.

ಕಳಿಂಗ ಇನ್‌ಸ್ಟಿಟ್ಯೂಟ್ ಆಫ್ ಸೋಶಿಯಲ್ ಸೈನ್ಸಸ್ ಮಾನವತಾವಾದಿ ಪ್ರಶಸ್ತಿ ಹಿನ್ನೆಲೆ: 2008ರಲ್ಲಿ ಡಾ.ಅಚ್ಯುತ ಸಮಂತರವರಿಂದ ಪ್ರಾರಂಭವಾದ ಈ ಪ್ರಶಸ್ತಿ, ಜಾಗತಿಕ ಮಟ್ಟದಲ್ಲಿ ಮಾನವೀಯ ಸೇವೆ ಸಲ್ಲಿಸುವ ವ್ಯಕ್ತಿಗಳಿಗೆ ನೀಡಲಾಗುವ ಅತ್ಯುನ್ನತ ಗೌರವವಾಗಿದೆ. ಈ ಪ್ರಶಸ್ತಿಯು ಸ್ಮರಣಿಕೆ ಮತ್ತು ಚಿನ್ನದ ಲೇಪನದ ಟ್ರೋಫಿಯನ್ನು ಒಳಗೊಂಡಿರುತ್ತದೆ. ಈ ಹಿಂದೆ ಈ ಗೌರವಕ್ಕೆ ಖ್ಯಾತ ಉದ್ಯಮಿಗಳಾದ ರತನ್ ಟಾಟಾ, ಟಿಬೇಟಿಯನ್ ಧರ್ಮಗುರುಗಳಾದ ದಲೈ ಲಾಮಾ, ಮಾರಿಷಸ್ ಮಾಜಿ ಪ್ರಧಾನಿ ಅನಿರುಧ್ ಜಗನ್ನಾಥ್ ಸೇರಿದಂತೆ ಸಾಕಷ್ಟು ನೋಬೆಲ್ ಪ್ರಶಸ್ತಿ ಪುರಸ್ಕೃತರು ಈ ಗೌರವಕ್ಕೆ ಭಾಜನರಾಗಿದ್ದಾರೆ. ಈಗ ಆ ಸಾಲಿಗೆ ನೀತಾ ಅಂಬಾನಿಯವರು ಸಹ ಸೇರ್ಪಡೆಗೊಂಡಿರುವುದು ವಿಶೇಷ.



ರಿಲಯನ್ಸ್ ಫೌಂಡೇಶನ್‌ನ ಸಂಸ್ಥಾಪಕಿ ಮತ್ತು ಅಧ್ಯಕ್ಷರಾದ ನೀತಾ ಎಂ. ಅಂಬಾನಿಯವರಿಗೆ ಒಡಿಶಾದ ಭುವನೇಶ್ವರದಲ್ಲಿರುವ ಕಳಿಂಗ ಇನ್‌ಸ್ಟಿಟ್ಯೂಟ್ ಆಫ್ ಸೋಶಿಯಲ್ ಸೈನ್ಸಸ್ ಆವರಣದಲ್ಲಿ ಅತ್ಯಂತ ಪ್ರತಿಷ್ಠಿತ 'ಕೆಐಎಸ್‌ಎಸ್ ಮಾನವತಾವಾದಿ ಪ್ರಶಸ್ತಿ 2025' ನೀಡಿ ಗೌರವಿಸಲಾಯಿತು.

- ▶▶ *ನೀತಾ ಅಂಬಾನಿಯವರಿಗೆ ಪ್ರತಿಷ್ಠಿತ ಕಳಿಂಗ ಇನ್‌ಸ್ಟಿಟ್ಯೂಟ್ ಆಫ್ ಸೋಶಿಯಲ್ ಸೈನ್ಸಸ್ ಮಾನವತಾವಾದಿ ಪ್ರಶಸ್ತಿ 2025'*
- ▶▶ *ಈ ಹಿಂದೆ ಈ ಗೌರವಕ್ಕೆ ಖ್ಯಾತ ಉದ್ಯಮಿಗಳಾದ ರತನ್ ಟಾಟಾ, ಟಿಬೇಟಿಯನ್ ಧರ್ಮಗುರುಗಳಾದ ದಲೈ ಲಾಮಾ ಸೇರಿ ಸಾಮಾಜಿಕ ನಾಯಕರಿಗೆ ಪ್ರಶಸ್ತಿ ಗರಿ*
- ▶▶ *ರಿಲಯನ್ಸ್ ಫೌಂಡೇಶನ್ ಸಾಮಾಜಿಕ ಸೇವೆಗೆ ಪ್ರತಿಷ್ಠಿತ ಪ್ರಶಸ್ತಿ*

ಕಳಿಂಗ ಇನ್‌ಸ್ಟಿಟ್ಯೂಟ್ ಆಫ್ ಸೋಶಿಯಲ್ ಸೈನ್ಸಸ್: ಬುಡಕಟ್ಟು ಮಕ್ಕಳ ಪಾಲಿನ ಕಾಮಧೇನು

ಕಳಿಂಗ ಇನ್‌ಸ್ಟಿಟ್ಯೂಟ್ ಆಫ್ ಸೋಶಿಯಲ್ ಸೈನ್ಸಸ್ ವಿಶ್ವದ ಅತಿದೊಡ್ಡ ಬುಡಕಟ್ಟು ವಿಶ್ವವಿದ್ಯಾಲಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇದು ಸುಮಾರು 80,000 ಬುಡಕಟ್ಟು ಮಕ್ಕಳಿಗೆ ಉಚಿತ ವಸತಿ ಶಿಕ್ಷಣವನ್ನು ಒದಗಿಸುತ್ತಿದೆ. ಶಿಶುವಿಹಾರದಿಂದ ಹಿಡಿದು ಸ್ನಾತಕೋತ್ತರ ಪದವಿಯವರೆಗೆ ಇಲ್ಲಿ ಸಂಪೂರ್ಣ ಉಚಿತ ಶಿಕ್ಷಣ ಮತ್ತು ಸಮಗ್ರ ಅಭಿವೃದ್ಧಿಗೆ ಪೂರಕವಾದ ವಾತಾವರಣವಿದೆ. ಜತೆಗೆ, ಸಾಮಾಜಿಕವಾಗಿ ಸಾಕಷ್ಟು ಮಾದರಿ ಕಾರ್ಯಗಳಿಂದ ಇಲ್ಲಿನ ಶಿಕ್ಷಣ ಸಂಸ್ಥೆ ಗುರುತಿಸಿಕೊಂಡಿದೆ.

ರಿಲಯನ್ಸ್ ಫೌಂಡೇಶನ್‌ನ ಸೇವೆ

ನೀತಾ ಅಂಬಾನಿ ನೇತೃತ್ವದ ರಿಲಯನ್ಸ್ ಫೌಂಡೇಶನ್ ಇಂದು ಭಾರತದ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಫೌಂಡೇಶನ್‌ನ ಜನರ ಜೀವನಮಟ್ಟ ಸುಧಾರಣೆಗೆ ಹೆಚ್ಚಿನ ಆದ್ಯತೆ ನೀಡುತ್ತಿದ್ದು, ಭಾರತದಾದ್ಯಂತ ಸುಮಾರು 8.8ಕೋಟಿ (88 ಮಿಲಿಯನ್) ಜನರ ಜೀವನದಲ್ಲಿ ಬದಲಾವಣೆ ತಂದಿದೆ. 91,500ಕ್ಕೂ ಹೆಚ್ಚು ಗ್ರಾಮಗಳು ಮತ್ತು ನಗರ ಪ್ರದೇಶಗಳಲ್ಲಿ ಈ ಸಂಸ್ಥೆ ಸಕ್ರಿಯವಾಗಿ ತನ್ನ ಸಮಾಜಮುಖಿ ಕೆಲಸಗಳನ್ನು ಮುನ್ನಡೆಸುತ್ತಿದೆ. ಗ್ರಾಮೀಣ ಪರಿವರ್ತನೆ, ಶಿಕ್ಷಣ, ಆರೋಗ್ಯ, ಕ್ರೀಡೆ, ವಿಪತ್ತು ನಿರ್ವಹಣೆ, ಮಹಿಳಾ ಸಬಲೀಕರಣ ಮತ್ತು ಕಲೆ ಹಾಗೂ ಸಂಸ್ಕೃತಿಯ ಸಂರಕ್ಷಣೆಯಲ್ಲಿ ಸಂಸ್ಥೆಯು ನಿರಂತರವಾಗಿ ಶ್ರಮಿಸುತ್ತಿದೆ.

ಕಿಸೆಗೆ ಭಾರವಾಯಿತು ಅಡುಗೆ ಎಣ್ಣೆ

ಮೈಸೂರು: ಅಡುಗೆ ಎಣ್ಣೆ ಬೆಲೆಯೂ ಕಳೆದ 15 ದಿನಗಳಲ್ಲಿ ಗಣನೀಯವಾಗಿ ಏರಿಕೆಯಾಗಿದೆ. ತಾಳೆ ಹಾಗೂ ಸೂರ್ಯಕಾಂತಿ ಎಣ್ಣೆಗಳು ದುಬಾರಿ ಆಗುತ್ತಿವೆ. ಇದು ಗ್ರಾಹಕರಿಗೆ ಹೊರೆಯಾಗಿ ಪರಿಣಮಿಸಿದೆ.

ವಿವರ ▶12

ಚಿನಕುರುಳಿ ಪ್ರಕಾಶ್ ಶೆಟ್ಟಿ




The BIG Xperience
HARSHA
Happiness. Redefined.
STARTS TODAY
Celebrate
SMARTER WAYS TO STAY CONNECTED.
Apple iPhone 17
EMI @ ₹2,356
24 Months No Cost EMI*
Pay ₹499, get Apple Accessories worth ₹4,999*
₹81,400 | Now @ ₹74,400*
NEW ARRIVAL
Google Pixel 10a, 5G
EMI @ ₹2,084
24 Months No Cost EMI*
Pay ₹599, get Boat Airdopes worth ₹6,999*
₹49,999 | Now @ ₹46,999*
NEW ARRIVAL
Samsung Galaxy S26 Ultra, 5G
EMI @ ₹6,666
24 Months No Cost EMI*
Get Accessories worth ₹3,499* on Exchange
₹1,59,999 | Now @ ₹1,50,999*
Samsung Galaxy A36, 5G
EMI @ ₹2,028
18 Months No Cost EMI*
Get ₹2,000 Cash Back*
₹36,499 | Now @ ₹34,499*
Oppo Reno 15C, 5G
EMI @ ₹3,750
10 Months No Cost EMI*
Pay ₹599, get Boat Airdopes worth ₹6,999*
₹37,999 | Now @ ₹33,749*
Vivo V60E, 5G
EMI @ ₹4,250
8 Months No Cost EMI*
Pay ₹599, get Boat Airdopes worth ₹6,999*
₹33,999 | Now @ ₹31,499*
NEW ARRIVAL
Nothing Phone 4A
EMI @ ₹2,291
12 Months No Cost EMI*
Pay ₹399, get TWS Buds worth ₹3,499*
₹31,999 | Now @ ₹27,499*
Motorola Edge 60 Pro, 5G
EMI @ ₹2,999
7 Months No Cost EMI*
Get ₹2,500 Cash Back*
₹29,999 | Now @ ₹27,499*
NEW ARRIVAL
Vivo Y51 Pro, 5G
EMI @ ₹2,499
10 Months No Cost EMI*
Pay ₹399, get TWS Buds worth ₹3,499*
₹24,999 | Now @ ₹22,499*
Redmi Note 15, 5G
EMI @ ₹1,917
8 Months No Cost EMI*
Pay ₹399, get TWS Buds worth ₹3,499*
₹22,999 | Now @ ₹20,999*
Samsung Galaxy A17, 5G
EMI @ ₹3,250
6 Months No Cost EMI*
Pay ₹499, get BT Neckband worth ₹1,999*
Now @ ₹19,499*
NEW ARRIVAL
Realme C83, 5G
EMI @ ₹1,687
6 Months No Cost EMI*
Pay ₹499, get BT Neckband worth ₹1,999*
Now @ ₹13,499*
NEW ARRIVAL
Apple MacBook Neo
EMI @ ₹2,537
Pay ₹499, get 8-in-1 Adapter worth ₹4,499*
₹69,900 | Now @ ₹65,900*
HP Victus 15-i5 13th Gen
EMI @ ₹5,000
Pay ₹699, get BT Speakers worth ₹3,999*
₹78,990 | Now @ ₹71,490*
Asus TUF Gaming A15
EMI @ ₹5,332
Pay ₹999, get Boat Headphones worth ₹3,790*
₹80,990 | Now @ ₹77,990*
Lenovo LOQ 15ARP9
EMI @ ₹4,833
Pay ₹599, get BT Headphones worth ₹2,999*
₹74,990 | Now @ ₹68,866*
Dell 15
EMI @ ₹5,749
Pay ₹599, get BT Headphones worth ₹2,999*
₹69,990 | Now @ ₹67,990*
Asus Vivobook S14 Flip Touchscreen 2-in-1
EMI @ ₹4,366
Pay ₹699, get BT Speakers worth ₹3,999*
₹67,990 | Now @ ₹63,490*
HP 15
EMI @ ₹4,300
Pay ₹699, get BT Speakers worth ₹3,999*
₹69,490 | Now @ ₹61,990*
Lenovo IdeaPad Slim 3
EMI @ ₹7,999
Get ₹3,000 Cash Back*
₹72,990 | Now @ ₹60,990*
Asus Vivobook 16
EMI @ ₹5,000
Pay ₹699, get BT Speakers worth ₹3,999*
₹60,990 | Now @ ₹57,990*
HP OmniBook 3 Next Gen AI
EMI @ ₹4,033
Pay ₹599, get BT Headphones worth ₹2,999*
₹66,990 | Now @ ₹56,990*
Dell 15 - DC 15255
EMI @ ₹4,649
Pay ₹599, get BT Headphones worth ₹2,999*
₹46,490 | Now @ ₹44,740*
HP 15
EMI @ ₹2,666
Pay ₹599, get BT Headphones worth ₹2,999*
₹42,990 | Now @ ₹38,490*
Pay ₹999, Get Ambrane Travel Kit worth ₹4,999*
Upto ₹13,000 Instant Discount*
₹11,000 Cash Back* on Select Cards
Upto ₹11,000 Upgrade Offer*
24 Months No Cost EMI
HARSHOTSAVA
ANNIVERSARY CELEBRATIONS
18th - 22nd March 2026
Cashback up to ₹15,000 BAJAJ FINANCE
Cashback up to ₹31,000 HDB FINANCIAL SERVICES
Instant Discount up to ₹10,000 HDFC BANK
Instant Discount up to ₹3,000 ICICI Bank
Cashback up to ₹22,500 IDFC FIRST Bank
Instant Discount up to 7.5% Canara Bank
Instant Discount up to ₹10,000 Bank of Baroda Credit Card
AMERICAN EXPRESS
AXIS BANK
DBS
FEDERAL BANK
SBI card
IndusInd Bank
kotak
TVS CREDIT
YES BANK
INSTANT LUCKY DRAW WITH ASSURED GIFTS
Microwave Ovens
Air Conditioners
LED TVs
Panasonic Electric Cookers
Air Fryers
Panasonic Mixier Grinders
Smartwatches
Redmi Smartphones
AND MORE...
EMI LUCKY DRAW
Chance to win 2 LED TVs, 2 refrigerators, 2 washing machines, 1 air-conditioner, 4 microwave ovens and 1 party speakers, all from LG
ASUS
DELL
hp
lenovo
Pixel
mi
motorola
NOKIA
NOTHING
ONEPLUS
OPPO
realme
SAMSUNG
vivo
Conditions apply. Offers applicable on select models and brands. Models shown are indicative. Offer valid till stocks last. Finance at the sole discretion of the financier. Finance available only within city limits.
Net Prices are inclusive of cashback, upgrade bonus and instant discount. Free Smartwatch and Bluetooth Speaker offers applicable on products above ₹60,000.
Scan for Location
Ullal Main Road, Jnana Ganga Nagara, Jnanabharathi Post, Bengaluru - 560056. Ph: 080-29919904/5/6, 45032774
eHarsha.India
digital_harsha
www.harshaindia.com
Jawaharlal Nehru Rd., Near Field Marshal General Cariappa Park, RR Nagar, BENGALURU – 560098. Ph: 080-26983100, 35188342
Scan for Location

ಆರೋಗ್ಯ ಸೇವೆಗೆ ಇ–ಬೈಕ್

ಆರೋಗ್ಯ ಕಾರ್ಯಕರ್ತರಿಗೆ ವಿದ್ಯುತ್ ಚಾಲಿತ ಬೈಕ್ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮೀಣ ಭಾಗ ಹಾಗೂ ನಗರದ ಹೊರ ವಲಯದಲ್ಲಿ ಆರೋಗ್ಯ ಸೇವೆ ಒದಗಿಸಲು ಆರೋಗ್ಯ ಕಾರ್ಯಕರ್ತರಿಗೆ ವಿದ್ಯುತ್ ಚಾಲಿತ ಬೈಕ್‌ಗಳನ್ನು ನಗರದಲ್ಲಿ ಮಂಗಳವಾರ ವಿತರಿಸಲಾಯಿತು.

ಯುನೈಟೆಡ್ ವೇ ಆಫ್ ಬೆಂಗಳೂರು ಸಂಸ್ಥೆ ಮತ್ತು ಹೆಲ್ತಿಯಂ ಮೆಡ್‌ಟೆಕ್ ಸಂಸ್ಥೆಯು ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿಯಡಿ ಇ–ಬೈಕ್ ವಿತರಿಸಲು ಆರೋಗ್ಯ ಇಲಾಖೆಗೆ ನೆರವು ಒದಗಿಸಿದೆ.

ತುಮಕೂರು, ಬೆಂಗಳೂರು ದಕ್ಷಿಣ (ರಾಮನಗರ), ಜಿಬಿಎ ಹಾಗೂ ಬೆಂಗಳೂರು ನಗರ ಜಿಲ್ಲೆಯ ಆಯ್ದ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಆರೋಗ್ಯ ಕಾರ್ಯಕರ್ತರಿಗೆ 69 ಇ–ಬೈಕ್‌ಗಳನ್ನು ಆರೋಗ್ಯ ಇಲಾಖೆ ವಿತರಿಸಲಿದೆ. ಇಲಾಖೆಯು ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಸಾಂಕೇತಿಕವಾಗಿ ಇ–ಬೈಕ್‌ಗಳನ್ನು ವಿತರಿಸಿದರು.

ಬಳಿಕ ಮಾತನಾಡಿದ ಅವರು, 'ಆಶಾ ಕಾರ್ಯಕರ್ತೆಯರು ಮತ್ತು ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿಗಳು ಹಗಲಿರುಳು ಎನ್ನದೆ ಜನರಿಗೆ ಆರೋಗ್ಯ ಸೇವೆ ನೀಡಲು ಶ್ರಮಿಸುತ್ತಿದ್ದಾರೆ. ದೂರದ ಊರುಗಳಿಗೆ, ಕುಗ್ರಾಮಗಳಿಗೆ ಹೋಗಲು ಅವರಿಗೆ ಸಾರಿಗೆಯ ಸಮಸ್ಯೆ ಆಗುತ್ತಿತ್ತು. ಈಗ ನೀಡಲಾಗುತ್ತಿರುವ ಇ–ಬೈಕ್‌ಗಳಿಂದ ಅವರು ಸಕಾಲಕ್ಕೆ ಜನರ ಬಳಿಗೆ ಹೋಗಿ, ಸರಿಯಾದ ಸಮಯಕ್ಕೆ ಚಿಕಿತ್ಸೆ ಮತ್ತು ಸಲಹೆಗಳನ್ನು ನೀಡಲು ಸಾಧ್ಯವಾಗುತ್ತದೆ' ಎಂದು ಹೇಳಿದರು.


ಇ–ಬೈಕ್‌ನೊಂದಿಗೆ ಆರೋಗ್ಯ ಕಾರ್ಯಕರ್ತರು

'ಬೈಕ್ ನೊಂದಿಗೆ, ಹೆಲ್ಮೆಟ್, ನೀರಿನ ಬಾಟಲಿ, ರೈನ್‌ಕೋಟ್ ಸಹ ನೀಡಲಾಗುತ್ತಿದೆ. ಆರೋಗ್ಯ ಸೇವೆ ಎನ್ನುವುದು ಕೇವಲ ಆಸ್ಪತ್ರೆಗಳಿಗೆ ಸೀಮಿತವಾಗದೆ, ಅದನ್ನು ಜನರ ಮನೆ ಬಾಗಿಲಿಗೆ ತೆಗೆದುಕೊಂಡು ಹೋಗಬೇಕಿದೆ. ಈ ಆಶಯದೊಂದಿಗೆ ದ್ವಿಚಕ್ರ ವಾಹನಗಳನ್ನು ನೀಡಲಾಗಿದೆ' ಎಂದರು.

'ರಾಜ್ಯದಲ್ಲಿ 2,400ಕ್ಕೂ ಅಧಿಕ ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ. ಸಿಎಸ್‌ಆರ್ ಅನುದಾನದಲ್ಲಿ ಆಯ್ದ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಇ-ಬೈಕ್ ಗಳನ್ನು ನೀಡಲಾಗಿದೆ. ಇದಕ್ಕೆ ವ್ಯಕ್ತವಾಗುವ ಸ್ಪಂದನೆ ಆಧರಿಸಿ ಯೋಜನೆ ವಿಸ್ತರಣೆಗೆ ನಿರ್ಧರಿಸಲಾಗುತ್ತದೆ' ಎಂದು ಹೇಳಿದರು.

ಇಲಾಖೆ ಆಯುಕ್ತ ಗುರುದತ್ತ ಹೆಗಡೆ, ರಾಷ್ಟ್ರೀಯ ಆರೋಗ್ಯ ಅಭಿಯಾನದ (ಎನ್‌ಎಚ್‌ಎಂ) ವ್ಯವಸ್ಥಾಪಕ ನಿರ್ದೇಶಕ ಅವಿನಾಶ್ ಮೆನನ್, ಇಲಾಖೆ ನಿರ್ದೇಶಕ ವಸಂತ್ ಕುಮಾರ್ ಉಪಸ್ಥಿತರಿದ್ದರು.

ಕಾನೂನುಬಾಹಿರ ಚಟುವಟಿಕೆಗಳಲ್ಲಿ ಭಾಗಿ ಆರೋಪ

ಉಕ್ರೇನ್‌ನ 6 ಪ್ರಜೆಗಳು ವಶಕ್ಕೆ

ಮುಖ್ಯಾಂಶಗಳು
- ಅನುಮತಿ ಪಡೆಯದೆ ಮಿಜೋರಾಂ ಪ್ರವೇಶ
- ಪ್ರತಿಭಟನೆ ದಾಖಲಿಸಿದ ಉಕ್ರೇನ್

ನವದೆಹಲಿ (ಪಿಟಿಐ): ಅನುಮತಿ ಪಡೆಯದೆ ಮಿಜೋರಾಂ ರಾಜ್ಯ ಪ್ರವೇಶಿಸಿದ ಮತ್ತು ಕಾನೂನುಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾದ ಆರೋಪದ ಮೇಲೆ ಉಕ್ರೇನ್‌ನ ಆರು ಪ್ರಜೆಗಳನ್ನು ವಶಕ್ಕೆ ತೆಗೆದುಕೊಂಡಿರುವುದಕ್ಕೆ ಸಂಬಂಧಿಸಿದಂತೆ ಉಕ್ರೇನ್, ಮಂಗಳವಾರ ಭಾರತದ ಎದುರು ತನ್ನ ಪ್ರತಿಭಟನೆ ದಾಖಲಿಸಿದೆ.

ಭಾರತದಲ್ಲಿರುವ ಉಕ್ರೇನ್ ರಾಯಭಾರಿ ಅಲೆಕ್ಸಾಂಡರ್ ಪೊಲಿಶ್ಚುಕ್ ಅವರು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿ (ಪಶ್ಚಿಮ) ಸಿಬಿ ಜಾರ್ಜ್ ಅವರನ್ನು ಭೇಟಿಯಾಗಿ ಪ್ರತಿಭಟನೆ ದಾಖಲಿಸಿದರು.

'ಭಾರತದ ಅಧಿಕಾರಿಗಳ ವಶದಲ್ಲಿರುವ ಉಕ್ರೇನ್ ಪ್ರಜೆಗಳನ್ನು ತಕ್ಷಣ ಬಿಡುಗಡೆ ಮಾಡುವಂತೆ ಹಾಗೂ ಅವರಿಗೆ ಉಕ್ರೇನ್ ರಾಯಭಾರ ಕಚೇರಿಯ ನೆರವು ಪಡೆಯಲು ಅವಕಾಶ ನೀಡುವಂತೆ ಪೊಲಿಶ್ಚುಕ್ ಕೋರಿದ್ದಾರೆ' ಎಂದು ಉಕ್ರೇನ್ ವಿದೇಶಾಂಗ ಸಚಿವಾಲಯ ಮಂಗಳವಾರ ಹೊರಡಿಸಿದ ಪ್ರಕಟಣೆಯಲ್ಲಿ ತಿಳಿಸಿದೆ.

ಕಾನೂನುಬಾಹಿರ ಚಟುವಟಿಕೆಗಳ ಆರೋಪದ ಮೇಲೆ ಉಕ್ರೇನ್‌ನ ಆರು ಪ್ರಜೆಗಳು ಮತ್ತು ಅಮೆರಿಕದ ಒಬ್ಬ ಪ್ರಜೆಯನ್ನು ಭಾರತದ ಕಾನೂನು ಜಾರಿ ಅಧಿಕಾರಿಗಳು ಬಂಧಿಸಿದ್ದಾರೆ ಎಂದು ವರದಿಯಾಗಿದೆ.

ಅಮೆರಿಕದ ಪ್ರಜೆಯನ್ನು ವಶಕ್ಕೆ ಪಡೆದಿರುವುದರ ಬಗ್ಗೆ ಕೇಳಿದಾಗ, ಭಾರತದಲ್ಲಿರುವ ಅಮೆರಿಕ ರಾಯಭಾರ ಕಚೇರಿಯ ವಕ್ತಾರರು, 'ಅಂತಹ ಬೆಳವಣಿಗೆ ನಮ್ಮ ಗಮನಕ್ಕೆ ಬಂದಿದೆ. ಗೌಪ್ಯತೆಯ ಕಾರಣಗಳಿಗಾಗಿ, ಅಮೆರಿಕದ ನಾಗರಿಕರನ್ನು ಒಳಗೊಂಡ ಪ್ರಕರಣಗಳ ಬಗ್ಗೆ ನಾವು ಪ್ರತಿಕ್ರಿಯಿಸಲು ಸಾಧ್ಯವಿಲ್ಲ' ಎಂದು ಹೇಳಿದ್ದಾರೆ.

ವಿದೇಶಿ ಪ್ರಜೆಗಳು ಮಿಜೋರಾಂಗೆ ಏಕೆ ಬಂದಿದ್ದಾರೆ ಎಂಬುದು ತಕ್ಷಣಕ್ಕೆ ಸ್ಪಷ್ಟವಾಗಿಲ್ಲ. ಪ್ರಕರಣದ ಬಗ್ಗೆ ಭಾರತದ ಅಧಿಕಾರಿಗಳು ಇನ್ನೂ ಯಾವುದೇ ಹೇಳಿಕೆ ನೀಡಿಲ್ಲ.

'ಉಕ್ರೇನ್‌ನ ಪ್ರಜೆಗಳು ಮಿಜೋರಾಂಗೆ ಅನಧಿಕೃತವಾಗಿ ಪ್ರವೇಶಿಸಿದ್ದಾರೆ ಎಂಬುದಕ್ಕೆ ಸಂಬಂಧಿಸಿದ ಪ್ರಕರಣ ಇದಾಗಿದೆ. ವಿದೇಶಿ ಪ್ರಜೆಗಳು ಮಿಜೋರಾಂ ಪ್ರವೇಶಿಸಲು ವಿಶೇಷ ಪರವಾನಗಿಯ ಅಗತ್ಯವಿದೆ' ಎಂದು ಉಕ್ರೇನ್‌ನ ಪ್ರಕಟಣೆ ತಿಳಿಸಿದೆ.

'ಈ ಪ್ರಕರಣವು ಭಾರತ ಮತ್ತು ಮ್ಯಾನ್ಮಾರ್ ಗಡಿಯನ್ನು ಅಕ್ರಮವಾಗಿ ದಾಟಿದ ಆರೋಪಕ್ಕೂ ಸಂಬಂಧಿಸಿದೆ' ಎಂದು ಅದು ಹೇಳಿದೆ.

'ಉಕ್ರೇನ್ ನಾಗರಿಕರು ಭಾರತ ಅಥವಾ ಮ್ಯಾನ್ಮಾರ್ ನೆಲದಲ್ಲಿ ಕಾನೂನುಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದಾರೆ ಎಂಬುದನ್ನು ಸಾಬೀತುಪಡಿಸುವ ಯಾವುದೇ ಸಾಕ್ಷ್ಯಗಳು ಇಲ್ಲ' ಎಂದು ಪೊಲಿಶ್ಚುಕ್ ಅವರು ಸಿಬಿ ಜಾರ್ಜ್ ಅವರಿಗೆ ನೀಡಿದ ಪತ್ರದಲ್ಲಿ ತಿಳಿಸಿದ್ದಾರೆ.

ಚಿಟಿಕೆ ಸುದ್ದಿ

'ಸಖಿ ಕೇಂದ್ರಗಳನ್ನು ಸ್ಥಗಿತಗೊಳಿಸಬೇಡಿ'


ಡಾ. ನಾಗಲಕ್ಷ್ಮೀ ಚೌಧರಿ

ಬೆಂಗಳೂರು: ಅಸಹಾಯಕ ಮಹಿಳೆಯರಿಗಾಗಿ ತೆರೆದಿರುವ ಸಖಿ ಹಾಗೂ ಸಾಂತ್ವನ ಕೇಂದ್ರಗಳನ್ನು ಸ್ಥಗಿತಗೊಳಿಸಬಾರದು ಎಂದು ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮೀ ಚೌಧರಿ ಒತ್ತಾಯಿಸಿದ್ದಾರೆ.

ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವ ಅವರು, 'ಈ ಕೇಂದ್ರಗಳನ್ನು ಮುಚ್ಚಿದರೆ ಅಶಕ್ತ ಮಹಿಳೆಯರಿಗೆ ತೊಂದರೆ ಆಗಲಿದೆ. ಜೀವನದಲ್ಲಿ ನೊಂದ ಮಹಿಳೆಯರು ಸಖಿ ಹಾಗೂ ಸಾಂತ್ವನ ಕೇಂದ್ರಗಳ ಮೂಲಕ ಕಾನೂನು ಹೋರಾಟ ಮಾಡಿ, ಅವರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುತ್ತಿದ್ದಾರೆ' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ನೊಂದ ಮಹಿಳೆಯರ ಜೀವನಕ್ಕೆ ಈ ಕೇಂದ್ರಗಳು ನೆರವಾಗುತ್ತಿವೆ. ಆದ್ದರಿಂದ ಈ ಕೇಂದ್ರಗಳನ್ನು ಮುಚ್ಚದಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕು' ಎಂದು ಮನವಿ ಮಾಡಿದ್ದಾರೆ.

ಭೇಟಿ: ದರ್ಶನ್‌ಗೆ ಅನುಮತಿ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿ ನಟ ದರ್ಶನ್‌ಗೆ ಕುಟುಂಬಸ್ಥರು ಮತ್ತು ಸ್ನೇಹಿತರನ್ನು ಭೇಟಿ ಮಾಡಲು 57ನೇ ಸಿಸಿಎಚ್ ನ್ಯಾಯಾಲಯ ಅನುಮತಿ ನೀಡಿದೆ.

ಜೈಲಿನಲ್ಲಿರುವ ದರ್ಶನ್ ತಮ್ಮ ಕುಟುಂಬದ ಸದಸ್ಯರು ಮತ್ತು ಸ್ನೇಹಿತರನ್ನು ಭೇಟಿಯಾಗಲು ಅನುಮತಿ ಕೋರಿ ಅರ್ಜಿ ಸಲ್ಲಿಸಿದ್ದರು. ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಲಯ, ಜೈಲು ಕೈಪಿಡಿಯ ನಿಯಮಾವಳಿಗಳಿಗೆ ಅನುಗುಣವಾಗಿ ಭೇಟಿಗೆ ಅವಕಾಶ ನೀಡುವಂತೆ ಜೈಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದೆ.

ಇದೇ ಪ್ರಕರಣದ ಮೂರನೇ ಆರೋಪಿ ಪವನ್ ಪರ ವಕೀಲರು, ಸಾಕ್ಷ್ಯ ಸೃಷ್ಟಿಯ ಆರೋಪದಡಿ ತನಿಖಾಧಿಕಾರಿಯನ್ನೇ ಆರೋಪಿಯನ್ನಾಗಿ ಮಾಡಬೇಕೆಂದು ಕೋರಿ ಅರ್ಜಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಲಯ, ಅರ್ಜಿಯನ್ನು ವಜಾಗೊಳಿಸಿ, ₹5 ಸಾವಿರ ದಂಡ ವಿಧಿಸಿದೆ. ದಂಡದ ಹಣವನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ಪಾವತಿಸಲು ಸೂಚನೆ ನೀಡಿದೆ.

ಸಬಲೀಕರಣ ಕೇಂದ್ರ ಆರಂಭ

ಬೆಂಗಳೂರು: ಮಹಿಳಾ ಸಬಲೀಕರಣ ಮತ್ತು ಜೀವನೋಪಾಯದ ಅವಕಾಶಗಳನ್ನು ಉತ್ತೇಜಿಸಲು, ಆಹ್ವಾಹನ್ ಪ್ರತಿಷ್ಠಾನ ಜಿಗಣಿಯಲ್ಲಿ ತನ್ನ 47ನೇ ಮಹಿಳಾ ಸಬಲೀಕರಣ ಕೇಂದ್ರವನ್ನು ಆರಂಭಿಸಿದೆ.

ಈ ಕೇಂದ್ರವು 1,000ಕ್ಕೂ ಹೆಚ್ಚು ಹಿಂದುಳಿದ ಮಹಿಳೆಯರಿಗೆ ಆರ್ಥಿಕ ಸ್ವಾವಲಂಬನೆ ಸಾಧಿಸಲು ಸಹಾಯ ಮಾಡುವ ಉಚಿತ ಹೊಲಿಗೆ ಮತ್ತು ಟೈಲರಿಂಗ್ ತರಬೇತಿ ಘಟಕವನ್ನು ಪರಿಚಯಿಸಿದೆ. ಈ ಕೇಂದ್ರವನ್ನು ರಿಸರ್ವ್ ಬ್ಯಾಂಕ್ ಇನ್‌ಫಾರ್ಮೇಷನ್ ಟೆಕ್ನಾಲಜಿ ಸಂಸ್ಥೆಯ ಸಿಎಸ್‌ಆರ್ ನಿಧಿಯಡಿ ಸ್ಥಾಪಿಸಲಾಗಿದೆ. ಆಹ್ವಾಹನ್ ಸಂಸ್ಥೆಯ ಸಿಇಒ ಬ್ರಜಾ ಕಿಶೋರ್ ಮಾತನಾಡಿ, ಈ ಕೇಂದ್ರವು ಟೈಲರಿಂಗ್ ಕ್ಷೇತ್ರದಲ್ಲಿ ತರಬೇತಿ ನೀಡಲಿದೆ ಎಂದರು.

ನಿರಂಜನರ ಜನ್ಮ ಶತಮಾನೋತ್ಸವ ಸಮಾರಂಭದಲ್ಲಿ ಸಿದ್ದನಗೌಡ ಪಾಟೀಲ ಬೇಸರ

'ಪ್ರಭುತ್ವದಿಂದ 'ಚಲೇ ಆವ್' ಚಳವಳಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಭುತ್ವವು ಬಹು ರಾಷ್ಟ್ರೀಯ ಕಂಪನಿಗಳನ್ನು ಆಕರ್ಷಿಸಲು ನಮ್ಮ ಸ್ವಾತಂತ್ರ್ಯವನ್ನು ನಾಶ ಮಾಡುವ ಜತೆಗೆ, ಸ್ವಾತಂತ್ರ್ಯ ಹೋರಾಟದ ಆಶಯಕ್ಕೆ ತದ್ವಿರುದ್ಧವಾಗಿ ನಡೆದುಕೊಳ್ಳುತ್ತಿದೆ. ಅಂದು 'ಚಲೇ ಜಾವ್' ಚಳವಳಿ ನಡೆಸಿದರೆ, ಇಂದು 'ಚಲೇ ಆವ್' ಚಳವಳಿ ಮೂಲಕ ದೇಶದ ಸಂಪತ್ತನ್ನು ವಿದೇಶಿಯರ ಕೈಗೆ ನೀಡಲು ಮುಂದಾಗಿದೆ' ಎಂದು ಪ್ರಗತಿ ಪರ ಚಿಂತಕ ಸಿದ್ದನಗೌಡ ಪಾಟೀಲ ಅಭಿಪ್ರಾಯಪಟ್ಟರು.

ಶೇಷಾದ್ರಿಪುರಂ ಶಿಕ್ಷಣ ದತ್ತಿ, ಹೊಸತು ಪತ್ರಿಕೆ ಹಾಗೂ ನವ ಕರ್ನಾಟಕ ಪ್ರಕಾಶನ ಜಂಟಿಯಾಗಿ ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ನಿರಂಜನರ ಜನ್ಮ ಶತಮಾನೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿ, ಮಾತನಾಡಿದರು.


ಭಾಷಣ ಸ್ಪರ್ಧೆಯ ವಿಜೇತೆ ಸವಿತಾ ಕೆ.ಎಂ. ಅವರಿಗೆ ಸಮಾರಂಭದಲ್ಲಿ ಬಹುಮಾನ ವಿತರಿಸಲಾಯಿತು. ಆನಂದಪ್ಪ ಐ., ಜಿ. ರಾಮಕೃಷ್ಣ, ಸಿದ್ದನಗೌಡ ಪಾಟೀಲ, ಎನ್. ಗಾಯತ್ರಿ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

'ನಿರಂಜನ ಅವರು ಅವತ್ತಿನ ಕಾಲದಲ್ಲಿ ವೈಯಕ್ತಿಕ ಬದುಕಿನ ನೋವಿನ ನಡುವೆಯೂ ಸಾಮಾಜಿಕ ಪರಿಸರದ ಸ್ಥಿತಿಗತಿಗಳನ್ನು ಎದುರಿಸಿದರು. ಚಲೇ ಜಾವ್ ಚಳವಳಿ ಸಂದರ್ಭದಲ್ಲಿ, ಕಯ್ಯೂರು ರೈತ ಹೋರಾಟದ ಬಗ್ಗೆ 'ಚಿರಸ್ಮರಣೆ' ಕಾದಂಬರಿ ರಚಿಸಿದರು. ಅವರ ಸ್ವಾತಂತ್ರ್ಯ ಹೋರಾಟದ ಕನಸಿಗೆ ವಿರುದ್ಧವಾಗಿ ಇಂದು ಪ್ರಭುತ್ವ ನಡೆದುಕೊಳ್ಳುತ್ತಿದೆ. ಅಂದು ವಿದೇಶಿ ಕಂಪನಿಗಳಿಗೆ 'ಚಲೇ ಜಾವ್' ಎಂದು ಹೇಳಲಾಗಿತ್ತು. ಆದರೆ, ಈಗ ಬಹುರಾಷ್ಟ್ರೀಯ ಕಂಪನಿಗಳಿಗೆ ಇಲ್ಲಿನ ನೆಲ, ಜಲದ ಜತೆಗೆ, ಕಡಿಮೆ ವೇತನಕ್ಕೆ ಕಾರ್ಮಿಕರನ್ನೂ ಒದಗಿಸುವುದಾಗಿ ಆಹ್ವಾನಿಸಲಾಗುತ್ತಿದೆ. ತ್ಯಾಗ, ಬಲಿದಾನದಿಂದ ಪಡೆದ ಸ್ವಾತಂತ್ರ್ಯಕ್ಕೆ ವಿರುದ್ಧವಾಗಿ ನಡೆದುಕೊಳ್ಳಲಾಗುತ್ತಿದೆ' ಎಂದು ಹೇಳಿದರು.

'ಅಮೆರಿಕವು ಇರಾನ್ ಮೇಲೆ ದಾಳಿ ಮಾಡುತ್ತಿದೆ. ಇಂತಹ ಸಂದರ್ಭದಲ್ಲಿ ಯಾವುದೇ ದೇಶದ ಸ್ವಾತಂತ್ರ್ಯವೆಂದರೆ ಏನು? ನವ ಸಾಮ್ರಾಜ್ಯಶಾಹಿ ಯಾವ ರೀತಿ ದಾಳಿ ಮಾಡುತ್ತಿದೆ ಎನ್ನುವುದನ್ನು ಯುವಜನರು ಅರ್ಥ ಮಾಡಿಕೊಳ್ಳಬೇಕು' ಎಂದರು.

ನಿರಂಜನ ಅವರ ಜತೆಗಿನ ಒಡನಾಟ ಸ್ಮರಿಸಿಕೊಂಡ ಸಾಹಿತಿ ಜಿ. ರಾಮಕೃಷ್ಣ, 'ನಿರಂಜನ ಅವರು ಕನ್ನಡ ಪುರೋಗಾಮಿ ಸಾಹಿತ್ಯಕ್ಕೆ ದೊಡ್ಡ ಕೊಡುಗೆ ನೀಡಿದ್ದಾರೆ. ಪುರೋಗಾಮಿ ಸಾಹಿತ್ಯ ಸಂಘಟನೆ ಕಟ್ಟುವಲ್ಲಿ ನಿರಂಜನ, ಅ.ನ.ಕೃಷ್ಣರಾಯ, ಬಸವರಾಜ ಕಟ್ಟೀಮನಿ ಮೊದಲಾದವರು ದೊಡ್ಡ ಕೊಡುಗೆ ನೀಡಿದ್ದರು. ಅನಾರೋಗ್ಯದ ನಡುವೆಯೂ ನಿರಂಜನ ಅವರು ಕನ್ನಡ ಸಾಹಿತ್ಯ ಲೋಕಕ್ಕೆ ವಿಶ್ವ ಕಥಾ ಕೋಶ ಸಾಹಿತ್ಯ ಮಾಲಿಕೆಯನ್ನು ಸಂಪಾದಿಸಿ ಕೊಟ್ಟರು. ಕನ್ನಡ ಸಾಹಿತ್ಯಕ್ಕೆ ಎಡ ಪಂಥೀಯ ದೃಷ್ಟಿಕೋನವನ್ನು ವೈಜ್ಞಾನಿಕವಾಗಿ ಒದಗಿಸಿದರು' ಎಂದು ಹೇಳಿದರು.

ಲೇಖಕಿ ಎನ್. ಗಾಯತ್ರಿ, ಶೇಷಾದ್ರಿಪುರಂ ಕಾಲೇಜಿನ ಪ್ರಾಂಶುಪಾಲ ಆನಂದಪ್ಪ ಐ. ಉಪಸ್ಥಿತರಿದ್ದರು. ಭಾಷಣ ಸ್ಪರ್ಧೆಯ ವಿಜೇತರಿಗೆ ಇದೇ ವೇಳೆ ಬಹುಮಾನ ವಿತರಿಸಲಾಯಿತು.

ಅಪಾರ್ಟ್‌ಮೆಂಟ್ ಮಾಲೀಕತ್ವ ಕಾಯ್ದೆ ಅಂಗೀಕರಿಸಿ: ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸ್ತುತ ನಡೆಯುತ್ತಿರುವ ವಿಧಾನಮಂಡಲದ ಬಜೆಟ್ ಅಧಿವೇಶನದಲ್ಲಿ ಕರ್ನಾಟಕ ಅಪಾರ್ಟ್‌ಮೆಂಟ್ ಮಾಲೀಕತ್ವ ಮತ್ತು ನಿರ್ವಹಣಾ ಕಾಯ್ದೆಯನ್ನು (ಕೆಎಒಎಂಎ) ಅಂಗೀಕರಿಸಬೇಕು ಎಂದು ಬೆಂಗಳೂರು ಅಪಾರ್ಟ್‌ಮೆಂಟ್ ಫೆಡರೇಷನ್ ಒತ್ತಾಯಿಸಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಫೆಡರೇಷನ್ ಅಧ್ಯಕ್ಷ ಸತೀಶ್ ಮಲ್ಯ, '1972ರ ಅಪಾರ್ಟ್‌ಮೆಂಟ್ ಕಾಯ್ದೆಯ ಬದಲಿಗೆ ಹೊಸ ಕಾಯ್ದೆ ಜಾರಿಗೊಳಿಸಲಾಗುವುದೆಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭರವಸೆ ನೀಡಿ ಎರಡು ವರ್ಷಗಳಾಗಿದೆ. ನೂತನ ಕಾಯ್ದೆ ಕೆಎಒಎಂಎ ಅಂಗೀಕಾರ ಮಾಡುವುದರಲ್ಲಿ ವಿಳಂಬ ನೀತಿ ಅನುಸರಿಸುತ್ತಿರುವುದು ಸರಿಯಲ್ಲ' ಎಂದು ಹೇಳಿದರು.

'ಹೊಸ ಕಾಯ್ದೆ ವಿಳಂಬದಿಂದ ನಾಗರಿಕರು ತಮ್ಮ ಅಪಾರ್ಟ್‌ಮೆಂಟ್‌ಗಳನ್ನು ನಿರ್ವಹಿಸಲು, ವಿವಾದಗಳನ್ನು ಪರಿಹರಿಸಿಕೊಳ್ಳಲು ಮತ್ತು ಮಾಲೀಕತ್ವದ ಹಕ್ಕುಗಳನ್ನು ರಕ್ಷಿಸಿಕೊಳ್ಳಲು ಕಾನೂನು ಚೌಕಟ್ಟಿಲ್ಲದೆ ಪರದಾಡುವಂತಾಗಿದೆ. ಹೀಗಾಗಿ, ರಾಜ್ಯದ ಲಕ್ಷಾಂತರ ಅಪಾರ್ಟ್‌ಮೆಂಟ್ ಮಾಲೀಕರ ಹಿತಾಸಕ್ತಿಯನ್ನು ಕಾಪಾಡಬೇಕು' ಎಂದರು.

'ಅಪಾರ್ಟ್‌ಮೆಂಟ್ ಸಮುದಾಯಗಳ ಮೇಲೆ ವಿಧಿಸಲಾಗಿರುವ ಘನತ್ಯಾಜ್ಯ ನಿರ್ವಹಣಾ ಶುಲ್ಕವನ್ನು ಕೂಡಲೇ ಹಿಂಪಡೆಯಬೇಕು' ಎಂದು ಒತ್ತಾಯಿಸಿದರು.

ಫೆಡರೇಷನ್‌ನ ಉಪಾಧ್ಯಕ್ಷ ಪ್ರದೀಪ್ ಪೈ, ಪ್ರಧಾನ ಕಾರ್ಯದರ್ಶಿ ಕೆ.ಅರುಣ್ ಕುಮಾರ್, ಆಡಳಿತ ಮಂಡಳಿ ಸದಸ್ಯ ವಿಶ್ವ ವೆಂಕಟ ರೆಡ್ಡಿ ಸುದ್ದಿಗೋಷ್ಠಿಯಲ್ಲಿದ್ದರು.

ಡ್ರೋನ್ ಮೂಲಕ ರೋಗ ನಿರ್ಣಯ ಮಾದರಿ ರವಾನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಕ್ತ ಸೇರಿ ವಿವಿಧ ರೋಗ ನಿರ್ಣಯ ಮಾದರಿಗಳನ್ನು ಡ್ರೋನ್ ನೆರವಿನಿಂದ ಆಸ್ಪತ್ರೆಯಿಂದ ಪ್ರಯೋಗಾಲಯಕ್ಕೆ ರವಾನಿಸುವ ಪ್ರಾಯೋಗಿಕ ಯೋಜನೆ ನಗರದಲ್ಲಿ ಯಶಸ್ವಿಯಾಗಿದೆ.

ನಾರಾಯಣ ಹೆಲ್ತ್ ಸಂಸ್ಥೆಯು ವೈಮಾನಿಕ ಲಾಜಿಸ್ಟಿಕ್ ಕಂಪನಿ ಏರ್ ಬಾಂಡ್ ಸಹಯೋಗದಲ್ಲಿ 'ಮೆಡಿಕಲ್ ಲಾಜಿಸ್ಟಿಕ್' ಯೋಜನೆ ರೂಪಿಸಿದೆ.

54 ದಿನಗಳ ಅವಧಿಯಲ್ಲಿ 700ಕ್ಕೂ ಹೆಚ್ಚು ಬಾರಿ ಡ್ರೋನ್ ಹಾರಾಟ ನಡೆಸಿದೆ. ಪ್ರತಿ ಹಾರಾಟದಲ್ಲಿ ತಲಾ 40 ರೋಗ ನಿರ್ಣಯ ಮಾದರಿಗಳನ್ನು, ಚಂದಾಪುರದಲ್ಲಿರುವ ನಾರಾಯಣ ಹೆಲ್ತ್ ಕ್ಲಿನಿಕ್‌ನಿಂದ ಎಲೆಕ್ಟ್ರಾನಿಕ್ ಸಿಟಿಯ ನಾರಾಯಣ ಹೆಲ್ತ್ ಸಿಟಿಯಲ್ಲಿರುವ ಕೇಂದ್ರ ಪ್ರಯೋಗಾಲಯಕ್ಕೆ ರವಾನಿಸಿದೆ. 4 ಕಿ.ಮೀ. ದೂರದ ವೈಮಾನಿಕ ಮಾರ್ಗವನ್ನು ಕೇವಲ 10 ನಿಮಿಷಗಳಲ್ಲಿ ಕ್ರಮಿಸುತ್ತಿದೆ.

ಈ ಬಗ್ಗೆ ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ನಾರಾಯಣ ಹೆಲ್ತ್‌ನ ಸಂಸ್ಥಾಪಕ ಅಧ್ಯಕ್ಷ ಡಾ.ದೇವಿಪ್ರಸಾದ್ ಶೆಟ್ಟಿ, 'ಡ್ರೋನ್ ಮೂಲಕ ರೋಗ ನಿರ್ಣಯ ಮಾದರಿಗಳನ್ನು ರವಾನಿಸುವ ಯೋಜನೆ ಪ್ರಾಯೋಗಿಕವಾಗಿ ಯಶಸ್ವಿಯಾಗಿದೆ. ಬೆಂಗಳೂರಿನ ಸಂಚಾರ ದಟ್ಟಣೆಯಲ್ಲಿ, ನಿಗದಿತ ಅವಧಿಗೆ ರಕ್ತ ಸೇರಿ ವಿವಿಧ ವೈದ್ಯಕೀಯ ಮಾದರಿಗಳನ್ನು ಒಂದೆಡೆಯಿಂದ ಇನ್ನೊಂದೆಡೆ ರವಾನಿಸುವುದು ಕಷ್ಟಸಾಧ್ಯ. ರಸ್ತೆ ಸಾರಿಗೆಗೆ ಹೋಲಿಸಿದರೆ, ನೂತನ ವ್ಯವಸ್ಥೆಯಡಿ ಅತ್ಯಂತ ವೇಗವಾಗಿ ತಲುಪಿಸಬಹುದು' ಎಂದು ವಿವರಿಸಿದರು.


ರೋಗ ನಿರ್ಣಯ ಮಾದರಿಗಳನ್ನು ರವಾನಿಸುವ ಡ್ರೋನ್

'ಡ್ರೋನ್ ಸಾಗಾಟಕ್ಕೂ ಮೊದಲು, ಸಂಸ್ಥೆಯ ಚಂದಾಪುರ ಕ್ಲಿನಿಕ್‌ನಿಂದ ರೋಗ ನಿರ್ಣಯದ ಮಾದರಿಗಳನ್ನು ದಿನಕ್ಕೆ 3 ರಿಂದ 4 ಬಾರಿ ರಸ್ತೆಯ ಮೂಲಕ ಕೇಂದ್ರ ಪ್ರಯೋಗಾಲಯಕ್ಕೆ ಸಾಗಿಸಲಾಗುತ್ತಿತ್ತು. ಸಂಚಾರ ದಟ್ಟಣೆಯಿಂದ ಅವು ಪ್ರಯೋಗಾಲಯ ತಲುಪುವುದು ವಿಳಂಬವಾಗುತ್ತಿತ್ತು. ಈಗ ಬೇಡಿಕೆಗೆ ತಕ್ಕಂತೆ ಮತ್ತು ನಿಗದಿತ ವೇಳಾಪಟ್ಟಿಯಂತೆ ಡ್ರೋನ್ ದಿನಕ್ಕೆ 20 ಹಾರಾಟಗಳನ್ನು ನಡೆಸುತ್ತಿದೆ. ಇದರಿಂದ ಪ್ರಯೋಗಾಲಯಗಳು ಮಾದರಿಗಳನ್ನು ನಿರಂತರವಾಗಿ ಸ್ವೀಕರಿಸುತ್ತಿವೆ. ರೋಗಿಗಳಿಗೂ ಪರೀಕ್ಷಾ ವರದಿಗಳು ಅಲ್ಪಾವಧಿಗೆ ದೊರೆಯುತ್ತಿವೆ' ಎಂದರು.

'ಮುಂದಿನ ದಿನಗಳಲ್ಲಿ ಬನಶಂಕರಿಯಲ್ಲಿರುವ ಸಂಸ್ಥೆಯ ಹೊಸ ಆಸ್ಪತ್ರೆ ಮತ್ತು ಎಲೆಕ್ಟ್ರಾನಿಕ್ ಸಿಟಿಯಲ್ಲಿರುವ ಆಸ್ಪತ್ರೆಯನ್ನು ಸಂಪರ್ಕಿಸುವ ಹೊಸ ಡ್ರೋನ್ ಕಾರಿಡಾರ್ ಪ್ರಾರಂಭಿಸಲು ಉದ್ದೇಶಿಸಲಾಗಿದೆ. ಇದಕ್ಕೆ ಸರ್ಕಾರದ ಅನುಮತಿ ನಿರೀಕ್ಷಿಸಲಾಗುತ್ತಿದೆ' ಎಂದು ಹೇಳಿದರು.


The BIG X perience
HARSHA
Happiness. Redefined.
ಸಂಭ್ರಮಿಸಿ.
'ಹರ್ಷೋತ್ಸವ'
ಇಂದಿನಿಂದ ಆರಂಭ
ನಿಮಗೆಂದೇ ರೂಪಿಸಿದ ಶಾಪಿಂಗ್ ಹಬ್ಬ!
ಸಂಭ್ರಮಿಸಿ ಸ್ಮಾರ್ಟ್ ಅಪ್‌ಗ್ರೇಡ್
• Up to ₹5,000* on AC and Refrigerators
• Up to ₹3,000* on Washing Machines
• Up to ₹10,000* on LED TVs
ಸಂಭ್ರಮಿಸಿ ಎಕ್ಸ್ಟ್ರಾ ಜಾಯ್
• Get Bluetooth Speakers* with LED TV
• Get Aristocrat Strolley Bag* with AC
ಸಂಭ್ರಮಿಸಿ ಕಾಂಬೋ ಡೀಲ್ಸ್
• 564 ltr Side-by-Side Refrigerator + Washer Dryer + Dishwasher - Get Combo benefit of ₹30,000*
• Bottom Freezer Refrigerator + Washer Dryer + Dishwasher - Get Combo benefit of ₹25,000*
• Top Freezer Refrigerator + Washer Dryer + Dishwasher - Get Combo benefit of ₹20,000*
ಸಂಭ್ರಮಿಸಿ ಈಸಿ ಇಎಮ್‌ಐ
• No Down Payment*
• Buy Now - Pay Later on EMI and Get 1 EMI free*
• 24 months Long Tenure EMI*
ಸಂಭ್ರಮಿಸಿ ಇನ್ಸ್ಟಂಟ್ ಸರ್‌ಪ್ರೈಸಸ್
• Up to ₹31,000* on LED TVs & Refrigerators
• Up to ₹7,500* on Washing Machines
ಸಂಭ್ರಮಿಸಿ ಗ್ರೇಟ್ ಪ್ರೈಸ್
• Get 100 inch Mini LED TV @ ₹2,72,999*
• Up to ₹50,000 OFF* on Side-by-Side Refrigerator
ಹರ್ಷೋತ್ಸವ
ವಾರ್ಷಿಕ ಸಂಭ್ರಮಾಚರಣೆ
18th - 22nd March 2026
ಇಂದಿನಿಂದ ಆರಂಭ ನಿಮಗೆಂದೇ ರೂಪಿಸಿದ ಶಾಪಿಂಗ್ ಹಬ್ಬ 'ಹರ್ಷೋತ್ಸವ'. ಫ್ಯೂಚರಿಸ್ಟಿಕ್ ಮಳಿಗೆ, ಅತ್ಯಾಧುನಿಕ ಡಿಜಿಟಲ್ ಹಾಗೂ ಗೃಹೋಪಕರಣಗಳು, ವಿನೂತನ ಶಾಪಿಂಗ್ ಅನುಭವ ಜೊತೆಗೆ ಹರ್ಷೋತ್ಸವದ ಸಂಭ್ರಮಾಚರಣೆ. ಬನ್ನಿ, ನಿಮಗಿಷ್ಟವಾದ ವಸ್ತು-ವೈವಿಧ್ಯಗಳನ್ನು ಖರೀದಿಸಲು ಇದುವೇ ಸರಿಯಾದ ಸಮಯ. ವಿಶೇಷ ಬೆಲೆ, ಲಕ್ಕಿ ಡ್ರಾ, ಕಾಂಬಿ ಕೊಡುಗೆ, ಇಎಮ್‌ಐ, ಕ್ಯಾಶ್‌ಬ್ಯಾಕ್ ಸೇರಿದಂತೆ ಹಲವು ಕೊಡುಗೆಗಳು ನಿಮ್ಮ ಶಾಪಿಂಗ್ ಮೆರುಗನ್ನು ಹೆಚ್ಚಿಸಲಿದೆ. ಇನ್ನೇಕೆ ತಡ! ಇಂದೇ ವರ್ಷದ ಅತಿದೊಡ್ಡ ಶಾಪಿಂಗ್ ಹಬ್ಬ 'ಹರ್ಷೋತ್ಸವ'ದಲ್ಲಿ ಪಾಲ್ಗೊಳ್ಳಿ.
ಇನ್ಸ್ಟಂಟ್ ಲಕ್ಕಿ ಡ್ರಾನೊಂದಿಗೆ ಖಚಿತ ಉಡುಗೊರೆ
Microwave Ovens
Air Conditioners
LED TVs
Panasonic Electric Cookers
Air Fryers
Panasonic Mixier Grinders
Smartwatches
Redmi Smartphones
...ಜೊತೆಗೆ ಇನ್ನಷ್ಟು ಉಡುಗೊರೆಗಳು
ಇಎಮ್‌ಐ ಲಕ್ಕಿ ಡ್ರಾ
Chance to win 2 LED TVs, 2 refrigerators, 2 washing machines, 1 air-conditioner, 4 microwave ovens and 1 party speakers, all from LG
eHarsha.India
digital_harsha
www.harshaindia.com
Cashback up to ₹15,000 BAJAJ FINANCE
Cashback up to ₹31,000 HDB FINANCIAL SERVICES
Instant Discount up to ₹10,000 HDFC BANK
Instant Discount up to ₹3,000 ICICI Bank
Cashback up to ₹22,500 IDFC FIRST Bank
Instant Discount up to 7.5% Canara Bank
Instant Discount up to ₹10,000 Bank of Baroda Credit Card
AMERICAN EXPRESS
AXIS BANK
DBS
FEDERAL BANK
SBI card
IndusInd Bank
kotak Kotak Mahindra Bank
TVS CREDIT
YES BANK
Conditions apply. Offers applicable on select models and brands. Models shown are indicative. Offer valid till stocks last. Finance at the sole discretion of the financier. Finance available only within city limits. Taxes applicable on Lucky Draw gifts.
BLUE STAR
BOSCH
Electrolux
Godrej
Haier
Hisense
IFB
LG
LIEBHERR
LLOYD
MITSUBISHI ELECTRIC
Panasonic
SAMSUNG
SONY
TCL
VOLTAS
Whirlpool
ಉಳ್ಳಾಲ್ ಮುಖ್ಯ ರಸ್ತೆ, ಜ್ಞಾನ ಗಂಗಾ ನಗರ, ಬೆಂಗಳೂರು - 56. • ಫೀಲ್ಡ್ ಮಾರ್ಷಲ್ ಜನರಲ್ ಕಾರ್ಯಪ್ಪ ಪಾರ್ಕ್ ಸಮೀಪ, ರಾಜರಾಜೇಶ್ವರಿ ನಗರ, ಬೆಂಗಳೂರು - 98.

ಮೊದಲ ಮಳೆ: ತಂಪಾದ ಇಳೆ

ಮಂಗಳವಾರ ಸಂಜೆ ವೇಳೆಗೆ ಐದಾರು ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಕಡಿಮೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕೆಲವು ಪ್ರದೇಶಗಳಲ್ಲಿ ಮಂಗಳವಾರ ಸಂಜೆಯಿಂದ ರಾತ್ರಿವರೆಗೆ ಮಳೆಯಾಗಿದ್ದು, ಬಿಸಿಲಿನಿಂದ ಬಳಲಿದ್ದ ಜನರಿಗೆ ತಂಪೆರೆಯಿತು.

ಬಿಸಿಲ ಝಳದಿಂದ ತತ್ತರಿಸಿದ್ದ ನಗರದ ಉಷ್ಣಾಂಶ, ಮಂಗಳವಾರ ಸಂಜೆ ವೇಳೆಗೆ ಐದಾರು ಡಿಗ್ರಿ ಸೆಲ್ಸಿಯಸ್ ಕಡಿಮೆಯಾಯಿತು. ಮಧ್ಯಾಹ್ನದ ನಂತರ ಮೋಡಕವಿದ ವಾತಾವರಣವಿದ್ದು, ನಗರದ ಹಲವು ಪ್ರದೇಶಗಳಲ್ಲಿ ರಾತ್ರಿಯವರೆಗೂ ಗುಡುಗು–ಗಾಳಿಸಹಿತ ಮಳೆಯಾಯಿತು.

ಸೋಮವಾರ ರಾತ್ರಿಯಿಂದ ಮಂಗಳವಾರ ಮುಂಜಾನೆವರೆಗೆ ನಗರದ 13 ವಾರ್ಡ್‌ಗಳಲ್ಲಿ ತುಂತುರು ಮಳೆಯಾಗಿತ್ತು. ಮಂಗಳವಾರ ರಾತ್ರಿಯವರೆಗೆ 68 ವಾರ್ಡ್‌ಗಳಲ್ಲಿ ಮಳೆಯಾಗಿದೆ. ಹೆಮ್ಮಿಗೆಪುರ, ಅಂಜನಾಪುರ, ಎಚ್‌. ಗೊಲ್ಲಹಳ್ಳಿ, ಬ್ಯಾಟರಾಯನಪುರ, ಯಲಹಂಕದಲ್ಲಿ ಅತಿಹೆಚ್ಚು ಮಳೆಯಾಯಿತು.

ವರ್ಷದ ಮೊದಲ ಮಳೆ ಹೆಚ್ಚು ಅಬ್ಬರಿಸದಿದ್ದರೂ, ನಗರದ ರಸ್ತೆಗಳಲ್ಲಿ ನೀರು ನಿಂತು ವಾಹನ ಸಂಚಾರಕ್ಕೆ ಅಡ್ಡಿಯಾಯಿತು. ಜಿಬಿಎ ಹಾಗೂ ಐದು ನಗರ ಪಾಲಿಕೆಗಳು ಮಳೆಗಾಲಕ್ಕೆ ತಯಾರಿ ಮಾಡಿಕೊಳ್ಳಲಾಗಿದೆ ಎಂದು ಹೇಳುತ್ತಿದ್ದವು. ಆದರೆ, ರಸ್ತೆಯಲ್ಲಿ ನಿಂತ ಮಳೆ ನೀರು ವಾಸ್ತವ ಚಿತ್ರಣವನ್ನು ತೆರೆದಿಟ್ಟಿತು.

ಇಬ್ಲೂರು ಬಳಿ ರಸ್ತೆಯಲ್ಲಿ ಮಳೆ ನೀರು ನಿಂತು ಅಗರ ಕಡೆಗೆ ವಾಹನ ಸಂಚಾರ ನಿಧಾನಗತಿಯಲ್ಲಿತ್ತು. ಸಿಬಿಐ ಮೇಲ್ಸೇತುವೆ, ಯಲಹಂಕ ಕಾಫಿಡೇ, ಯಲಹಂಕ ಹಳೆ ರೈಲು ನಿಲ್ದಾಣದ ರಸ್ತೆಯಲ್ಲಿ ನೀರು ನಿಂತಿದ್ದರಿಂದ, ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಡೆಯ ರಸ್ತೆಯಲ್ಲಿ ವಾಹನ ದಟ್ಟಣೆ ಉಂಟಾಗಿತ್ತು.

ತಾವರೆಕೆರೆಯ ಮರಿಗೌಡ ರಸ್ತೆ, ರಾಣಿ ಸರಳಾದೇವಿ ಕಾಲೇಜಿನಿಂದ ಟಿ. ಮರಿಯಪ್ಪ ರಸ್ತೆ, ವಿದ್ಯಾಶಿಲ್ಪ ಕಡೆಯಿಂದ ನಗರದ ಕಡೆಗೆ ಬರುವ ರಸ್ತೆಗಳು ಮಳೆ ನೀರಿನಿಂದ ತುಂಬಿದ್ದವು.


ನಗರದಲ್ಲಿ ಇನ್ನೂ ಎರಡು ದಿನ ಸಾಧಾರಣ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ವಲಯವಾರು ಮಳೆ (ಸೆಂ.ಮೀ ಗಳಲ್ಲಿ)	
ರಾಜರಾಜೇಶ್ವರಿನಗರ	2.2
ದಕ್ಷಿಣ	2
ಬೊಮ್ಮನಹಳ್ಳಿ	1.8
ಯಲಹಂಕ	1.8
ಪಶ್ಚಿಮ	1.7
ದಾಸರಹಳ್ಳಿ	1.6
ಪೂರ್ವ	1.4
ಮಹದೇವಪುರ	1

ಎಲ್ಲೆಲ್ಲಿ ಹೆಚ್ಚು ಮಳೆ? (ಸೆಂ.ಮೀ ಗಳಲ್ಲಿ)	
ಹೆಮ್ಮಿಗೆಪುರ	2.4
ಎಚ್‌.ಗೊಲ್ಲಹಳ್ಳಿ	2.25
ಬ್ಯಾಟರಾಯನಪುರ	1.65
ಚೌಡೇಶ್ವರಿ	1.50
ಜಕ್ಕೂರು	1.25
ಕೆಂಗೇರಿ	1
ವಿ.ನಾಗೇನಹಳ್ಳಿ	1



ಯಲಹಂಕ ಹಳೆ ರೈಲು ನಿಲ್ದಾಣ ಬಳಿ ರಸ್ತೆಯಲ್ಲಿ ನಿಂತಿದ್ದ ಮಳೆ ನೀರು





ಇಬ್ಲೂರು ಮುಖ್ಯರಸ್ತೆಯಲ್ಲಿ ಮಳೆ ನೀರು ನಿಂತಿದ್ದರಿಂದ ವಾಹನ ಸಂಚಾರ ನಿಧಾನಗತಿಯಲ್ಲಿತ್ತು (ಎಡ ಚಿತ್ರ). ನಗರದ ಬ್ರಿಗೇಡ್ ರಸ್ತೆಯಲ್ಲಿ ಮಂಗಳವಾರ ಸುರಿದ ಮೊದಲ ಮಳೆಯಲ್ಲಿ ಮಹಿಳೆಯೊಬ್ಬರು ಕೊಡೆ ಹಿಡಿದು ಸಾಗಿದ ದೃಶ್ಯ

ಪ್ರಜಾವಾಣಿ ಚಿತ್ರ

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

Wanted Experienced Lady Teachers with excellent communication skills in English

1. Lower Primary
BSc (PCM) Graduate with B.Ed./D.Ed.

2. Higher Primary
Graduate with B.Ed. to teach English, Hindi and Social Science.

3. High School
Post Graduate with B.Ed. to teach English, Social Science and Science (Chemistry & Biology)

Walk-in Interview
Monday, 23rd and Tuesday, 24th March 2026
Between: 3 p.m. - 4 p.m.
Or Email your resume to info@florence.edu.in for an appointment

Florence High School
3rd Block, 3rd Stage, Basaveshwaranagar, Bengaluru-560 079
Tel : 080-23236160/41536695

HOLY ANGEL'S High School,Hampinagar, Vijayanagar, Bengaluru-560104. Phone: 23404465/23202042 holyangels.highschoolr pclayout@gmail.com Requires Experienced Trained Teachers for the Academic year 2026-27 for High School Ist Language English, Mathematics, Science &SocialScience, STATE & ICSE. Qualification: B.A./B.Sc.,B.Ed/ M.A./M.Sc.,M.Ed. Only English Medium Candidates need to apply.

ST FLOWERS ENGLISH SCHOOL ICSE-STATE, Bangalore 9686732171, 080-23399884/ 080-23408832, stflowerenglishschool @gmail.com Required Experience Trained Teachers for the Academic Year 2026-2027 For Primary and High School Kannada, Hindi, English, Social Teacher (MA , B.Ed) Maths, Science (M.Sc , B.Ed) Physical Education (BPEd, MPEd) Computer Science (M.Sc, B.Ed) Nursery Teachers NTT, Basic Degree with B.Ed Trained teachers.

HERITAGE PUBLIC SCHOOL Konanakunte, requires: HIGH SCHOOL TEACHERS for Physics Chemistry Biology PRIMARY TEACHERS for all subjects and KG-COORDINATOR WhatsApp or email resume to Mob: 9901733776. Email: heritagepublicschoolkk @gmail.com

---

REQUIRED EXPERIENCED Primary and High School Teachers with B.A / B.Sc, B.Ed / M.A / M.Sc, M.Ed to teach Science, Social Science, Mathemetics, English, Hindi & PE Teacher. Required Librarian, Lab Assistant & Drivers. Walk-in-interview. Contact: Lalith Castle International School, Rajarajeshwari Nagar, Blore-98. Mob: 9620464800 Email: lcis.rrnagar@gmail.com

---

THE MYSORE EDUCATION SOCIETY

"Brahmi", KISHORA KENDRA, 10th MAIN, 15th CROSS, MALLESWARAM, BANGALORE – 560 003. Website: : https://mesinstitutions.in.

Invites applications for the following posts:

Post Title	Subject	Essential Qualification	Desirable Qualification
Principal for PU Colleges	Academics & Administration	Postgraduate in relevant discipline and B.Ed. with minimum 55% marks. Knowledge of ICT, computer applications, Kannada & English.	Ph.D., teaching and administrative experience. Minimum 10 years in similar capacity
Teachers – High School (ICSE)	English & Social (Leave Vacancy)/Hindi	Master's degree with minimum 55% marks and B.Ed. in relevant subject(s).	Teaching experience and ICT usage.
Teachers – Primary & High School (State Board)	EVS & Kannada/Mathematics (Primary) English (High School)	Bachelor's degree with minimum 55% marks and B.Ed. in relevant subject(s).	Teaching experience and ICT usage.
Teacher	Art & Craft	Bachelor's in Fine Arts & Crafts or Visual Arts with 55% marks and Diploma in Arts & Crafts.	Teaching experience and ICT usage.
Teacher	Dance	Bachelor's in Performing Arts.	Teaching experience.
Teacher	Music	Bachelor's in Music/Vidwath/ Diploma in Music.	Teaching experience.
Lecturers – PU Colleges	Kannada/English/Hindi/ Sanskrit/Physics/Chemistry/ Mathematics/Biology/Computer Science/Commerce/Statistics/ Sociology	Master's in relevant subject with 55% marks and B.Ed.	Teaching experience and ICT usage.
Librarian – School	Librarian	Bachelor's in Library/Information/ Documentation Science with 55% marks.	Experience, computer skills, web content management.
Counsellor	Counsellor Schools & PU Colleges	Master's in Psychology or PG Diploma in Counselling.	3-5 years experience.
Teacher	Rangashale	Any Bachelor's Degree with a minimum of 55% marks with one-year Theatre Teaching experience	Theatre Diploma, Stage Music (Rangasangeetha)

1. Applications with BIO-DATA and copies of certificates of their qualifications and experience etc., should reach the Chief Executive Officer, MES, at the above address on or before **31.03.2026** duly superscribing the envelope with **"Application for the post of ____________________"**.
2. Candidates with experience are preferred.
3. Competency in ICT enabled teaching is desirable.
4. All posts are tenable in any of the MES Institutions and are transferable.
5. The decision of the selection committee is final.
6. Resorting to any sort of influence will be deemed as a disqualification of the candidature.
7. Download the application form from the MES website: https://mesinstitutions.in

Advt. No. MES/19-5/ADM-1/2026 Dated 18.03.2026 **CHIEF EXECUTIVE OFFICER**

THE MYSORE EDUCATION SOCIETY

"Brahmi", KISHORA KENDRA, 10th MAIN, 15th CROSS, MALLESWARAM, BANGALORE – 560 003. Website: : https://mesinstitutions.in.

(All the post are for self-financed (un-aided) Programs)

Invites applications **for the teaching faculty for the following Departments in MES College of Arts Commerce & Science and MES Institute of Management**

Post Title	Subject	Essential Qualification	Desirable Qualification
Research Associate	Biotechnology / Microbiology	Ph.D. in Biotechnology / Microbiology or a relevant discipline from a recognized university Completion of mandatory coursework as per UGC norms	Proven experience in conducting in-depth scientific investigations Experience in executing and managing funded research projects Demonstrated research output (publications, patents, project reports, etc.)
Professor / Associate Professor (Full Time)	Computer Science/ Commerce/ Management	(i) Post-graduate in relevant discipline from a recognized university with a minimum of 55% marks or equivalent grade (ii) Should have Ph.D. degree from a recognized university by UGC in the relevant subject (with course work included as part of doctoral program).	NET/SLET qualification, Research Publications, Funded Projects, Post-doctoral experience, knowledge of computer applications, usage of ICT in teaching. Teaching experience: Professor: Minimum 12 years Associate Professor: Minimum 8 years
Assistant Professor (Full Time)	Kannada/English/Hindi/ Journalism/Psychology/ Physics/Chemistry/ Commerce / Computer Science / Management / Political Science/Botany/ Micro Biology	(i) post-graduate in relevant discipline from a recognized university with a minimum of 55% marks or equivalent grade (ii) with NET/SLET examination or Ph.D. degree from a recognized university by UGC in the relevant subject. (with course work included as part of doctoral program).	(i) 3 years of teaching experience (ii) Knowledge of Computers. Usage of ICT in teaching
Assistant Professor (Part-Time)	English/Sanskrit/ Journalism/History/ Political Science/Forensic Science/Bio-Technology		

1. Attractive salary commemorates with qualification & experience.
2. Applications with BIO-DATA and copies of certificates of their qualifications and experience etc., should reach the Chief Executive Officer, MES at the above address on or before **31.03.2026** duly superscribing the envelope with **"Application for the post of ____________________"**.
3. Decision of the selection committee is final.
4. Resorting to any sort of influence will be deemed as a disqualification of the candidature.
5. Download the application form from the MES website: https://mesinstitutions.in

Advt. No. MES/19-4/ADM-1/2026 Dated 18.03.2026 **CHIEF EXECUTIVE OFFICER**

DON BOSCO ICSE SCHOOL

CHITHRA DON BOSCO Campus, Kuvempu Nagar, Padma Layout, Chitradurga - 577 501.

VACANCIES FOR 2026 - 2027

Sl.No.	Subject	Qualification
1	MATHEMATICS	M.Sc., B.Ed
2	PHYSICS	M.Sc., B.Ed
3	ENGLISH	M.A., B.Ed
4	SOCIAL	M.A., B.Ed
5	SCHOOL COUNSELOR	M.Sc. (Psychology)
6	RECEPTIONIST	Any Degree
7	BUS DRIVER	Heavy Driving License & PSV Badge

NOTE: (1) English fluency is a must.
(2) Interested....? Send your CV to us along with your scanned original documents on or **before 25.03.2026**
E-mail ID: *dbicsechitradurga@gmail.com*

CONTACT: 9448935000, 9141007636

CAMLIN ENGLISH School State Board 6th 'C' Main, 4th Cross, Hampinagar Bengaluru-560104 080-23301363 REQUIRES TEACHERS for High, Middle and Primary School. English, Kannada, Maths, Science, Social Computer, Physical Education. WALK-IN INTERVIEW or Resume to Email: camlinschool84@ gmail.com

---

PREMIER HIGH SCHOOL, SRIRAMPURAM requires Headmistress & Teachers for Primary (English, Social) and High School (Maths, Science) (Ladies Preferred). Contact: 9538836721.

WE ARE HIRING!
Global Gen CBSE School, Penukonda Sri Satya Sai District invites applications from experienced and qualified teachers for:
- Pre-Primary
- Primary
- High School (All Subjects)

Fluency in English & CBSE experience preferred.
Contact: 7670899230 9989290422
Email: ggschool013@gmail.com

NIRMAN INTERNATIONAL PUBLIC SCHOOL- CBSE,7th Block, Vishweshwaraiah Layout, Bangalore-91 Requires qualified TEACHERS with strong spoken English skills for all subjects from Nursery to Grade X. Walk-in on all working days. Contact: 8123030731/ 9986055970 Mail: nirmaninfo24@gmail.com

---

Marketing & Sales

TECHNICAL SALES OFFICER (Experienced), age 45–50, required by a 50-year-old Bangalore-based Engineering sales company dealing in imported products such as fuel, oil transfer and AdBlue pumps, dispensers, meters, railway brake cables, and earthmoving spares. Candidate must have strong technical and commercial experience, ability to meet senior OEM officials and dealers, make presentations, close and generate business, and prepare targets. Proficiency in Word, Excel, and PowerPoint required. Position reports to Chief Executive and involves travel. Salary Rs.35,000–40,000 per month. Apply with details to officestaffblr@ gmail.com

---

EDUCATION
To Place your Classified Ads Contact: 9845114560

KEMPEGOWDA INSTITUTE OF MEDICAL SCIENCES AND RESEARCH CENTRE

RAJYA VOKKALIGARA SANGHA

RVS/ADMN/2102/2025-26 Date:17.03.2026

Application are invited for the post of Principal in **Kempegowda Institute of Medical Sciences & Hospital**, Bangalore - 04

Sl. No.	Designation	Vacant Posts	Eligibility Criteria
1	Principal	1	a. MD/MS from a recognised Institution b. As per NMC guidelines c. 10 years teaching experience as Professor / Associate Professor in a Medical College / Institution, out of which atleast five years should be as Professor in the Department

Application to be submitted at Principal, KIMS office, BSK 2nd Stage or **Email to : principalkims@gmail.com**

Note 1 : Right to reject any application without assigning any reason is reserved with the Rajya Vokkaligara Sangha.

02 : Last date to recieve application with relevant documents at KIMS is **26.03.2026** along with a DD for Rs 1180/- in favour of the Principal, KIMS

Interview will be held on 28-03-2026
Venue : 2nd Floor, Rajya Vokkaligara Sangha, Meeting Hall, Bangalore -560004

Sd/- Principal KIMS; Sd/- Chairman GC KIMS; Sd/- Chairman GC, Superspeciality; Sd/- Chairman KIMSH; Sd/- Treasurer RVS; Sd/- Joint Secretary RVS
Sd/- Vice President -1 RVS; Sd/- Vice President -2 RVS; Sd/- Honorary President RVS; Sd/- General Secretary RVS; Sd/- President RVS

*** For any Queries contact to Dr. H.B Shivakumar, Principal KIMS Ph: 98450 09961

Engg/ Production Technical

REQUIRED TECHNICAL & MARKETING MANAGER. (BE or Diploma) 3 Years Experience. Contact. 9110637878 9110637876 9110637870

General

WANTED MALE Office Assistant with computer knowledge, PUC above, Balija Sangha Vijayanagar, Bengaluru. Contact: 8088384110

HIRING OFFICE ASSISTANTS & CLERKS (Textile Export Company) Bommanahalli, Bangalore. Mail: starsilks@gmail.com

Office Boys/ Peon

WANTED OFFICE Boys (Field Work), Office Assistant, for advt. agency near Hanumathnagar- 31698969, 6361942572

REAL ESTATE SELLING

Sites

Nagasandra

SITE FOR Sale A-katha 40x60, East facing Madanayakanahalli Near highway (just 200 meter) Contact. 9886912345

MARKETING EXPERTS *required*

SCORPION SECURITY Ltd., is looking for **Marketing Experts** on ***Partnership basis and not on salary basis.***

Candidates should be based in Karnataka with fluency in English and Kannada and should be proficient in business expansion across the country.

Part-timers will also be considered.

Apply with full particulars to:
hr@scorpionsecurityltd.com

Accounts & Finance

"REQUIRED 5+YEARS Exeprienced Accountant" for`Shekar Hospital`Bull-temple`Road, Bangalore-19. Compitative Salary-offered. Mail`ID: ca.shreehari@ kutsalegal.in

Industrial & Factory

Tumkur Road

SALE, 30 Acres Land Suitable for Warehouse, Industry, Residential. Wide Road, Dabaspet Industrial Area. 9141326819

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru



BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

4000SFT TOTAL, 1-3 floors, Furnished Office, A/C, DG backup, For Rent up to 1.5L, Negotiable, BTM near Silk Board Metro, Contact: 8050813008

PERSONAL

Change of Name

CHANGE OF NAME
I, **ATIK MUSHAHID MUJAWAR**, s/o 'MUSHAHID JAINUDDIN MUJAWAR', born on 02/10/1997, residing presently at 120, 6th Cross, Kadirappa Road, Doddigunta, Cox Town, Bengaluru, Karnataka-560005, have changed my name to **AKIRA MUJAWAR** and gender to female vide Affidavit dated 28.07.2025 before Notary B.M. CHANDRASHEKAR, Bengaluru.

I, SUSHMA JS alias SUSHMA SOMASHEKAR resident Flat No.3 RR Residency, No.22 1st Cross 1st Stage, Gokula Mathikere, Bangalore-560054 have changed my name to SUSHMA JIDDIGERE SHIVAPRASHAD vide affidavit dated 17/03/2026, sworn before notary Ambika.S, Bengaluru

CHANGE OF NAME
We, **Thimmaraju S C** and **Sindhu S,** residing at No.73, 1st Floor, 3rd 'B' Cross, Chamundeshwari Nagar, Laggere, Bangalore-560058, have changed our minor daughter's name from **KHUSHI T** to **KHUSHI GOWDA** vide affidavit dated 17-03-2026 before notary Onkarappa N.R., Bengaluru

---

SULAKSHMI SILKS
ಸರ್ವರಿಗೂ ಸುಸ್ವಾಗತ
MYSORE SILKS ಸೀರೆ ಉತ್ಸವ By Sulakshmi Silks

ಅದ್ಧೂರಿ ಉದ್ಘಾಟನೆ

3ನೇ ಮಳಿಗೆ

- ಶುದ್ಧ ಮೈಸೂರು ಸಿಲ್ಕ್ • ಕಾಂಜೀವರಂ
- ಬನಾರಸ್ • ಉಪ್ಪಾದ • ಪೈಠಾನಿ
- ಇಳಕಲ್ • ಪೋಚಂಪಲ್ಲಿ • ಭಾಗಲ್ಪುರ್
- ಜಮಧಾನಿ • ಮುಗ • ಕ್ರೇಪ್ • ಗಜ್ಜಿ
- ಕಾಟನ್ ಕ್ಲಾಸಿಕ್ಸ್ • ಪಟೋಲ • ಆರ್ನಿ
- ಚಂದೇರಿ • ಗದ್ವಾಲ್ • ಬಂಧನಿ
- ಇಕತ್ • ಬೆಂಗಳೂರು ಸಿಲ್ಕ್ ಮತ್ತು ಇತರೆ.

ಆರಂಭಿಕ ಕೊಡುಗೆ 60% OFF

SIGNATURE SILK SAREE COLLECTIONS

ಸೀರೆ ಉತ್ಸವ-೩ ನಮ್ಮೊಂದಿಗೆ ಸೇರಿ ಆಚರಿಸಿ
16 ರಿಂದ 31ನೇ ಮಾರ್ಚ್ 2026
ನಮ್ಮ ಹೊಸ ಮಳಿಗೆಯಲ್ಲಿ

99727 18898, 93531 38343

ಸ್ಥಳ: ನಂ119/1, ಶ್ರೀನಿಧಿ ಕಾಂಪ್ಲೆಕ್ಸ್, 11ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು 560003





ಭಾರತದ ಪ್ರಸಿದ್ಧ ಕೇರಳ ಜ್ಯೋತಿಷ್ಯ ಪಂಡಿತರು

ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್

ಕಳೆದ 40 ವರ್ಷಗಳಿಂದ ಬೆಂಗಳೂರಿನಲ್ಲಿ ನಿರಂತರವಾಗಿ ನೆಲೆಸಿದ್ದಾರೆ. ಇವರನ್ನು ಇಂದೇ ಭೇಟಿಮಾಡಿ ನಿಮ್ಮ ಉದ್ಯೋಗ, ವ್ಯಾಪಾರ, ಅದೃಷ್ಟ, ಕುಟುಂಬ ಸಮಸ್ಯೆ,ಮದುವೆಯೋಗ, ಪ್ರೇಮ–ಪ್ರೀತಿ, ಆರೋಗ್ಯ, ವಿದೇಶ ಪ್ರಯಾಣ, ಶತ್ರು ದೋಷ, ಲಕ್ಷ್ಮಿಯೋಗ ಮತ್ತು ಮಕ್ಕಳ ವಿದ್ಯಾಭ್ಯಾಸ ಮತ್ತು ನಿಮ್ಮ ಜೀವನವು ಉತ್ತಮವಾಗಿ ಮೂಡಿಬರಲು ಕೇರಳ ಜ್ಯೋತಿಷ್ಯ ಶಾಸ್ತ್ರದ ಮೂಲಕವಾಗಿಯೂ, ಗುರೂಜಿಯ ದಿವ್ಯಶಕ್ತಿಯಿಂದಲೂ, ಶಕ್ತಿಯುತವಾದ ಪರಿಹಾರ ನೀಡುವರು.

ಸೂಚನೆ : ಇಲ್ಲಿ ಹೇಳುವ ವಿಚಾರಗಳನ್ನು ರಹಸ್ಯವಾಗಿ ಇಡಲಾಗುತ್ತದೆ.

ಸಂದರ್ಶನದ ಸ್ಥಳ: **ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್ (ಕೇರಳ)**
ಹೋಟೆಲ್ ಸಭರ್‌ವಾಲ್ ವೈಸ್‌ರಾಯ್, ರೂ. ನಂ. 102, ಲಾಲ್‌ಬಾಗ್ ಫೋರ್ಟ್ ರಸ್ತೆ, ಮಿನರ್ವ ವೃತ್ತ, (ನಂದಿನಿ ಹೋಟೆಲ್ ಎದುರು), ಬೆಂಗಳೂರು–4.
ಮನೆ: ನಂ. 24, 1ನೇ ಅಡ್ಡರಸ್ತೆ, ಕಮ್ಮನಹಳ್ಳಿ, ಕುಳ್ಳಪ್ಪ ವೃತ್ತ, ಬಾಣಸವಾಡಿ, ಸಿಟಿ ಸೂಪರ್ ಮಾರ್ಕೆಟ್ ಪಕ್ಕ, ಬೆಂಗಳೂರು–84.

Ph: 9844165272 / 9036552207

ಭೇಟಿಯ ವೇಳೆ: ಬೆಳಗ್ಗೆ 9 ರಿಂದ ಮಧ್ಯಾಹ್ನ 1 ರವರೆಗೆ ಸಂಜೆ 3 ರಿಂದ ರಾತ್ರಿ 8 ರವರೆಗೆ (ಭಾನುವಾರವೂ ತೆರೆದಿರುತ್ತದೆ)

Readymade

SWIMMING POOLS

binz & boris

- In-Ground or on terrace
- With inbuilt Jacuzzi & Swim- Jet
- Same filtered water for 1 year
- Delivery across the globe



www.binznboris.com 99000 01133, 99010 01133

ಕನ್ನಡ ಕಡೆಗಣನೆ: ಕರವೇ ಪ್ರತಿಭಟನೆ

ಸಿಬ್ಬಂದಿ ತರಬೇತಿ ಕೇಂದ್ರಕ್ಕೆ ನುಗ್ಗಲು ಯತ್ನ: ಪ್ರತಿಭಟನಕಾರರು ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈಲ್ವೆ ಇಲಾಖೆಯ ಪರೀಕ್ಷೆಗಳನ್ನು ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ನಡೆಸುತ್ತಿರುವುದನ್ನು ವಿರೋಧಿಸಿ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ನಗರದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣ ಬಳಿಯ ರೈಲ್ವೆ ವಿಭಾಗೀಯ ಕಚೇರಿ ಎದುರು ವೇದಿಕೆ ಮುಖಂಡರು, ಕಾರ್ಯಕರ್ತರು, ಪದಾಧಿಕಾರಿಗಳು ಪ್ರತಿಭಟನೆ ನಡೆಸಿ, ರೈಲ್ವೆ ಇಲಾಖೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ವೇದಿಕೆ ರಾಜ್ಯ ಪ್ರಧಾನ ಕಾರ್ಯದರ್ಶಿ ಬಿ.ಸಣ್ಣೀರಪ್ಪ ಮಾತನಾಡಿ, 'ಸರಕು ರೈಲ್ವೆ ವ್ಯವಸ್ಥಾಪಕ ಹುದ್ದೆಗೆ ಕನ್ನಡದ ಬದಲು ಇಂಗ್ಲಿಷ್ ಹಾಗೂ ಹಿಂದಿಯಲ್ಲಿ ಪರೀಕ್ಷೆ ನಡೆಸಲಾಗುತ್ತಿದೆ. ರಾಜ್ಯವನ್ನು ಪ್ರತಿನಿಧಿಸುವ ಕೇಂದ್ರ ಸಚಿವರಿಗೆ ಹಲವು ಬಾರಿ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ. ಕೇಂದ್ರ ಸಚಿವರಾದ ಎಚ್.ಡಿ.ಕುಮಾರಸ್ವಾಮಿ, ಪ್ರಲ್ಹಾದ ಜೋಶಿ, ಶೋಭಾ ಕರಂದ್ಲಾಜೆ, ಸೋಮಣ್ಣ ಅವರು ಸಚಿವ ಸ್ಥಾನ ಬಿಟ್ಟು ಕನ್ನಡಿಗರ ಪರವಾಗಿ ನಿಲ್ಲಬೇಕು' ಎಂದು ಆಗ್ರಹಿಸಿದರು.

ಇದೇ ವೇಳೆ ಸಿಬ್ಬಂದಿ ತರಬೇತಿ ಕೇಂದ್ರಕ್ಕೆ ನುಗ್ಗಲು ಯತ್ನಿಸಿದ ಪ್ರತಿಭಟನಕಾರರನ್ನು ಪೊಲೀಸರು ವಶಕ್ಕೆ ಪಡೆದು, ಸಿಎಆರ್ ಮೈದಾನಕ್ಕೆ ಕರೆದೊಯ್ದರು.

ಪ್ರತಿಭಟನೆಯಲ್ಲಿ ನಗರ ಘಟಕದ ಅಧ್ಯಕ್ಷ ಧರ್ಮರಾಜು, ಮಹಿಳಾ ಘಟಕದ ಪ್ರಧಾನ ಕಾರ್ಯದರ್ಶಿ ಸಹನಾ ಶೇಖರ್, ನಗರ ಘಟಕದ ಅಧ್ಯಕ್ಷೆ ಶ್ವೇತಾ ಹಾಗೂ ಇತರರು ಪಾಲ್ಗೊಂಡಿದ್ದರು.

ಸಂಜೆ ಮಾಧ್ಯಮದವರ ಜತೆ ಮಾತನಾಡಿದ ವೇದಿಕೆ ರಾಜ್ಯ ಘಟಕದ ಅಧ್ಯಕ್ಷ ಟಿ.ಎ.ನಾರಾಯಣ ಗೌಡ, 'ಪ್ರತಿಭಟನೆ ಬೆನ್ನಲ್ಲೇ ಹುಬ್ಬಳ್ಳಿ, ಬೆಂಗಳೂರು ಮತ್ತು ಮೈಸೂರು ಕೇಂದ್ರಗಳಲ್ಲಿ ಆರಂಭವಾಗಿದ್ದ ರೈಲ್ವೆ ಪದೋನ್ನತಿ ಪರೀಕ್ಷೆಗಳನ್ನು ಮುಂದೂಡುವುದಾಗಿ ರೈಲ್ವೆ ಪರೀಕ್ಷಾ ಹಾಗೂ ನೇಮಕಾತಿ (ಆರ್‌ಆರ್‌ಬಿ) ಮುಖ್ಯಸ್ಥ ಅಶ್ವಿನ್ ಅಗ್ನಾರಿ ಅವರು ದೂರವಾಣಿ ಕರೆ ಮಾಡಿ ಖಚಿತ ಪಡಿಸಿದ್ದಾರೆ' ಎಂದರು.

ಕನ್ನಡ ಭಾಷೆಗೆ ಆದ್ಯತೆ ನೀಡದ ಪರೀಕ್ಷೆಗಳನ್ನು ನಡೆಸಲು ಮುಂದಾದರೆ ರಾಜ್ಯಾದ್ಯಂತ ರೈಲ್ವೆ ವ್ಯವಸ್ಥೆಯನ್ನೇ ಬಂದ್ ಮಾಡಲಾಗುವುದು. ಯಾವುದೇ ಸ್ವರೂಪದ ಚಳವಳಿಗೂ ಸಿದ್ಧ ಎಂದು ಅವರು ಎಚ್ಚರಿಸಿದರು.

ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರ ದೆಹಲಿ ನಿವಾಸದಲ್ಲಿ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರನ್ನು ಈ ಸಂಬಂಧ ಶನಿವಾರ ಭೇಟಿ ಮಾಡಿ, ಕನ್ನಡಿಗರ ಬೇಡಿಕೆಯನ್ನು ಮಂಡಿಸಲಾಗುವುದು. ರಾಜ್ಯದಲ್ಲಿ ಕನ್ನಡದಲ್ಲಿ ಬರೆಯಲು ಅವಕಾಶವಿಲ್ಲದ ಯಾವುದೇ ಪರೀಕ್ಷೆಗಳನ್ನು ನಡೆಸಲು ಬಿಡುವುದಿಲ್ಲ ಎಂದು ತಿಳಿಸಿದರು.



ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣ ಬಳಿ ಪ್ರತಿಭಟನೆ ನಡೆಸುತ್ತಿದ್ದ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು
ಪ್ರಜಾವಾಣಿ ಚಿತ್ರ ಬಿ.ಕೆ.ಜನಾರ್ದನ್

ಎಲ್‌ಪಿಜಿ ಪೂರೈಕೆ: ಮಾಹಿತಿ ಕೇಳಿದ ಕೋರ್ಟ್

ಪ್ರಜಾವಾಣಿ ವಾರ್ತೆ



ಬೆಂಗಳೂರು: ಬೆಂಗಳೂರು ಮಹಾನಗರದ ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳಿಗೆ ವಾಣಿಜ್ಯ ಬಳಕೆ ಸಿಲಿಂಡರ್ ಸರಬರಾಜನ್ನು ಏಕಾಏಕಿ ನಿಲ್ಲಿಸಲಾಗುತ್ತಿರುವ ಕ್ರಮವನ್ನು ಪ್ರಶ್ನಿಸಲಾದ ಅರ್ಜಿಗೆ ಸಂಬಂಧಿಸಿದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ, 'ಬೆಂಗಳೂರು ಹೋಟೆಲ್‌ಗಳ ಸಂಘ'ದ ಕಾರ್ಯದರ್ಶಿ ವೀರೇಂದ್ರ ಎನ್.ಕಾಮತ್ ಸೇರಿದಂತೆ ಒಟ್ಟು ಐವರು ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಂ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹೈಕೋರ್ಟ್ ವಕೀಲ ಕೆ.ಶಶಿಕಿರಣ್ ಭಟ್, 'ಬೆಂಗಳೂರು ಮಹಾನಗರದಲ್ಲಿ ಸುಮಾರು 40 ಸಾವಿರ ಹೋಟೆಲ್‌ಗಳು ಕಾರ್ಯನಿರ್ವಹಿಸುತ್ತಿವೆ. 6 ಲಕ್ಷಕ್ಕೂ ಹೆಚ್ಚು ಜನ ಈ ಉದ್ಯಮವನ್ನು ಅವಲಂಬಿಸಿದ್ದಾರೆ. ಇಂತಹ ಸನ್ನಿವೇಶದಲ್ಲಿ ಹೋಟೆಲ್‌ಗಳನ್ನು ಸ್ಥಗಿತಗೊಳಿಸಿದರೆ ಉದ್ಯಮವನ್ನು ನೆಚ್ಚಿದ ಸರಕು ಪದಾರ್ಥಗಳ ಸರಪಳಿಗೂ ದೊಡ್ಡ ಹೊಡೆತ ಬೀಳಲಿದೆ. ಆದ್ದರಿಂದ, ಎಂದಿನಂತೆ ಸಿಲಿಂಡರ್ ಪೂರೈಕೆಗೆ ನಿರ್ದೇಶಿಸಬೇಕು' ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ಇದೇ ವೇಳೆ ರಾಜ್ಯ ಮತ್ತು ಕೇಂದ್ರ ಸರ್ಕಾರದ ಪರ ವಕೀಲರು, 'ಸಿಲಿಂಡರ್ ಪೂರೈಕೆ ಸರ್ಕಾರದ ನೀತಿ ನಿಯಮಗಳಿಗೆ ಸಂಬಂಧಿಸಿದ ವಿಚಾರ. ಆದಾಗ್ಯೂ, ಅರ್ಜಿಗೆ ಸಂಬಂಧಿಸಿದಂತೆ ಮಾಹಿತಿ ಪಡೆದು ನ್ಯಾಯಾಲಯಕ್ಕೆ ತಿಳಿಸಲಾಗುವುದು. ಅದಕ್ಕಾಗಿ ಕಾಲಾವಕಾಶ ನೀಡಬೇಕು' ಎಂದು ಕೋರಿದರು.

ಇದನ್ನು ಆಲಿಸಿದ ನ್ಯಾಯಪೀಠ, 'ಎಲ್‌ಪಿಜಿ ಸಿಲಿಂಡರ್‌ಗಳ ಹಂಚಿಕೆ ಪ್ರಕ್ರಿಯೆ ಮತ್ತು ಮಾರ್ಚ್ ತಿಂಗಳಲ್ಲಿ ರಾಜ್ಯಕ್ಕೆ ಹಂಚಿಕೆ ಮಾಡಲಾಗಿರುವ ಪ್ರಮಾಣ ಎಷ್ಟು? ಎಲ್‌ಪಿಜಿ ಸಿಲಿಂಡರ್‌ಗಳ ರಾಜ್ಯವಾರು ಹಂಚಿಕೆ ಪ್ರಕ್ರಿಯೆ ಮತ್ತು ರಾಜ್ಯದಲ್ಲಿ ಪ್ರಸ್ತುತ ಎಷ್ಟು ಪ್ರಮಾಣದ ದಾಸ್ತಾನು ಲಭ್ಯವಿದೆ ಎಂಬುದರ ಮಾಹಿತಿ ಒದಗಿಸಿ' ಎಂದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ನಿರ್ದೇಶಿಸಿತು.

ಕೋಗಿಲು: ವರದಿ ಸಲ್ಲಿಕೆಗೆ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋಗಿಲು ಬಡಾವಣೆಯಲ್ಲಿನ ಅಕ್ರಮ ಮನೆಗಳ ತೆರವು ಕಾರ್ಯಾಚರಣೆಯಲ್ಲಿ ಸಂತ್ರಸ್ತರಾದವರಿಗೆ ಕಲ್ಪಿಸಲಾಗಿರುವ ಪುನರ್ವಸತಿ ಹಾಗೂ ನಿರ್ಗತಿಕರಾದವರ ಮಾಹಿತಿಯನ್ನು ಒಳಗೊಂಡ ಅಂತಿಮ ವರದಿ ಸಲ್ಲಿಸಲು ಪ್ರಕರಣದ ಅಮಿಕಸ್ ಕ್ಯೂರಿಗೆ ಏಪ್ರಿಲ್ 29ರವರೆಗೆ ಹೈಕೋರ್ಟ್ ಕಾಲಾವಕಾಶ ನೀಡಿದೆ.



'ತೆರವು ಕಾರ್ಯಾಚರಣೆಯನ್ನು ಅಸಾಂವಿಧಾನಿಕ ಎಂದು ಘೋಷಿಸಬೇಕು, ಸಂತ್ರಸ್ತರಿಗೆ ಪುನರ್ವಸತಿ ಹಾಗೂ ಪರಿಹಾರ ನೀಡಲು ನಿರ್ದೇಶಿಸಬೇಕು' ಎಂದು ಕೋರಿ ಈ ಪ್ರದೇಶದಲ್ಲಿ ವಾಸವಿದ್ದ ಝೈಬಾ ತಬಸ್ಸುಮ್, ರೆಹಾನ ಮತ್ತು ಅರೀಫಾ ಬೇಗಂ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅಮಿಕಸ್ ಕ್ಯೂರಿ ಬಿ.ವಿ.ವಿದ್ಯುಲ್ಲತಾ, 'ಪುನರ್ವಸತಿ ಕೇಂದ್ರಕ್ಕೆ ಭೇಟಿ ನೀಡಿದ್ದೆ. ಆದರೆ, ನಿರಾಶ್ರಿತರು ತಾವಿದ್ದ ಜಾಗ ತೊರೆದು ಪುನರ್ವಸತಿ ಕೇಂದ್ರಕ್ಕೆ ಹೋಗಲು ಇಷ್ಟಪಡುತ್ತಿಲ್ಲ. ಬಡಾವಣೆಯಲ್ಲಿಯೇ ಉಳಿದುಕೊಂಡಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದ ಅಂತಿಮ ವರದಿಯನ್ನು ಎರಡು-ಮೂರು ವಾರಗಳಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು' ಎಂದು ವಿವರಿಸಿದರು.

ಇದನ್ನು ಪರಿಗಣಿಸಿದ ನ್ಯಾಯಪೀಠ, ಪುನರ್ವಸತಿ ವ್ಯವಸ್ಥೆ ಕುರಿತಾದ ಅಂತಿಮ ವರದಿ ಸಲ್ಲಿಕೆಗೆ ಏಪ್ರಿಲ್ 29ರವರೆಗೆ ಗಡುವು ನೀಡಿ ವಿಚಾರಣೆ ಮುಂದೂಡಿತು.

ಆತ್ಮಹತ್ಯೆಗೆ ಯತ್ನಿಸಿದ್ದ ವ್ಯಕ್ತಿ ಕಾಪಾಡಿದ ಪೊಲೀಸ್

ಬೆಂಗಳೂರು: ರೈಲ್ವೆ ಹಳಿ ಮೇಲೆ ಮಲಗಿ ಆತ್ಮಹತ್ಯೆಗೆ ಯತ್ನಿಸಿದ್ದ ವ್ಯಕ್ತಿಯನ್ನು ಯಲಹಂಕ ಪೊಲೀಸ್ ಠಾಣೆಯ ಹೆಡ್ ಕಾನ್‌ಸ್ಟೆಬಲ್ ಶ್ರೀಧರ್ ಮೂರ್ತಿ ಅವರು ಕಾಪಾಡಿದ್ದಾರೆ.

ರೈಲ್ವೆ ಹಳಿಯ ಮೇಲೆ ವ್ಯಕ್ತಿಯೊಬ್ಬರು ಮಲಗಿ ಆತ್ಮಹತ್ಯೆಗೆ ಯತ್ನಿಸಿದ್ದಾರೆ ಎಂದು ಪೊಲೀಸ್ ನಿಯಂತ್ರಣ ಕೊಠಡಿಗೆ (112) ಕರೆ ಬಂತು. ಈ ಮಾಹಿತಿ ಸ್ವೀಕರಿಸಿದ ಕೂಡಲೇ ಗಸ್ತು ವಾಹನದಲ್ಲಿದ್ದ ಶ್ರೀಧರ್ ಮೂರ್ತಿ ಅವರು ಸ್ಥಳಕ್ಕೆ ಧಾವಿಸಿದರು. ರೈಲು ಬರುವ ಮುನ್ನವೇ ಹಳಿಯ ಬಳಿಗೆ ತಲುಪಿದ ಅವರು, ವ್ಯಕ್ತಿಯನ್ನು ಸುರಕ್ಷಿತವಾಗಿ ಅಲ್ಲಿಂದ ಕರೆತಂದರು. 'ಜೀವನದಲ್ಲಿ ಎದುರಾಗುವ ಸಂಕಷ್ಟಗಳಿಗೆ ಆತ್ಮಹತ್ಯೆ ಅಂತಿಮ ನಿರ್ಧಾರವಲ್ಲ' ಎಂಬುದನ್ನು ಆ ವ್ಯಕ್ತಿಗೆ ಮನವರಿಕೆ ಮಾಡಿಕೊಟ್ಟು, ಧೈರ್ಯ ತುಂಬಿದರು.

ಸೆನ್ಸಾರ್ ಮಂಡಳಿಯ ನಿರ್ಲಕ್ಷ್ಯಕ್ಕೆ ಲೇಖಕಿಯರ ಆಕ್ರೋಶ

ಕೆ.ಡಿ ಸಿನಿಮಾ ಹಾಡಿಗೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧ್ರುವ ಸರ್ಜಾ ಅಭಿನಯದ 'ಕೆ.ಡಿ' ಸಿನಿಮಾದ ಕೀಳು ಅಭಿರುಚಿಯ ಹಾಡಿಗೆ ಲೇಖಕಿಯರು ತೀವ್ರ ವಿರೋಧ ವ್ಯಕ್ತಪಡಿಸಿದ್ದು, ಈ ಹಾಡನ್ನು ಕೈಬಿಡುವಂತೆ ಚಿತ್ರತಂಡಕ್ಕೆ ಆಗ್ರಹಿಸಿದ್ದಾರೆ.

ಈ ಬಗ್ಗೆ ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ, ಕರ್ನಾಟಕ ಲೇಖಕಿಯರ ಸಂಘ ಹಾಗೂ ಜನವಾದಿ ಮಹಿಳಾ ಸಂಘಟನೆ ಜಂಟಿಯಾಗಿ ಕೇಂದ್ರ ಚಲನಚಿತ್ರ ಪ್ರಮಾಣೀಕರಣ ಮಂಡಳಿ, ನಿರ್ಮಾಪಕರ ಸಂಘ, ಚಲನಚಿತ್ರ ವಾಣಿಜ್ಯ ಮಂಡಳಿ ಹಾಗೂ ಮಹಿಳಾ ಆಯೋಗಕ್ಕೆ ಪತ್ರ ಬರೆದಿವೆ.

ಬಿ. ಟಿ. ಲಲಿತಾ ನಾಯಕ್, ಹೇಮಲತಾ ಮಹಿಷಿ, ಶಾಂತಾ ನಾಗರಾಜ್, ಸಬಿಹಾ ಭೂಮಿಗೌಡ, ಆರ್. ಸುನಂದಮ್ಮ, ದು. ಸರಸ್ವತಿ, ಸಬಿತಾ ಬನ್ನಾಡಿ, ಎಂ.ಎಸ್. ಆಶಾದೇವಿ, ಪ್ರತಿಭಾ ನಂದಕುಮಾರ್, ವಸುಂಧರಾ ಕದಲೂರು, ಎಚ್.ಎಸ್. ಅನುಪಮಾ, ವಸುಂಧರಾ ಭೂಪತಿ, ಆರ್. ಪೂರ್ಣಿಮಾ ಮೊದಲಾದವರು ಈ ಪತ್ರಕ್ಕೆ ಸಹಮತ ಸೂಚಿಸಿದ್ದಾರೆ.

'ಈ ಹಾಡು ಹೀನ ಅಭಿರುಚಿಯಿಂದ ಕೂಡಿದೆ. ಚಿಕ್ಕ ಮಕ್ಕಳಿಂದ ಹಿಡಿದು, ಎಲ್ಲರ ಮೇಲೂ ಇದು ಕೆಟ್ಟ ಪರಿಣಾಮ ಬೀರಲಿದೆ. ಗೀತೆಯ ಸಾಹಿತ್ಯವು ಅತ್ಯಂತ ಕೀಳು ಮಟ್ಟದಲ್ಲಿದೆ. ಶೃಂಗಾರಕ್ಕೂ ಅಶ್ಲೀಲಕ್ಕೂ ವ್ಯತ್ಯಾಸವಿದ್ದು, ಈ ಹಾಡು ಅಶ್ಲೀಲತೆಯಿಂದ ಕೂಡಿದೆ' ಎಂದು ಲೇಖಕಿಯರು ಬೇಸರ ವ್ಯಕ್ತಪಡಿಸಿದ್ದಾರೆ.

'ಈಗಾಗಲೇ ಹಲವು ರೀತಿಯಲ್ಲಿ ಹೆಣ್ಣುಮಕ್ಕಳ ಮೇಲೆ ಆಕ್ರಮಣ ಆಗುತ್ತಿದೆ. ಇಂತಹ ಹಾಡುಗಳು ಹೆಣ್ಣನ್ನು ಕಾಮದ ಗೊಂಬೆ ಎಂಬಂತೆ ಬಿಂಬಿಸಿ, ಹೆಂಗಸರನ್ನು ಆ ರೀತಿ ನೋಡಲು ಪ್ರಚೋದಿಸುತ್ತವೆ. ರಾಜ್ಯ ಸರ್ಕಾರವು 16 ವರ್ಷದೊಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣ ನಿಷೇಧಿಸುವಲ್ಲಿ ತೋರಿದ ಕಾಳಜಿಯನ್ನು ಈಗಲೂ ತೋರಿಸಬೇಕಿದೆ. ಸೆನ್ಸಾರ್ ಮಂಡಳಿ ತೋರಿರುವ ನಿರ್ಲಕ್ಷ್ಯ, ಬೇಜವಾಬ್ದಾರಿಯಿಂದ ಇಂತಹ ಹಾಡುಗಳು ಎಗ್ಗಿಲ್ಲದೆ ಬಿಡುಗಡೆ ಯಾಗುತ್ತಿವೆ' ಎಂದು ಹೇಳಿದ್ದಾರೆ.

'ಸೆನ್ಸಾರ್ ಮಂಡಳಿ ಈ ಹಾಡನ್ನು ಹೇಗೆ ಒಪ್ಪಿತು ಎಂಬುದೇ ಆಶ್ಚರ್ಯವಾಗುತ್ತಿದೆ. ಮಹಿಳೆಯರನ್ನು ಅವಮಾನಿಸುವ ಇಂಥ ಹಾಡುಗಳನ್ನು ಯಾವ ಕಾರಣಕ್ಕೂ ನಾವು ಒಪ್ಪುವುದಿಲ್ಲ. ಈ ಹಾಡನ್ನು ಸಂಪೂರ್ಣವಾಗಿ ಕೈಬಿಡಬೇಕು. ಈ ಕುರಿತು ತಕ್ಷಣ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದ್ದಾರೆ.

ಅಶ್ಲೀಲ ಸಾಹಿತ್ಯ ನಿರ್ಬಂಧಿಸಿ: ನಾಗಲಕ್ಷ್ಮೀ

'ಚಲನಚಿತ್ರಗಳಲ್ಲಿ ಮಹಿಳೆಯರನ್ನು ಅವಹೇಳನಕಾರಿಯಾಗಿ ಬಿಂಬಿಸುವ ಅಶ್ಲೀಲ ಸಾಹಿತ್ಯವನ್ನು ನಿರ್ಬಂಧಿಸಬೇಕು' ಎಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮೀ ಚೌಧರಿ ಆಗ್ರಹಿಸಿದ್ದಾರೆ.

ಈ ಬಗ್ಗೆ ಕೇಂದ್ರ ಚಲನಚಿತ್ರ ಪ್ರಮಾಣೀಕರಣ ಮಂಡಳಿಯ ಕೇಂದ್ರೀಯ ಸದನದ ಪ್ರಾದೇಶಿಕ ನಿರ್ದೇಶಕರಿಗೆ ಪತ್ರ ಬರೆದಿರುವ ಅವರು, 'ಕೆ.ಡಿ' ಚಲನಚಿತ್ರದ ಹಾಡುಗಳಲ್ಲಿ ಮಹಿಳೆಯರ ಘನತೆಗೆ ಕುಂದು ತರುವಂತಹ ಸಾಹಿತ್ಯ ಬಳಕೆ ಆಗುತ್ತಿದೆ. ಆದ್ದರಿಂದ ಮಹಿಳೆಯರನ್ನು ಅಶ್ಲೀಲವಾಗಿ ಬಿಂಬಿಸುವ ಯಾವುದೇ ದೃಶ್ಯ ಅಥವಾ ಸಾಹಿತ್ಯವನ್ನು ನಿರ್ಬಂಧಿಸಬೇಕು' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ಹಾಡಿನ ಸಾಹಿತ್ಯದಲ್ಲಿರುವ ಪ್ರಚೋದನಕಾರಿ ಸಾಲುಗಳನ್ನು ಸಾರ್ವಜನಿಕವಾಗಿ ಪ್ರಸಾರ ಮಾಡುವುದರಿಂದ ಮಹಿಳೆಯರ ಸುರಕ್ಷತೆ ಹಾಗೂ ಸಾಮಾಜಿಕ ಸ್ವಾಸ್ಥ್ಯದ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ. ಇದು ಸಂವಿಧಾನದತ್ತವಾದ ಮಹಿಳೆಯರ ಘನತೆಯ ಹಕ್ಕುಗಳ ಉಲ್ಲಂಘನೆ ಆಗುತ್ತದೆ. ಆದ್ದರಿಂದ ಸದರಿ ಚಲನಚಿತ್ರಕ್ಕೆ ಪ್ರಮಾಣಪತ್ರ ನೀಡುವ ಮೊದಲು ಇಂತಹ ಆಕ್ಷೇಪಾರ್ಹ ಸಾಹಿತ್ಯ ಮತ್ತು ದೃಶ್ಯಗಳನ್ನು ಪರಿಶೀಲಿಸಿ, ಅವುಗಳನ್ನು ಕಡ್ಡಾಯವಾಗಿ ತೆಗೆದು ಹಾಕಲು ಅಥವಾ ಮಾರ್ಪಾಡು ಮಾಡಲು ಚಿತ್ರ ತಂಡಕ್ಕೆ ನಿರ್ದೇಶನ ನೀಡಬೇಕು' ಎಂದು ತಿಳಿಸಿದ್ದಾರೆ.

ಜೈ ಬಾಂಗ್ಲಾ: ಜಾಮೀನು ಮಂಜೂರು

ಬೆಂಗಳೂರು: ಹೆಬ್ಬಗೋಡಿಯ ಸರ್ಕಾರಿ ಜಮೀನಿನಲ್ಲಿ ನಿರ್ಮಿಸಲಾಗಿದ್ದ ಅಕ್ರಮ ಶೆಡ್‌ಗಳ ತೆರವು ಕಾರ್ಯಾಚರಣೆ ವೇಳೆ 'ಜೈ ಬಾಂಗ್ಲಾ' ಎಂದು ಘೋಷಣೆ ಕೂಗಿದ ಆರೋಪದಡಿ ಬಂಧನಕ್ಕೊಳಗಾಗಿದ್ದ ಪಶ್ಚಿಮ ಬಂಗಾಳದ ಮಹಿಳೆಗೆ ಹೈಕೋರ್ಟ್ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ. ಸದ್ಯ ಆನೇಕಲ್ ತಾಲ್ಲೂಕಿನ ಹುಲಿಮಂಗಲ ಪೊಡು ಗ್ರಾಮದಲ್ಲಿ ನೆಲೆಸಿರುವ ಸರ್ಬಾನು ಖಾತೂನ್ (25) ಜಾಮೀನು ಕೋರಿ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಪೀಠ ಪುರಸ್ಕರಿಸಿದೆ.

ಕತ್ತು ಸೀಳಿ ಬಾಲಕಿಯ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಿ.ಜೆ.ಹಳ್ಳಿ ಠಾಣಾ ವ್ಯಾಪ್ತಿಯಲ್ಲಿ ಬಾಲಕಿಯ ಕತ್ತು ಸೀಳಿ ಕೊಲೆ ಮಾಡಲಾಗಿದ್ದು, ಸಕ್ಕರೆ ಮಂಡಿ ಸಮೀಪದ ಪಾಳು ಬಿದ್ದ ಮನೆಯಲ್ಲಿ 17 ವರ್ಷದ ಬಾಲಕಿಯ ಮೃತದೇಹ ಪತ್ತೆಯಾಗಿದೆ.

ಶಬೀಲ್ (20) ಎಂಬಾತ ಕೃತ್ಯವೆಸಗಿರುವ ಶಂಕೆ ವ್ಯಕ್ತವಾಗಿದ್ದು, ಆತನ ಪತ್ತೆಗೆ ಎರಡು ವಿಶೇಷ ತಂಡಗಳನ್ನು ರಚಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಾಥಮಿಕ ಮಾಹಿತಿ ಪ್ರಕಾರ, ಕೊಲೆಯಾಗಿರುವ ಬಾಲಕಿ ಹಾಗೂ ಶಬೀಲ್ ನಡುವೆ ನಿಶ್ಚಿತಾರ್ಥವಾಗಿತ್ತು. ಹಬ್ಬದ ನಂತರ ಇಬ್ಬರಿಗೂ ಮದುವೆ ಮಾಡಲು ಕುಟುಂಬದ ಸದಸ್ಯರು ನಿರ್ಧರಿಸಿದ್ದರು. ಇಬ್ಬರೂ ಸಕ್ಕರೆ ಮಂಡಿಯಲ್ಲಿರುವ ಶಬೀಲ್ ಸಂಬಂಧಿಕರ ಒಡೆತನದ ಪಾಳು ಬಿದ್ದ ಮನೆಯಲ್ಲಿ ಭೇಟಿಯಾಗುತ್ತಿದ್ದರು ಎಂದು ತಿಳಿದು ಬಂದಿದೆ.

ಖಾಸಗಿಯಾಗಿ ಮಾತುಕತೆ ನಡೆಸುವ ಉದ್ದೇಶದಿಂದ ಆರೋಪಿಯು ಮಂಗಳವಾರ ಬೆಳಿಗ್ಗೆ 6.30ಕ್ಕೆ ಬಾಲಕಿಯನ್ನು ಪಾಳುಬಿದ್ದ ಮನೆಗೆ ಕರೆದುಕೊಂಡು ಬಂದು, ಕತ್ತು ಸೀಳಿ ಕೊಲೆ ಮಾಡಿ ಪರಾರಿಯಾಗಿದ್ದಾನೆ. ರಕ್ತದ ಮಡುವಿನಲ್ಲಿ ಬಾಲಕಿ ಬಿದ್ದಿರುವುದನ್ನು ಕಂಡು ಸಂಬಂಧಿಕರು ಪೊಲೀಸರಿಗೆ ವಿಷಯ ತಿಳಿಸಿದರು.

ಅಪರಾಧ ಸುದ್ದಿ

ಘಟನಾ ಸ್ಥಳಕ್ಕೆ ಪೂರ್ವ ವಿಭಾಗದ ಡಿಸಿಪಿ ವಿಕ್ರಮ್ ಅಮಟೆ, ಡಿ.ಜೆ.ಹಳ್ಳಿ ಠಾಣೆ ಪೊಲೀಸರು, ವಿಧಿ ವಿಜ್ಞಾನ ಪ್ರಯೋಗಾಲಯದ ತಜ್ಞರು ಹಾಗೂ ಸೋಕೋ ತಂಡ ಭೇಟಿ ನೀಡಿ, ಪರಿಶೀಲನೆ ನಡೆಸಿವೆ.

'ಆರೋಪಿ ಶಬೀಲ್ ಬಂಧಿಸಿದ ನಂತರ ಕೊಲೆಗೆ ಕಾರಣ ತಿಳಿಯಲಿದೆ. ಘಟನೆ ನಡೆದ ಸ್ಥಳ ಶಬೀಲ್ ಕುಟುಂಬಕ್ಕೆ ಸೇರಿದೆ. ಈ ಮನೆಯಲ್ಲಿ ಯಾರೂ ವಾಸ ಇರಲಿಲ್ಲ. ಆಗಾಗ ಇಬ್ಬರೂ ಇಲ್ಲಿ ಬಂದು ಭೇಟಿಯಾಗುತ್ತಿದ್ದರು ಎಂಬ ಮಾಹಿತಿ ಇದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರತಿಭಟನೆ: ಮೂವರ ವಿರುದ್ಧ ಎಫ್‌ಐಆರ್



ಬೆಂಗಳೂರು: ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸದೆ ಶೇಷಾದ್ರಿ ಜಂಕ್ಷನ್ ಬಳಿ ರಸ್ತೆತಡೆ ನಡೆಸಿದ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಮೂವರ ವಿರುದ್ಧ ಉಪ್ಪಾರಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಿಎಸ್‌ಐ ಭೀಮಸೇನ ಘಾಟಗೆ ಅವರ ದೂರಿನ ಮೇರೆಗೆ ಕರ್ನಾಟಕ ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಎಂ.ಗುರುಮೂರ್ತಿ ಶಿವಮೊಗ್ಗ, ಸಂಘಟನಾ ಸಂಚಾಲಕರಾದ ಹನುಮಂತಪ್ಪ ಕಾಕರಗಲ್, ಎಸ್. ಫಕೀರಪ್ಪ ಅವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ಹೈಕೋರ್ಟ್ ಆದೇಶದ ಪ್ರಕಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಮಾತ್ರ ಪ್ರತಿಭಟನೆ ನಡೆಸಲು ಅವಕಾಶ ನೀಡಲಾಗಿದೆ. ಮಾರ್ಚ್ 11ರಂದು ದಲಿತರಿಗೆ ಮೂಲಸೌಲಭ್ಯ ಒದಗಿಸುವಂತೆ ಆಗ್ರಹಿಸಿ ಎಂ.ಗುರುಮೂರ್ತಿ ಶಿವಮೊಗ್ಗ ನೇತೃತ್ವದಲ್ಲಿ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಬೇಕಿತ್ತು. ಆದರೆ, ಪ್ರತಿಭಟನಕಾರರು ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಾ, ಶೇಷಾದ್ರಿ ಜಂಕ್ಷನ್ ಬಳಿ ಬಂದು ರಸ್ತೆತಡೆ ನಡೆಸಿ, ಸಾರ್ವಜನಿಕರಿಗೆ ತೊಂದರೆ ಉಂಟು ಮಾಡಿದರು ಎಂದು ಪಿಎಸ್‌ಐ ದೂರಿನಲ್ಲಿ ತಿಳಿಸಿದ್ದಾರೆ.

ಸುತ್ತಿಗೆಯಿಂದ ಹೊಡೆದು ಸ್ನೇಹಿತನ ಕೊಲೆ

ಬೆಂಗಳೂರು: ಪಾನಮತ್ತನಾಗಿ ತಾಯಿ ಹಾಗೂ ಸಹೋದರನಿಗೆ ನಿಂದಿಸಿ ಗಲಾಟೆ ಮಾಡುತ್ತಿದ್ದ ಯುವಕನನ್ನು ಸ್ನೇಹಿತನೇ ಕೊಲೆ ಮಾಡಿರುವ ಘಟನೆ ಕನ್ನಮಂಗಲದ ಬಳಿಯ ಗೊರವಿಗೆರೆಯಲ್ಲಿ ಸೋಮವಾರ ರಾತ್ರಿ ನಡೆದಿದೆ.

ಬಿಹಾರದ ಕುನಾಲ್ ಕುಮಾರ್ (22) ಕೊಲೆಯಾದ ಯುವಕ. ಈತನ ಸ್ನೇಹಿತನಾದ ಆರೋಪಿ ನಸ್ರುಲ್ಲಾನನ್ನು ಆವಲಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕುನಾಲ್, ನಸ್ರುಲ್ಲಾ ಹಾಗೂ ಮತ್ತೊಬ್ಬ ಯುವಕ ಗೊರವಿಗೆರೆಯ ಕೊಠಡಿಯಲ್ಲಿ ಒಟ್ಟಿಗೆ ವಾಸವಾಗಿದ್ದರು. ಈ ಮೂವರು ಕೋಲ್ಡ್ ಸ್ಟೋರೇಜ್ ಗೋದಾಮಿನಲ್ಲಿ ಕೆಲಸ ಮಾಡುತ್ತಿದ್ದರು. ಕುನಾಲ್, 15 ದಿನಗಳ ಹಿಂದೆ ನಸ್ರುಲ್ಲಾನ ತಾಯಿ ಹಾಗೂ ಸಹೋದರನಿಗೆ ವಿನಾಕಾರಣ ಅವಾಚ್ಯವಾಗಿ ನಿಂದಿಸಿದ್ದ. ಈ ಕಾರಣಕ್ಕೆ ನಸ್ರುಲ್ಲಾ, ಕುನಾಲ್‌ನ ಮೇಲೆ ಕೋಪಗೊಂಡಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಮದ್ಯ ವ್ಯಸನಿಯಾದ ಕುನಾಲ್, ಸೋಮವಾರ ರಾತ್ರಿ ಪಾನಮತ್ತನಾಗಿ ಕೊಠಡಿಗೆ ಬಂದು ನಸ್ರುಲ್ಲಾ ಜತೆ ಜಗಳವಾಡಿದ್ದಾನೆ. ಮೊದಲೇ ಆತನ ಮೇಲೆ ಕೋಪದಲ್ಲಿದ್ದ ನಸ್ರುಲ್ಲಾ, ಕೈಗೆ ಸಿಕ್ಕಿದ ಸುತ್ತಿಗೆಯಿಂದ ಕುನಾಲ್‌ನ ತಲೆಗೆ ಹೊಡೆದಿದ್ದಾನೆ. ಪರಿಣಾಮ ತೀವ್ರ ರಕ್ತಸ್ರಾವವಾಗಿ ಕುಸಿದು ಬಿದ್ದ ಕುನಾಲ್‌ನನ್ನು ಮತ್ತೊಬ್ಬ ಯುವಕ ಆಸ್ಪತ್ರೆಗೆ ದಾಖಲಿಸಿದ್ದಾನೆ. ಆದರೆ, ಚಿಕಿತ್ಸೆಗೆ ಸ್ಪಂದಿಸಲಿಲ್ಲ ಎಂದು ಪೊಲೀಸರು ಹೇಳಿದ್ದಾರೆ.

ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿ, ಪ್ರಕರಣ ದಾಖಲಿಸಿಕೊಂಡರು. ಪರಾರಿಯಾಗಿದ್ದ ಆರೋಪಿ ನಸ್ರುಲ್ಲಾನನ್ನು ದಾಬಸ್‌ಪೇಟೆಯ ರೈಲ್ವೆ ನಿಲ್ದಾಣದ ಬಳಿ ಬಂಧಿಸಿದ್ದಾರೆ.

ಖಾಕಿ ಭದ್ರತೆಯಲ್ಲಿ ಪ್ರೇಮಿಗಳ ಮದುವೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾತಿ ಬೇರೆ ಎಂಬ ಕಾರಣಕ್ಕೆ ಮದುವೆಗೆ ಪೋಷಕರು ವಿರೋಧ ವ್ಯಕ್ತಪಡಿಸಿದ್ದರಿಂದಾಗಿ, ಪ್ರೇಮಿಗಳಿಬ್ಬರು ಹೈಕೋರ್ಟ್ ಆಶೀರ್ವಾದದಲ್ಲಿ ಪೊಲೀಸ್ ಭದ್ರತೆ ಪಡೆದು, ದೇವಸ್ಥಾನದಲ್ಲಿ ಮದುವೆ ಮಾಡಿಕೊಂಡಿದ್ದಾರೆ.

ಪ್ರೇಮಿಗಳು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಂ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಅರ್ಜಿದಾರರ ಮದುವೆಗೆ ಸೂಕ್ತ ಭದ್ರತೆ ಒದಗಿಸಿ' ಎಂದು ಚಂದ್ರಾ ಲೇ ಔಟ್ ಠಾಣೆ ಪೊಲೀಸರಿಗೆ ಇದೇ 9ರಂದು ನಿರ್ದೇಶಿಸಿತ್ತು.

ಈ ನಿರ್ದೇಶನದ ಅನುಸಾರ ಮಾರ್ಚ್ 13ರಂದು ನಗರದ ದೇವಸ್ಥಾನವೊಂದರಲ್ಲಿ ಬೆಳಿಗ್ಗೆ 9.15ಕ್ಕೆ ನಡೆದ ಪ್ರೇಮಿಗಳ ಮದುವೆಗೆ ಪೊಲೀಸರು ಅಗತ್ಯ ಭದ್ರತೆ ಒದಗಿಸುವ ಮೂಲಕ ಅವರ ಸುಗಮ ಬದುಕಿನ ಭಾವನಾತ್ಮಕ ಕ್ಷಣಗಳಿಗೆ ಸಾಕ್ಷಿಯಾಗಿದ್ದಾರೆ.

ಇದೇ ವೇಳೆ ನವಜೋಡಿಯ ಪೋಷಕರನ್ನು ಕರೆಯಿಸಿಕೊಂಡು, ಹೈಕೋರ್ಟ್‌ನ ಖಡಕ್ ಆದೇಶವನ್ನು ಪೋಷಕರಿಗೆ ಮನದಟ್ಟು ಮಾಡಿರುವ ಪೊಲೀಸರು, 'ದಂಪತಿಗೆ ತೊಂದರೆ ಕೊಡಬಾರದು' ಎಂದು ಅವರಿಂದ ಮುಚ್ಚಳಿಕೆ ಬರೆಸಿಕೊಂಡಿದ್ದಾರೆ.

ಪ್ರಕರಣ: ಐದು ವರ್ಷದಿಂದ ಪ್ರೀತಿಸುತ್ತಿದ್ದವರು ಬೇರೆ-ಬೇರೆ ಜಾತಿಗೆ ಸೇರಿದ ಕಾರಣಕ್ಕೆ ಪೋಷಕರು ಮದುವೆಗೆ ಸಮ್ಮತಿಸಿರಲಿಲ್ಲ. ಭದ್ರತೆ ನೀಡುವಂತೆ ಕೋರಿ 2026ರ ಫೆಬ್ರುವರಿ 19ರಂದು ಚಂದ್ರಾ ಲೇ ಔಟ್ ಠಾಣೆ ಪೊಲೀಸರಿಗೆ ಮನವಿ ಸಲ್ಲಿಸಿದ್ದರು. ನಂತರ, 'ಪೊಲೀಸರು ಮನವಿಪರಿಗಣಿಸಿಲ್ಲ' ಎಂದು ಆಕ್ಷೇಪಿಸಿ ಹೈಕೋರ್ಟ್ ಮೆಟ್ಟಿಲು ತುಳಿದಿದ್ದರು. ಅರ್ಜಿದಾರರ ಪರ ವಾದ ಮಂಡಿಸಿದ್ದ ವಕೀಲ ಡಿ.ಮೋಹನ ಕುಮಾರ್, 'ಇತ್ತೀಚೆಗೆ ಮರ್ಯಾದೆಗೇಡು ಹತ್ಯೆಗಳು ಹೆಚ್ಚುತ್ತಿವೆ. ಇಂತಹ ಸಂಕೀರ್ಣ ಸಂದರ್ಭದಲ್ಲಿ ಪ್ರೇಮಿಗಳ ಮದುವೆಗೆ ಭದ್ರತೆ ಒದಗಿಸಲು ಹೈಕೋರ್ಟ್ ನಿರ್ದೇಶನ ನೀಡಿದ್ದು ನಿಜಕ್ಕೂ ವಿಶೇಷ ಸಂಗತಿ' ಎಂದು ಪ್ರತಿಕ್ರಿಯಿಸಿದ್ದಾರೆ.

ಆರೋಗ್ಯ ಇಲಾಖೆ 'ರೋಗಗ್ರಸ್ತ': ಆರೋಪ

ವಿಧಾನಸಭೆಯಲ್ಲಿ ಕಾವೇರಿದ ಚರ್ಚೆ • ವಿಪಕ್ಷ ಸಭಾತ್ಯಾಗ

ಔಷಧ ಕೊರತೆ ಇಲ್ಲ: ಸಚಿವ ದಿನೇಶ್ ಗುಂಡೂರಾವ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ಪತ್ರೆಗಳಲ್ಲಿ ಔಷಧ ಕೊರತೆ, ವೈದ್ಯರ ಅಸಮರ್ಪಕ ವರ್ಗಾವಣೆ, ಹುದ್ದೆಗಳ ಭರ್ತಿ ಮಾಡದಿರುವುದು ಸೇರಿದಂತೆ ಇಲಾಖೆಯಲ್ಲಿನ ಅವ್ಯವಸ್ಥೆಗಳ ಕುರಿತ ಆರೋಪಗಳಿಗೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ನೀಡಿದ ಉತ್ತರ ಸಮರ್ಪಕವಾಗಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿ ವಿಧಾನಸಭೆಯಲ್ಲಿ ವಿರೋಧ ಪಕ್ಷ ಬಿಜೆಪಿಯ ಸದಸ್ಯರು ಮಂಗಳವಾರ ಸಭಾತ್ಯಾಗ ಮಾಡಿದರು.

ಆರೋಗ್ಯ ಇಲಾಖೆಯಲ್ಲಿನ ಲೋಪಗಳ ಕುರಿತು ನಡೆದ ಚರ್ಚೆಯ ವೇಳೆ, ಇಲಾಖೆಯ ಪ್ರಧಾನ ಕಾರ್ಯದರ್ಶಿ ಮತ್ತು ಸಚಿವಾಲಯ ನೌಕರರ ಆಂತರಿಕ ಕಿತ್ತಾಟ ಸೇರಿದಂತೆ ಆಡಳಿತ ವೈಖರಿ, ಔಷಧ ಪೂರೈಕೆಯಲ್ಲಿನ ವೈಫಲ್ಯವನ್ನು ಬೊಟ್ಟು ಮಾಡಿದ ಬಿಜೆಪಿ ಸದಸ್ಯರು ಸರ್ಕಾರವನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು.

ವಿಷಯ ಪ್ರಸ್ತಾಪಿಸಿ ಮಾತನಾಡಿದ ವಿರೋಧ ಪಕ್ಷದ ನಾಯಕ ಆರ್. ಅಶೋಕ, 'ಇಲಾಖೆ ಪ್ರಧಾನ ಕಾರ್ಯದರ್ಶಿ ಹರ್ಷ ಗುಪ್ತ ಕಳೆದ ಎಂಟು ತಿಂಗಳಿಂದ ಕಚೇರಿಗೇ ಬಂದಿಲ್ಲ. ಸಚಿವಾಲಯದ ನೌಕರರ ಕಾರ್ಯಕ್ಷಮತೆ ಪ್ರಶ್ನಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೆ ಅವರು ಪತ್ರ ಬರೆದು, ಸಚಿವಾಲಯವನ್ನು ಪುನರ್ ರಚಿಸುವಂತೆ ಕೋರಿದ್ದಾರೆ. ಅದಕ್ಕೆ ಪ್ರತಿಯಾಗಿ ಹರ್ಷ ಗುಪ್ತ ತಮ್ಮ ವ್ಯಾಪ್ತಿ ಮೀರಿ ಉದ್ಧಟತನದಿಂದ ವರ್ತಿಸುತ್ತಿದ್ದಾರೆ ಎಂದು ಸಚಿವಾಲಯ ನೌಕರರ ಸಂಘ ಸಚಿವರಿಗೆ ಪತ್ರ ಬರೆದಿದೆ. ಈ ಕಿತ್ತಾಟ ಇಲಾಖೆಯಲ್ಲಿನ ಅವ್ಯವಸ್ಥೆಯನ್ನು ಎತ್ತಿ ತೋರಿಸುತ್ತದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮುಖ್ಯಾಂಶಗಳು

- ಸರ್ಕಾರವನ್ನು ತರಾಟೆಗೆ ತೆಗೆದುಕೊಂಡ ಬಿಜೆಪಿ
- ಇಲಾಖೆಯಲ್ಲಿನ ಅವ್ಯವಸ್ಥೆ ಅನಾವರಣ: ಆರೋಪ
- ವಿವಿಧ ಜಿಲ್ಲಾಸ್ಪತ್ರೆಗಳಲ್ಲಿನ ಸಮಸ್ಯೆಗಳ ಅನಾವರಣ



ದಿನೇಶ್ ಗುಂಡೂರಾವ್

'ಸಮುದಾಯ ಆರೋಗ್ಯ ಕೇಂದ್ರಗಳ ತಜ್ಞ ವೈದ್ಯರನ್ನು ವರ್ಗಾವಣೆ ಮಾಡುವುದಿಲ್ಲ ಎಂದು ಸರ್ಕಾರದ ಪರ ಸಚಿವ ಶಿವಾನಂದ ಪಾಟೀಲ ಅವರೇ ಉತ್ತರ ನೀಡಿದ್ದರೂ, ವರ್ಗಾವಣೆ ಮಾಡಲಾಗುತ್ತಿದೆ. ಮತ್ತೊಂದೆಡೆ ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಗಳ ಪೂರೈಕೆಯಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದೆ' ಎಂದರು.

ಅದಕ್ಕೆ ದನಿಗೂಡಿಸಿದ ಬಿಜೆಪಿಯ ಸಿ.ಎನ್. ಅಶ್ವತ್ಥನಾರಾಯಣ, 'ಆರೋಗ್ಯ ಇಲಾಖೆಯಲ್ಲಿ ಹುದ್ದೆಗಳು ಖಾಲಿ ಇವೆ. ಮುಂಬಡ್ತಿ ನೀಡುತ್ತಿಲ್ಲ. ಕನಿಷ್ಠ ಹೆರಿಗೆಗಳು ಆಗುತ್ತಿಲ್ಲವೆಂದು ಸಮುದಾಯ ಆರೋಗ್ಯ ಕೇಂದ್ರಗಳ ತಜ್ಞ ವೈದ್ಯರನ್ನು ಅವೈಜ್ಞಾನಿಕವಾಗಿ ವರ್ಗಾವಣೆ ಮಾಡಲಾಗುತ್ತಿದೆ' ಎಂದೂ ಆರೋಪಿಸಿದರು. ಬಿಜೆಪಿಯ ಬಿ.ವೈ. ವಿಜಯೇಂದ್ರ, ಸುನಿಲ್ ಕುಮಾರ್, ಬೈರತಿ ಬಸವರಾಜ, ಶೈಲೇಂದ್ರ ಬೆಲ್ದಾಳೆ, ಜೆಡಿಎಸ್‌ನ ಶಾರದಾ ಪೂರ್ಯಾನಾಯ್ಕ್, ಜಿ.ಟಿ. ದೇವೇಗೌಡ ಮತ್ತಿತರರು ತಮ್ಮ ಕ್ಷೇತ್ರಗಳಲ್ಲಿ ಆಸ್ಪತ್ರೆಗಳ ಸಮಸ್ಯೆಗಳನ್ನು ತೆರೆದಿಟ್ಟರು.

ಚರ್ಚೆಗೆ ಉತ್ತರ ನೀಡಿದ ದಿನೇಶ್ ಗುಂಡೂರಾವ್, 'ಇಲಾಖೆಯಲ್ಲಿ ಸುಧಾರಣೆ ತರಲು ಹರ್ಷ ಗುಪ್ತ ಪತ್ರ ಬರೆದಿದ್ದಾರೆ. ಇದರಲ್ಲಿ ತಪ್ಪೇನು' ಎಂದು ಸಮರ್ಥಿಸಿಕೊಂಡರು. ವೈದ್ಯರ ವರ್ಗಾವಣೆ, ಜಿಲ್ಲಾ, ತಾಲ್ಲೂಕು ಆಸ್ಪತ್ರೆಗಳಿಗೆ ತಜ್ಞರ ವೈದ್ಯರ ನೇಮಕ ಕುರಿತು ಮಾಹಿತಿ ನೀಡಿದ ಅವರು, 'ಬಳ್ಳಾರಿ ಘಟನೆ ಬಳಿಕ ಬಾಣಂತಿಯರ ಸಾವನ್ನು ಆಡಿಟ್ ಮಾಡಿ, ಸಾವಿನ ಪ್ರಕರಣ ಶೂನ್ಯಕ್ಕೆ ಇಳಿಸಲು ಪ್ರಯತ್ನಿಸುತ್ತಿದ್ದೇವೆ' ಎಂದರು. 'ಪಾರದರ್ಶಕವಾಗಿ ಟೆಂಡರ್ ಪ್ರಕ್ರಿಯೆಯ ಮೂಲಕ ಔಷಧಗಳನ್ನು ಪೂರೈಸಲಾಗಿದ್ದು, ಎಲ್ಲಿಯೂ ಕೊರತೆ ಇಲ್ಲ' ಎಂದರು.

ಬಿ.ಆರ್. ಪಾಟೀಲ ಅಸಮಾಧಾನ: ಇಲಾಖೆಯ ಕಾರ್ಯವೈಖರಿ ಬಗ್ಗೆ ಬೇಸರ ವ್ಯಕ್ತಪಡಿಸಿದ ಕಾಂಗ್ರೆಸ್‌ನ ಬಿ.ಆರ್. ಪಾಟೀಲ, 'ಅಧಿಕಾರಿಗಳು ಸಚಿವರ ದಾರಿ ತಪ್ಪಿಸುತ್ತಿದ್ದಾರೆ. ವೈದ್ಯರ ವರ್ಗಾವಣೆ ಮಾಡಿಲ್ಲ ಎಂದು ಸಚಿವರು ಹೇಳುತ್ತಿದ್ದಾರೆ. ಆದರೆ, ನಾನು ವರ್ಗಾವಣೆ ಮಾಡಿರುವ ಆದೇಶ ಪ್ರತಿ ತೋರಿಸುತ್ತೇನೆ. ಆರೋಗ್ಯ ಸಚಿವರು ಬೆಂಗಳೂರನ್ನು ಪ್ರತಿನಿಧಿಸುವ ಶಾಸಕರು, ಅವರಿಗೆ ಹಳ್ಳಿಗಳ ಆಸ್ಪತ್ರೆಗಳ ಸ್ಥಿತಿ ಗೊತ್ತಿಲ್ಲ. ವೈದ್ಯರ ವರ್ಗಾವಣೆ ಬಗ್ಗೆ ಸಾರ್ವಜನಿಕ ಅಭಿಪ್ರಾಯ ಪಡೆದು ಬೇಕಿದ್ದರೆ ನಿರ್ಧರಿಸಲಿ' ಎಂದು ಆಗ್ರಹಿಸಿದರು.

'ಔಷಧ ಪೂರೈಕೆಗೆ ನೂತನ ವ್ಯವಸ್ಥೆ'

'ಸರ್ಕಾರಿ ಆಸ್ಪತ್ರೆಗಳಿಗೆ ಔಷಧ ಪೂರೈಸಲು ನೂತನ ವ್ಯವಸ್ಥೆ ರೂಪಿಸಲಾಗಿದೆ. ಕೆಲವೇ ದಿನಗಳಲ್ಲಿ ಪೂರೈಕೆ ವ್ಯವಸ್ಥೆ ಸರಿಹೋಗಲಿದೆ' ಎಂದು ವಿಧಾನ ಪರಿಷತ್‌ನಲ್ಲಿ ದಿನೇಶ್ ಗುಂಡೂರಾವ್ ತಿಳಿಸಿದರು.

ಬಿಜೆಪಿಯ ಧನಂಜಯ ಸರ್ಜಿ ಮತ್ತು ಪ್ರತಾಪ ಸಿಂಹ ನಾಯಕ ವಿಷಯ ಪ್ರಸ್ತಾಪಿಸಿ, 'ಔಷಧಗಳ ಕೊರತೆ ಕಾರಣದಿಂದ ರೋಗಿಗಳು ಹೊರಗಡೆಯಿಂದ ಖರೀದಿಸಬೇಕಾದ ಸ್ಥಿತಿ ಎದುರಾಗಿದೆ' ಎಂದು ಕಳವಳ ವ್ಯಕ್ತಪಡಿಸಿದರು.

ಇದಕ್ಕೆ ಸಚಿವ ದಿನೇಶ್, 'ಈ ಮೊದಲು ಒಂದು ವರ್ಷಕ್ಕೆ ಅಗತ್ಯವಿದ್ದ ಔಷಧವನ್ನು ಒಮ್ಮೆಗೇ ಪೂರೈಕೆ ಮಾಡಲಾಗುತ್ತಿತ್ತು. ಈಗ ಮೂರು ತಿಂಗಳಿಗೆ ಅಗತ್ಯವಿರುವಷ್ಟು ಔಷಧವನ್ನು ಪ್ರತ್ಯೇಕ ಪ್ಯಾಕೇಜ್‌ಗಳಲ್ಲಿ ಪೂರೈಕೆ ಮಾಡಲಾಗುತ್ತಿದೆ. ನಿಗಮಕ್ಕೆ ಪೂರೈಕೆಯಾದ ಔಷಧಗಳನ್ನು ಪರೀಕ್ಷೆಗೆ ಒಳಪಡಿಸಿ, ನಂತರ ಪೂರೈಸಲಾಗುತ್ತಿದೆ. ಇದರಿಂದಲೂ ಸ್ವಲ್ಪ ವಿಳಂಬವಾಗಿದೆ' ಎಂದರು.

'ಎಲ್ಲ ಸರ್ಕಾರಿ ಆಸ್ಪತ್ರೆಗಳು, ಆರೋಗ್ಯ ಕೇಂದ್ರಗಳು ಮತ್ತು ಎಲ್ಲ ಸರ್ಕಾರಿ ವೈದ್ಯಕೀಯ ಕಾಲೇಜುಗಳಿಗೆ ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮವೇ ಔಷಧಗಳನ್ನು ಪೂರೈಸಲಿದೆ. ಈಗ 534 ಔಷಧಗಳನ್ನು ಟೆಂಡರ್ ಮೂಲಕ ಪೂರೈಸಲಾಗುತ್ತಿದ್ದು, 300 ಔಷಧಗಳನ್ನು ಸ್ಥಳೀಯವಾಗಿ ಖರೀದಿಸಲಾಗುತ್ತಿದೆ' ಎಂದರು.




ಸುದ್ದಿ 2 ನಿಮಿಷ

ಎಸ್ಎಸ್ಎಲ್‌ಸಿ: ಧೈರ್ಯವಾಗಿ ಪರೀಕ್ಷೆ ಎದುರಿಸಿ- ಸಿದ್ದರಾಮಯ್ಯ

ಬೆಂಗಳೂರು: ಬುಧವಾರ(ಮಾ.18) ಆರಂಭವಾಗಲಿರುವ ಎಸ್ಎಸ್ಎಲ್‌ಸಿ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಭ ಕೋರಿ, 'ಧೈರ್ಯವಾಗಿ ಪರೀಕ್ಷೆ ಎದುರಿಸಿ ಬನ್ನಿ' ಎಂದು ಹೇಳಿದರು.

'ಪರೀಕ್ಷೆ ಎಂದರೆ ಹೆದರಬೇಕಾಗಿಲ್ಲ. ಒಂದು ವೇಳೆ ಕಡಿಮೆ ಅಂಕ ಬಂದರೆ, ಅಂಕವನ್ನು ಸುಧಾರಿಸಿಕೊಳ್ಳಲು ಇನ್ನೂ ಎರಡು ಅವಕಾಶಗಳಿವೆ' ಎಂದು ಅವರು ವಿಧಾನಸಭೆಯಲ್ಲಿ ಹೇಳಿದರು.

ಇದಕ್ಕೆ ಧ್ವನಿಗೂಡಿಸಿದ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರು, 'ಮಕ್ಕಳ ಮೇಲೆ ಪೋಷಕರು ಯಾವುದೇ ಕಾರಣಕ್ಕೂ ಒತ್ತಡ ಹೇರಬಾರದು. ಅದೇ ರೀತಿ ಸಾಮಾಜಿಕ ಜಾಲತಾಣದಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆ ಆಗಿದೆ ಎಂದು ಯಾರಾದರೂ ಪ್ರಶ್ನೆ ಪತ್ರಿಕೆಗಳನ್ನು ಹಾಕಿದರೆ, ಅಂತಹವರನ್ನು ಮುಲಾಜಿಲ್ಲದೇ ಜೈಲಿಗೆ ಹಾಕಿ' ಎಂದರು. ಸಭಾಧ್ಯಕ್ಷ ಯು.ಟಿ. ಖಾದರ್ ಅವರೂ ಶುಭ ಕೋರಿದರು.



'ಮಂಗನ ಕಾಯಿಲೆ: ವರ್ಷಾಂತ್ಯಕ್ಕೆ ಲಸಿಕೆ ಲಭ್ಯ'

ಬೆಂಗಳೂರು: 'ಮಂಗನ ಕಾಯಿಲೆಗೆ (ಕ್ಯಾಸನೂರ್ ಫಾರೆಸ್ಟ್ ಡಿಸೀಸ್–ಕೆಎಫ್‌ಡಿ) ಹೈದರಾಬಾದ್ ಮೂಲದ ಕಂಪನಿ ಲಸಿಕೆ ತಯಾರಿಸಿದೆ. ಈ ವರ್ಷದ ಅಂತ್ಯಕ್ಕೆ ಲಸಿಕೆ ಬಳಕೆಗೆ ಲಭ್ಯವಾಗುವ ನಿರೀಕ್ಷೆಯಿದೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಆರೋಗ್ಯ ಇಲಾಖೆಯ ಸಮಸ್ಯೆಗಳ ಕುರಿತು ವಿಧಾನಸಭೆಯಲ್ಲಿ ನಡೆದ ಚರ್ಚೆಯ ವೇಳೆ ಈ ವಿಷಯ ತಿಳಿಸಿದ ಸಚಿವರು, 'ರಾಜ್ಯದಲ್ಲಿ ಮಂಗನ ಕಾಯಿಲೆಯಿಂದ ಈ ವರ್ಷ ಒಬ್ಬರು ಮೃತಪಟ್ಟಿದ್ದಾರೆ' ಎಂದರು.

'ಕೆಎಫ್‌ಡಿ ಚಿಕಿತ್ಸೆಗೆ ಸದ್ಯ ಲಭ್ಯ ಇರುವ ಲಸಿಕೆ ಕೆಲಸ ಮಾಡುತ್ತಿಲ್ಲ. ಹೊಸ ಲಸಿಕೆ ತಯಾರಿಸುವ ಕುರಿತು ಕೇಂದ್ರ ಸರ್ಕಾರದ ಜೊತೆ ಮಾತನಾಡಿದ್ದೇನೆ. ದೆಹಲಿಯಲ್ಲಿ ಐಸಿಎಂಆರ್ ಮುಖ್ಯಸ್ಥರನ್ನು ಖುದ್ದು ಭೇಟಿಯಾಗಿ ಚರ್ಚೆ ಮಾಡಿದ್ದೇನೆ. ಹೈದರಾಬಾದ್ ಮೂಲದ ಕಂಪನಿ ತಯಾರಿಸಿದ ಲಸಿಕೆಯ ಕ್ಲಿನಿಕಲ್ ಟ್ರಯಲ್ ನಡೆಯುತ್ತಿದೆ' ಎಂದರು.



ಮಾತುಕತೆ

ಪ್ರಜಾವಾಣಿ ಚಿತ್ರ:

ನಗರದ ವಿಧಾನಸೌಧದಲ್ಲಿ ನಡೆದ ವಿಧಾನ ಪರಿಷತ್ ಕಲಾಪದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಜೊತೆ ಕಾಂಗ್ರೆಸ್ ಸದಸ್ಯ ಎಸ್. ರವಿ ಮಾತನಾಡಿದರು

'ಸಕ್ಕರೆ ಕಾರ್ಖಾನೆಗಳಿಂದ ವಿದ್ಯುತ್ ಖರೀದಿ'

ಅನುಮತಿಗಾಗಿ ಸಿ.ಎಂ.ಗೆ ಮನವಿ ಮಾಡಲಾಗುವುದು: ಶಿವಾನಂದ ಪಾಟೀಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂದಿನ ಕಬ್ಬು ನುರಿಸುವ ಹಂಗಾಮಿನ ಅವಧಿಯಲ್ಲಿ ಸಕ್ಕರೆ ಕಾರ್ಖಾನೆಗಳಿಂದ ವಿದ್ಯುತ್ ಖರೀದಿಗೆ ಒಪ್ಪಂದ ಮಾಡಿಕೊಳ್ಳಲು ಮುಖ್ಯಮಂತ್ರಿ ಅವರಿಗೆ ಮನವಿ ಮಾಡಲಾಗುವುದು ಎಂದು ಸಕ್ಕರೆ ಸಚಿವ ಶಿವಾನಂದ ಪಾಟೀಲ ಹೇಳಿದರು.

ವಿಧಾನ ಪರಿಷತ್ತಿನ ವಿರೋಧ ಪಕ್ಷದಗಳ ಮುಖ್ಯ ಸಚೇತಕ ಎನ್. ರವಿಕುಮಾರ್ ಅವರು ಮಂಗಳವಾರದ ಕಲಾಪದ ವೇಳೆ ನಿಯಮ 330ರ ಅಡಿಯಲ್ಲಿ ಸಕ್ಕರೆ ಕಾರ್ಖಾನೆಗಳು ಎದುರಿಸುತ್ತಿರುವ ಬಿಕ್ಕಟ್ಟು ಮತ್ತು ಕಬ್ಬು ಬೆಳೆಗಾರರ ಸಮಸ್ಯೆಗಳ ಕುರಿತು ವಿಷಯ ಪ್ರಸ್ತಾಪಿಸಿದರು.

'ಕಬ್ಬು ಬೆಳೆಗಾರರ ಬಾಕಿ ಪಾವತಿ ಮಾಡಿಲ್ಲ. ಇದಕ್ಕಾಗಿ ಕೇಂದ್ರ ಸರ್ಕಾರವು ಎಥೆನಾಲ್ ಖರೀದಿಸಿಲ್ಲ ಎಂದು ಹೇಳದೆ, ಪರಿಹಾರಗಳನ್ನು ಸೂಚಿಸಬೇಕು' ಎಂದು ಒತ್ತಾಯಿಸಿದರು.

ಆಗ ಸಚಿವ ಶಿವಾನಂದ ಪಾಟೀಲ, 'ಕಾರ್ಖಾನೆಗಳು ಸಾಲ ಮಾಡಿ, ಎಥೆನಾಲ್ ಉತ್ಪಾದನಾ ಘಟಕ ಆರಂಭಿಸಿವೆ. ಉತ್ಪಾದನಾ ಸಾಮರ್ಥ್ಯದ ಶೇ 20 ರಷ್ಟು ಎಥೆನಾಲ್ ಮಾತ್ರ ಕೇಂದ್ರ ಸರ್ಕಾರ ಖರೀದಿಸುತ್ತಿದೆ. ಸಹಜವಾಗಿಯೇ ಕಾರ್ಖಾನೆಗಳು ನಷ್ಟ ಅನುಭವಿಸುತ್ತವೆ. ಈ ಬಗ್ಗೆ ಕೇಂದ್ರ ಆಹಾರ ಸಚಿವರ ಬಳಿಗೆ ನಿಯೋಗ ಹೋಗೋಣ' ಎಂದರು.



ಶಿವಾನಂದ ಪಾಟೀಲ

'ಹಿಂದಿನ ವರ್ಷದ ಹಂಗಾಮಿನಲ್ಲಿ ರೈತರಿಗೆ ನಾವು ಯಾವುದೇ ಬಾಕಿ ಉಳಿಸಿಕೊಂಡಿಲ್ಲ. ₹20,000 ಕೋಟಿ ಕೊಡಬೇಕಿದ್ದ ಕಡೆ, ಕಾರ್ಖಾನೆಗಳ ಪ್ರಮಾಣವನ್ನೂ ಸೇರಿಸಿ ₹21,000 ಕೋಟಿಯನ್ನು ಕಬ್ಬು ಬೆಳೆಗಾರರಿಗೆ ಪಾವತಿ ಮಾಡಿದ್ದೇವೆ. ಈ ಬಾರಿ ಈಗಾಗಲೇ ₹17,000 ಕೋಟಿ ಪಾವತಿ ಮಾಡಲಾಗಿದೆ. ಹಂಗಾಮು ಮುಗಿಯುವ ಹೊತ್ತಿಗೆ ಪೂರ್ಣ ಹಣ ಪಾವತಿ ಮಾಡಲಾಗುವುದು' ಎಂದರು.

'ಕಾರ್ಖಾನೆಗಳಿಂದ ವಿದ್ಯುತ್ ಖರೀದಿಸಿದರೆ ಅವುಗಳ ಮೇಲಿನ ಹೊರೆ ಸ್ವಲ್ಪ ಕಡಿಮೆಯಾಗಲಿದೆ. ಅದು ಮಾತ್ರ ನಮ್ಮ ವ್ಯಾಪ್ತಿಯಲ್ಲಿದೆ. ಸಕ್ಕರೆ ರಫ್ತಿಗೆ ಕೇಂದ್ರ ಸರ್ಕಾರವು ಅನುಮತ ನೀಡಬೇಕು. ಗೃಹಬಳಕೆ ಮತ್ತು ವಾಣಿಜ್ಯ ಬಳಕೆ ಸಕ್ಕರೆಗೆ ಭಿನ್ನ ದರ ನಿಗದಿ ಮಾಡಬೇಕು. ಆಗ ಕಾರ್ಖಾನೆಗಳ ಆದಾಯ ಹೆಚ್ಚಿ, ನಷ್ಟದಿಂದ ಹೊರಗೆ ಬರುತ್ತವೆ. ಇದಕ್ಕೆಲ್ಲಾ ಕೇಂದ್ರ ಸರ್ಕಾರವು ಇಚ್ಛಾಶಕ್ತಿ ತೋರಬೇಕು' ಎಂದರು.

'ಡಿಡಿಪಿಯು ಹೊಣೆಗಾರಿಕೆ ಜಿ.ಪಂಗೆ ವರ್ಗಾಯಿಸುವುದಿಲ್ಲ'

ಬೆಂಗಳೂರು: ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕರ ಕಚೇರಿಗಳ (ಡಿಡಿಪಿಯು) ನಿಯಂತ್ರಣ ಮತ್ತು ಜವಾಬ್ದಾರಿಯನ್ನು ಜಿಲ್ಲಾ ಪಂಚಾಯಿತಿಗೆ ವರ್ಗಾಯಿಸುವ ಪ್ರಸ್ತಾವ ಸರ್ಕಾರದ ಎದುರು ಇಲ್ಲ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.



ಮಧು ಬಂಗಾರಪ್ಪ

ವಿಧಾನ ಪರಿಷತ್ತಿನ ಕಲಾಪದ ಶೂನ್ಯವೇಳೆಯಲ್ಲಿ ಕಾಂಗ್ರೆಸ್‌ನ ಪುಟ್ಟಣ್ಣ, ಜೆಡಿಎಸ್‌ನ ಎಸ್.ಎಲ್.ಭೋಜೇಗೌಡ ಅವರು ವಿಷಯ ಪ್ರಸ್ತಾಪಿಸಿ, 'ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರು ಉತ್ತರ ಪತ್ರಿಕೆಗಳ ಮೌಲ್ಯಮಾಪನ ಬಹಿಷ್ಕರಿಸುವುದಾಗಿ ಹೇಳಿದ್ದಾರೆ' ಎಂದು ಕಳವಳ ವ್ಯಕ್ತಪಡಿಸಿದರು.

'ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕರ ಕಚೇರಿಗಳ ನಿಯಂತ್ರಣ ಮತ್ತು ಜವಾಬ್ದಾರಿಯನ್ನು ಜಿಲ್ಲಾ ಪಂಚಾಯಿತಿಗೆ ವರ್ಗಾಯಿಸುವ ಪ್ರಸ್ತಾವವನ್ನು ಸರ್ಕಾರ ಕೈಬಿಡಬೇಕು' ಎಂದು ಇಬ್ಬರು ಸದಸ್ಯರೂ ಒತ್ತಾಯಿಸಿದರು.

ಆಗ ಸಚಿವ ಮಧು ಬಂಗಾರಪ್ಪ, 'ಈ ಹಿಂದೆ ಅಂತಹ ಆದೇಶ ಹೊರಡಿಸಲಾಗಿತ್ತು. ಆದರೆ ಈಗಾಗಲೇ ಅದನ್ನು ವಾಪಸ್ ಪಡೆಯಲಾಗಿದೆ. ಇದನ್ನು ಉಪನ್ಯಾಸಕರ ಸಂಘಗಳಿಗೂ ಮನವರಿಕೆ ಮಾಡಿಕೊಡಲಾಗಿತ್ತು. ಹೀಗಿದ್ದೂ ಸಂಘವು ಮೌಲ್ಯಮಾಪನ ಬಹಿಷ್ಕಾರ ನಡೆಸುವುದಾಗಿ ಹೇಳಿರುವುದು ಸರಿಯಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಮಾರ್ಚ್ 20ರಿಂದ ಮೌಲ್ಯಮಾಪನ ಆರಂಭವಾಗಬೇಕಿದೆ. ಇಂತಹ ಸಂದರ್ಭದಲ್ಲಿ ಬಹಿಷ್ಕಾರದ ಹೇಳಿಕೆಯು 'ಬ್ಲ್ಯಾಕ್‌ಮೇಲ್' ಆಗುತ್ತದೆ. ಅವರ ಸಮಸ್ಯೆಯನ್ನು ಬಗೆಹರಿಸಿದ್ದೇವೆ. ಉಪನ್ಯಾಸಕರೆಲ್ಲರೂ ಮೌಲ್ಯಮಾಪನಕ್ಕೆ ಹಾಜರಾಗಬೇಕು' ಎಂದರು.

'ಮೂರು ವರ್ಷಗಳಿಂದ ಬಾಕಿ ಇರುವ ಮೌಲ್ಯಮಾಪನ ಭತ್ಯೆ ಬಾಕಿಯನ್ನು ಇದೇ 20ರೊಳಗೆ ಬಿಡುಗಡೆ ಮಾಡುತ್ತೇವೆ' ಎಂದೂ ಹೇಳಿದರು.

'ಯಾರು ಒಳ್ಳೆ ಆ್ಯಕ್ಟರ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಸಮಸ್ಯೆಗಳ ಕುರಿತು ಮಾತನಾಡುವಾಗ ಬಿಜೆಪಿ ಸದಸ್ಯ ಮುನಿರತ್ನ ಅವರು ವ್ಯಂಗ್ಯವಾಡಿದ್ದಕ್ಕೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಅವರು, 'ನೀವು ಒಳ್ಳೆ ಆ್ಯಕ್ಟರ್' ಎಂದು ಛೇಡಿಸಿದರು.

ಈ ಮಾತು ಕೇಳಿ ಒಂದು ಕ್ಷಣ ಸುಮ್ಮನಾದ ಮನಿರತ್ನ, 'ಅಮ್ಮ, ನೀವೂ ಒಬ್ಬ ಒಳ್ಳೆ ಆ್ಯಕ್ಟರ್. ನಾನೊಬ್ಬ ನಿರ್ಮಾಪಕ. ನಿಮ್ಮ ಆಕ್ಟಿಂಗ್‌ಗೆ ದಾದಾಸಾಹೇಬ್ ಫಾಲ್ಕೆ ಅಲ್ಲ, ಅದಕ್ಕಿಂತ ದೊಡ್ಡ ಪ್ರಶಸ್ತಿಯೇ ಸಿಗಬೇಕು. ಈಗ ಏನಾದರೂ ಕಲ್ಪನಾ ಮತ್ತು ಮಂಜುಳಾ ಅವರು ಇದ್ದಿದ್ದರೆ, ನಿಮ್ಮ ಆ್ಯಕ್ಟಿಂಗ್ ನೋಡಿ ಸತ್ತೇ ಹೋಗಿ ಬಿಡುತ್ತಿದ್ದರು' ಎಂದು ಕುಟುಕಿದರು.

'ಹೆಬ್ಬಾಳ ಕ್ಷೇತ್ರದ ವ್ಯಾಪ್ತಿಯಲ್ಲಿ ಎರಡು ಇಂದಿರಾ ಕ್ಯಾಂಟೀನ್‌ಗಳಿವೆ, ತಿಂಡಿ ತಿನ್ನಲು ನನ್ನ ಜತೆ ಬಂದರೆ ಕರೆದುಕೊಂಡು ಹೋಗುತ್ತೇನೆ' ಎಂದು ಮುನಿರತ್ನ ಸವಾಲು ಹಾಕಿದರು. ಆಗ ಕಾಂಗ್ರೆಸ್‌ನ ಕೆಲವು ಶಾಸಕರು ತಾವು ಬರಲು ಸಿದ್ಧ ಎಂದರು. ಈ ಸಂದರ್ಭದಲ್ಲಿ ಲಕ್ಷ್ಮಿ ಹೆಬ್ಬಾಳಕರ ಅವರು ಮುನಿರತ್ನ ಅವರನ್ನು ಕೆಣಕಿದರು. ಇಬ್ಬರ ನಡುವಿನ ಮಾತಿನ ಚಕಮಕಿ ಬೇರೆ ಸ್ವರೂಪ ಪಡೆಯಬಹುದಾದ ಸೂಚನೆ ಸಿಕ್ಕಾಗ ಸಭಾಧ್ಯಕ್ಷ ಯು.ಟಿ. ಖಾದರ್, ಅವರಿಬ್ಬರ ಮಾತಿಗೆ ಕಡಿವಾಣ ಹಾಕಿದರು.



ಮುನಿರತ್ನ & ಲಕ್ಷ್ಮಿ ಹೆಬ್ಬಾಳಕರ

'ಬೈರತಿ ಸುರೇಶ್ ಕ್ಷೇತ್ರದ ವ್ಯಾಪ್ತಿಯಲ್ಲಿ ಕಸ ಸುರಿಯುವ ಡಂಪಿಂಗ್ ಯಾರ್ಡ್‌ಗೆ ಹೊಂದಿಕೊಂಡಂತೆ ಇಂದಿರಾ ಕ್ಯಾಂಟೀನ್‌ಗಳು ಇವೆ. ಅಲ್ಲಿ ತಿಂಡಿ ತಿನ್ನಲು ನಿಂತರೆ ಯಾರ್ಡ್‌ನಿಂದ ಕೆಟ್ಟ ವಾಸನೆ ಬರುತ್ತದೆ. ಅಂತಹ ಕಡೆ ತಿಂಡಿ ತಿನ್ನಲು ಸಾಧ್ಯವಾ? ಅಲ್ಲಿಗೆ ಬರುವವರು ಮನುಷ್ಯರಲ್ಲವಾ? ಯಾರು ಬರುತ್ತೀರಿ ಕರೆದುಕೊಂಡು ಹೋಗುತ್ತೇನೆ' ಎಂದಾಗ, ಯಾವುದೇ ಶಾಸಕರು ತುಟಿ ಬಿಚ್ಚಲಿಲ್ಲ.

ವಿಧಾನ ಪರಿಷತ್

'ರಾಜ್ಯದ ಕೈಗಾರಿಕೆಗಳು ಬೇರೆಡೆ ಹೋಗಿಲ್ಲ'

ಮೂಲಭೂತ ಸೌಕರ್ಯ ಕೊರತೆಯ ಕಾರಣಕ್ಕೆ ರಾಜ್ಯದಲ್ಲಿನ ಯಾವ ಕೈಗಾರಿಕಾ ಘಟಕಗಳೂ ಬೇರೆ ರಾಜ್ಯಕ್ಕೆ ಹೋಗಿಲ್ಲ. ಕೆಲ ಘಟಕಗಳು ಆರ್ಥಿಕ ಮುಗ್ಗಟ್ಟು, ಮಾರುಕಟ್ಟೆ ವಿಸ್ತರಣೆ ಮತ್ತಿತರ ಕಾರಣಗಳಿಗೆ ಬೇರೆ ರಾಜ್ಯಗಳಿಗೆ ಹೋಗಿರಬಹುದು ಅಷ್ಟೇ. ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಎಲ್ಲ ಸ್ವರೂಪದ ಮೂಲಸೌಕರ್ಯವನ್ನು ಅಭಿವೃದ್ಧಿಪಡಿಸಿದ ನಂತರವಷ್ಟೇ ನಿವೇಶನ ಹಂಚಿಕೆ ಮಾಡುತ್ತದೆ.

1,445 — 2023–24, 2024–25ನೇ ಸಾಲಿನಲ್ಲಿ ರಾಜ್ಯದ ವಿವಿಧೆಡೆ ಕೈಗಾರಿಕೆಗಳಿಗೆ ಹಂಚಿಕೆ ಮಾಡಲಾದ ಘಟಕಗಳ ಸಂಖ್ಯೆ

2,954 ಎಕರೆ — ಹಂಚಿಕೆ ಮಾಡಲಾದ ಘಟಕಗಳ ಒಟ್ಟು ವಿಸ್ತೀರ್ಣ

ಬೈರತಿ ಸುರೇಶ್, ನಗರಾಭಿವೃದ್ಧಿ ಸಚಿವ (ಕೈಗಾರಿಕಾ ಸಚಿವರ ಪರವಾಗಿ).
ಪ್ರಶ್ನೆ: ಎನ್. ರವಿಕುಮಾರ್, ಬಿಜೆಪಿ

'ಅಡಿಕೆ ಹಾನಿಕಾರಕವಲ್ಲ'

ಪ್ರಶ್ನೋತ್ತರ

ಅಡಿಕೆ ಮತ್ತು ಅಡಿಕೆ ಹಾಳೆಯು ಕ್ಯಾನ್ಸರ್‌ಕಾರಕ ಎಂಬುದರ ಬಗ್ಗೆ ಸುದ್ದಿಗಳು ಹರಿದಾಡಿದ ಪರಿಣಾಮವಾಗಿ, ಈ ಬಗ್ಗೆ ಅಧ್ಯಯನ ನಡೆಸಲು ರಾಜ್ಯ ಸರ್ಕಾರವು ಎಂ.ಎಸ್.ರಾಮಯ್ಯ ವಿಶ್ವವಿದ್ಯಾಲಯಕ್ಕೆ ಸೂಚಿಸಿತ್ತು. ಅಧ್ಯಯನ ವರದಿ ಪ್ರಕಾರ ಅಡಿಕೆ ಮತ್ತು ಅಡಿಕೆ ಹಾಳೆಯಿಂದ ಕ್ಯಾನ್ಸರ್ ಬರುವುದಿಲ್ಲ ಎಂದು ಗೊತ್ತಾಗಿದೆ. ಕೇಂದ್ರ ಸರ್ಕಾರದ ಮಧ್ಯಂತರ ವರದಿಯೂ ಇದನ್ನೇ ಹೇಳುತ್ತದೆ. ಆದರೆ, ದಿನಪೂರ್ತಿ ಅಡಿಕೆ ಜಗಿಯುವುದರಿಂದ ಕೆಲ ಸಮಸ್ಯೆಗಳಿವೆ ಎಂದೂ ಹೇಳಿದೆ. ಅಂತಿಮ ವರದಿ ಬಂದ ನಂತರ ಎಲ್ಲವೂ ಸ್ಪಷ್ಟವಾಗಲಿದೆ.

ಎನ್. ಚಲುವರಾಯಸ್ವಾಮಿ, ಕೃಷಿ ಸಚಿವ (ತೋಟಗಾರಿಕೆ ಸಚಿವರ ಪರವಾಗಿ).
ಪ್ರಶ್ನೆ: ಪ್ರತಾಪ ಸಿಂಹ ನಾಯಕ, ಬಿಜೆಪಿ

'ಕ್ರಷರ್: ಅನುಮತಿ ಸಡಿಲಿಕೆ ಇಲ್ಲ'

ಕೊಡಗು ಜಿಲ್ಲೆಗೆ ಅಗತ್ಯವಿರುವ ಮರಳು ಮತ್ತು ಎಂ ಸ್ಯಾಂಡ್ ಅನ್ನು ರಾಮನಗರದಿಂದ ತರಿಸಿಕೊಳ್ಳಲಾಗುತ್ತಿದೆ ಎಂಬುದು ಕಳವಳಕಾರಿ ವಿಚಾರ. ಕೊಡಗು ಜಿಲ್ಲೆಯ ವ್ಯಾಪ್ತಿಯಲ್ಲಿಯೇ ಕ್ರಷರ್ ನಡೆಸಲು ಅವಕಾಶವಿದೆ. ನಿಯಮ-ಬದ್ಧವಾಗಿ ಅರ್ಜಿ ಸಲ್ಲಿಸಿದರೆ ಕ್ರಷರ್ ನಡೆಸಲು ಪರವಾನಗಿ ನೀಡುತ್ತೇವೆ. ಆದರೆ ಶಾಲೆ, ಮನೆ, ದೇವಾಲಯಗಳಿಂದ 500 ಮೀಟರ್ ದೂರದಲ್ಲಿ ಇರಬೇಕು ಎಂಬ ನಿಯಮವನ್ನು ಸಡಿಲಿಸಲು ಸಾಧ್ಯವಿಲ್ಲ.

ಎನ್. ಚಲುವರಾಯಸ್ವಾಮಿ, ಕೃಷಿ ಸಚಿವ (ಗಣಿ ಮತ್ತು ಭೂವಿಜ್ಞಾನ ಸಚಿವರ ಪರವಾಗಿ).
ಪ್ರಶ್ನೆ. ಎಂ.ಪಿ.ಕುಶಾಲಪ್ಪ, ಬಿಜೆಪಿ

'ಕೋಲಾರ ನಗರಸಭೆ: ವಿಸ್ತರಣೆ ಸದ್ಯಕ್ಕಿಲ್ಲ'

ಕೋಲಾರ ನಗರದ ಸುತ್ತಮುತ್ತಲಿನ ಗ್ರಾಮಗಳನ್ನು ನಗರಸಭೆ ವ್ಯಾಪ್ತಿಗೆ ಸೇರಿಸುವ ಬಗ್ಗೆ ಬೇಡಿಕೆ ಬಂದಿದೆ. ಆದರೆ ಜನಗಣತಿ ಕಾರ್ಯ ಮುಗಿಯುವವರೆಗೂ ಅದನ್ನು ಪರಿಗಣಿಸಲು ಸಾಧ್ಯವಿಲ್ಲ. ಹೀಗಾಗಿ ಜನಗಣತಿ ಪ್ರಕ್ರಿಯೆ ಮುಗಿದ ನಂತರವೇ ಕೋಲಾರ ನಗರಸಭೆ ವ್ಯಾಪ್ತಿಯನ್ನು ವಿಸ್ತರಿಸುವ ಬಗ್ಗೆ ಪರಿಶೀಲನೆ ನಡೆಸಲು ಸಾಧ್ಯ.

ರಹೀಂ ಖಾನ್, ಪೌರಾಡಳಿತ ಸಚಿವ. **ಪ್ರಶ್ನೆ: ಎಂ.ಎಲ್.ಅನಿಲ್‌ಕುಮಾರ್,** ಕಾಂಗ್ರೆಸ್

'ಅಕ್ರಮ ಗಣಿ: ದಂಡ ವಸೂಲಿ ಜಾರಿಯಲ್ಲಿದೆ'

ಕಬ್ಬಿಣದ ಅದಿರನ್ನು ಅಕ್ರಮವಾಗಿ ತೆಗೆದು, ಸಾಗಿಸಿದ ಪ್ರಕರಣದಲ್ಲಿ ಲೋಕಾಯುಕ್ತ ತನಿಖಾ ತಂಡದ ವರದಿಯಂತೆ ಈಗಾಗಲೇ ಕ್ರಮ ತೆಗೆದುಕೊಳ್ಳಲಾಗಿದೆ. ಅಕ್ರಮ ಗಣಿಗಾರಿಕೆಯಿಂದ ರಾಜ್ಯಕ್ಕಾಗಿರುವ ನಷ್ಟವನ್ನು ವಸೂಲಿ ಮಾಡಲು ಕ್ರಮವಹಿ-ಸಲಾಗಿದೆ. ಹಲವು ಕಂಪನಿಗಳಿಂದ ಈಗಾಗಲೇ ದಂಡ ವಸೂಲಿ ಮಾಡಲಾಗಿದೆ. ಕೆಲವು ಕಂಪನಿಗಳು ದಂಡ ಪ್ರಮಾಣದ ವಿರುದ್ಧ ಹೈಕೋರ್ಟ್ ಮೊರೆ ಹೋಗಿದ್ದು, ಅರ್ಜಿಗಳ ವಿಚಾರಣೆ ನಡೆಯುತ್ತಿದೆ. ತೀರ್ಪು ಬಂದ ನಂತರ ಉಳಿದ ದಂಡವನ್ನೂ ವಸೂಲಿ ಮಾಡಲಾಗುತ್ತದೆ.

ಎನ್. ಚಲುವರಾಯಸ್ವಾಮಿ, ಕೃಷಿ ಸಚಿವ (ಗಣಿ ಮತ್ತು ಭೂವಿಜ್ಞಾನ ಸಚಿವರ ಪರವಾಗಿ).
ಪ್ರಶ್ನೆ: ಗೋವಿಂದರಾಜು, ಬಿಜೆಪಿ

ಹಸನ್ ನಯೀಂಗೆ 'ಲೋಹಿಯಾ ಪ್ರಶಸ್ತಿ'

ಬೆಂಗಳೂರು: ಭಾರತ ಯಾತ್ರಾ ಕೇಂದ್ರ ನೀಡುವ 'ಡಾ. ರಾಮಮನೋಹರ ಲೋಹಿಯಾ ಪ್ರಶಸ್ತಿ'ಗೆ ಸಮಾಜವಾದಿ ಲೇಖಕ ಹಸನ್ ನಯೀಂ ಸುರಕೋಡ ಆಯ್ಕೆಯಾಗಿದ್ದಾರೆ.



ಈ ಪ್ರಶಸ್ತಿ ₹ 10 ಸಾವಿರ ನಗದು ಹಾಗೂ ಫಲಕ ಒಳಗೊಂಡಿದೆ. ಕರ್ನಾಟಕ ಚಿತ್ರಕಲಾ ಪರಿಷತ್ತಿನ ಅಧ್ಯಕ್ಷ ಬಿ.ಎಲ್. ಶಂಕರ್ ನೇತೃತ್ವದ ಸಮಿತಿ ಈ ಆಯ್ಕೆ ಮಾಡಿದೆ.

ಕೇಂದ್ರವು ಇದೇ 22ರಂದು ಸಂಜೆ 4 ಗಂಟೆಗೆ ಧಾರವಾಡದ ವಿದ್ಯಾವರ್ಧಕ ಸಂಘದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಂಡಿದೆ. ಸಾಹಿತಿ ಕಾಳೇಗೌಡ ನಾಗವಾರ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಧಾರವಾಡದ ಮಾಜಿ ಶಾಸಕ ಚಂದ್ರಕಾಂತ ಬೆಲ್ಲದ, ಪತ್ರಕರ್ತ ಜಿ.ಎನ್. ಮೋಹನ್ ಅವರು ಅತಿಥಿಗಳಾಗಿ ಭಾಗವಹಿಸುತ್ತಾ-ರೆ. ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಿ.ಆರ್. ಪಾಟೀಲ ಅವರು ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ.

'ಪ್ರಜಾವಾಣಿ' ವರದಿ ಪರಿಷತ್‌ನಲ್ಲಿ ಪ್ರಸ್ತಾಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 'ಆಯುಷ್ಮಾನ್ ವಯೋ ವಂದನಾ' ಯೋಜನೆ ಜಾರಿಗೆ ಆದೇಶವಾಗಿದ್ದರೂ, ಈವರೆಗೆ ಅನುಷ್ಠಾನವಾಗಿಲ್ಲ ಎಂಬುದರ ಕುರಿತಾಗಿ 'ಪ್ರಜಾವಾಣಿ'ಯಲ್ಲಿ ಪ್ರಕಟವಾಗಿದ್ದ ವರದಿಯನ್ನು ವಿಧಾನ ಪರಿಷತ್ತಿನಲ್ಲಿ ಮಂಗಳವಾರ ಇಬ್ಬರು ಸದಸ್ಯರು ಪ್ರಸ್ತಾಪಿಸಿದರು.

'ಪ್ರಜಾವಾಣಿ'ಯ ಸೋಮವಾರದ ಸಂಚಿಕೆಯಲ್ಲಿ, 'ವಯೋ ವಂದನಾ'ದಡಿ ವೃದ್ಧರಿಗಿಲ್ಲ ಚಿಕಿತ್ಸೆ' ವರದಿ ಪ್ರಕಟವಾಗಿತ್ತು. ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಜೆಡಿಎಸ್‌ನ ಟಿ.ಎನ್.ಜವರಾಯಿಗೌಡ ಅವರು, 'ಸರ್ಕಾರವು ಈ ಬಗ್ಗೆ ಕೂಡಲೇ ಗಮನಹರಿಸಬೇಕು. ಯೋಜನೆ ಅಡಿ ಕಾರ್ಡ್ ನೀಡಿಯೂ, ಚಿಕಿತ್ಸೆ ನೀಡದೇ ಇರುವುದು ಸರಿಯಲ್ಲ' ಎಂದರು.

ಬಿಜೆಪಿಯ ಕಿಶೋರ್ ಕುಮಾರ್ ಪುತ್ತೂರು, 'ಈ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನ ಮಾಡಿದಲ್ಲಿ ರಾಜ್ಯದ ಲಕ್ಷಾಂತರ ಹಿರಿಯ ನಾಗರಿಕರಿಗೆ ಅನುಕೂಲವಾಗಲಿದೆ. ಇಳಿ ವಯಸ್ಸಿನಲ್ಲಿ ಅವರು ಚಿಕಿತ್ಸೆಗಾಗಿ ಲಕ್ಷಾಂತರ ರೂಪಾಯಿ ವೆಚ್ಚ ಮಾಡುವುದ ತಪ್ಪುವುದರ ಜತೆಗೆ, ಅವರ ಮೇಲಿನ ಆರ್ಥಿಕ ಒತ್ತಡವನ್ನು ಕಡಿಮೆ ಮಾಡುತ್ತದೆ. ಸರ್ಕಾರವು ತಕ್ಷಣವೇ ಗಮನಹರಿಸಬೇಕು' ಎಂದು ಒತ್ತಾಯಿಸಿದರು.



ರಾಜ್ಯದಲ್ಲಿ ಯೋಜನೆ ಜಾರಿಗೆ ಕಳೆದ ವರ್ಷವೇ ಆದೇಶವಾದರೂ ಅನುಷ್ಠಾನವಿಲ್ಲ

'ವಯೋ ವಂದನಾ'ದಡಿ ವೃದ್ಧರಿಗಿಲ್ಲ ಚಿಕಿತ್ಸೆ

ಅಂಕಿ ಅಂಶಗಳು

2,16,388

2,16,265

ಒಬ್ಬರಿಗೆ ₹5 ಲಕ್ಷ ವಿಮೆ

'ಪ್ರಜಾವಾಣಿ'ಯ ಸೋಮವಾರದ ಸಂಚಿಕೆಯಲ್ಲಿ, 'ವಯೋ ವಂದನಾ'ದಡಿ ವೃದ್ಧರಿಗಿಲ್ಲ ಚಿಕಿತ್ಸೆ' ವರದಿ ಪ್ರಕಟವಾಗಿತ್ತು

'ವೈಜ್ಞಾನಿಕವಾಗಿ ಸಂಚಾರಿ ಆರೋಗ್ಯ ಘಟಕ ಹಂಚಿಕೆ': 'ಜನಸಂಖ್ಯೆ, ಆಸ್ಪತ್ರೆಗಳ ಲಭ್ಯತೆ ಆಧಾರದಲ್ಲಿ ಪ್ರತಿ ತಾಲ್ಲೂಕಿಗೆ ಸಂಚಾರಿ ಆರೋಗ್ಯ ಘಟಕಗಳನ್ನು ವೈಜ್ಞಾನಿಕವಾಗಿ ಹಂಚಿಕೆ ಮಾಡಲಾಗಿದೆ. ಯಾವುದೇ ವೈಯಕ್ತಿಕ ಕಾರಣ ಅಥವಾ ಮನವಿಯನ್ನು ಆಧರಿಸಿ ಹಂಚಿಕೆ ಮಾಡಿಲ್ಲ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸ್ಪಷ್ಟಪಡಿಸಿದರು. ಎಫ್.ಎಚ್.ಜಕ್ಕಪ್ಪನವರ ಅವರು ಪ್ರಸ್ತಾಪಿಸಿದ ವಿಷಯಕ್ಕೆ ಅವರು ಉತ್ತರಿಸಿದರು.

ಶಿಕ್ಷಣ, ಆರೋಗ್ಯ ಉಚಿತ: ಭೋಜೇಗೌಡ ಒತ್ತಾಯ

ರಾಜ್ಯ ಸರ್ಕಾರ ಶಿಕ್ಷಣ ಮತ್ತು ಆರೋಗ್ಯ ಸೇವೆಯನ್ನು ಸಂಪೂರ್ಣ ಉಚಿತ ಮಾಡಬೇಕು ಎಂದು ಜೆಡಿಎಸ್‌ನ ಎಸ್.ಎಲ್.ಭೋಜೇಗೌಡ ಒತ್ತಾಯಿಸಿದರು.

ಎರಡು ಸೇವೆಗಳನ್ನು ಎಲ್ಲರಿಗೂ ಉಚಿತವಾಗಿ ನೀಡಿದರೆ ರಾಜ್ಯದ ಅರ್ಧ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ. ರೈತರ ಸಮಸ್ಯೆಗಳ ನಿವಾರಣೆಗೂ ಆದ್ಯತೆ ನೀಡಬೇಕು. ಸ್ಥಳೀಯ ಜಾನುವಾರು ತಳಿಗಳ ಸಂರಕ್ಷಣೆಗೆ ಕ್ರಮ ಕೈಗೊಳ್ಳಬೇಕು ಎಂದರು.

ಮಲೆನಾಡು ಸೇರಿದಂತೆ ಹಲವು ಭಾಗಗಳಲ್ಲಿ ಅಡಿಕೆಗೆ ಎಲೆ ಚುಕ್ಕಿ, ಹಳದಿ ರೋಗ ಬಾಧೆಗಳಿಂದ ಬೆಳೆಗಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಎಲೆ ಚುಕ್ಕಿ ರೋಗ 58,000 ಹೆಕ್ಟೇರ್‌ಗೆ ಹಬ್ಬಿದೆ. ಸಾಂಪ್ರದಾಯಿಕ ಅಡಿಕೆ ಬೆಳೆಗಾರರು ನಷ್ಟಕ್ಕೆ ಒಳಗಾಗಿ ಅಡುಗೆ ಮತ್ತಿತರ ಕೂಲಿ ಕೆಲಸಗಳಿಗೆ ಹೋಗುತ್ತಿದ್ದಾರೆ. ಸರ್ಕಾರ ಬೆಳೆಗಾರರ ಹಿತ ಕಾಪಾಡಬೇಕು ಎಂದು ಹೇಳಿದರು.

ಆಡಳಿತ ಪಕ್ಷ: ಗೈರು

ಬಜೆಟ್ ಮೇಲಿನ ಚರ್ಚೆಗೆ ಹೆಚ್ಚಿನ ಸದಸ್ಯರು ಗೈರು ಹಾಜರಾಗಿದ್ದರು. ಮಧ್ಯಾಹ್ನದ ಬಳಿಕ ಕಲಾಪ ಆರಂಭವಾದಾಗ ಆಡಳಿತ ಪಕ್ಷದ ನಾಲ್ವರು ಸದಸ್ಯರು ಇದ್ದರು. ಅದಕ್ಕೆ ವಿರೋಧ ಪಕ್ಷದ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು. ಸಭಾಪತಿ ಬಸವರಾಜ ಹೊರಟ್ಟಿ ಕಲಾಪವನ್ನು ಹತ್ತು ನಿಮಿಷ ಮುಂದೂಡಿದರು.

ಮತ್ತೆ ಕಲಾಪ ಸೇರಿದಾಗಲೂ, ಆಡಳಿತ ಪಕ್ಷದ ಸದಸ್ಯರ ಕಡಿಮೆ ಸಂಖ್ಯೆಯಲ್ಲಿ ಇದ್ದರು. ಆಡಳಿತ ಪಕ್ಷದ ಮುಖ್ಯ ಸಚೇತಕ ಸಲೀಂ ಅಹಮದ್ ತಮ್ಮದೇ ಪಕ್ಷದ ಸದಸ್ಯರನ್ನು ತರಾಟೆಗೆ ತೆಗೆದುಕೊಂಡರು. ನಂತರ ಚರ್ಚೆ ಆರಂಭವಾಯಿತು. ಮುಖ್ಯಮಂತ್ರಿ ಸಿದ್ದರಾಮಯ್ಯ ಸದನದಿಂದ ಹೊರಗೆ ಹೋದ ಬಳಿಕ ಆಡಳಿತ ಪಕ್ಷದ ಆಸನಗಳಲ್ಲಿ ಸಚಿವರಾದ ರಾಮಲಿಂಗಾರೆಡ್ಡಿ, ಸಂತೋಷ್ ಲಾಡ್, ಶಿವಾನಂದಪಾಟೀಲ, ಶಿವರಾಜ ತಂಗಡಗಿ ಮತ್ತು ಮೂವರು ಸದಸ್ಯರು ಉಪಸ್ಥಿತರಿದ್ದರು.

ವಿರೋಧಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ, ಮುಖ್ಯ ಸಚೇತಕ ಎನ್. ರವಿಕುಮಾರ್, 'ನಾವೇನು ಖಾಲಿ ಕುರ್ಚಿಗಳಿಗೆ ಭಾಷಣ ಮಾಡಬೇಕೇ? ಸಭಾತ್ಯಾಗ ಮಾಡುತ್ತೇವೆ ಎಂದರು. ಸಭಾಪತಿ ಬಸವರಾಜ ಹೊರಟ್ಟಿ ಸದನವನ್ನು ಬುಧವಾರಕ್ಕೆ ಮುಂದೂಡಿದರು.

ಮಕ್ಕಳಿಗೆ ಶೂ, ಸಾಕ್ಸ್ ವಿತರಣೆ


ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯಾ ವಿಕಾಸ ಯೋಜನೆಯಡಿ 2026–27ನೇ ಸಾಲಿನಲ್ಲಿ 36.56 ಲಕ್ಷ ವಿದ್ಯಾರ್ಥಿಗಳಿಗೆ ಉಚಿತವಾಗಿ ಒಂದು ಜೊತೆ ಶೂ ಮತ್ತು ಎರಡು ಜೊತೆ ಸಾಕ್ಸ್ ವಿತರಿಸಲು ಸರ್ಕಾರ ಆದೇಶ ಹೊರಡಿಸಿದ್ದು, ಇದಕ್ಕಾಗಿ ₹104 ಕೋಟಿ ವೆಚ್ಚ ಮಾಡಲಾಗುತ್ತದೆ.

ಸರ್ಕಾರಿ ಶಾಲೆಗಳಲ್ಲಿ ಒಂದರಿಂದ 10ನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಈ ಸೌಲಭ್ಯ ಸಿಗಲಿದೆ.

ಉತ್ತಮ ಗುಣಮಟ್ಟ ಹೊಂದಿರುವ ಕಪ್ಪುಬಣ್ಣದ ಶೂ ಹಾಗೂ ಬಿಳಿ ಬಣ್ಣದ ಸಾಕ್ಸ್ ಖರೀದಿಗೆ, ಟೆಂಡರ್ ಕರೆದು ಪಾರದರ್ಶಕವಾಗಿ ವಿತರಣೆ ಮಾಡಲು ಕ್ರಮಕೈಗೊಳ್ಳಬೇಕು ಎಂದು ಸೂಚನೆ ನೀಡಲಾಗಿದೆ.

ಅಧಿಕ ಮಳೆಯಾಗುವ ಜಿಲ್ಲೆಗಳಲ್ಲಿನ ಎಸ್‌ಡಿಎಂಸಿಗಳು ಪಾದರಕ್ಷೆಗಳನ್ನು ನೀಡುವಂತೆ ಬೇಡಿಕೆ ಇಟ್ಟಿರುವುದ-ರಿಂದ ಉತ್ತರ ಕನ್ನಡ, ಶಿರಸಿ, ಶಿವಮೊಗ್ಗ, ಉಡುಪಿ ಮತ್ತು ದಕ್ಷಿಣ ಕನ್ನಡ ಶೈಕ್ಷಣಿಕ ಜಿಲ್ಲೆಗಳಲ್ಲಿ ಮಾತ್ರ ಮಕ್ಕಳಿಗೆ ಶೂ ನೀಡುವುದಿಲ್ಲ.



ಶೈಕ್ಷಣಿಕ ವರ್ಷದ ಪ್ರಾರಂಭದಲ್ಲೇ ಶೂ, ಸಾಕ್ಸ್ ನೀಡಬೇಕು. ಹಿಂದಿನ ಶೈಕ್ಷಣಿಕ ಸಾಲಿನಲ್ಲಿ ನೀಡಿರುವುದ-ಕ್ಕಿಂತ ಹೆಚ್ಚು ಗುಣಮಟ್ಟದ್ದಾಗಿರಬೇ-ಕು. ಇದರ ಮೇಲ್ವಿಚಾರಣೆಗೆ ತಾಂತ್ರಿಕ ತಜ್ಞರ ಸಮಿತಿ ರಚಿಸಬೇಕು. ಹಿಂದಿನ ವರ್ಷಗಳಲ್ಲಿ ಗುಣಮಟ್ಟದ ಬಗ್ಗೆ ದೂರುಗಳು ಬಂದಿರುವ ಕಾರಣ, ಈ ವರ್ಷ ಎಚ್ಚರಿಕೆಯಿಂದ ಇರಬೇಕು ಎಂದು ಕಟ್ಟುನಿಟ್ಟಾಗಿ ಸೂಚಿಸಲಾಗಿದೆ.

ಎ. 11ರಂದು ವರಿಷ್ಠರ ಭೇಟಿಗೆ ಹಿರಿಯ ಶಾಸಕರ ಚಿಂತನೆ

ಸಚಿವ ಸ್ಥಾನ: ಸಿ.ಎಂ ಜೊತೆ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಚಿವ ಸ್ಥಾನ ಆಕಾಂಕ್ಷಿಯಾಗಿರುವ ಕಾಂಗ್ರೆಸ್‌ನ ಹಿರಿಯ ಶಾಸಕರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಮಂಗಳವಾರ ಭೇಟಿ ಮಾಡಿ ತಮ್ಮ ಬೇಡಿಕೆ ಮುಂದಿಟ್ಟಿದ್ದಾರೆ.

3–4 ಬಾರಿ ಗೆದ್ದಿರುವ ಶಾಸಕರು ವಿಧಾನಸಭೆಯ ಮುಖ್ಯ ಸಚೇತಕ ಅಶೋಕ ಎಂ. ಪಟ್ಟಣ ಅವರ ನೇತೃತ್ವದಲ್ಲಿ ವಿಧಾನಸಭೆಯ ಮೊಗಸಾಲೆಯಲ್ಲಿರುವ ಮುಖ್ಯಮಂತ್ರಿಯ ಕಚೇರಿಯಲ್ಲಿ ಭೇಟಿ ಮಾಡಿ, ಸಂಪುಟ ಪುನರ್‌ರಚನೆಯ ವೇಳೆ ಅವಕಾಶ ನೀಡಲೇ ಬೇಕೆಂದು ಪಟ್ಟು ಹಿಡಿದಿದ್ದಾರೆ.

ಮುಖ್ಯಾಂಶಗಳು

- 3–4 ಬಾರಿ ಗೆದ್ದಿರುವ ಶಾಸಕರಿಂದ ಭೇಟಿ
- ವಿಧಾನಸಭೆಯ ಮುಖ್ಯ ಸಚೇತಕ ಅಶೋಕ ಎಂ. ಪಟ್ಟಣ ಅವರ ನೇತೃತ್ವ
- ಅವಕಾಶಕ್ಕೆ ಪಟ್ಟು

ನಿಯೋಗದಲ್ಲಿ ಎಚ್.ಸಿ. ಬಾಲಕೃಷ್ಣ, ಎನ್.ಎ. ಹ್ಯಾರಿಸ್, ಎಸ್. ಷಡಕ್ಷರಿ, ಮಹಾಂತೇಶ್ ಕೌಜಲಗಿ, ಹಂಪನಗೌಡ ಬಾದರ್ಲಿ, ಎಸ್.ಎನ್. ನಾರಾಯಣಸ್ವಾಮಿ, ರಾಘವೇಂದ್ರ ಹಿಟ್ನಾಳ್ ಮತ್ತಿತರರು ಇದ್ದರು.

ಸರ್ಕಾರ ರಚನೆಯಾಗಿ ಎರಡೂವರೆ ವರ್ಷ ಕಳೆದರೂ ಸಚಿವ ಸಂಪುಟ ಪುನರ್‌ರಚನೆ ಆಗಿಲ್ಲ ಎಂಬುದನ್ನು ಶಾಸಕರು ಪ್ರಸ್ತಾಪಿಸಿದ್ದಾರೆ. ಅಲ್ಲದೆ, ನಿರಂತರವಾಗಿ ಗೆದ್ದುಕೊಂಡು ಬಂದಿರುವ ತಮ್ಮನ್ನು ಮುಂದಿನ ಸಂಪುಟ ಪುನರ್‌ರಚನೆಯ ವೇಳೆ ಸಚಿವ ಸ್ಥಾನಕ್ಕೆ ಪರಿಗಣಿಸಬೇಕು ಎಂದು ಮುಖ್ಯಮಂತ್ರಿ ಬಳಿ ಒಕ್ಕೊರಲಿನ ಮನವಿ ಮಾಡಿದ್ದಾರೆ ಎಂದು ಗೊತ್ತಾಗಿದೆ.

ಹೈಕಮಾಂಡ್ ಭೇಟಿಗೆ ನಿರ್ಧಾರ: ತಮ್ಮ ಬೇಡಿಕೆ ಈಡೇರಿಕೆಗಾಗಿ ಏಪ್ರಿಲ್ 11ರಂದು ದೆಹಲಿಗೆ ತೆರಳಿ ಹೈಕಮಾಂಡ್ ನಾಯಕರನ್ನು ಭೇಟಿ ಮಾಡಲು ಕೂಡಾ ಹಿರಿಯ ಶಾಸಕರು ನಿರ್ಧರಿಸಿದ್ದಾರೆ.

ದೆಹಲಿ ಯಾತ್ರೆಯ ವಿಚಾರವನ್ನು ಶಾಸಕರು ಮುಖ್ಯಮಂತ್ರಿಯ ಗಮನಕ್ಕೂ ತಂದಿದ್ದು, ಅದಕ್ಕೆ ಮುಖ್ಯಮಂತ್ರಿ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. 'ಹೈಕಮಾಂಡ್ ಭೇಟಿ ಮಾಡುವುದು ನಿಮ್ಮ ಹಕ್ಕು. ಅದಕ್ಕೆ ನೀವು ಸ್ವತಂತ್ರರು. ನಾನು ಅಡ್ಡಿಪಡಿಸುವುದಿಲ್ಲ' ಎಂದು ಮುಖ್ಯಮಂತ್ರಿ ಸ್ಪಷ್ಟಪಡಿಸಿದ್ದಾರೆ. ಅಲ್ಲದೆ, ಬಜೆಟ್ ಅಧಿವೇಶನ ಮುಗಿದ ಬಳಿಕ ದೆಹಲಿಗೆ ತೆರಳುತ್ತಿದ್ದು, ಆ ಸಂದರ್ಭದಲ್ಲಿ ಹೈಕಮಾಂಡ್ ಜೊತೆ ಸಂಪುಟ ಪುನರ್‌ರಚನೆಯ ಕುರಿತ ಬಗ್ಗೆ ಚರ್ಚಿಸುವುದಾಗಿ ಮತ್ತು ಹಿರಿಯ ಶಾಸಕರ ಬೇಡಿಕೆಯ ವಿಷಯವನ್ನು ವರಿಷ್ಠರ ಗಮನಕ್ಕೆ ತರುವುದಾಗಿ ಮುಖ್ಯಮಂತ್ರಿ ಭರವಸೆ ನೀಡಿದ್ದಾರೆ ಎಂದೂ ಗೊತ್ತಾಗಿದೆ.

‘ತ್ಯಾಜ್ಯ ವಿಲೇವಾರಿ ಕಾರ್ಮಿಕರ ಶೋಷಣೆ’

ಕಸ ವಿಂಗಡಿಸುವ ಕಾರ್ಯಕ್ಕೆ ನಿಯೋಜಿಸಿ ‘ಚಿಂದಿ ಆಯುವವರಂತೆ’ ಬಳಸಿಕೊಳ್ಳಲಾಗುತ್ತಿದೆ: ಸಂಘ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ತ್ಯಾಜ್ಯ ವಿಲೇವಾರಿ ‘ಸರಬರಾಜು ಕಾರ್ಯಾದೇಶ’ವನ್ನು ಉಲ್ಲಂಘಿಸಿ, ರಸ್ತೆಯಲ್ಲಿರುವ ಕಸವನ್ನು ವಿಂಗಡಿಸುವ ಕೆಲಸಕ್ಕೆ ಕಾರ್ಮಿಕರನ್ನು ಬಳಸಿಕೊಂಡು ಶೋಷಣೆ ಮಾಡಲಾಗುತ್ತಿದೆ’ ಎಂದು ಬೆಂಗಳೂರು ಮಹಾನಗರ ಸ್ವಚ್ಛತೆ ಮತ್ತು ಲಾರಿ ಮಾಲೀಕರು–ಗುತ್ತಿಗೆದಾರರ ಸಂಘ ಆರೋಪಿಸಿದೆ.


‘ಆಟೊ ಚಾಲಕರು ಮತ್ತು ಸಹಾಯಕರು ನಿರ್ವಹಿಸುವ ಕೆಲಸದ ಜೊತೆಗೆ ಒತ್ತಾಯಪೂರ್ವಕವಾಗಿ ಅವರನ್ನು ಕಸ ವಿಂಗಡಿಸುವ ಕಾರ್ಯಕ್ಕೆ ಬಳಸಲಾಗುತ್ತಿದೆ. ಅವರ ಮೂಲ ಹುದ್ದೆಗೆ ವಿರುದ್ಧವಾಗಿ ಚಿಂದಿ ಆಯುವವರ ರೀತಿಯಲ್ಲಿ ನಡೆಸಿಕೊಳ್ಳಲಾಗುತ್ತಿದೆ. ಇದು ಘನತ್ಯಾಜ್ಯ ವಿಲೇವಾರಿ ನಿಯಮ 2000 ಮತ್ತು 2016ರ ಉಲ್ಲಂಘನೆಯಾಗಿದೆ’ ಎಂದು ಸಂಘದ ಪ್ರಧಾನ ವ್ಯವಸ್ಥಾಪಕ ಎಸ್‌.ಎನ್‌. ಬಾಲಸುಬ್ರಮಣಿಯಂ ಹೇಳಿದರು.

‘ಗುತ್ತಿಗೆದಾರರಿಗೆ ನೀಡಿರುವ ‘ಸರಬರಾಜು ಕಾರ್ಯಾದೇಶ’ದಂತೆ, ಪ್ರತಿನಿತ್ಯ ಮನೆಗಳಿಂದ ಕಸವನ್ನು ಪ್ರಥಮ ಹಂತದ ಸಂಗ್ರಹ, ದ್ವಿತೀಯ ಹಂತದ ಸಾಗಣೆ ವಾಹನಗಳಲ್ಲಿ ರವಾನಿಸುವಂತೆ ಸೂಚಿಸಲಾಗಿದೆ. ಇದರ ಜೊತೆಗೆ, ರಸ್ತೆಗಳಲ್ಲಿ ಕಸ ಗುಡಿಸಿದಾಗ ಸಂಗ್ರಹವಾಗುವ ಘನತ್ಯಾಜ್ಯವನ್ನು ಮಾತ್ರ ವಿಲೇವಾರಿ ಮಾಡುವ ಕಾರ್ಯಕ್ಕೆ, ಪ್ರತಿ ವಾರ್ಡ್‌ನ ಆಧಾರದ ಮೇಲೆ ವಾಹನಗಳನ್ನು ನಿಗದಿಪಡಿಸಿ ಕಸ ವಿಲೇವಾರಿ ಮಾಡುವಂತೆ ಸೂಚಿಸಲಾಗಿದೆ. ಆದರೆ, ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತಕ್ಕೆ (ಬಿಎಸ್‌ಡಬ್ಲ್ಯುಎಂಎಲ್‌) ಹೊಸ ಸಿಇಒ ಬಂದ ಮೇಲೆ ಈ ಪದ್ಧತಿ ಬದಲಾಗಿದೆ’ ಎಂದು ದೂರಿದರು.

‘ತ್ಯಾಜ್ಯ ಸಾಗಿಸುವ ಚಾಲಕ ಹಾಗೂ ಸಹಾಯಕರು ಕಸ ಆಯಬೇಕು ಎಂದು ಬಿಎಸ್‌ಡಬ್ಲ್ಯುಎಂಎಲ್‌ನ ಸಹಾಯಕ ಪ್ರಧಾನ ವ್ಯವಸ್ಥಾಪಕರು ಸೂಚಿಸುತ್ತಿದ್ದಾರೆ. ನಮಗೆ ಸಿಇಒ, ಸಿಒಒ ಮೌಖಿಕ ಆದೇಶ ನೀಡಿದ್ದಾರೆ ಎನ್ನುತ್ತಾರೆ. ಇದರಿಂದ ನಮ್ಮ ಕಾರ್ಮಿಕರು ಮನ ನೊಂದಿದ್ದಾರೆ. ಈ ವೃತ್ತಿಯಿಂದ ನಾವು ಗೌರವಯುತವಾಗಿ ಮಕ್ಕಳು ಮತ್ತು ಸಂಬಂಧಿಕರ ನಡುವೆ ಜೀವನ ನಡೆಸುವ ಪರಿಸ್ಥಿತಿ ಇಲ್ಲದಂತಾಗಿದೆ. ಆದ್ದರಿಂದ, ಬಾಕಿ ಉಳಿದಿರುವ ಪೂರ್ಣ ವೇತನ ನೀಡಿದರೆ ತಾವು ವೃತ್ತಿ ತ್ಯಜಿಸುವುದಾಗಿ ಹೇಳಿದ್ದಾರೆ. ಇದರ ಬಗ್ಗೆ ನಾವು ವಿಮರ್ಶೆ ನಡೆಸಿದಾಗ ನಮ್ಮ ಕಾರ್ಮಿಕರನ್ನು ಜೀತದಾಳುಗಳಂತೆ ನಡೆಸಿಕೊಳ್ಳುತ್ತಿರುವುದು ಕಂಡುಬಂದಿದೆ’ ಎಂದು ಬಾಲಸುಬ್ರಮಣಿಯಂ ಹೇಳಿದರು.

‘ಈ ಬಗ್ಗೆ ಬಿಎಸ್‌ಡಬ್ಲ್ಯುಎಂಎಲ್‌ನ ಸಿಇಒ ಅವರಿಗೆ ಪತ್ರ ಬರೆಯಲಾಗಿದೆ. ಜಿಬಿಎ ಮುಖ್ಯ ಆಯುಕ್ತರಿಗೆ ಸಮಸ್ಯೆಗಳನ್ನು ಬಗೆಹರಿಸುವಂತೆ ಕೋರಿದರೂ ಅವರು ನಮ್ಮೊಂದಿಗೆ ಸಭೆ ನಡೆಸಿಲ್ಲ. ಹೀಗಾಗಿ, ಕಾರ್ಮಿಕರ ಮೇಲೆ ನಡೆಯುತ್ತಿರುವ ದೌರ್ಜನ್ಯವನ್ನು ನಾವು ಬಹಿರಂಗವಾಗಿ ಹೇಳುತ್ತಿದ್ದೇವೆ’ ಎಂದರು.

ಮಾರ್ಚ್ 23ರಿಂದ ವಿಲೇವಾರಿಗೆ ಸಂಕಷ್ಟ



ಬಾಲಸುಬ್ರಮಣಿಯಂ

‘ಬಿಎಸ್‌ಡಬ್ಲ್ಯುಎಂಎಲ್‌ನ ಅಧಿಕಾರಿಗಳ ನಡವಳಿಕೆಯಿಂದ ಬೇಸತ್ತಿರುವ ಕಾರ್ಮಿಕರು ಮುಂದಿನ ದಿನಗಳಲ್ಲಿ ತಮ್ಮ ಕೆಲಸವನ್ನು ನಿರ್ವಹಿಸಲು ಅಸಹಾಯಕತೆ ತೋರಿದಲ್ಲಿ, ಸಾರ್ವಜನಿಕರ ಆರೋಗ್ಯ ದೃಷ್ಟಿಯಿಂದ ಬದಲಿ ವ್ಯವಸ್ಥೆ ಮಾಡಿಕೊಳ್ಳಬೇಕು’ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಎಸ್‌.ಎನ್‌. ಬಾಲಸುಬ್ರಮಣಿಯಂ ಅವರು ಬಿಎಸ್‌ಡಬ್ಲ್ಯುಎಂಎಲ್‌ನ ಸಿಇಒಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.

‘ಸ್ವಚ್ಛತಾ ಕಾರ್ಯವನ್ನು ಸ್ಥಗಿತಗೊಳಿಸಿದರೆ ಅಥವಾ ಪ್ರತಿಭಟನೆ ಮಾಡಿದರೆ ‘ಎಸ್ಮಾ’ ಅಸ್ತ್ರ ಉಪಯೋಗಿಸುತ್ತೇವೆ ಎಂದು ಸಿಇಒ ಮತ್ತು ಸಿಒಒ ಬೆದರಿಸುತ್ತಿದ್ದಾರೆ. ಸೌಜನ್ಯಕ್ಕೂ ಕಾರ್ಮಿಕರ ಪರಿಸ್ಥಿತಿಯನ್ನು ಪರಿಗಣಿಸುತ್ತಿಲ್ಲ. ನಿಮ್ಮ ಪ್ರತಿಷ್ಠೆಗಾಗಿ ಕಾರ್ಮಿಕರನ್ನು ಅಮಾನವೀಯವಾಗಿ ನಡೆಸಿಕೊಳ್ಳುತ್ತಿದ್ದೀರಿ. ನಿಮ್ಮ ಈ ಧೋರಣೆಯಿಂದ ಕಾರ್ಮಿಕರು ಕೆಲಸ ತ್ಯಜಿಸಿದರೆ ಬದಲಿ ವ್ಯವಸ್ಥೆ ಮಾಡಿಕೊಳ್ಳಬೇಕು’ ಎಂದು ತಿಳಿಸಿದ್ದಾರೆ.

ಕಸ ವಿಂಗಡಿಸುವುದನ್ನು ವಿರೋಧಿಸಿ, ಮಾರ್ಚ್ 23ರಿಂದ ಕೆಲಸಕ್ಕೆ ಗೈರಾಗುವುದಾಗಿ ಕಾರ್ಮಿಕರು ಹೇಳಿದ್ದಾರೆ. ಹೀಗಾಗಿ, ಸೋಮವಾರದಿಂದ ನಗರದಲ್ಲಿ ತ್ಯಾಜ್ಯ ಸಂಗ್ರಹ ಹಾಗೂ ಸಾಗಣೆಯಲ್ಲಿ ವ್ಯತ್ಯಯವಾಗುವ ಸಂಭವವಿದೆ.

‘ಅಧಿಕಾರಿಗಳ ಮಾಫಿಯಾ ಕಾರಣ’

‘ತ್ಯಾಜ್ಯ ಸಂಗ್ರಹ, ವಿಲೇವಾರಿಯ ಗುತ್ತಿಗೆದಾರರಿಗೆ 2025ರ ಅಕ್ಟೋಬರ್‌ನಿಂದ ಬಿಲ್ ಪಾವತಿಸಿಲ್ಲ. ಈ ವಿಷಯವನ್ನು ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳಿಗೆ ತಿಳಿಸಿದರೆ ನಮ್ಮನ್ನು ಭಿಕ್ಷುಕರಿಗಿಂತ ಕೀಳಾಗಿ ನಡೆಸಿಕೊಳ್ಳುತ್ತಾರೆ. ಅಧಿಕಾರಿಗಳ ಈ ರೀತಿಯ ಮನೋಭಾವನೆಯಿಂದಲೇ ಬೆಂಗಳೂರು ನಗರದಲ್ಲಿ ಕಸದ ಸಮಸ್ಯೆ ಹೆಚ್ಚಾಗುತ್ತಿದೆ. ಇವರ ದೌರ್ಜನ್ಯದಿಂದ ಕಸದ ವಿಲೇವಾರಿ ವ್ಯವಸ್ಥೆಯಲ್ಲಿ ವ್ಯತ್ಯಯ ಉಂಟಾದರೆ ಅದಕ್ಕೆ ಅಧಿಕಾರಿಗಳ ಮಾಫಿಯಾವೇ ಕಾರಣ’ ಎಂದು ಬೆಂಗಳೂರು ಮಹಾನಗರ ಸ್ವಚ್ಛತೆ ಮತ್ತು ಲಾರಿ ಮಾಲೀಕರು–ಗುತ್ತಿಗೆದಾರರ ಸಂಘ ಪ್ರಧಾನ ಕಾರ್ಯದರ್ಶಿ ಎಸ್‌.ಎನ್‌. ಬಾಲಸುಬ್ರಮಣಿಯಂ ತಿಳಿಸಿದರು.



ರಸ್ತೆಯಲ್ಲಿ ಮಿಶ್ರ ಕಸವನ್ನು ಪ್ರತ್ಯೇಕಿಸುತ್ತಿರುವ ಕಾರ್ಮಿಕರು

ಮುಖ್ಯಾಂಶಗಳು

- ರಸ್ತೆಯಲ್ಲಿ ಹಾಕಿರುವ ಮಿಶ್ರತ್ಯಾಜ್ಯ ಪ್ರತ್ಯೇಕಗೊಳಿಸುವುದು
- ಅಧಿಕಾರಿಗಳ ವರ್ತನೆಯಿಂದ ಬೇಸತ್ತಿರುವ ಕಾರ್ಮಿಕರು
- ಗೌರವದ ಬದುಕಿಗಾಗಿ ವೃತ್ತಿ ತೊರೆಯುವುದಾಗಿ ಹೇಳಿಕೆ

ನಿಯಮದಂತೆ ಕಾರ್ಯ: ಕರೀಗೌಡ



ಕರೀಗೌಡ

‘ಘನತ್ಯಾಜ್ಯ ವಿಲೇವಾರಿ ನಿಯಮ 2000 ಮತ್ತು 2016ರಂತೆ ಮನೆಗಳಿಂದ ಒಣಕಸ ಹಾಗೂ ಹಸಿ ಕಸವನ್ನು ಪ್ರತ್ಯೇಕವಾಗಿ ಸಂಗ್ರಹಿಸಲು ಗುತ್ತಿಗೆ ನೀಡಲಾಗಿದೆ. ಅವರು ಮಿಶ್ರ ಕಸ ಸಂಗ್ರಹಿಸಿ, ರಸ್ತೆಯಲ್ಲಿ ವಿಂಗಡಿಸಿದರೆ ನಾವು ಏನು ಮಾಡಲು ಸಾಧ್ಯ? ರಸ್ತೆಯಲ್ಲಿ ಕಸ ವಿಂಗಡಿಸುವಂತೆ ನಾವು ಒತ್ತಾಯಿಸುತ್ತಿಲ್ಲ’ ಎಂದು ಬಿಎಸ್‌ಡಬ್ಲ್ಯುಎಂಎಲ್‌ನ ಸಿಇಒ ಕರೀಗೌಡ ತಿಳಿಸಿದರು.

‘2025ರ ಅಕ್ಟೋಬರ್‌ನಿಂದ ಬಿಲ್ ಪಾವತಿ ಆಗದಿರುವುದು ನಿಜ. ಈ ವಾರದಲ್ಲಿ ಒಂದು ತಿಂಗಳ ಬಿಲ್ ಪಾವತಿಸಲಾಗುತ್ತದೆ. ಮುಂದಿನ ವಾರದಲ್ಲಿ ಇನ್ನೆರಡು ತಿಂಗಳ ಬಿಲ್ ಪಾವತಿಯಾಗುತ್ತದೆ’ ಎಂದರು.

ಪುನೀತ್ ಜನ್ಮದಿನ ಸಮಾಧಿಗೆ ಪೂಜೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಗಳವಾರ (ಮಾರ್ಚ್ 17) ನಟ ದಿವಂಗತ ಪುನೀತ್ ರಾಜ್‌ಕುಮಾರ್ ಅವರ 51ನೇ ಜನ್ಮದಿನವನ್ನು ರಾಜ್ಯದೆಲ್ಲೆಡೆ ಅಭಿಮಾನಿಗಳು ಆಚರಿಸಿದರು.

ಇಲ್ಲಿನ ಕಂಠೀರವ ಸ್ಟುಡಿಯೊದಲ್ಲಿರುವ ಪುನೀತ್ ಅವರ ಸಮಾಧಿಗೆ ನಟ ಶಿವರಾಜ್‌ಕುಮಾರ್ ಹಾಗೂ ರಾಘವೇಂದ್ರ ರಾಜ್‌ಕುಮಾರ್ ದಂಪತಿ, ನಟರಾದ ವಿನಯ್ ರಾಜ್‌ಕುಮಾರ್, ಯುವ ರಾಜ್‌ಕುಮಾರ್ ಸೇರಿದಂತೆ ಕುಟುಂಬದ ಸದಸ್ಯರು ಪೂಜೆ ಸಲ್ಲಿಸಿದರು. ಪುನೀತ್ ಅವರ ನೆಚ್ಚಿನ ತಿಂಡಿ ತಿನಿಸುಗಳನ್ನು ಸಮಾಧಿಯ ಮುಂದೆ ಇಡಲಾಗಿತ್ತು.

ಜನ್ಮದಿನದ ಅಂಗವಾಗಿ ಸಮಾಧಿಯನ್ನು ಹೂವಿನಿಂದ ಅಲಂಕಾರ ಮಾಡಲಾಗಿತ್ತು. ಚಂದನವನದ ಕಲಾವಿದರು, ಸಾವಿರಾರು ಅಭಿಮಾನಿಗಳು ಸಮಾಧಿಗೆ ಭೇಟಿ ನೀಡಿ ತಮ್ಮ ನೆಚ್ಚಿನ ನಟನಿಗೆ ಪುಷ್ಪನಮನ ಸಲ್ಲಿಸಿದರು. ಹಲವರು ಕೇಕ್‌ಗಳನ್ನು ಸಮಾಧಿ ಮುಂದೆಯೇ ಕತ್ತರಿಸಿ ಪುನೀತ್ ಅವರ ಜನ್ಮದಿನ ಆಚರಿಸಿದರು. ಅಭಿಮಾನಿಗಳಿಗೆ ಸಮಾಧಿ ಬಳಿಯೇ ಅನ್ನದಾನ ವ್ಯವಸ್ಥೆ ಮಾಡಲಾಗಿತ್ತು.

‘ನಿನ್ನನ್ನು ಆಕಾಶದಾಚೆ ಹುಡುಕುವ ಅವಶ್ಯಕತೆ ಇಲ್ಲವೇ ಇಲ್ಲ. ಇಡೀ ಕರ್ನಾಟಕದಲ್ಲಿ ಎಲ್ಲೇ ಹೋದರೂ ಜನ ನಿನ್ನನ್ನು ಪ್ರತಿ ದಿನ ಸಂಭ್ರಮಿಸುತ್ತಾರೆ. ನಿನ್ನ ಜನ್ಮದಿನ ನಮ್ಮೆಲ್ಲರಿಗೂ ಹಬ್ಬ. ನಿನ್ನ ಹೆಸರು ಹೇಳಿದೊಡನೆ ಮೂಡುವ ನಗು, ನೀನು ಎಲ್ಲರಿಗೂ ಕೊಟ್ಟಿರುವ ಉಡುಗೊರೆ’ ಎಂದು ನಟ ಶಿವರಾಜ್‌ಕುಮಾರ್ ಭಾವನಾತ್ಮಕ ಪೋಸ್ಟ್ ಹಾಕಿ ಪುನೀತ್ ಅವರನ್ನು ನೆನಪಿಸಿಕೊಂಡಿದ್ದಾರೆ.



ನಟ ಪುನೀತ್ ರಾಜ್‌ಕುಮಾರ್ ಅವರ ಹುಟ್ಟುಹಬ್ಬದ ಅಂಗವಾಗಿ ಅಶ್ವಿನಿ ಪುನೀತ್ ರಾಜ್ ಕುಮಾರ್, ಪುತ್ರಿಯರಾದ ಧೃತಿ ಹಾಗೂ ವಂದಿತಾ, ರಾಘವೇಂದ್ರ ರಾಜ್ ಕುಮಾರ್ ದಂಪತಿ ಮಂಗಳವಾರ ಕಂಠೀರವ ಸ್ಟುಡಿಯೋದಲ್ಲಿ ಪುನೀತ್ ಸಮಾಧಿಗೆ ಆರತಿ ಬೆಳಗಿದರು

ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌.ಜಿ.

ಮೈಸೂರು ರಸ್ತೆ: ಎರಡು ಮೇಲ್ಸೇತುವೆ- ಡಿಕೆಶಿ

ಬೆಂಗಳೂರು: ಚಾಮರಾಜಪೇಟೆಯಿಂದ ಕೆಂಗೇರಿವರೆಗೆ ವಾಹನಗಳ ದಟ್ಟಣೆ ತಡೆಯಲು ಸುರಂಗ ರಸ್ತೆ ನಿರ್ಮಿಸುವ ಪ್ರಸ್ತಾವ ಸರ್ಕಾರದ ಮುಂದಿಲ್ಲ. ಬದಲಿಗೆ ಎರಡು ಮೇಲ್ಸೇತುವೆ ನಿರ್ಮಾಣಕ್ಕೆ ಕ್ರಿಯಾಯೋಜನೆ ರೂಪಿಸಲಾಗಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್‌ನ ಕೆ.ಶಿವಕುಮಾರ್ ಅವರ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಅವರು, ಚಾಮರಾಜಪೇಟೆಯಿಂದ ಕೆಂಗೇರಿವರೆಗೆ ವಾಹನಗಳ ದಟ್ಟಣೆ ತಡೆಯಲು ಈಗಾಗಲೇ ಕಾರ್ಯಸಾಧ್ಯತಾ ವರದಿಯನ್ನು ತಯಾರಿಸಲಾಗಿದೆ. ಚಾಮರಾಜಪೇಟೆಯ ಸಿರಸಿ ವೃತ್ತದಲ್ಲಿ ಕೊನೆಗೊಳ್ಳುವ ಮೇಲ್ಸೇತುವೆಯನ್ನು ಬಿಎಚ್‌ಇಎಲ್‌ವರೆಗೂ ವಿಸ್ತರಿಸಲು ₹810 ಕೋಟಿ ವೆಚ್ಚದಲ್ಲಿ ಅಂದಾಜುಪಟ್ಟಿ ಸಿದ್ಧಪಡಿಸಲಾಗಿದೆ. ಆಡಳಿತಾತ್ಮಕ ಅನುಮೋದನೆಯ ನಂತರ ಕಾಮಗಾರಿ ಆರಂಭವಾಗಲಿದೆ ಎಂದು ಮಾಹಿತಿ ನೀಡಿದ್ದಾರೆ.



ಯುಗಾದಿ ಹಬ್ಬದ ಅಂಗವಾಗಿ ಮಂಗಳವಾರ ಕೆ.ಆರ್. ಮಾರುಕಟ್ಟೆಯಲ್ಲಿ ಸಾರ್ವಜನಿಕರು ಹೂವು ಖರೀದಿಸಿದರು

ಪ್ರಜಾವಾಣಿ ಚಿತ್ರ: ರಂಜು ಪಿ.

ಯುಗಾದಿ: ಖರೀದಿ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುಗಾದಿ ಹಬ್ಬದ ಆಚರಣೆಗೆ ನಗರದ ಜನ ಸಜ್ಜಾಗಿದ್ದು, ಮಂಗಳವಾರ ವಿವಿಧ ಮಾರುಕಟ್ಟೆಗಳಲ್ಲಿ ಹಣ್ಣು, ಹೂವು ಸೇರಿದಂತೆ ಹಬ್ಬಕ್ಕೆ ಬೇಕಾದ ವಸ್ತುಗಳ ಖರೀದಿಯ ಭರಾಟೆ ಜೋರಾಗಿತ್ತು.

ಮಾವು ಮತ್ತು ಬೇವಿನ ಸೊಪ್ಪನ್ನು ತಂದು ರಸ್ತೆ ಬದಿಗಳಲ್ಲಿ ರಾಶಿ ಹಾಕಿ ಮಾರಾಟ ಮಾಡುತ್ತಿದ್ದು, ಗ್ರಾಹಕರು ಖರೀದಿಯಲ್ಲಿ ತೊಡಗಿದ್ದರು.

ನಗರದ ಬಟ್ಟೆ ಅಂಗಡಿಗಳು, ಆಭರಣ ಮಳಿಗೆಗಳಲ್ಲೂ ಖರೀದಿ ಜೋರಾಗಿತ್ತು. ಹಬ್ಬದ ಕಾರಣದಿಂದ ಎರಡು–ಮೂರು ದಿನಗಳಿಂದ ಹೂವಿನ ವ್ಯಾಪಾರ ಗರಿಗೆದರಿದ್ದು, ದರಗಳು ಏರಿಕೆಯಾಗಿವೆ.

ಕೆ.ಆರ್.ಮಾರುಕಟ್ಟೆ, ಯಶವಂತಪುರ, ಗಾಂಧಿಬಜಾರ್, ಮಲ್ಲೇಶ್ವರ, ಬಸವನಗುಡಿ, ಜಯನಗರ, ವಿಜಯನಗರ, ಮಡಿವಾಳ, ಕೆ.ಆರ್. ಪುರ, ಯಲಹಂಕ, ಕೆಂಗೇರಿ ಸೇರಿದಂತೆ ನಗರದ ವಿವಿಧೆಡೆ ಮಾರುಕಟ್ಟೆಯಲ್ಲಿ ಜನಜಂಗುಳಿ ಇತ್ತು.

ಹೂಗಳ ಬೆಲೆ ಗಗನಮುಖಿ: ‘ಹಬ್ಬದ ಪ್ರಯುಕ್ತ ಹೂವಿಗೆ ಬೇಡಿಕೆ ಹೆಚ್ಚಾಗಿದೆ. ಕನಕಾಂಬರ, ಮಲ್ಲಿಗೆ, ಗುಲಾಬಿ, ಸುಗಂಧರಾಜ, ಸೇವಂತಿಗೆ ಸೇರಿದಂತೆ ಹೂವಿನ ದರಗಳು ಏರಿಕೆಯಾಗಿವೆ’ ಎಂದು ಕೆ.ಆರ್. ಮಾರುಕಟ್ಟೆ ಹೂವಿನ ವರ್ತಕ ಮಂಜುನಾಥ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಕನಕಾಂಬರ ಪ್ರತಿ ಕೆ.ಜಿ.ಗೆ ₹1,000, ಮಲ್ಲಿಗೆ ಕೆ.ಜಿಗೆ ₹800 ಇದೆ. ಸೇವಂತಿಗೆ ಕೆ.ಜಿಗೆ ₹150, ಗುಲಾಬಿ ಕೆ.ಜಿಗೆ ₹220, ಸುಗಂಧರಾಜ ಕೆ.ಜಿಗೆ ₹160 ರಂತೆ ಮಾರಾಟವಾಗುತ್ತಿತ್ತು. ಬುಧವಾರ ದರಗಳಲ್ಲಿ ಮತ್ತಷ್ಟು ಏರಿಕೆಯಾಗುವ ಸಾಧ್ಯತೆ ಇದೆ’ ಎಂದು ವ್ಯಾಪಾರಿಗಳು ತಿಳಿಸಿದರು.

‘ಯುಗಾದಿ ಎರಡು ದಿನಗಳ ಹಬ್ಬ. ಮೊದಲ ದಿನ ಸಿಹಿ ಖಾದ್ಯಗಳನ್ನು ಸವಿಯುತ್ತಾರೆ. ಎರಡನೇ ದಿನ ಹೊಸ ತೊಡಕು ಅಂಗವಾಗಿ ಮಾಂಸದ ತರಹೇವಾರಿ ಖಾದ್ಯಗಳೊಂದಿಗೆ ಹಬ್ಬ ಸಂಪನ್ನಗೊಳಿಸುತ್ತಾರೆ. ಬೆಂಗಳೂರು ಸುತ್ತಮುತ್ತಲಿನ ಜಿಲ್ಲೆಗಳಲ್ಲಿ ಹೊಸ ತೊಡಕು ವಿಜೃಂಭಣೆಯಿಂದ ನಡೆಯುತ್ತದೆ. ಈ ವೇಳೆ ಮಾಂಸದ ಬೆಲೆಯೂ ಹೆಚ್ಚಾಗುತ್ತದೆ. ತರಕಾರಿಗಳ ದರಗಳು ಸ್ವಲ್ಪ ಹೆಚ್ಚಾಗಿವೆ’ ಎಂದು ತರಕಾರಿ ವರ್ತಕ ಸಿದ್ಧರಾಜು ತಿಳಿಸಿದರು.

ಹೂವಿನ ದರ (ಪ್ರತಿ ಕೆ.ಜಿ.ಗೆ ₹ಗಳಲ್ಲಿ)

ಕನಕಾಂಬರ	400	1000
ಮಲ್ಲಿಗೆ	400	800
ಗುಲಾಬಿ	120	220
ಸುಗಂಧರಾಜ	50	160
ಚೆಂಡು ಹೂ	20	40
ಸೇವಂತಿಗೆ	80	120

(ಕೆ.ಆರ್. ಮಾರುಕಟ್ಟೆಯಲ್ಲಿ ಪ್ರತಿ ಕೆ.ಜಿಗೆ ₹ಗಳಲ್ಲಿ)

ತರಕಾರಿ	ಕಳೆದ ವಾರದ ದರ	ಈ ವಾರದ ದರ
ಹೂಕೋಸು	40	25
ಟೊಮೆಟೊ	25	15
ಮೆಣಸಿನಕಾಯಿ	80	85
ಈರುಳ್ಳಿ	35	30
ಬೆಂಡೆಕಾಯಿ	60	50
ಬದನೆಕಾಯಿ	45	40
ಆಲೂಗಡ್ಡೆ	30	30
ಮೂಲಂಗಿ	30	40
ಚವಳಿಕಾಯಿ	40	50
ಕ್ಯಾಬೇಜ್	40	30
ಬೀನ್ಸ್	60	70
ಹೀರೇಕಾಯಿ	60	50
ಕ್ಯಾರೆಟ್	60	70
ಸಬ್ಬಕ್ಕಿ	20	20
ಕೊತ್ತಂಬರಿ	20	10
ಪಾಲಕ್	10	10

ಹಣ್ಣುಗಳ ದರ (ಪ್ರತಿ ಕೆ.ಜಿಗೆ ₹ಗಳಲ್ಲಿ)

ಸೇಬು	200	220
ದಾಳಿಂಬೆ	200	200
ಏಲಕ್ಕಿ ಬಾಳೆ	60	80
ಪಚ್ಚಬಾಳೆ	30	40

ಯುಗಾದಿ ವಿಶೇಷ

ಬೇವು	₹20 (ಪ್ರತಿ ಕಟ್ಟಿಗೆ)
ಮಾವಿನ ತೋರಣ	₹30
ತುಳಸಿ	ಮಾರಿಗೆ ₹50
ತೆಂಗಿನ ಕಾಯಿ	₹30 (ಒಂದಕ್ಕೆ)
ಬಾಳೆ ಕಂಬ	₹100(ಜೋಡಿಗೆ)

ವಿಧಾನಸಭೆಯಲ್ಲಿ ಬಿಜೆಪಿಯ ಬೆಂಗಳೂರು ಶಾಸಕರ ವಾಗ್ದಾಳಿ; ಹೆಚ್ಚು ಅನುದಾನಕ್ಕೆ ಆಗ್ರಹ

‘ಕರ ಭಾರ: ಬೆಂಗಳೂರಿಗರ ಹಿಂಡುತ್ತಿರುವ ಸರ್ಕಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಬೊಕ್ಕಸಕ್ಕೆ ಶೇಕಡ 65ಕ್ಕೂ ಹೆಚ್ಚು ಆದಾಯ ನೀಡುವ ಬೆಂಗಳೂರಿನ ಜನರ ಮೇಲೆ ವಿವಿಧ ರೀತಿಯ ತೆರಿಗೆಗಳನ್ನು ಹೇರಲಾಗಿದೆ. ಅಪಾರ್ಟ್‌ಮೆಂಟ್ ವಾಸಿಗಳು ತಮಗೆ ಓಟು ನೀಡುವುದಿಲ್ಲ ಎಂಬ ತಪ್ಪು ಕಲ್ಪನೆಯಿಂದ ಅವರ ಮೇಲೆ ಸರ್ಕಾರ ಗದಾ ಪ್ರಹಾರ ನಡೆಸುತ್ತಿದೆ ಎಂದು ಬಿಜೆಪಿ ಶಾಸಕರು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು.

‘ನಮ್ಮ ಕ್ಷೇತ್ರಗಳಿಂದ ಸರ್ಕಾರದ ಬೊಕ್ಕಸಕ್ಕೆ ಸಾವಿರಾರು ಕೋಟಿ ರೂಪಾಯಿ ತೆರಿಗೆ ಸಂದಾಯವಾಗುತ್ತಿದ್ದರೂ ಕ್ಷೇತ್ರದ ಅಭಿವೃದ್ಧಿಗೆ ನೀಡುತ್ತಿರುವ ಹಣ ಅತ್ಯಲ್ಪ’ ಎಂದು ಕೆಲ ಶಾಸಕರು ಅಸಮಾಧಾನ ವ್ಯಕ್ತಪಡಿಸಿದರು. ಶಾಸಕರಾದ ಎಸ್‌.ಆರ್‌.ವಿಶ್ವನಾಥ್, ಸತೀಶ್ ರೆಡ್ಡಿ ಮತ್ತು ಮುನಿರತ್ನ ಅವರು ಬೆಂಗಳೂರಿನ ಸಮಸ್ಯೆಗಳ ಬಗ್ಗೆ ಮಾತನಾಡಿದರು.

ಡ್ರೋನ್ ಸಮೀಕ್ಷೆಯಿಂದ ಅನ್ಯಾಯ: ‘ಆಸ್ತಿ ತೆರಿಗೆ ನಿರ್ಧಾರಕ್ಕೆ ಡ್ರೋನ್ ಬಳಕೆ ಅವೈಜ್ಞಾನಿಕ ವಿಧಾನ. ಇದು ತಪ್ಪು ಮಾಹಿತಿ ಕೊಡುತ್ತದೆ. ಇದರ ಆಧಾರದ ಮೇಲೆ ಬೇಕಾಬಿಟ್ಟಿ ತೆರಿಗೆ ಕಟ್ಟಿಸಿಕೊಳ್ಳಲಾಗುತ್ತಿದೆ. ಸಾರ್ವಜನಿಕರಿಗೆ ಹೊರೆಯಾಗಿ ಪರಿಣಮಿಸಿದೆ’ ಎಂದು ಬಿಜೆಪಿಯ ಸತೀಶ್ ರೆಡ್ಡಿ ದೂರಿದರು.

‘ಜನ ಆಸ್ತಿ ತೆರಿಗೆ ಉಳಿಸಿಕೊಂಡರೆ ಅವರ ಆಸ್ತಿ ಹರಾಜು ಹಾಕುತ್ತೇವೆ ಎನ್ನುವ ಅಧಿಕಾರಿಗಳಿಗೆ ಕೋಟಿಗಟ್ಟಲೆ ತೆರಿಗೆ ಬಾಕಿ ಉಳಿಸಿಕೊಂಡಿರುವ ಮಾಲ್‌ಗಳಿಂದ ತೆರಿಗೆ ಕಟ್ಟಿಸಿಕೊಳ್ಳುವ ತಾಕತ್ತು ಇದೆಯೇ? ಮೀನಾಕ್ಷಿ ಮಾಲ್ 2018 ರಿಂದ ₹11 ಕೋಟಿ ತೆರಿಗೆ ಕಟ್ಟಿಲ್ಲ, ವಸೂಲಿ ಮಾಡಿ ನೋಡೋಣ’ ಎಂದು ಸವಾಲು ಹಾಕಿದರು.

‘ನಾನು ಪ್ರತಿನಿಧಿಸುವ ಬೊಮ್ಮನಹಳ್ಳಿ ಕ್ಷೇತ್ರದಿಂದ 3 ವರ್ಷಗಳಲ್ಲಿ ₹2,000 ಕೋಟಿ ತೆರಿಗೆಯನ್ನು ರಾಜ್ಯದ ಬೊಕ್ಕಸಕ್ಕೆ ಪಾವತಿಸಲಾಗಿದೆ. ಮೂರು ವರ್ಷದಲ್ಲಿ ಕ್ಷೇತ್ರಕ್ಕೆ ಸಿಕ್ಕ ಅನುದಾನ ಕೇವಲ ₹200 ಕೋಟಿ. ಸಂಗ್ರಹವಾಗುವ ತೆರಿಗೆಗೆ ಅನುಗುಣವಾಗಿ ಅನುದಾನವನ್ನು ನೀಡಬೇಕು’ ಎಂದು ಒತ್ತಾಯಿಸಿದರು.

ಪಾಲಿಕೆಗಳ ಚುನಾವಣೆಯಲ್ಲಿ ಹೆಚ್ಚು ಸ್ಥಾನಗಳನ್ನು ಗೆಲ್ಲಬೇಕು ಎಂಬ ಕಾರಣಕ್ಕಾಗಿ ವಾರ್ಡ್‌ಗಳನ್ನು ಬೇಕಾಬಿಟ್ಟಿ ವಿಭಜಿಸಲಾಗಿದೆ. ಮುಸ್ಲಿಂ ಬಾಹುಳ್ಯದ ಪ್ರದೇಶಗಳನ್ನು ವಿಭಜಿಸಿ ವಿವಿಧ ವಾರ್ಡ್‌ಗಳಿಗೆ ಸೇರಿಸಲಾಗಿದೆ ಎಂದು ಸತೀಶ್ ರೆಡ್ಡಿ ದೂರಿದರು.

‘ಗೋದ್ರೇಜ್‌ಗೆ ಕೊಟ್ಟ ಜಾಗ ಹಿಂಪಡೆಯಿರಿ’

ಗೊರಗುಂಟೆ ಪಾಳ್ಯ ಜಂಕ್ಷನ್‌ನಲ್ಲಿ ಮೆಟ್ರೊಗೆ ಕಾಯ್ದಿರಿಸಿದ್ದ ಐದು ಎಕರೆ ಸರ್ಕಾರಿ ಜಮೀನನ್ನು ಗೋದ್ರೇಜ್ ಪ್ರಾಪರ್ಟೀಸ್‌ಗೆ ನೀಡಲಾಗಿದೆ. ಇದನ್ನು ವಾಪಸ್ ಪಡೆಯಬೇಕು ಎಂದು ಬಿಜೆಪಿಯ ಮುನಿರತ್ನ ಒತ್ತಾಯಿಸಿದರು.

‘ಸರ್ಕಾರದ ಜಮೀನು ಕೊಡಬಾರದು ಎಂದು ಉಪ ಮುಖ್ಯಮಂತ್ರಿಗೆ ಪತ್ರ ಬರೆದರೂ ಏನೂ ಆಗಲಿಲ್ಲ. ಈಗ ಮೆಟ್ರೊ ಸ್ಟೇಷನ್‌ಗೆ ಜಾಗ ಇಲ್ಲ. ಸುಪ್ರೀಂ ಕೋರ್ಟ್ ಆದೇಶ ಉಲ್ಲಂಘಿಸಿ ಜಾಗ ಕೊಡಲಾಗಿದೆ’ ಎಂದು ಹೇಳಿದರು.

ರಾಜಕಾಲುವೆಗಳ ಬಫರ್ ವಲಯದಲ್ಲಿ 30 ಮೀಟರ್ ರಸ್ತೆ ಮಾಡಲು ಅವಕಾಶ ನೀಡಿ, ಅಕ್ಕ ಪಕ್ಕದ ಬಿಲ್ಡರ್‌ಗಳಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಇದರಿಂದಾಗಿ ಭೂಮಿಯ ಬೆಲೆ ವಿಪರೀತ ಏರಿದೆ. ಬಿಲ್ಡರ್‌ಗಳಿಗೆ ಕೋಟಿಗಟ್ಟಲೆ ಲಾಭ ಮಾಡಿಕೊಡಲಾಗಿದೆ. ಹಾಗಂತ ಇದರಲ್ಲಿ ಭ್ರಷ್ಟಾಚಾರ ನಡೆದಿಲ್ಲ ಎಂದು ಮುನಿರತ್ನ ವ್ಯಂಗ್ಯವಾಗಿ ನುಡಿದರು.

ರಾಜಕಾಲುವೆಗಳಿಗೆ ಬೃಹತ್ ತಡೆಗೋಡೆ ಕಟ್ಟಲು ವಿಶ್ವ ಬ್ಯಾಂಕ್‌ಗೆ ಸುಳ್ಳು ಮಾಹಿತಿ ನೀಡಿ ₹2,000 ಕೋಟಿ ಸಾಲ ಪಡೆದಿದ್ದಾರೆ. ಅಲ್ಲದೇ, ಈ ತಡೆಗೋಡೆ ಕಟ್ಟಲು ಒಬ್ಬನೇ ಗುತ್ತಿಗೆದಾರನಿಗೆ ಏಳು ಪ್ಯಾಕೇಜ್ ನೀಡಿದ್ದಾರೆ. ಇದರ ಎಲ್ಲ ದಾಖಲೆಗಳು ನನ್ನ ಬಳಿ ಇವೆ ಎಂದರು.

‘ಗಾಳಿ ಬಿಟ್ಟು ಎಲ್ಲದಕ್ಕೂ ತೆರಿಗೆ’

‘ಬೆಂಗಳೂರು ಕರ್ನಾಟಕದ ಹೃದಯ ಇದ್ದಂತೆ. ಇದರ ಆರೋಗ್ಯ ಚೆನ್ನಾಗಿರಬೇಕು ಎಂದರೆ, ಹೆಚ್ಚು ಅನುದಾನ ನೀಡಬೇಕು. ವರ್ಷಕ್ಕೆ ₹10 ಸಾವಿರ ಕೋಟಿ ಕೊಡಬೇಕು. ಇಲ್ಲವೆಂದರೆ, ಬೆಂಗಳೂರು ಸತ್ತು ಹೋಗುತ್ತದೆ. ದೊಡ್ಡ ಪ್ರಮಾಣದಲ್ಲಿ ಆದಾಯ ಕೊಡುವ ಜನರಿಗೆ ವಿವಿಧ ರೀತಿಯ ತೆರಿಗೆಗಳನ್ನು ಹಾಕಿ ಹಿಂಡಲಾಗುತ್ತಿದೆ. ಉಸಿರಾಡುವ ಗಾಳಿಯೊಂದನ್ನು ಬಿಟ್ಟು ಉಳಿದ ಎಲ್ಲದಕ್ಕೂ ತೆರಿಗೆ ಹಾಕಿದ್ದಾರೆ’ ಎಂದು ಬಿಜೆಪಿಯ ಎಸ್‌.ಆರ್‌. ವಿಶ್ವನಾಥ್ ಟೀಕಿಸಿದರು.

ಬೆಂಗಳೂರು ದುಸ್ಥಿತಿಗೆ ತಲುಪಿದೆ ಎಂದು ತೆಲಂಗಾಣದ ಕಾಂಗ್ರೆಸ್ ನೇತೃತ್ವದ ಸರ್ಕಾರದ ಮುಖ್ಯಮಂತ್ರಿ ಟೀಕೆ ಮಾಡುತ್ತಿದ್ದರೆ, ಇಲ್ಲಿನ ಕಾಂಗ್ರೆಸ್ ಸರ್ಕಾರ ತೆಪ್ಪಗೆ ಕೂತಿದೆ. ಇಲ್ಲಿನ ಕುಡಿಯುವ ನೀರಿಗೆ ಕಾವೇರಿಯನ್ನೇ ಬಹಳ ಕಾಲ ನೆಚ್ಚಿಕೊಳ್ಳಲು ಆಗುವುದಿಲ್ಲ. ಪರ್ಯಾಯ ವ್ಯವಸ್ಥೆ ಮಾಡಬೇಕು ಎಂದರು.

ಅಪಾರ್ಟ್‌ಮೆಂಟ್ ವಾಸಿಗಳ ಮೇಲೆ ಸರ್ಕಾರ ಗದಾ ಪ್ರಹಾರ ನಡೆಸಿದೆ. ಇವರಿಗೆ ಸೌಲಭ್ಯ ಕೊಡಲು ನಿರಾಕರಿಸುತ್ತಾರೆ. ಅದಕ್ಕೆ ಉಪ ಮುಖ್ಯಮಂತ್ರಿ ನೀಡುವ ಕಾರಣ ಕಾಂಗ್ರೆಸ್‌ಗೆ ಓಟು ಹಾಕುವುದಿಲ್ಲ ಎನ್ನುವುದು. ಅಪಾರ್ಟ್‌ಮೆಂಟ್ ವಾಸಿಗಳು ಯಾರು ಯಾರಿಗೆ ಓಟು ಹಾಕುತ್ತಾರೆ ಎನ್ನುವುದು ಯಾರಿಗೆ ಗೊತ್ತಾಗುತ್ತದೆ? ಇವರನ್ನು ಇನ್ನಷ್ಟು ಹಿಂಡಬೇಕು ಎಂದು ನಿವಾಸಿಗಳಿಂದ 1 ಕೆ.ಜಿ ಕಸಕ್ಕೆ ₹12 ಪಡೆಯಲಾಗುತ್ತಿದೆ. ಏಕೆ ಈ ಗದಾ ಪ್ರಹಾರ ಎಂದು ಪ್ರಶ್ನಿಸಿದರು.

ಶಿವಕುಮಾರ್ ಅವರು ಘೋಷಿಸಿದ ಸುರಂಗ ರಸ್ತೆ ಅಲ್ಲದೆ, ಇನ್ನೊಂದು ಸುರಂಗ ರಸ್ತೆಯನ್ನು ಬಜೆಟ್‌ನಲ್ಲಿ ಘೋಷಿಸಲಾಗಿದೆ. ಸುರಂಗ ರಸ್ತೆ ನಿರ್ಮಿಸುವವರಿಗೆ ಟೋಲ್ ವಿಧಿಸುವ, ಜಾಹೀರಾತು ಹಾಕುವ, ಸಂಪರ್ಕ ರಸ್ತೆಗೆ ಹೆಸರಿಡುವ, ಬಹುಮಹಡಿ ಶಾಪಿಂಗ್ ಕಾಂಪ್ಲೆಕ್ಸ್ ನಿರ್ಮಿಸುವ ಅಧಿಕಾರ ನೀಡಲಾಗಿದೆ ಎಂದು ದೂರಿದರು.

ಬಿಲ್ಡರ್‌ಗಳಿಗೆ ಪ್ರತಿ ಅಡಿಗೆ ₹100 ರಂತೆ ಲಂಚ ನಿಗದಿ ಮಾಡಲಾಗಿದೆ. ಲಂಚ ಇಲ್ಲದೇ ಯಾವುದೇ ನಕ್ಷೆಗೂ ಒಪ್ಪಿಗೆ ಸಿಗುವುದಿಲ್ಲ. ಈ ಹಣ ಯಾರಿಗೆ ಹೋಗುತ್ತಿದೆ ಎಂದು ಅವರು ಪ್ರಶ್ನಿಸಿದರು.

ನಗರದಲ್ಲಿ ಇಂದು

‘ಅಂಬೇಡ್ಕರ್ ಸ್ಮೃತಿಸಂಚಯ’ ಒಂದು ದಿನದ ರಾಜ್ಯಮಟ್ಟದ ವಿಚಾರಸಂಕಿರಣ: ಉದ್ಘಾಟನೆ: ಎಚ್‌.ಟಿ. ಪೋತೆ, ಅಧ್ಯಕ್ಷತೆ: ಎಸ್. ಅಹಲ್ಯಾ, ಅತಿಥಿ: ಸಬೀರ್ ಅಹ್ಮದ ಮುಲ್ಲಾ, ಆಶಯ ನುಡಿ: ಮಲ್ಲೇಪುರಂ ಜಿ. ವೆಂಕಟೇಶ್, ಆಯೋಜನೆ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳ್ಳಿಗೆ 10

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ: ಉದ್ಘಾಟನೆ: ಶುಭ ವಿ. ಅಯ್ಯಂಗಾರ್, ಅಧ್ಯಕ್ಷತೆ: ಬಿ. ರಮೇಶ್, ಅತಿಥಿಗಳು: ಉಮಾಶ್ರೀ, ಮಮತಾ ಸಾಗರ್, ಆಯೋಜನೆ: ಮಹಿಳಾ ಅಧ್ಯಯನ ಕೇಂದ್ರ, ಡಾ. ಮನಮೋಹನ್‌ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜಿನ ಆವರಣ, ಬೆಳಿಗ್ಗೆ 10.30

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ‘ಸ್ತ್ರೀ–ಸೇವೆ ಮತ್ತು ಸಂವೇದನೆ’ ಉಪನ್ಯಾಸ, ಮಹಿಳಾ ಸಾಧಕರಿಗೆ ಸನ್ಮಾನ: ಅತಿಥಿಗಳು: ಎಸ್. ಜಿ. ಸುಶೀಲಮ್ಮ, ಜಿ.ಕೆ. ಮಂಜುನಾಥ್, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಆಯೋಜನೆ ಮತ್ತು ಸ್ಥಳ: ಶೇಷಾದ್ರಿಪುರಂ ಸಂಯುಕ್ತ ಪದವಿ ಪೂರ್ವ ಕಾಲೇಜು, ಶೇಷಾದ್ರಿಪುರ, ಮಧ್ಯಾಹ್ನ 12

ಯುಗಾದಿ ರಂಗ ಸಂಭ್ರಮ ಕಿರು ನಾಟಕೋತ್ಸವ: ‘ಗುರು ಶಿಷ್ಯರು’ ನಾಟಕ ಪ್ರದರ್ಶನ: ರಚನೆ: ಬೇಲೂರು ಕೃಷ್ಣಮೂರ್ತಿ, ನಿರ್ದೇಶನ: ಪೂರ್ಣಿಮಾ ಪವಾರ್, ‘ಬೆಳ್ಳಕ್ಕಿ ಹಿಂಡು ಬೆದರ್ಯಾವೋ’ ಜಾನಪದ ನೃತ್ಯ ನಾಟಕ ಪ್ರದರ್ಶನ: ರಚನೆ: ಗೊ.ರು. ಚನ್ನಬಸಪ್ಪ, ನಿರ್ದೇಶನ: ಕೃಷ್ಣಮೂರ್ತಿ, ಆಯೋಜನೆ: ರಂಗ ಸೇತುವೆ ಟ್ರಸ್ಟ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 4.30ರಿಂದ

ಪಿ. ಕೇಶವ ಮೂರ್ತಿ ಅವರ ‘ಮಾಧವಿ’ ಪುಸ್ತಕ ಬಿಡುಗಡೆ: ಬಿ.ವಿ. ರಾಜಾರಾಂ, ಉಪಸ್ಥಿತಿ: ಬೈರಮಂಗಲ ರಾಮೇಗೌಡ, ಪುಸ್ತಕದ ಕುರಿತು: ನೃಷಧಂ ಎಸ್.ಎ., ಆಯೋಜನೆ: ಕರ್ನಾಟಕ ಲೇಖಕರ ಸಂಘ, ಸ್ಥಳ: ಬಿ.ಎಂ.ಶ್ರೀ ಕಲಾಭವನ, ಎನ್‌.ಆರ್. ಕಾಲೊನಿ, ಸಂಜೆ 5

ರಾಜ್ಯ ಕೈಮಗ್ಗ ವಸ್ತು ಪ್ರದರ್ಶನ: ಉದ್ಘಾಟನೆ: ಕೆ.ಎನ್. ಚನ್ನೇಗೌಡ, ಅತಿಥಿಗಳು: ಎಸ್.ಜಿ. ಸುಶೀಲಮ್ಮ, ಸಿ. ಪ್ರಭಾಕರ್, ಎಸ್. ಚಂದ್ರಶೇಖರ್, ಡಿ.ಎ. ವೆಂಕಟೇಶ್, ಎಂ.ಆರ್.ಎಸ್. ರಾಘವನ್, ಸ್ಥಳ: ಶುಭ ಕನ್ವೆನ್ಷನ್, ಜೆ.ಪಿ. ನಗರ, ಸಂಜೆ 5

ಛತ್ರಪತಿ ಶಿವಾಜಿ ಜಯಂತಿ ಅಂಗವಾಗಿ ಗಣ್ಯರಿಗೆ ‘ಛತ್ರಪತಿ ಶಿವಾಜಿ ರಾಷ್ಟ್ರ ಪ್ರಶಸ್ತಿ’ ಪ್ರದಾನ: ಸಾನ್ನಿಧ್ಯ: ಮಂಜುನಾಥಭಾರತಿ ಸ್ವಾಮೀಜಿ, ಉದ್ಘಾಟನೆ: ಪಿ.ಜಿ.ಆರ್. ಸಿಂಧ್ಯ, ಉಪಸ್ಥಿತಿ: ಲಕ್ಷ್ಮೀ ಹೆಬ್ಬಾಳಕರ, ದಿಲೀಪ್ ದಾದಾ ಜಗತಾಪ್, ಅತಿಥಿಗಳು: ಎಸ್. ಸುರೇಶ್ ರಾವ್ ಸಾಠೆ, ಸುರೇಶ್ ಚವಾಣ್, ಮೋಹನ್ ರಾವ್ ನಲ್ವಡೆ, ಎಸ್.ಆರ್. ಸಿಂಧ್ಯ, ಟಿ.ಆರ್. ವೆಂಕಟ್‌ರಾವ್ ಚವಾಣ್, ಅಧ್ಯಕ್ಷತೆ: ಎಂ.ಎಚ್.ಆರ್. ದಳವಿ, ಆಯೋಜನೆ: ಅಖಿಲ ಭಾರತೀಯ ಮರಾಠ ಮಹಾಸಂಘ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6

ರಂಗಮಂಡಲ ಉದ್ಘಾಟನಾ ಸಮಾರಂಭ: ಉದ್ಘಾಟನೆ: ಚಂದ್ರಶೇಖರ ಕಂಬಾರ, ಅಧ್ಯಕ್ಷತೆ: ಚಿತ್ತರಂಜನ್ ತ್ರಿಪಾಠಿ, ಅತಿಥಿಗಳು: ಬಿ. ಜಯಶ್ರೀ, ಅಮಿತಾ ಪ್ರಸಾದ ಸರಭಾಯ್, ಮಂಜುನಾಥಸ್ವಾಮಿ, ವಿಜಯ, ಶ್ರೀವಿದ್ಯಾ ವರ್ಚಸ್ವಿ, ರಂಗ ಗೌರವ ಸ್ವೀಕರಿಸುವವರು: ಕೆ. ರಾಮಕೃಷ್ಣಯ್ಯ, ‘ಈ ಕೆಳಗಿನವರು’ ನಾಟಕ ಪ್ರದರ್ಶನ: ನಿರ್ದೇಶನ: ವೀಣಾ ಶರ್ಮಾ ಭೂಸನೂರಮಠ, ಆಯೋಜನೆ ಮತ್ತು ಸ್ಥಳ: ರಾಷ್ಟ್ರೀಯ ನಾಟಕ ಶಾಲೆ ಬೆಂಗಳೂರು ಕೇಂದ್ರ, ಕಲಾ ಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6.30

ವಾಣಿಜ್ಯ ಸಿಲಿಂಡರ್ ಹೆಚ್ಚಿಸಿ: ಹೋಟೆಲ್‌ಗಳ ಬೇಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈಲ್ವೆ ಹಾಗೂ ಬಸ್ ನಿಲ್ದಾಣದ ಜತೆಗೆ ವಿವಿಧ ಹೋಟೆಲ್‌ಗಳು, ಆಸ್ಪತ್ರೆ, ಶಿಕ್ಷಣ ಸಂಸ್ಥೆಗಳು ಹಾಗೂ ಇಂದಿರಾ ಕ್ಯಾಂಟೀನ್‌ಗಳಿಗೆ ಆದ್ಯತೆ ಮೇಲೆ ವಾಣಿಜ್ಯ ಸಿಲಿಂಡರ್ ಪ್ರಮಾಣ ಹೆಚ್ಚಿಸಲು ಕ್ರಮ ಕೈಗೊಳ್ಳುವುದಾಗಿ ಸರ್ಕಾರ ಭರವಸೆ ನೀಡಿದೆ.

ಕರ್ನಾಟಕ ಹೋಟೆಲ್ ಮಾಲೀಕರ ಸಂಘದ ಪ್ರತಿನಿಧಿಗಳು ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರನ್ನು ಮಂಗಳವಾರ ಭೇಟಿ ಮಾಡಿ ಮನವಿ ಸಲ್ಲಿಸಿದರು. ಈ ವೇಳೆ ತೈಲ ಕಂಪನಿಗಳ ಪ್ರತಿನಿಧಿಗಳು ಹಾಗೂ ಹೋಟೆಲ್ ಮಾಲೀಕರೊಂದಿಗೆ ಅವರು ಸಭೆ ನಡೆಸಿದರು.

ವಾಣಿಜ್ಯ ಸಿಲಿಂಡರ್‌ಗಳನ್ನು ಆದ್ಯತೆ ಮೇಲೆ ಹಂಚಿಕೆ ಮಾಡಲು ಈಗಾಗಲೇ ನಿರ್ಧರಿಸಲಾಗಿದೆ. ಮೊದಲು ಆಸ್ಪತ್ರೆ, ಶಿಕ್ಷಣ ಸಂಸ್ಥೆ, ಆಸ್ಪತ್ರೆ ಕ್ಯಾಂಟೀನ್, ಇಂದಿರಾ ಕ್ಯಾಂಟೀನ್‌ಗಳಿಗೆ, ನಂತರ ವಿಮಾನ, ರೈಲ್ವೆ ಹಾಗೂ ಬಸ್ ನಿಲ್ದಾಣದ ಕ್ಯಾಂಟೀನ್‌ಗಳಿಗೆ ನಿತ್ಯ 7 ಸಾವಿರ ಸಿಲಿಂಡರ್ ಒದಗಿಸಲಾಗುತ್ತಿದೆ. ಮೂರನೇ ಆದ್ಯತೆಯಾಗಿ ಹೋಟೆಲ್ ಹಾಗೂ ರೆಸ್ಟೋರೆಂಟ್‌ಗಳಿಗೆ ನಿತ್ಯ 1 ಸಾವಿರ ವಾಣಿಜ್ಯ ಸಿಲಿಂಡರ್‌ಗಳನ್ನು ಒದಗಿಸಲಾಗುತ್ತಿದೆ ಎಂದು ಸಭೆಗೆ ಮಾಹಿತಿ ನೀಡಲಾಯಿತು.

‘ಒಟ್ಟು 8 ಸಾವಿರ ಸಿಲಿಂಡರ್‌ಗೆ ಏರಿಸುವಂತೆ ಮನವಿ ಮಾಡಿದೆವು. ಜಿಲ್ಲಾ ಸಂಘಗಳೊಂದಿಗೆ ಬುಧವಾರ ಸಭೆ ನಡೆಸಿ ಹೋಟೆಲ್‌ಗಳ ಬೇಡಿಕೆ ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು. ಕೇಂದ್ರ ಸಚಿವರಿಗೂ ಪ್ರತ್ಯೇಕ ಮನವಿ ಸಲ್ಲಿಸಲಾಗಿದೆ’ ಎಂದು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಜಿ.ಕೆ.ಶೆಟ್ಟಿ ತಿಳಿಸಿದರು.

ನೌಕರರ ಕಡಿತ: ‘ಬೆಂಗಳೂರಿನ ಪಂಚತಾರಾ ಸಹಿತ ಹಲವು ಹೋಟೆಲ್‌ಗಳಲ್ಲಿ ಸಿಲಿಂಡರ್ ಕೊರತೆಯಿಂದಾಗಿ ಮೆನು ಕಡಿತ ಮಾಡಲಾಗಿದೆ. ಕೆಲವೆಡೆ ಇಂಡಕ್ಷನ್ ಸ್ಟೌವ್ ಬಳಸಲಾಗುತ್ತಿದೆ. ಕೆಲವು ಹೋಟೆಲ್‌ಗಳಲ್ಲಿ ವಹಿವಾಟು ತಗ್ಗಿರುವುದರಿಂದ ಉದ್ಯೋಗಿಗಳಿಗೆ ದಿನ ಬಿಟ್ಟು ದಿನ ಕೆಲಸ ನೀಡಲಾಗುತ್ತಿದೆ. ಸಣ್ಣ ಹೋಟೆಲ್‌ಗಳಲ್ಲೂ ಸಿಬ್ಬಂದಿ ಕಡಿತ ಮಾಡಲಾಗಿದೆ’ ಎಂದು ಹೋಟೆಲ್ ವ್ಯವಸ್ಥಾಪಕರೊಬ್ಬರು ಮಾಹಿತಿ ನೀಡಿದರು.

ಆಟೊ ಎಲ್‌ಪಿಜಿ ದರ ಏರಿಕೆ

ಪೂರೈಕೆ ಪ್ರಮಾಣ ಕಡಿಮೆಯಾಗಿರುವ ನಡುವೆ ಆಟೊ ಎಲ್‌ಪಿಜಿ ಪ್ರತಿ ಕೆಜಿ ದರ ಏರಿಕೆ ಮಾಡಲಾಗಿದೆ. ಇದರಿಂದ ಆಟೊ ಪ್ರಯಾಣ ದರದಲ್ಲೂ ಹೆಚ್ಚಳವಾಗಿದೆ.

‘ಕೆಲ ಕಂಪನಿ ಆಟೊ ಎಲ್‌ಪಿಜಿ ದರವನ್ನು ಪ್ರತಿ ಕೆಜಿಗೆ ₹5 ರಿಂದ ₹10ವರೆಗೂ ಹೆಚ್ಚಳ ಮಾಡಿವೆ. ಕೆಲವೆಡೆ ₹16 ಹೆಚ್ಚಳವಾಗಿದೆ. ಕೆಜಿಗೆ ₹64 ಇದ್ದ ದರ ಈಗ ₹80 ದಾಟಿದೆ. ಇದರಿಂದ ದರ ಹೊಂದಾಣಿಕೆ ಪ್ರಯಾಣ ದರದಲ್ಲೂ ಏರಿಕೆಯಾಗಿದೆ’ ಎಂದು ಆಟೊ ರಿಕ್ಷಾ ಚಾಲಕರೊಬ್ಬರು ತಿಳಿಸಿದರು.

‘ಕೆಲ ದಿನಗಳಿಂದ ಎಲ್‌ಪಿಜಿ ಸರಬರಾಜಿನಲ್ಲಿ ವ್ಯತ್ಯಯವಾಗಿ ಆಟೊ ಎಲ್‌ಪಿಜಿ ದರವೂ ಏರಿಳಿತವಾಗುತ್ತಿದೆ. ಇದರಿಂದ ಪ್ರಯಾಣ ದರ ಹೆಚ್ಚಳವಾಗಿರುವ ಮಾಹಿತಿಯಿದೆ. ಆದರೆ ನಮಗೆ ಪ್ರಯಾಣಿಕರಿಂದ ದೂರು ಬಂದಿಲ್ಲ’ ಎಂದು ಸಾರಿಗೆ ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದರು.

ಸಿಲಿಂಡರ್ ಕೊರತೆ: ಆಟೊ ಚಾಲಕರ ಪ್ರತಿಭಟನೆ

ಬೆಂಗಳೂರು: ಆಟೊರಿಕ್ಷಾಗಳಿಗೆ ಉಂಟಾಗಿರುವ ಸಿಲಿಂಡರ್ ಕೊರತೆ ನೀಗಿಸುವಂತೆ ಆಗ್ರಹಿಸಿ ಚಾಲಕರ ಸಂಘಟನೆಗಳಿಂದ ನಗರದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಇಂಡಿಯನ್ ವೆಹಿಕಲ್ ಡ್ರೈವರ್ಸ್ ಟ್ರೇಡ್ ಯೂನಿಯನ್, ಸಂಚಾರಿ ಚಾಲಕರ ಸೇವಾ ಟ್ರಸ್ಟ್, ಸ್ನೇಹಜೀವಿ ಚಾಲಕರ ಸಂಘದಿಂದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಲಾಯಿತು.

ಪ್ರತಿಭಟನಕಾರರು ಆಟೊರಿಕ್ಷಾಕ್ಕೆ ಹಗ್ಗ ಕಟ್ಟಿ ಎಳೆಯುವ ಜತೆಗೆ ಖಾಲಿ ಸಿಲಿಂಡರ್ ಪ್ರದರ್ಶಿಸಿ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಇಂಡಿಯನ್ ವೆಹಿಕಲ್ ಡ್ರೈವರ್ಸ್ ಟ್ರೇಡ್ ಯೂನಿಯನ್ ಅಧ್ಯಕ್ಷ ಗಂಡಸಿ ಸದಾನಂದಸ್ವಾಮಿ ಮಾತನಾಡಿ, ‘ಆಟೊಗಳಿಗೆ ಬಂಕ್‌ಗಳಲ್ಲಿ ಸಿಎನ್‌ಜಿ ಸಮರ್ಪಕವಾಗಿ ದೊರೆಯುತ್ತಿಲ್ಲ. ಇದರಿಂದ ಚಾಲಕರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಸಿಲಿಂಡರ್ ಕೊರತೆಯಿಂದ ತೊಂದರೆ ಅನುಭವಿಸುತ್ತಿರುವ ಆಟೊ ಚಾಲಕರ ಕುಟುಂಬಕ್ಕೆ ₹10,000 ಪರಿಹಾರ ನೀಡಬೇಕು’ ಎಂದು ಆಗ್ರಹಿಸಿದರು.

ಸ್ನೇಹಜೀವಿ ಚಾಲಕರ ಸಂಘದ ಅಧ್ಯಕ್ಷ ಸಂತೋಷ್‌ಕುಮಾರ್, ಪ್ರಧಾನ ಕಾರ್ಯದರ್ಶಿ ರಾಜು ಕನ್ನಡಿಗ, ಸಂಚಾರಿ ಸತೀಶ್ ಪಾಲ್ಗೊಂಡಿದ್ದರು.

ನೆರವಿಗೆ ಬಾರದ ಸಹಾಯವಾಣಿ

ದೂರಿಗಷ್ಟೇ ಸೀಮಿತವಾಗುತ್ತಿರುವ 'ಹೆಲ್ಪ್‌ಲೈನ್', ಕರೆಗೂ ಸ್ಪಂದಿಸದ ಸಿಬ್ಬಂದಿ

• ನಾಗರಾಜು ಅಶ್ವತ್ಥ್

ಬೆಂಗಳೂರು: ಮಕ್ಕಳ ಹಕ್ಕುಗಳ ರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸಬೇಕಿದ್ದ 'ಮಕ್ಕಳ ಸಹಾಯವಾಣಿ' ಅಸಹಾಯಕ ಸ್ಥಿತಿಯಲ್ಲಿದೆ. ಸಹಾಯವಾಣಿ ಸಂಖ್ಯೆ 1098ಗೆ ಕರೆ ಮಾಡಿದರೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ಕರೆ ವರ್ಗಾಯಿಸಲಾಗುತ್ತಿದ್ದು, ದೌರ್ಜನ್ಯಕ್ಕೊಳಗಾದ ಮಕ್ಕಳ ಕುರಿತು ಸಾರ್ವಜನಿಕರು, ಸಾಮಾಜಿಕ ಸಂಸ್ಥೆಗಳು ದೂರು ನೀಡಿದರೂ ಪ್ರಯೋಜನಕ್ಕೆ ಬಾರದಂತಾಗಿದೆ.

ಕರೆ ಮಾಡಿ ಬಾಲಕಾರ್ಮಿಕರ ಕುರಿತು ಮಾಹಿತಿ ನೀಡಿ ಗಂಟೆಗಟ್ಟಲೇ ಕಾದರೂ ಯಾವುದೇ ಸಿಬ್ಬಂದಿ ಸ್ಪಂದಿಸದ ಸ್ಥಿತಿ ನಿರ್ಮಾಣವಾಗಿದೆ. ಬಾಲಕಾರ್ಮಿಕರು ತಪ್ಪಿಸಿಕೊಂಡು ಹೋಗುತ್ತಿದ್ದು, ಸಕಾರಾತ್ಮಕ ಸ್ಪಂದನೆ ಸಿಗದಿರುವುದಕ್ಕೆ ಮಕ್ಕಳ ಹಕ್ಕುಗಳ ಸಂಘಟನೆಗಳು ತೀವ್ರ ಬೇಸರ ವ್ಯಕ್ತಪಡಿಸಿವೆ.

ಸಹಾಯವಾಣಿ ಕರೆಗಳಿಗೆ ಸ್ಪಂದಿಸಲೆಂದೇ ಜಿಲ್ಲಾವಾರು ತಲಾ 8 ಮಂದಿ, ರೈಲು ಮತ್ತು ಬಸ್ ನಿಲ್ದಾಣಗಳಲ್ಲಿ ತಲಾ 6 ಮಂದಿ ಸೇರಿದಂತೆ ರಾಜ್ಯಾದ್ಯಂತ 344 ಸಿಬ್ಬಂದಿ ಇದ್ದಾರೆ. ಆದರೆ, ವೇತನ ಸೇರಿದಂತೆ ಆರ್ಥಿಕ ಸಮಸ್ಯೆಗಳನ್ನು ಮುಂದಿಟ್ಟು ದೂರು ದಾಖಲಾದ ಸ್ಥಳಕ್ಕೆ ಭೇಟಿ ನೀಡದ ಆರೋಪಗಳು ಕೇಳಿಬಂದಿವೆ.

'1098' ಮಕ್ಕಳ ಸಹಾಯವಾಣಿ 2024ರವರೆಗೆ ಸಾಮಾಜಿಕ



ಸಂಸ್ಥೆಗಳಿಂದ ನಿರ್ವಹಣೆಯಾಗುತ್ತಿತ್ತು. ಎರಡು ವರ್ಷಗಳಿಂದ ಸರ್ಕಾರವೇ ಇದರ ನಿರ್ವಹಣೆ ಹೊಣೆ ಹೊತ್ತಿದೆ. ಜಿಲ್ಲಾವಾರು ಮಕ್ಕಳ ರಕ್ಷಣಾ ಘಟಕಗಳು ದೂರುಗಳಿಗೆ ಸ್ಪಂದಿಸುತ್ತಿದ್ದು, ಈ ವ್ಯಾಪ್ತಿ ಬದಲಾವಣೆಯ ಪ್ರಕ್ರಿಯೆಯಲ್ಲಿ ಮಕ್ಕಳ ಹಕ್ಕುಗಳು ಬಲಿಯಾಗುತ್ತಿವೆ.

'ಮಕ್ಕಳ ಸಹಾಯವಾಣಿ-ಯನ್ನು ಆರಂಭದಲ್ಲಿ ನಿಮ್ಹಾನ್ಸ್ ನಿರ್ವಹಣೆ ಮಾಡುತ್ತಿತ್ತು. ಆ ನಂತರ ಎಪಿಎಸ್‌ಎ, ಬಾಸ್ಕೋ, ಸಿಆರ್‌ಟಿ ನೋಡಲ್ ಸಂಸ್ಥೆಗಳಾಗಿ ನಿರ್ವಹಣೆ ಮಾಡಿದ್ದವು. ಸಾಮಾಜಿಕ ಸಂಸ್ಥೆಗಳ ವ್ಯಾಪ್ತಿಯಲ್ಲಿ ಪ್ರತಿ ಜಿಲ್ಲೆಗಳಲ್ಲಿ ಪ್ರತ್ಯೇಕ ಸಿಬ್ಬಂದಿ ಇದ್ದರು. ಕಾಲಕಾಲಕ್ಕೆ ಮಕ್ಕಳ ಹಕ್ಕುಗಳ ಕಾಯ್ದೆಗಳ ಕುರಿತು ಸಿಬ್ಬಂದಿಗೆ ತರಬೇತಿ, ಮಾಹಿತಿ ಸಂಗ್ರಹ ಸೇರಿ ಸಾಕಷ್ಟು ಕೌಶಲ ಕಲಿಸಲಾಗುತ್ತಿತ್ತು. ಪ್ರಸ್ತುತ, ಸರ್ಕಾರ ಕೆಲವೇ ಸಿಬ್ಬಂದಿಯನ್ನು ಮಕ್ಕಳ ಸಹಾಯವಾಣಿಗೆ ಗುತ್ತಿಗೆ ಆಧಾರದಲ್ಲಿ ನೇಮಿಸಿದೆ. ಈ ಸಿಬ್ಬಂದಿಗೆ ಸಾಮಾಜಿಕ ಸಂಸ್ಥೆಗಳ ಬಲ ನೀಡಬೇಕಿದೆ ಎಂದು ಮಕ್ಕಳ ಹಕ್ಕುಗಳ ಕಾರ್ಯಕರ್ತ ನಾಗಸಿಂಹ ಜಿ ರಾವ್ ತಿಳಿಸಿದ್ದಾರೆ.

ಸ್ಪಂದಿಸದ ಇಲಾಖೆಗಳು: ಮಕ್ಕಳ ಹಕ್ಕುಗಳ ರಕ್ಷಣೆಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯೊಂದಿಗೆ ಕಂದಾಯ, ಪೊಲೀಸ್, ಶಿಕ್ಷಣ, ಕಾರ್ಮಿಕ, ಕೈಗಾರಿಕೆ, ಪಂಚಾಯತ್ ರಾಜ್, ನಗರಾಭಿವೃದ್ಧಿ ಸೇರಿ ಒಟ್ಟು 13 ಇಲಾಖೆಯ ಅಧಿಕಾರಿಗಳು ಒಳಪಡುತ್ತಾರೆ.

ಆದರೆ, ಸಮನ್ವಯದ ಕೊರತೆಯಿಂದ ಮಕ್ಕಳ ರಕ್ಷಣೆ ನಮ್ಮ ಹೊಣೆಯಲ್ಲ ಎನ್ನುವ ಭಾವನೆಯಲ್ಲೇ ಬಹುತೇಕ ಇಲಾಖೆಗಳಿವೆ. ಮಕ್ಕಳ ರಕ್ಷಣಾ ಘಟಕಗಳಿಗೆ ಈ ಇಲಾಖೆಗಳ ಸಹಾಯ ಸಿಗದೆ ಮಕ್ಕಳು ದೌರ್ಜನ್ಯದಲ್ಲೇ ಮುಂದುವರೆಯಬೇಕಾಗುತ್ತಿದೆ ಎಂದು ಸಂಘಟನೆಗಳು ದೂರಿವೆ.

ನೆಪ ಹೇಳಿದರೆ ಕ್ರಮ

'ಮಕ್ಕಳ ಸಹಾಯವಾಣಿ ದೂರುಗಳಿಗೆ ಕ್ರಮವಹಿಸಲು ಜಿಲ್ಲಾವಾರು ಸಿಬ್ಬಂದಿ ಇದ್ದಾರೆ. ಕೇಂದ್ರ, ರಾಜ್ಯ ಸರ್ಕಾರಗಳಿಂದ ಸಿಬ್ಬಂದಿಗೆ ವೇತನ, ಆಡಳಿತಾತ್ಮಕ ವೆಚ್ಚ ಭರಿಸಲಾಗುತ್ತದೆ. ತಾಂತ್ರಿಕ ಸಮಸ್ಯೆಗಳಿಂದಾಗಿ ವೇತನ ತಡವಾಗಿದೆ. ಆದರೆ, ಇದೇ ನೆಪವನ್ನೊಡ್ಡಿ ಸಿಬ್ಬಂದಿ ಮಕ್ಕಳ ರಕ್ಷಣೆಯಲ್ಲಿ ನಿರ್ಲಕ್ಷ್ಯ ತೋರಿದರೆ ಕ್ರಮವಹಿಸ-ಲಾಗುತ್ತದೆ. ಈ ಸಂಬಂಧ ಸಾರ್ವಜನಿಕರು ಆಯಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ಮಾಹಿತಿ ನೀಡಬಹುದು ಎಂದು ರಾಜ್ಯ ಮಕ್ಕಳ ರಕ್ಷಣಾ ನಿರ್ದೇಶನಾಲಯದ ನಿರ್ದೇಶಕಿ ಡಾ.ಸ್ನೇಹಾ ಹೇಳಿದ್ದಾರೆ.

ಸಕಾಲಕ್ಕೆ ವೇತನ ನೀಡದ ಹಿನ್ನೆಲೆ ಸಿಬ್ಬಂದಿ ಆರ್ಥಿಕ ಸಮಸ್ಯೆ ಎದುರಿಸುತ್ತಿದ್ದು, ಸರ್ಕಾರ ಶೀಘ್ರ ಸ್ಪಂದಿಸಬೇಕಿದೆ
ವರಲಕ್ಷ್ಮಿ, ಗೌರವಾಧ್ಯಕ್ಷೆ, ರಾಜ್ಯ ಕಾಯಂಯೇತರ ನೌಕರರ ಸಂಘ.

4–5 ಬಾರಿ ಬಾಲಕಾರ್ಮಿಕರ ಪತ್ತೆ ಹಚ್ಚಿ ಕರೆ ಮಾಡಿದರೂ ಸಿಬ್ಬಂದಿ ಸ್ಪಂದಿಸಿಲ್ಲ. ಹೀಗಾದರೆ, ಸಹಾಯವಾಣಿ ಮೇಲಿನ ನಂಬಿಕೆ ಹಾಳಾಗುತ್ತದೆ.
ನವೀನ್, ಸದಸ್ಯ, ಯುವಸಂಚಲನ ಸಂಘಟನೆ, ದೊಡ್ಡಬಳ್ಳಾಪುರ.

ಸಹಾಯವಾಣಿ ಹಿಂದಿನಂತೆ ತ್ವರಿತ ಸ್ಪಂದನೆಯಿಲ್ಲ. ಸಿಬ್ಬಂದಿಗೆ ಅಗತ್ಯ ವಾಹನ ಸೌಲಭ್ಯದ ಜೊತೆಗೆ ತರಬೇತಿ ಒದಗಿಸಬೇಕಿದೆ.
ಡಾ.ವಾಸುದೇವ ಶರ್ಮ, ರಾಜ್ಯ ಸಂಯೋಜಕ, ಕರ್ನಾಟಕ ಮಕ್ಕಳ ಹಕ್ಕುಗಳ ನಿಗಾ ಕೇಂದ್ರ.

ಸಹಾಯವಾಣಿ ಸಿಬ್ಬಂದಿಯ ಆರ್ಥಿಕ ಸಮಸ್ಯೆಗಳ ಕುರಿತು ಪರಿಶೀಲಿಸಲಾಗುತ್ತದೆ. ಸಮರ್ಪಕ ಅನುಷ್ಠಾನಕ್ಕೆ ಕ್ರಮ ವಹಿಸಲಾಗುತ್ತದೆ
ಲಕ್ಷ್ಮೀ ಹೆಬ್ಬಾಳ್ಕರ, ಸಚಿವೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

'ಸಂವಿಧಾನವೇ ಶ್ರೇಷ್ಠ': ಜಾಗೃತಿಯಾನ

ಸಂವಿಧಾನವೇ ಬೆಳಕು

Curated by DH DECCAN HERALD | ಪ್ರಜಾವಾಣಿ



ದಾವಣಗೆರೆಯ ವಿಶ್ವವಿದ್ಯಾಲಯದ ಆವರಣದಲ್ಲಿ 'ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್' ಪತ್ರಿಕಾ ಬಳಗದ ವತಿಯಿಂದ ಮಂಗಳವಾರ ಏರ್ಪಡಿಸಿದ್ದ ಸಂವಿಧಾನವೇ ಬೆಳಕು ವಾಕಥಾನ್‌ನಲ್ಲಿ ವಿದ್ಯಾರ್ಥಿಗಳು ಹಾಗೂ ಗಣ್ಯರು ಹೆಜ್ಜೆ ಹಾಕಿದರು –ಪ್ರಜಾವಾಣಿ ಚಿತ್ರ/ಸತೀಶ್ ಬಡಿಗೇರ

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಪತ್ರಿಕಾ ಬಳಗವು ಸಮಾಜ ಕಲ್ಯಾಣ ಇಲಾಖೆಯ ಸಹಯೋಗದೊಂದಿಗೆ ಆಯೋಜಿಸಿರುವ 'ಸಂವಿಧಾನವೇ ಬೆಳಕು' ಅಭಿಯಾನದಡಿ ದಾವಣಗೆರೆ ವಿಶ್ವವಿದ್ಯಾಲಯದ ಆವರಣದಲ್ಲಿ ಮಂಗಳವಾರ ನಡೆದ ವಿಚಾರ ಸಂಕಿರಣ ಹಾಗೂ ವಾಕಥಾನ್ 'ಸಂವಿಧಾನವೇ ಸರ್ವಶ್ರೇಷ್ಠ' ಎಂಬುದನ್ನು ಸಾರಿ ಹೇಳಿತು.

ಸೋಮವಾರ ರಾತ್ರಿ ಸುರಿದ ವರ್ಷದ ಮೊದಲ ಮಳೆಗೆ ಪುಳಕಗೊಂಡಿದ್ದ 'ಶಿವಗಂಗೋತ್ರಿ' ಆವರಣವು 'ಸಂವಿಧಾನಕ್ಕಾಗಿ ನಡೆಯೋಣ–ಹೆಜ್ಜೆಯಿಡು ದಾವಣಗೆರೆ' ಘೋಷಣೆಯೊಂದಿಗೆ ಸಜ್ಜಾಗಿತ್ತು. ತಂಪಾಗಿ ಬೀಸುತ್ತಿದ್ದ ಗಾಳಿಯು ಬೇಸಿಗೆ ಬಿಸಿಲಿನ ತಾಪಮಾನ ಅನುಭವಕ್ಕೆ ಬಾರದಂತಹ ವಾತಾವರಣ ಸೃಷ್ಟಿಸಿತ್ತು. ವಿಶ್ವವಿದ್ಯಾಲಯದ ವಿವಿಧ ಕಾಲೇಜುಗಳಿಂದ ಆಗಮಿಸಿದ್ದ ವಿದ್ಯಾರ್ಥಿಗಳು 'ಭಾರತೀಯ ಸಂವಿಧಾನ'ದ ಮಹತ್ವ ಅರಿಯುವ ಮೂಲಕ ವಿಶ್ವವಿದ್ಯಾಲಯದ ಆವರಣದಲ್ಲಿ ಹೊಸ ಹೆಜ್ಜೆಗುರುತುಗಳನ್ನು ಮೂಡಿಸಿದರು.

ಬೆಳಿಗ್ಗೆ 10ರಿಂದ ಮಧ್ಯಾಹ್ನ 1ಗಂಟೆಯವರೆಗೆ ವಾಕಥಾನ್ ಹಾಗೂ ವಿಚಾರಸಂಕಿರಣಗಳು ನಡೆದವು. ಸಂವಿಧಾನದ ತಿರುಳು, ಮಹತ್ವವನ್ನು ಮನವರಿಕೆ ಮಾಡಿಕೊಡುವಲ್ಲಿ ಅಭಿಯಾನ ಯಶಸ್ಸು ಕಂಡಿತು. ಸಂವಿಧಾನ ರಚನಾ ಸಮಿತಿಯ ಪರಿಶ್ರಮ, ಅಂಬೇಡ್ಕರ್ ಕೊಡುಗೆ ಹಾಗೂ ಸಂವಿಧಾನದ ವಿಶೇಷತೆ ಅರಿತ ವಿದ್ಯಾರ್ಥಿಗಳು 'ಸಂವಿಧಾನವೇ ಬದುಕು' ಎಂಬುದನ್ನು ಗಟ್ಟಿಧ್ವನಿಯಲ್ಲಿ ಹೇಳಿದರು.

ಕುಲಪತಿ ಪ್ರೊ.ಬಿ.ಡಿ. ಕುಂಬಾರ ಅವರು ವಾಕಥಾನ್‌ಗೆ ಚಾಲನೆ ನೀಡಿದರು. ಎಂಬಿಎ ವಿಭಾಗಗಳ ಕಟ್ಟಡದ ಆವರಣದಿಂದ ಆರಂಭಗೊಂಡ ವಾಕಥಾನ್, ವಿಶ್ವವಿದ್ಯಾಲಯವನ್ನು ಒಂದು ಸುತ್ತು ಹಾಕಿತು. 'ಜ್ಞಾನಸೌಧ', ಗ್ರಂಥಾಲಯ, ಆಡಳಿತ ಭವನಗಳ ಮೂಲಕ ಎಂಬಿಎ ವಿಭಾಗದ ಸಭಾಂಗಣಕ್ಕೆ ಮರಳಿತು. 'ಸಂವಿಧಾನವೇ ಬೆಳಕು', 'ನಮ್ಮ ಸಂವಿಧಾನವೇ ನಮ್ಮ ಹೆಮ್ಮೆ', 'ಭಾರತೀಯ ಸಂವಿಧಾನಕ್ಕೆ ಜಯವಾಗಲಿ', 'ಸಂವಿಧಾನ ಶಿಲ್ಪಿ ಬಿ.ಆರ್. ಅಂಬೇಡ್ಕರ್ ಅವರಿಗೆ ಜೈ' ಎಂಬ ಘೋಷಣೆಗಳು ಮೊಳಗಿದವು.

'ಸಂವಿಧಾನ ರಚನೆಯಾಗದೇ ಇದ್ದಿದ್ದರೆ ಭಾರತವನ್ನು ಈ ಸ್ಥಿತಿಯಲ್ಲಿ ಕಾಣಲು ಸಾಧ್ಯವಾಗುತ್ತಿರಲಿಲ್ಲ. ದೇಶದ ಬಹುಸಂಖ್ಯಾತರು ಇನ್ನೂ ಗುಲಾಮಗಿರಿಯಲ್ಲೇ ಇರುತ್ತಿದ್ದೆವು. ಶಿಕ್ಷಣ ಪಡೆಯಲು ವಿಶ್ವವಿದ್ಯಾಲಯದವರೆಗೆ ಬರುವ ಸಾಮರ್ಥ್ಯ ಅನೇಕರಿಗೆ ಬರುತ್ತಿರಲಿಲ್ಲ. ಭಾರತೀಯರಿಗೆ ಸಂವಿಧಾನ ದೇವರಷ್ಟೇ ಸಮಾನ. ತಂದೆ–ತಾಯಿಗೆ ಕೊಡುವ ಗೌರವವನ್ನು ಅಂಬೇಡ್ಕರ್ ಅವರಿಗೂ ನೀಡಬೇಕು' ಎಂದು ವಾಕಥಾನ್‌ಗೆ ಹಾಗೂ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಕುಲಪತಿ ಪ್ರೊ.ಬಿ.ಡಿ. ಕುಂಬಾರ ಅಭಿಪ್ರಾಯಪಟ್ಟರು.

'ವಿಶ್ವದ ಅತಿ ದೊಡ್ಡ ಪ್ರಜಾಪ್ರಭುತ್ವ ದೇಶ ಎಂಬ ಪೊರೆ ಭಾರತೀಯರ ಕಣ್ಣುಗಳಿಗೆ ಅಂಟಿಕೊಂಡಿದೆ. ಸಂವಿಧಾನವನ್ನು ಅರಿಯುವ ಮೂಲಕ ಈ ಪೊರೆಯನ್ನು ನಿವಾರಿಸಿಕೊಳ್ಳುವ ಅಗತ್ಯವಿದೆ. ಪ್ರತಿ ಗ್ರಂಥಾಲಯದಲ್ಲಿ ಭಾರತೀಯ ಸಂವಿಧಾನದ ಪ್ರತಿಗಳಿವೆ. ಪ್ರತಿಯೊಬ್ಬರು ಇದನ್ನು ಓದಿ ಅರ್ಥ ಮಾಡಿಕೊಳ್ಳಬೇಕು' ಎಂದು ಸಲಹೆ ನೀಡಿದರು.

'ದೇಶ ಸ್ವಾತಂತ್ರ್ಯ ಹೊಂದಲು ಸಾವಿರಾರು ಜನರ ತ್ಯಾಗ, ಬಲಿದಾನವಿದೆ. ಸಂವಿಧಾನ ಅನುಷ್ಠಾನಗೊಂಡ ಫಲವಾಗಿ 500ಕ್ಕೂ ಅಧಿಕ ಸಂಸ್ಥಾನಗಳು ಭಾರತದ ಅಂಗವಾದವು. ದೇಶದ ಮೊದಲ ಗೃಹ ಸಚಿವರಾಗಿದ್ದ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರು ಎಲ್ಲ ಸಂಸ್ಥಾನಗಳನ್ನು ದೇಶದೊಂದಿಗೆ ವಿಲೀನಗೊಳಿಸುವಲ್ಲಿ ಯಶಸ್ವಿಯಾದರು. ಇಂತಹ ಸಂಗತಿಗಳನ್ನು ಯಾರೊಬ್ಬರೂ ಮರೆಯಬಾರದು' ಎಂದರು.

'ಸಂವಿಧಾನದ 370ನೇ ವಿಧಿಯನ್ನು ಕೇಂದ್ರ ಸರ್ಕಾರ ರದ್ದುಪಡಿಸಿದೆ. ಇದು ಅಸ್ತಿತ್ವದಲ್ಲಿ ಇದ್ದಿದ್ದರೆ ಸಮಾನತೆ ಪ್ರತಿಪಾದಿಸುವುದು ಕಷ್ಟವಾಗುತ್ತಿತ್ತು. ಈ ಕುರಿತು ನಡೆದ ಚರ್ಚೆಗಳನ್ನು ಅವಲೋಕಿಸುವ ಅಗತ್ಯವಿದೆ' ಎಂದು ಹೇಳಿದರು.

ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಹನುಮಂತಪ್ಪ ಲಮಾಣಿ, 'ಭಾರತೀಯ ಸಂವಿಧಾನ ಸಶಕ್ತವಾಗಿದೆ. ಪ್ರತಿಯೊಬ್ಬರಿಗೂ ಬದುಕುವ ಹಕ್ಕು ಕಲ್ಪಿಸಿ, ಸಮಾನತೆ ನೀಡಿದೆ. ನೈಸರ್ಗಿಕ ಸಂಪತ್ತು ರಕ್ಷಣೆ ಹಾಗೂ ಅಭದ್ರತೆಯ-ನ್ನು ತೊಡೆದುಹಾಕುವ ಸಾಮರ್ಥ್ಯ ಇರುವುದು ಸಂವಿಧಾನಕ್ಕೆ ಮಾತ್ರ' ಎಂದರು.

ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ವಿತರಿಸಲಾಯಿತು. 'ಪ್ರಜಾವಾಣಿ' ದಾವಣಗೆರೆ ಬ್ಯೂರೊ ಮುಖ್ಯಸ್ಥ ಸಿದ್ದಯ್ಯ ಹಿರೇಮಠ ಪ್ರಾಸ್ತಾವಿಕವಾಗಿ ಮಾತನಾಡಿದರು.

'ವಿಶ್ವಕ್ಕೆ ಮಾದರಿ ಸಂವಿಧಾನ'

'ಡಾ.ಬಿ.ಆರ್. ಅಂಬೇಡ್ಕರ್ ಅವರು ರಚಿಸಿದ ಸಂವಿಧಾನ ಗಾತ್ರದಲ್ಲಿ ದೊಡ್ಡದಾಗಿದ್ದರೂ ವಿಶ್ವಕ್ಕೆ ಮಾದರಿಯಾಗಿದೆ. ಇಂತಹ ಸಂವಿಧಾನವನ್ನು ಬದಲಾವಣೆ ಮಾಡಲು ಯಾರಿಂದಲೂ ಸಾಧ್ಯವಿಲ್ಲ' ಎಂದು ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಅಶೋಕಕುಮಾರ್ ಪಾಳೇದ ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದ ಅವರು, 'ಪ್ರಜಾಸತ್ತಾತ್ಮಕ ಹಾಗೂ ಜಾತ್ಯತೀತ ಮೌಲ್ಯಗಳನ್ನು ವಿಶ್ವದ ಬೇರೆ ಯಾವ ಸಂವಿಧಾನದಲ್ಲಿಯೂ ಕಾಣಲು ಸಾಧ್ಯವಿಲ್ಲ. ಸಂವಿಧಾನದ ಆಶಯಗಳನ್ನು ಪ್ರತಿಯೊಬ್ಬರಿಗೂ ಮನವರಿಕೆ ಮಾಡಿಕೊಡುವ ಪ್ರಯತ್ನ ಹೆಚ್ಚಾಗಿ ನಡೆಯಬೇಕಿದೆ' ಎಂದು ಹೇಳಿದರು.

An Initiative by:
SOCIAL WELFARE DEPARTMENT
For the Educational, Social & Economic Upliftment of Scheduled Castes

In Association with:

'ಬಸವ ಪ್ರಶಸ್ತಿ'ಗೆ ಪ್ರೊ. ಎಸ್.ಜಿ.ಸಿದ್ಧರಾಮಯ್ಯ ಭಾಜನ

ಕಲಬುರಗಿ: ಇಲ್ಲಿನ ಸುಭಾಷ್ಚಂದ್ರ ಪಾಟೀಲ ಸ್ಮಾರಕ ಜನಕಲ್ಯಾಣ ಟ್ರಸ್ಟ್‌ನಿಂದ ನೀಡುವ 2026ನೇ ಸಾಲಿನ 'ಬಸವ ಪ್ರಶಸ್ತಿ'ಗೆ ಹಿರಿಯ ಸಾಹಿತಿ ಪ್ರೊ. ಎಸ್.ಜಿ. ಸಿದ್ಧರಾಮಯ್ಯ ಭಾಜನರಾಗಿದ್ದಾರೆ.



ಸಿದ್ಧರಾಮಯ್ಯ

ಪ್ರಶಸ್ತಿ ₹50 ಸಾವಿರ ನಗದು, ಪ್ರಶಸ್ತಿ ಪತ್ರ, ಫಲಕವನ್ನು ಒಳಗೊಂಡಿದೆ. ಬೆಂಗಳೂರಿನ ಗಾಂಧಿ ಭವನದಲ್ಲಿ ಮಾರ್ಚ್ 22ರಂದು ಬೆಳಿಗ್ಗೆ 11.30ಕ್ಕೆ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಟ್ರಸ್ಟ್ ಅಧ್ಯಕ್ಷ ಶರಣಗೌಡ ಪಾಟೀಲ ಪಾಳಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶ್ರೀರಾಮಕೃಷ್ಣ ಆಶ್ರಮಕ್ಕೆ 'ನಾರೇಯಣ ಪ್ರಶಸ್ತಿ'

ಮೈಸೂರು: ನಗರದ ಯೋಗಿನಾರೇಯಣ ಯತೀಂದ್ರರ ಪ್ರಚಾರ ಸಭಾದಿಂದ 2026ನೇ ಸಾಲಿನ 'ನಾರೇಯಣ ಪ್ರಶಸ್ತಿ'ಗೆ ಇಲ್ಲಿನ ಶ್ರೀರಾಮಕೃಷ್ಣ ಆಶ್ರಮವನ್ನು ಆಯ್ಕೆ ಮಾಡಲಾಗಿದೆ.

ಪ್ರಶಸ್ತಿ ಪ್ರಶಂಸಾಪತ್ರ, ಸ್ಮರಣ ಫಲಕ ಹಾಗೂ ₹ 50 ಸಾವಿರ ಒಳಗೊಂಡಿದೆ. ಮಾರ್ಚ್ 22ರಂದು ಬೆಳಿಗ್ಗೆ 11ಕ್ಕೆ ಚಾಮರಾಜನಗರದ ವರನಟ ಡಾ.ರಾಜಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ನಡೆಯುವ ಸಮಾರಂಭದಲ್ಲಿ ಪ್ರದಾನ ಮಾಡಲಾಗುವುದು. ಆಶ್ರಮದ ಪರವಾಗಿ ಸ್ವಾಮಿ ಮುಕ್ತಿದಾನಂದ ಪ್ರಶಸ್ತಿ ಸ್ವೀಕರಿಸುವರು.

ಶತಮಾನೋತ್ಸವ ಸಂಭ್ರಮದಲ್ಲಿರುವ ಈ ಆಶ್ರಮವು ಆಧ್ಯಾತ್ಮಿಕ, ಶಿಕ್ಷಣ, ಸಂಸ್ಕೃತಿ ಹಾಗೂ ಸಮಾಜಸೇವಾ ಕ್ಷೇತ್ರಗಳಲ್ಲಿ ಮಾಡುತ್ತಿರುವ ಅಪೂರ್ವ ಸಾಧನೆಯನ್ನು ಪರಿಗಣಿಸಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಸಭಾದ ಪ್ರಧಾನ ಸಂಚಾಲಕ ಎಚ್.ವಿ. ವೆಂಕಟೇಶ್ ತಿಳಿಸಿದ್ದಾರೆ.

ಸುತ್ತೂರು ಮಠಾಧೀಶ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಮಾರಂಭದ ಸಾನ್ನಿಧ್ಯ ವಹಿಸುವರು. ಕೈವಾರ ಶ್ರೀಕ್ಷೇತ್ರದ ಧರ್ಮಾಧಿಕಾರಿ ಎಂ.ಆರ್. ಜಯರಾಮ್, ವಿಧಾನಪರಿಷತ್ ಸದಸ್ಯ ಎಂ.ಆರ್ ಸೀತಾರಾಮ್, ಚಾಮರಾಜನಗರದ ವಿಶ್ವವಿ-ದ್ಯಾಲಯದ ಕುಲಪತಿ ಎಂ.ಆರ್. ಗಂಗಾಧರ್, ಅಲ್ಲಿನ ಜಿಲ್ಲಾಧಿಕಾರಿ ಶ್ರೀರೂಪಾ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ. ಮುತ್ತುರಾಜು ಪಾಲ್ಗೊಳ್ಳುವರು. ಯೋಗಿನಾರೇಯಣ ಯತೀಂದ್ರರ ಕುರಿತು ಲೇಖಕಿ ಎಂ.ಎನ್. ಕವಿತಾ ಮಾತನಾಡುವರು ಎಂದು ಮಾಹಿತಿ ನೀಡಿದ್ದಾರೆ.

105 ಸಿಲಿಂಡರ್ ಜಪ್ತಿ, ನಾಲ್ವರ ಬಂಧನ

ಬೀದರ್: ಕಾಳಸಂತೆಯಲ್ಲಿ ಮಾರಲು ತಾಲ್ಲೂಕಿನ ಜನವಾಡ ಬಳಿ ಅಕ್ರಮವಾಗಿ ದಾಸ್ತಾನು ಮಾಡಿದ್ದ 105 ಅಡುಗೆ ಅನಿಲದ ಸಿಲಿಂಡರ್‌ಗಳನ್ನು ಪೊಲೀಸರು ಜಪ್ತಿ ಮಾಡಿ, ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ. 'ಜನವಾಡ ಠಾಣೆ ಪೊಲೀಸರು ಭಾನುವಾರ ಸಂಜೆ ಕಾರ್ಯಾಚರಣೆ ನಡೆಸಿ, ಗೃಹ ಮತ್ತು ವಾಣಿಜ್ಯ ಬಳಕೆಯ ಸಿಲಿಂಡರ್‌ಗಳನ್ನು ಪತ್ತೆ ಹಚ್ಚಿದರು. ಸಿಲಿಂಡರ್‌ಗಳು ಹಾಗೂ ₹16 ಲಕ್ಷ ಮೌಲ್ಯದ 2 ವಾಹನ ಜಪ್ತಿ ಮಾಡಿದೆ' ಎಂದು ಹೆಚ್ಚುವರಿ ಎಸ್ಪಿ ಚಂದ್ರಕಾಂತ ಪೂಜಾರಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ವಚನಾನಂದಶ್ರೀ ಪೀಠ ತ್ಯಜಿಸಲಿ'

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಗುರುಪೀಠದ ವಚನಾನಂದ ಶ್ರೀಗಳು ಪೀಠಾರೋಹಣದ ಸಂದರ್ಭದಲ್ಲಿ ತಿಳಿಸಿದಂತೆ ಬೆಂಗಳೂರಿನ ಶ್ವಾಸ ಯೋಗ ಪೀಠವನ್ನು ತ್ಯಜಿಸಬೇಕು. ಇದೇ 24ರಂದು ನಡೆಯಲಿರುವ ಟ್ರಸ್ಟ್ ಸಭೆಯಲ್ಲಿ ಈ ಕುರಿತ ಅಂತಿಮ ನಿರ್ಧಾರ ಪ್ರಕಟಿಸಬೇಕು' ಎಂದು ಗುರುಪೀಠದ ಟ್ರಸ್ಟ್‌ನ ಮುಖಂಡರು ಗಡುವು ನೀಡಿದರು.

'ಸ್ವಾಮೀಜಿಯವರು ಶ್ವಾಸ ಯೋಗ ಪೀಠ ತ್ಯಜಿಸಿ ಪೂರ್ಣ ಪ್ರಮಾಣದಲ್ಲಿ ಸಮುದಾಯದ ಸಂಘಟನೆಯಲ್ಲಿ ತೊಡ-ಗಿಸಿಕೊಳ್ಳಬೇಕು. ಟ್ರಸ್ಟ್‌ನ ಸಭೆಗಳಲ್ಲಿ ಈ ಬಗ್ಗೆ ನಿರ್ಧರಿಸಿದಂತೆ ಈಗಾಗಲೇ 6 ಬಾರಿ ಶ್ರೀಗಳಿಗೆ ಈ ಕುರಿತು ತಿಳಿಸಿದ್ದರೂ, ಅವರು ಅಂತಿಮ ನಿರ್ಧಾರ ಕೈಗೊಂಡಿಲ್ಲ. ತಿಂಗಳಲ್ಲಿ ಒಂದೆರಡು ದಿನ ಮಾತ್ರ ಗುರುಪೀಠದಲ್ಲಿರುವ ಅವರು ಬಹುತೇಕ ದಿನ ಬೇರೆಡೆ ಇರುವುದನ್ನು ಒಪ್ಪಲು ಸಾಧ್ಯವಿಲ್ಲ. ಮಠವನ್ನು ಅತಿಥಿಗೃಹ (ಗೆಸ್ಟ್‌ಹೌಸ್) ಮಾಡಿಕೊಳ್ಳಲು ಬಿಡುವುದಿಲ್ಲ' ಎಂದು ಟ್ರಸ್ಟ್‌ನ ಪ್ರಧಾನ ಧರ್ಮದರ್ಶಿ ಬಿ.ಸಿ.ಉಮಾಪತಿ ಅವರು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು. 'ಒಂದು ವಾರ ಎಂದು ಹೇಳಿ ವಿದೇಶ ಪ್ರವಾಸ ಕೈಗೊಳ್ಳುವ ಶ್ರೀಗಳು, 40 ದಿನ ಕಳೆದರೂ ವಾಪಸ್ ಬರುವುದಿಲ್ಲ. ಸಮುದಾಯದ ಬಡಜನರ ಬಗೆಗಿನ ಕಾಳಜಿಯಾಗಲೀ, ಸಂಸ್ಕಾರವಾಗಲೀ ಅವರಲ್ಲಿ ಕಾಣುತ್ತಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

'ಟ್ರಸ್ಟ್‌ನಿಂದ ಅವ್ಯವಹಾರ ನಡೆದಿಲ್ಲ. ಪ್ರತೀ ವರ್ಷವೂ ಸರ್ಕಾರಕ್ಕೆ, ಸಮುದಾಯಕ್ಕೆ ಲೆಕ್ಕ ನೀಡಿದ್ದೇವೆ. ಶ್ರೀಗಳನ್ನು ಗುರುಪೀಠದಿಂದ ತೆಗೆಯುವ ಉದ್ದೇಶವಿಲ್ಲ. ಅವರು ಶ್ವಾಸ ಯೋಗ ಪೀಠ ತ್ಯಜಿಸಿ, ಇಲ್ಲಿಯೇ ಉಳಿಯುವ ವಿಶ್ವಾಸವಿದೆ. ತ್ಯಜಿಸದಿದ್ದರೆ, ಟ್ರಸ್ಟ್‌ನ ಮುಖಂಡರು ಸಭೆ ನಡೆಸಿ ಅಂತಿಮ ನಿರ್ಧಾರವನ್ನು ಕೈಗೊಳ್ಳುತ್ತೇವೆ' ಎಂದು ಹೇಳಿದರು.

'ಹಾಲಿ ಟ್ರಸ್ಟಿಗಳನ್ನು ತೆಗೆದು ಅವರು ಸೂಚಿಸಿದವರನ್ನು ಟ್ರಸ್ಟಿಗಳನ್ನಾಗಿ ಮಾಡಲು ಶ್ರೀಗಳು ಹೇಳಿದ್ದರು. ಅವರ ಮಾತಿಗೆ ನಾವು ಒಪ್ಪದಿದ್ದಾಗ, ಲೆಕ್ಕಪತ್ರದ ವಿಚಾರ ತಂದಿದ್ದಾರೆ' ಎಂದರು. ಟ್ರಸ್ಟ್‌ನ ಕಾರ್ಯದರ್ಶಿ ಜ್ಯೋತಿ ಪ್ರಕಾಶ್, ಮುಖಂಡರಾದ ಚಂದ್ರಶೇಖರ್ ಪೂಜಾರ್, ಬಸವರಾಜ ದಿಂಡೂರು, ಪಿ.ಡಿ. ಶಿರೂರು, ನಾಗಣ್ಣ, ಹಾವೇರಿ ಮಹೇಶ್, ಎಸ್.ಎಸ್. ಪಾಟೀಲ, ಪರಮೇಶ್ ಪಟ್ಟಣಶೆಟ್ಟಿ, ಕಿಚಡಿ ಕೊಟ್ರೇಶ್ ಮತ್ತಿತರರು ಇದ್ದರು.

ಕಬ್ಬು ಬೆಳೆಗಾರರಿಗೆ ಕಡಿಮೆ ಬಿಲ್ ಪಾವತಿ: ಬಾಗಲಕೋಟೆ ಜಿಲ್ಲೆಯಲ್ಲಿ ಹೆಚ್ಚು

10 ಸಕ್ಕರೆ ಕಾರ್ಖಾನೆಗೆ ನೋಟಿಸ್

• ಇಮಾಮ್‌ಹುಸೇನ್ ಗೂಡುನವರ

ಬೆಳಗಾವಿ: ಪ್ರಸಕ್ತ ಹಂಗಾಮಿನಲ್ಲಿ ಕಬ್ಬು ಪೂರೈಸಿದ ರೈತರಿಗೆ ಶೇ 60ಕ್ಕಿಂತ ಕಡಿಮೆ ಬಿಲ್ ಪಾವತಿಸಿದ (ಫೆ.28ರ ವರೆಗೆ) 10 ಸಕ್ಕರೆ ಕಾರ್ಖಾನೆಗಳಿಗೆ ಸಕ್ಕರೆ ಆಯುಕ್ತರು ನೋಟಿಸ್ ಕೊಟ್ಟಿದ್ದಾರೆ.

ರಾಜ್ಯದಲ್ಲಿ 81 ಸಕ್ಕರೆ ಕಾರ್ಖಾನೆಗಳು 550 ಲಕ್ಷ ಟನ್ ಕಬ್ಬು ನುರಿಸಿ, 47.35 ಲಕ್ಷ ಟನ್ ಲಿ ಸಕ್ಕರೆ ಉತ್ಪಾದಿಸಿವೆ. ಒಟ್ಟು ₹22,171 ಕೋಟಿ ಬಿಲ್ ಪಾವತಿಸಬೇಕಿದ್ದು,₹4,741 ಕೋಟಿ ಬಾಕಿ ಉಳಿಸಿಕೊಂಡಿವೆ.

'ವಿವಿಧ ಕಾರ್ಖಾನೆಗಳು ಬಿಲ್ ಪಾವತಿಸಿದ ಪ್ರಮಾಣ ಶೇ 78ರಷ್ಟಿದೆ. ನೀವು ಶೇ 60ಕ್ಕಿಂತ ಕಡಿಮೆ ಬಿಲ್ ಏಕೆ ಪಾವತಿಸಿದ್ದೀರಿ? ಹಾಗಾದರೆ ನಿಮ್ಮ ಬಳಿ ಇರುವ ಸಕ್ಕರೆಯನ್ನು ನಾವು ವಶಕ್ಕೆ ಪಡೆದು ಹರಾಜು ಮಾಡಿ, ರೈತರಿಗೇಕೆ ಹಣ ಕೊಡಬಾರದು' ಎಂದು ನೋಟಿಸ್‌ನಲ್ಲಿ ಎಚ್ಚರಿಸಲಾಗಿದೆ.

ಕೃಷಿ ಇಲಾಖೆ ಜಂಟಿನಿರ್ದೇಶಕ, ಆಹಾರ ನಾಗರಿಕ ಸರಬರಾಜು ಇಲಾಖೆ ಉಪನಿರ್ದೇಶಕ ಮತ್ತು ತಹಶೀಲ್ದಾರ್ ಸೇರಿ ಮೂವರು ಅಧಿಕಾರಿಗಳ ತಂಡ ರಚಿಸಲಾಗಿದೆ. ತಂಡ ಆಯಾ ಕಾರ್ಖಾನೆಗೆ ಹೋಗಿ, ಕಬ್ಬು ನುರಿಸಿದ ಪ್ರಮಾಣ, ಸಕ್ಕರೆ ಉತ್ಪಾದನೆ ಪ್ರಮಾಣ, ಬಾಕಿ ಇರುವ ಬಿಲ್ ಮತ್ತಿತರ ಮಾಹಿತಿ ಸಂಗ್ರಹಿಸಿ ವರದಿ ಮಾಡಲಿದೆ. ಬಾಕಿ ನೀಡುವ ಪ್ರಕ್ರಿಯೆ ತ್ವರಿತಗೊಳಿಸಲು ಕ್ರಮ ವಹಿಸಲಿದೆ.

ವಿಜಯಪುರದಲ್ಲೇ ಹೆಚ್ಚು: ಶೇ 60ಕ್ಕಿಂತ ಕಡಿಮೆ ಬಿಲ್ ಪಾವತಿಸಿರುವ 10 ಕಾರ್ಖಾನೆಗಳಲ್ಲಿ ವಿಜಯಪುರ ಜಿಲ್ಲೆಯಲ್ಲೇ ನಾಲ್ಕು ಇವೆ. ಬೀದರ್‌ನಲ್ಲಿ ಎರಡು, ಬೆಳಗಾವಿ, ಬಾಗಲಕೋಟೆ, ಯಾದಗಿರಿ, ಕಲಬುರಗಿಯಲ್ಲಿ ತಲಾ ಒಂದು ಕಾರ್ಖಾನೆ ಪಟ್ಟಿಯಲ್ಲಿವೆ.

ಮತ್ತೆ ಹೋರಾಟ: ಹಲವು ಕಾರ್ಖಾನೆಗಳು ಕಬ್ಬು ನುರಿಸುವ ಪ್ರಕ್ರಿಯೆ ಮುಗಿಸಿ ಎರಡು ತಿಂಗಳಾಗಿದೆ. 18 ಕಾರ್ಖಾನೆಗಳು ಇನ್ನೂ ನುರಿಸುತ್ತಿವೆ. ಬಿಲ್ ಪಾವತಿಗೆ ಆಗ್ರಹಿಸಿ ವಿವಿಧ ಜಿಲ್ಲೆಗಳಲ್ಲಿ ಪ್ರತಿಭಟನೆ ನಡೆದಿದೆ.



ಬಾಕಿ: ಯಾವ ಜಿಲ್ಲೆ, ಎಷ್ಟು? (ಮೊತ್ತ ₹ಕೋಟಿಗಳಲ್ಲಿ)	
ಬಾಗಲಕೋಟೆ	1,680
ಬೆಳಗಾವಿ	1,554
ವಿಜಯಪುರ	744
ಬೀದರ್	286
ಕಲಬುರಗಿ	262

ಕಾರ್ಖಾನೆಗಳಿಗೆ ಮಾರ್ಚ್ 18ರವರೆಗೆ ಗಡುವು ನೀಡಿದ್ದೇವೆ. ಅಷ್ಟರೊಳಗೆ ಬಾಕಿ ನೀಡದಿದ್ದರೆ, ಸರ್ಕಾರ ಸಕ್ಕರೆಯನ್ನು ಜಪ್ತಿ ಮಾಡಿ, ಬಿಲ್ ನೀಡಬೇಕು
ಚೂನಪ್ಪ ಪೂಜೇರಿ, ರೈತ ಮುಖಂಡ

ಶೇ 60ಕ್ಕಿಂತ ಕಡಿಮೆ ಬಿಲ್ ಪಾವತಿಸಿದ ಕಾರ್ಖಾನೆಗಳಿಗೆ ನೋಟಿಸ್ ಕೊಟ್ಟು ಎಚ್ಚರಿಸಿದ್ದೇವೆ. ಉಳಿದ ಕಾರ್ಖಾನೆಗಳಿಗೂ ಬಾಕಿ ಬಿಲ್ ಪಾವತಿಸುವಂತೆ ಸೂಚಿಸಿದ್ದೇವೆ
ಗೋವಿಂದರೆಡ್ಡಿ, ಸಕ್ಕರೆ ಆಯುಕ್ತ

ಪ್ರಧಾನಿ ಬಳಿಗೆ ಸರ್ವಪಕ್ಷ ನಿಯೋಗ

ಒಂದನೇ ಪುಟದಿಂದ...

'ಕೃಷ್ಣಾ ಮೇಲ್ದಂಡೆ, ಮಹದಾಯಿ ಹಾಗೂ ಮೇಕೆದಾಟು ಯೋಜನೆಗಳ ವಿಚಾರದಲ್ಲಿ ಕೇಂದ್ರದ ಮೇಲೆ ನಿರಂತರ ಒತ್ತಡ ಹೇರಲಾಗುತ್ತಿದೆ. ಈ ಯೋಜನೆಗಳಿಗೆ ಅನುಮೋದನೆ ಪಡೆಯಲು ರಾಜಕೀಯ ಒಗ್ಗಟ್ಟು ಪ್ರದರ್ಶಿಸಬೇಕು. ಇದಕ್ಕೆ ಸಂಸದರ ಸಹಕಾರ ಅಗತ್ಯ' ಎಂದರು.

ಎಲ್ಲ ನೀರಾವರಿ ವಿಷಯಗಳಲ್ಲಿ ಸಣ್ಣಪುಟ್ಟ ತೊಡಕುಗಳು ಇವೆ. ಅದನ್ನು ನಿವಾರಿಸಲು ಈ ಸಭೆ ನಡೆಸಲಾಗಿದೆ. ಸಹಕಾರ ನೀಡುವುದಾಗಿ ಎಲ್ಲ ಸಂಸದರು ಭರವಸೆ ನೀಡಿದ್ದಾರೆ ಎಂದು ಹೇಳಿದರು.

'ಬಿಜೆಪಿ ಸಮಯದಲ್ಲಿ ಏನೇನು ಆಗಿತ್ತು. ಈಗ ನಾವು ಹೇಗೆ ಮುಂದುವರಿಸಿದ್ದೇವೆ ಎಂದು ಅವರಿಗೆ ತಿಳಿಸಿದ್ದೇವೆ. ಅವರಿಗೂ ಮನವರಿಕೆಯಾಗಿದೆ. ಕೆಲವೊಂದು ದಾಖಲೆಗಳನ್ನು ತಲುಪಿಸಿದ್ದೇವೆ. ನಮ್ಮ ಸರ್ಕಾರ ಯಾವ ರೀತಿ ಹೆಜ್ಜೆಯಿಟ್ಟಿದೆ ಎಂದು ತಿಳಿಸಿದ್ದೇವೆ' ಎಂದರು.

ಸಂಸದ ಬಸವರಾಜ ಬೊಮ್ಮಾಯಿ ಮಾತನಾಡಿ, 'ನಾಡು, ನುಡಿ, ಜಲ ವಿಚಾರವಾಗಿ ರಾಜ್ಯದ ಹಿತ ದೃಷ್ಟಿಯಿಂದ ಪಕ್ಷಭೇದ ಮರೆತು ಒಂದಾಗಿರುತ್ತೇವೆ. ಸಮಸ್ಯೆಗಳ ನಿವಾರಣೆಗೆ ನಾವು ಕೇಂದ್ರದ ಮೇಲೆ ಒತ್ತಡ ಹೇರುತ್ತೇವೆ' ಎಂದು ಭರವಸೆ ನೀಡಿದರು.

ಸಚಿವರಾದ ಎಚ್.ಕೆ.ಪಾಟೀಲ, ಎಂ.ಬಿ.ಪಾಟೀಲ, ಬೋಸರಾಜು, ರಾಜ್ಯದ 24 ಸಂಸದರು, ಕಾನೂನು ತಜ್ಞರು ಹಾಗೂ ಜಲಸಂಪನ್ಮೂಲ ಇಲಾಖೆಯ ಅಧಿಕಾರಿಗಳು ಸಭೆಯಲ್ಲಿ ಭಾಗಿಯಾಗಿದ್ದರು. ಶಿವಕುಮಾರ್ ಅವರು ಕಾನೂನು ತಜ್ಞರ ಜತೆಗೆ ಸಭೆಗೂ ಮುನ್ನ ಸಮಾಲೋಚನೆ ನಡೆಸಿದರು.



ಸಭೆಯಲ್ಲಿ ಡಿ.ಕೆ. ಶಿವಕುಮಾರ್ ಹಾಗೂ ಜಗದೀಶ ಶೆಟ್ಟರ್ ಚರ್ಚಿಸಿದರು. ಬಸವರಾಜ ಬೊಮ್ಮಾಯಿ ಇದ್ದಾರೆ

ಕೇಂದ್ರ ಸಚಿವರು ಗೈರು

ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ, ಎಚ್.ಡಿ.ಕುಮಾರಸ್ವಾಮಿ, ನಿರ್ಮಲಾ ಸೀತಾರಾಮನ್, ವಿ.ಸೋಮಣ್ಣ ಹಾಗೂ ಶೋಭಾ ಕರಂದ್ಲಾಜೆ ಸಭೆಗೆ ಗೈರಾಗಿದ್ದರು. ರಾಜ್ಯಸಭಾ ಸದಸ್ಯರ ಪೈಕಿ ಸುಧಾಮೂರ್ತಿ, ನಾಸೀರ್ ಹುಸೇನ್ ಹಾಗೂ ಲಹರ್ ಸಿಂಗ್ ಸಿರೋಯಾ ಭಾಗವಹಿಸಿದ್ದರು.

'ಕೇಂದ್ರ ಸಚಿವರ ಜತೆಗೆ ಸಮಾಲೋಚನೆ ನಡೆಸಿಯೇ ಈ ಸಭೆ ನಿಗದಿ ಮಾಡಲಾಗಿತ್ತು. 24 ಸಂಸದರು ಸಭೆಯಲ್ಲಿ ಭಾಗವಹಿಸಿ ಸಲಹೆಗಳನ್ನು ನೀಡಿದ್ದಾರೆ' ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.ಎತ್ತಿನಹೊಳೆ ಯೋಜನೆಗೆ ಪರಿಸರ ಇಲಾಖೆಯ ಅನುಮತಿ ದೊರಕಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ನಾವು ಅನುಮತಿಗಾಗಿ ಕಳೆದ ಒಂದು ವರ್ಷದಿಂದ ಕಾಯುತ್ತಿದ್ದೆವು. ಈಗ ನಾವು ಕೂಡಲೇ ಕೆಲಸ ಮುಂದುವರಿಸುತ್ತೇವೆ. ಈಗಾಗಲೇ ಅರ್ಧ ಕೆಲಸ ಮುಗಿಸಿದ್ದೇವೆ. ಒಂದಷ್ಟು ಷರತ್ತುಗಳನ್ನು ಹಾಕಿದ್ದಾರೆ. ಅದರ ಅನ್ವಯ ನಾವು ಕೆಲಸ ಮಾಡುತ್ತೇವೆ' ಎಂದರು. ದೊಡ್ಡ ಮೊತ್ತದ ದಂಡ ವಿಧಿಸಿರುವ ಬಗ್ಗೆ ಕೇಳಿದಾಗ, 'ಒಂದೊಂದು ಸಲ ಅವರು ಹೇಳಿದಂತೆ ಕೇಳಬೇಕಾಗುತ್ತದೆ. ನಮಗೆ ಯೋಜನೆ ಜಾರಿಗೊಳಿಸುವುದು ಮುಖ್ಯ' ಎಂದರು.

ಕುಕ್ಕೆ: ಅಭಿವೃದ್ಧಿ ಪ್ರಾಧಿಕಾರ ರಚನೆಗೆ ವಿರೋಧ

ಸುಬ್ರಹ್ಮಣ್ಯ (ದಕ್ಷಿಣ ಕನ್ನಡ): ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನ ಅಭಿವೃದ್ಧಿ ಪ್ರಾಧಿಕಾರ ರಚಿಸುವ ರಾಜ್ಯ ಸರ್ಕಾರದ ನಿರ್ಧಾರಕ್ಕೆ ಸ್ಥಳೀಯರು ವಿರೋಧ ವ್ಯಕ್ತ ಪಡಿಸಿದ್ದಾರೆ. ಸುಬ್ರಹ್ಮಣ್ಯ ದೇವಸ್ಥಾನ ಅಭಿವೃದ್ಧಿ ಪ್ರಾಧಿಕಾರ ರಚನೆ ಪ್ರಸ್ತಾವಕ್ಕೆ ವಿರೋಧ ವ್ಯಕ್ತಪಡಿಸಿ ಸುಬ್ರಹ್ಮಣ್ಯದ ಪ್ರಮುಖರು ಮಂಗಳವಾರ ಸಭೆ ನಡೆಸಿದರು. ವ್ಯಾಪಾರಸ್ಥರು, ವಸತಿಗೃಹಗಳ ಮಾಲೀಕರು, ಸಂಘ-ಸಂಘ ಸಂಸ್ಥೆ ಪ್ರಮುಖರು, ಗ್ರಾಮಸ್ಥರು ಭಾಗವಹಿಸಿದ್ದರು.

ಪ್ರಾಧಿಕಾರ ರಚನೆಯಾದಲ್ಲಿ ಇಲ್ಲಿ ಪರವಾನಗಿ, ಕಟ್ಟಡ ನಿರ್ಮಾಣಕ್ಕೆ ಅನುಮತಿ ಪಡೆಯುವ ಮತ್ತಿತರ ನಿಯಮಾವಳಿಗಳೂ ಬದಲಾಗಿ, ಕಠಿಣ ನಿಯಮಗಳು ಜಾರಿಯಾಗಬಹುದು ಎಂದು ಸಭೆಯಲ್ಲಿ ಮಾತನಾಡಿದವರು ಆತಂಕ ವ್ಯಕ್ತಪಡಿಸಿದರು.

ಕುಡಿದು ವಾಹನ ಚಾಲನೆಗೆ ವಿಭಿನ್ನ ಶಿಕ್ಷೆ

ಕಡೂರು (ಚಿಕ್ಕಮಗಳೂರು): ಮದ್ಯಪಾನ ಮಾಡಿ ವಾಹನವನ್ನು ಚಾಲನೆ ಮಾಡಿದ್ದ ಚಾಲಕನಿಗೆ ಇಲ್ಲಿನ ಜೆಎಂಎಫ್‌ಸಿ ನ್ಯಾಯಾಲಯವು ಸಮುದಾಯ ಸೇವೆಯ ಶಿಕ್ಷೆ ವಿಧಿಸಿದೆ. ಪಟ್ಟಣದಲ್ಲಿ ಮಾರ್ಚ್ 11ರಂದು ಮದ್ಯಪಾನ ಮಾಡಿ ಲಾರಿ ಚಾಲನೆ ಮಾಡುತ್ತಿದ್ದ ತಾಲ್ಲೂಕಿನ ಬಿಸಲೇಹಳ್ಳಿ ಗ್ರಾಮದ ರಂಜಿತ್ ಕುಮಾರ್ ಅವರನ್ನು ಪೊಲೀಸರು ಬಂಧಿಸಿದ್ದು, ಪ್ರಕರಣ ದಾಖಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ಜೆಎಂಎಫ್‌ಸಿ ಕೋರ್ಟ್‌ನ ನ್ಯಾಯಾಧೀಶೆ ಅಮ್ರೀನ್ ಸುಲ್ತಾನಾ ಅವರು, ರಂಜಿತ್ ಕುಮಾರ್ ತಪ್ಪು ಒಪ್ಪಿಕೊಂಡಿದ್ದರಿಂದ ಈ ಶಿಕ್ಷೆ ವಿಧಿಸಿದರು.ಮಂಗಳವಾರ ಬೆಳಿಗ್ಗೆ 10ರಿಂದ ಸಂಜೆ 5ರ ವರೆಗೆ ಪಟ್ಟಣದ ಮಲ್ಲೇಶ್ವರ-ಮರವಂಜಿ ವೃತ್ತದಲ್ಲಿ ಸಂಚಾರ ನಿಯಮಗಳ ಬಗ್ಗೆ ಜಾಗೃತಿ ಫಲಕ ಹಿಡಿದು ನಿಲ್ಲುವ ಸಜೆ ವಿಧಿಸಿದರು. ಮೇಲ್ವಿಚಾರಣೆಗೆ ಪೊಲೀಸ್ ಸಿಬ್ಬಂದಿ ನಿಯೋಜಿಸುವಂತೆಯೂ ನಿರ್ದೇಶಿಸಿದ್ದರು.

ಕೋರ್ಟ್ ಆದೇಶದಂತೆ, ಪೊಲೀಸ್ ಸಿಬ್ಬಂದಿ ಮಹೇಂದ್ರ ಕುಮಾರ್ ಮೇಲ್ವಿಚಾರಣೆಯಲ್ಲಿ ರಂಜಿತ್ ಕುಮಾರ್ ಅವರನ್ನು ಮಲ್ಲೇಶ್ವರ ವೃತ್ತದಲ್ಲಿ ನಿಲ್ಲಿಸಲಾಯಿತು. ಈ ವೇಳೆ ಪಿಎಸ್‌ಐ ಸಜಿತ್‌ಕುಮಾರ್ ಸಾರ್ವಜನಿಕರಿಗೆ ಸಂಚಾರ ನಿಯಮಗಳನ್ನು ಪಾಲಿಸುವಂತೆ ಮನವಿ ಮಾಡಿದರು. ಸಿಬ್ಬಂದಿ ರೇಣುಕಮೂರ್ತಿ ಉಪಸ್ಥಿತರಿದ್ದರು.



ಪಟ್ಟಣದ ಮಲ್ಲೇಶ್ವರ ವೃತ್ತದಲ್ಲಿ ನಿಂತು ರಂಜಿತ್ ಕುಮಾರ್ ಅವರು ಜಾಗೃತಿ ಫಲಕ ಪ್ರದರ್ಶಿಸಿದರು. ಪೊಲೀಸ್ ಸಿಬ್ಬಂದಿ ಮಹೇಂದ್ರಕುಮಾರ್ ಉಪಸ್ಥಿತರಿದ್ದರು

ವಿದ್ಯುತ್ ಸ್ಪರ್ಶಿಸಿ ಹುಲಿ ಸಾವು

ಗುಂಡ್ಲುಪೇಟೆ (ಚಾಮರಾಜನಗರ ಜಿಲ್ಲೆ): ತಾಲ್ಲೂಕಿನ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಬಳಿಯ ಪಡಗೂರಿನ ಅಡವಿ ಮಠದ ಬಳಿ ವಿದ್ಯುತ್ ತಂತಿ ಸ್ಪರ್ಶಿಸಿ 2–3 ವರ್ಷ ವಯಸ್ಸಿನ ಹೆಣ್ಣು ಹುಲಿ ಮೃತಪಟ್ಟಿದೆ.

ಪಡಗೂರು ಗ್ರಾಮದ ರವಿಚಂದ್ರ ಭೂಮಿ ಮಾಲೀಕರಾಗಿದ್ದು ಕೇರಳದ ಪರಮೇಶ್ ಎಂಬುವರಿಗೆ ಗುತ್ತಿಗೆ ನೀಡಿದ್ದರು. ಪ್ರಕರಣ ದಾಖಲಿಸಿಕೊಂಡಿರುವ ಅರಣ್ಯ ಇಲಾಖೆ ಅಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ.

ಪಡಗೂರು ಗ್ರಾಮದ ಸುತ್ತಮುತ್ತ ಈಚೆಗೆ ಹುಲಿ ಕಾಣಿಸಿಕೊಂಡಿದ್ದು, ಸೆರೆಗೆ ಅರಣ್ಯ ಇಲಾಖೆ ಬೋನು ಇರಿಸಿತ್ತು. ಥರ್ಮಲ್ ಡ್ರೋನ್ ಕ್ಯಾಮೆರಾ ಮೂಲಕ ಹುಲಿಯ ಚಲನವಲನದ ಮೇಲೆ ನಿಗಾ ಇರಿಸಲಾಗಿತ್ತು. ಸ್ಥಳಕ್ಕೆ ಬಂಡೀಪುರ ಅರಣ್ಯ ಸಂರಕ್ಷಣಾಧಿಕಾರಿ ಪ್ರಭಾಕರನ್, ಎಸಿಎಫ್ ಸುರೇಶ್ ಭೇಟಿ ನೀಡಿ ಪರಿಶೀಲಿಸಿದರು.

ವಾಣಿಜ್ಯ, ವಿದೇಶಾಂಗ ಸಚಿವಾಲಯದ ಕಾರ್ಯವೈಖರಿ

ರಾಜ್ಯಸಭೆಯಲ್ಲಿ ಚರ್ಚೆಗೆ ವಿಪಕ್ಷ ಪಟ್ಟು

ನವದೆಹಲಿ (ಪಿಟಿಐ): ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಅಥವಾ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಕಾರ್ಯವೈಖರಿ ಬಗ್ಗೆ ರಾಜ್ಯಸಭೆಯಲ್ಲಿ ಚರ್ಚೆ ನಡೆಸುವಂತೆ ವಿರೋಧ ಪಕ್ಷಗಳ ಸಂಸದರು ಸಭಾಪತಿ ಸಿ.ಪಿ. ರಾಧಾಕೃಷ್ಣನ್ ಅವರಿಗೆ ಪತ್ರ ಬರೆದು ಒತ್ತಾಯಿಸಿದ್ದಾರೆ.

ಪ್ರಮುಖ ವಿರೋಧ ಪಕ್ಷಗಳ ನಾಯಕರ ಸಹಿಯನ್ನು ಒಳಗೊಂಡ ಪತ್ರದಲ್ಲಿ, ಕಳೆದ 16 ವರ್ಷಗಳಲ್ಲಿ ಈ ಎರಡು ಸಚಿವಾಲಯಗಳ ಬಗ್ಗೆ ಚರ್ಚೆಯೇ ನಡೆದಿಲ್ಲ ಎಂದು ಉಲ್ಲೇಖಿಸಲಾಗಿದೆ. 29 ಸಚಿವಾಲಯಗಳ ಬಗ್ಗೆ 2010ರಿಂದ ಚರ್ಚೆ ನಡೆದಿಲ್ಲ ಎಂದೂ ಹೇಳಲಾಗಿದೆ.

ಪ್ರಸಕ್ತ ಜಾಗತಿಕ ವಿದ್ಯಮಾನ, ಇಂಧನ ಬಿಕ್ಕಟ್ಟು ಮತ್ತು ಭಾರತದ ಎದುರಿಗಿರುವ ಸವಾಲುಗಳನ್ನು ಗಮನದಲ್ಲಿಟ್ಟುಕೊಂಡು ಚರ್ಚೆಗೆ ಅವಕಾಶ ನೀಡಬೇಕು ಎಂದು ಸಂಸದರು ಮನವಿ ಮಾಡಿದ್ದಾರೆ.ಕಾಂಗ್ರೆಸ್, ಡಿಎಂಕೆ, ಟಿಎಂಸಿ, ಎಸ್‌ಪಿ, ಸಿಪಿಎಂ, ಸಿಪಿಐ, ಎಎಪಿ, ಜೆಎಂಎಂ, ಆರ್‌ಜೆಡಿ,, ಎನ್‌ಸಿಪಿ (ಎಸ್‌ಪಿ), ಶಿವಸೇನಾ (ಉದ್ಧವ್ ಬಣ), ಎನ್‌ಸಿ, ಐಯುಎಂಎಲ್ ನಾಯಕರು ಮತ್ತು ಪಕ್ಷೇತರ ಸಂಸದ ಕಪಿಲ್ ಸಿಬಲ್ ಸೇರಿದಂತೆ ಸುಮಾರು ನೂರು ಮಂದಿ ಪತ್ರಕ್ಕೆ ಸಹಿ ಮಾಡಿದ್ದಾರೆ. ಬಜೆಟ್ ಅಧಿವೇಶನದ ಆರಂಭದಿಂದಲೂ ಈ ಎರಡೂ ಸಚಿವಾಲಯಗಳ ಕುರಿತು ಚರ್ಚೆಗೆ ವಿರೋಧಪಕ್ಷಗಳ ಸಂಸದರು ಆಗ್ರಹಿಸುತ್ತಿದ್ದಾರೆ. ಮೇಲ್ಮನೆಯಲ್ಲಿ ಈವರೆಗೆ ಪರಿಸರ, ಅರಣ್ಯ, ಹವಾಮಾನ ಬದಲಾವಣೆ, ಗ್ರಾಮೀಣಾಭಿವೃದ್ಧಿ ಸಚಿವಾಲಯಗಳ ಬಗ್ಗೆ ಚರ್ಚೆ ನಡೆದಿದೆ.

ಜನ ವಿಶ್ವಾಸ ಮಸೂದೆ ವಾಪಸ್

ನವದೆಹಲಿ (ಪಿಟಿಐ): ಜನ ವಿಶ್ವಾಸ (ನಿಬಂಧನೆಗಳ ತಿದ್ದುಪಡಿ) ಮಸೂದೆ–2025 ಅನ್ನು ಲೋಕಸಭೆಯಿಂದ ಸರ್ಕಾರ ಮಂಗಳವಾರ ಹಿಂಪಡೆಯಿತು. ಕೇಂದ್ರ ವಾಣಿಜ್ಯ ಸಚಿವ ಪೀಯೂಷ್ ಗೋಯಲ್ ಅವರು ಮಸೂದೆಯನ್ನು ಹಿಂಪಡೆದರು.ಮಸೂದೆಯ ಪರಿಶೀಲನೆಗೆ ರಚನೆಯಾಗಿರುವ ಆಯ್ಕೆ ಸಮಿತಿಯ ಶಿಫಾರಸುಗಳನ್ನು ಅಳವಡಿಸಿಕೊಂಡ ಬಳಿಕ ಮತ್ತೆ ಅದನ್ನು ಮಂಡಿಸಬಹುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸರ್ವಪಕ್ಷಗಳ ಸಭೆಗೆ ಖರ್ಗೆ ಒತ್ತಾಯ: ಮಹಿಳಾ ಮೀಸಲಾತಿ ಕಾಯ್ದೆ ಕುರಿತು ಚರ್ಚಿಸಲು ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಸರ್ವಪಕ್ಷಗಳ ಸಭೆಯನ್ನು ಶೀಘ್ರವೇ ಕರೆಯಬೇಕು ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರಿಗೆ ತಿಳಿಸಿದ್ದಾರೆ.

8 ಸಂಸದರ ಅಮಾನತು ಆದೇಶ ವಾಪಸ್

ಸ್ಪೀಕರ್ ಓಂ ಬಿರ್ಲಾ ಅವರೊಂದಿಗೆ ಅಶಿಸ್ತಿನಿಂದ ವರ್ತಿಸಿದಕ್ಕಾಗಿ ವಿರೋಧ ಪಕ್ಷಗಳ ಎಂಟು ಸಂಸದರನ್ನು ಅಮಾನತು ಮಾಡಿದ್ದ ಆದೇಶವನ್ನು ಮಂಗಳವಾರ ವಾಪಸ್ ಪಡೆಯಲಾಗಿದೆ.

ಫಲಕಗಳು, ಪೋಸ್ಟರ್‌ಗಳು, ಫೋಟೊಗಳು ಅಥವಾ ಎಐ ಚಿತ್ರಗಳನ್ನು ಸಂಸತ್ ಆವರಣ ಅಥವಾ ಸದನದ ಒಳಗೆ ಪ್ರದರ್ಶಿಸುವಂತಿಲ್ಲ ಎಂದು ಬಿರ್ಲಾ ಅವರು ಎಚ್ಚರಿಕೆ ನೀಡಿದರು. ಬಳಿಕ ಅಮಾನತು ಆದೇಶ ವಾಪಸ್ ಪಡೆಯುವ ನಿರ್ಣಯವನ್ನು ಲೋಕಸಭೆಯು ಧ್ವನಿಮತದ ಮೂಲಕ ಅಂಗೀಕರಿಸಿತು.

ಫೆಬ್ರುವರಿ 3ರಂದು ಎಂಟು ಸಂಸದರನ್ನು ಅಧಿವೇಶನದ ಉಳಿದ ಅವಧಿಗೆ ಅಮಾನತು ಮಾಡಲಾಗಿತ್ತು.

ಬಿಜೆಪಿ, 'ಕೈ'ಗೆ ತಲಾ 1 ಸ್ಥಾನ

ಹರಿಯಾಣ ರಾಜ್ಯಸಭೆ ಚುನಾವಣೆ
ಕಾಂಗ್ರೆಸ್‌ನ 4, ಬಿಜೆಪಿಯ 1 ಮತ ಅಮಾನ್ಯ

ಚಂಡೀಗಢ (ಪಿಟಿಐ): ಹರಿಯಾಣದಲ್ಲಿ ರಾಜ್ಯಸಭೆಯ ಎರಡು ಸ್ಥಾನಗಳಿಗೆ ನಡೆದ ಚುನಾವಣೆಯ ಫಲಿತಾಂಶ ಮಂಗಳವಾರ ಪ್ರಕಟವಾಗಿದ್ದು, ಬಿಜೆಪಿ ಮತ್ತು ಕಾಂಗ್ರೆಸ್ ತಲಾ ಒಂದೊಂದು ಸ್ಥಾನ ಪಡೆದಿವೆ.

ಈ ಮೂಲಕ ರಾಜ್ಯಸಭೆಯ 11 ಸ್ಥಾನಗಳಿಗೆ ಬಿಹಾರ, ಒಡಿಶಾ, ಹರಿಯಾಣದಲ್ಲಿ ಸೋಮವಾರ ನಡೆದ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ 9 ಸ್ಥಾನಗಳನ್ನು ತನ್ನದಾಗಿಸಿಕೊಂಡಿದ್ದರೆ, ಕಾಂಗ್ರೆಸ್ ಮತ್ತು ಬಿಜೆಡಿ ತಲಾ ಒಂದು ಸ್ಥಾನವನ್ನು ಗೆದ್ದುಕೊಂಡಿವೆ.

ಹರಿಯಾಣದಲ್ಲಿ ಮತದಾನ ಗೋಪ್ಯತೆಯ ನಿಯಮ ಉಲ್ಲಂಘನೆ ಆಗಿದೆ ಎಂದು ಕಾಂಗ್ರೆಸ್ ಮತ್ತು ಬಿಜೆಪಿ ಆಕ್ಷೇಪ ವ್ಯಕ್ತಪಡಿಸಿ, ದೂರು ನೀಡಿದ್ದರಿಂದ ಇಲ್ಲಿನ ಫಲಿತಾಂಶ ಸೋಮವಾರ ಪ್ರಕಟವಾಗಿರಲಿಲ್ಲ. ಈ ಆಕ್ಷೇಪಗಳನ್ನು ಚುನಾವಣಾ ಅಧಿಕಾರಿಗಳು ಮಧ್ಯರಾತ್ರಿ ಪರಿಶೀಲಿಸಿದ ಬಳಿಕ ಮತ ಎಣಿಕೆ ನಡೆಸಿ ಫಲಿತಾಂಶ ಪ್ರಕಟಿಸಿದ್ದಾರೆ.

ಅದರ ಪ್ರಕಾರ, ಬಿಜೆಪಿಯ ಸಂಜಯ್ ಭಾಟಿಯಾ ಮತ್ತು ಕಾಂಗ್ರೆಸ್‌ನ ಕರಮ್‌ವೀರ್ ಸಿಂಗ್ ಬೌಧ್ ಆಯ್ಕೆಯಾಗಿದ್ದಾರೆ. ಕಣದಲ್ಲಿದ್ದ ಸ್ವತಂತ್ರ ಅಭ್ಯರ್ಥಿ ಸತೀಶ್ ನಂದಲ್ ಸೋತಿದ್ದಾರೆ.

ಐದು ಮತಗಳು ಅಮಾನ್ಯ: 90 ಸದಸ್ಯರನ್ನು ಹೊಂದಿರುವ ಹರಿಯಾಣ ವಿಧಾನಸಭೆಯಲ್ಲಿ, ಐಎನ್‌ಎಲ್‌ಡಿ (ಇಬ್ಬರು ಶಾಸಕರು) ಮತದಾನದಿಂದ ದೂರ ಉಳಿದಿತ್ತು. ಮತ ಚಲಾಯಿಸಿದವರ ಪೈಕಿ ಐದು ಮತಗಳು ಅಮಾನ್ಯವಾಗಿದ್ದು, ಅದರಲ್ಲಿ ಕಾಂಗ್ರೆಸ್‌ನ ನಾಲ್ಕು ಮತ್ತು ಬಿಜೆಪಿಯ ಒಂದು ಮತ ಸೇರಿವೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

'ಕಾಂಗ್ರೆಸ್‌ನ ಐವರು ಅಡ್ಡ ಮತದಾನ ಮಾಡಿರುವುದು ಗೊತ್ತಾಗಿದೆ. ಹೀಗೆ ಕಾಂಗ್ರೆಸ್‌ಗೆ ದ್ರೋಹ ಬಗೆದವರು ಕಠಿಣ ಕ್ರಮಗಳನ್ನು ಎದುರಿಸಬೇಕಾಗುತ್ತದೆ' ಎಂದು ಹರಿಯಾಣ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ನರೇಂದರ್ ಸಿಂಗ್ ಎಚ್ಚರಿಸಿದ್ದಾರೆ.

'ಕಾಂಗ್ರೆಸ್ ಅಭ್ಯರ್ಥಿಯನ್ನು ಸೋಲಿಸಲು ಬಿಜೆಪಿ ಏನೆಲ್ಲ ಪ್ರಯತ್ನ ನಡೆಸಿತು. ಬಿಜೆಪಿಯ ಶಾಸಕರ ಖರೀದಿ ಯತ್ನ ತಪ್ಪಿಸಲು ಕೆಲ ಹಿರಿಯ ಶಾಸಕರನ್ನು ನಾವು ಹಿಮಾಚಲ ಪ್ರದೇಶಕ್ಕೆ ಸ್ಥಳಾಂತರಿಸಬೇಕಾಯಿತು. ಇದೆಲ್ಲದರ ನಡುವೆ ಪಕ್ಷ ಒಂದು ಸ್ಥಾನ ಗೆಲ್ಲುವ ಮೂಲಕ ಅಗ್ನಿಪರೀಕ್ಷೆಯಲ್ಲಿ ಜಯಿಸಿದೆ' ಎಂದು ಹರಿಯಾಣ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಭೂಪಿಂದರ್ ಸಿಂಗ್ ಹೂಡಾ ಪ್ರತಿಕ್ರಿಯಿಸಿದರು.

ಶೋಕಾಸ್ ನೋಟಿಸ್: ಅಡ್ಡ ಮತ ಚಲಾಯಿಸಿದ ಕಾಂಗ್ರೆಸ್‌ನ ಐವರು ಶಾಸಕರಿಗೆ ಶೋಕಾಸ್ ನೋಟಿಸ್ ನೀಡಲಾಗುವುದು ಎಂದು ಹರಿಯಾಣ ಕಾಂಗ್ರೆಸ್‌ನ ಉಸ್ತುವಾರಿ ಬಿ.ಕೆ. ಹರಿಪ್ರಸಾದ್ ಹೇಳಿದ್ದಾರೆ.

> **ಆಡಳಿತಾರೂಢ ಎನ್‌ಡಿಎ ಒತ್ತಡಕ್ಕೆ ಮಣಿದ ಬಿಹಾರ ಕಾಂಗ್ರೆಸ್‌ನ ಮೂವರು ಶಾಸಕರು ರಾಜ್ಯಸಭಾ ಚುನಾವಣೆ ವೇಳೆ ಗೈರಾಗಿದ್ದಾರೆ**
> **ರಾಜೇಶ್ ಕುಮಾರ್ ರಾಮ್,** ಬಿಹಾರ ಕಾಂಗ್ರೆಸ್ ಸಮಿತಿ ಅಧ್ಯಕ್ಷ


ಹರಿಯಾಣದಿಂದ ರಾಜ್ಯಸಭೆಗೆ ಆಯ್ಕೆಯಾಗಿರುವ ಕಾಂಗ್ರೆಸ್‌ನ ಕರಮ್‌ವೀರ್ ಸಿಂಗ್ ಬೌಧ್ ಅವರು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಭೂಪಿಂದರ್ ಸಿಂಗ್ ಹೂಡಾ ಜತೆ ಮಂಗಳವಾರ ವಿಜಯದ ಸಂಕೇತ ತೋರಿದರು –ಪಿಟಿಐ ಚಿತ್ರ

ಒಡಿಶಾ: ಮೂವರು ಶಾಸಕರ ಅಮಾನತು

ಭುವನೇಶ್ವರ (ಪಿಟಿಐ): ಒಡಿಶಾದಲ್ಲಿ ರಾಜ್ಯಸಭೆಗೆ ಸೋಮವಾರ ನಡೆದ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿದ ತನ್ನ ಮೂವರು ಶಾಸಕರನ್ನು ಕಾಂಗ್ರೆಸ್ ಮಂಗಳವಾರ ಅಮಾನತು ಮಾಡಿದೆ.

ಕಾಂಗ್ರೆಸ್‌ನ ರಮೇಶ್ ಚಂದ್ರ ಜೆನಾ, ದಶರಥಿ ಗಮಾಂಗ್, ಸೋಫಿಯಾ ಫಿರ್ದೌಸ್ ಅಮಾನತುಗೊಂಡ ಶಾಸಕರು. ಅಡ್ಡ ಮತ ಚಲಾಯಿಸುವ ಮೂಲಕ ಬಿಜೆಪಿ ಬೆಂಬಲಿತ ಸ್ವತಂತ್ರ ಅಭ್ಯರ್ಥಿ ದಿಲಿಪ್ ರಾಯ್ ಅವರ ಗೆಲುವಿಗೆ ನೆರವಾದ ಆರೋಪ ಈ ಶಾಸಕರ ಮೇಲಿದೆ.

ಅನರ್ಹತೆಗೆ ಕೋರಿ ಸ್ಪೀಕರ್‌ಗೆ ಪತ್ರ: 'ಈ ಮೂವರೂ ಶಾಸಕರು ಪಕ್ಷದ ವಿಪ್ ಉಲ್ಲಂಘಿಸಿದ್ದಾರೆ. ಅದು ಪಕ್ಷಾಂತರಕ್ಕೆ ಸಮಾನ. ಹೀಗಾಗಿ ಅವರನ್ನು ಅನರ್ಹಗೊಳಿಸಿ' ಎಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ರಾಮಚಂದ್ರ ಕದಮ್ ಅವರು ವಿಧಾನಸಭಾ ಸ್ಪೀಕರ್‌ಗೆ ಪತ್ರ ಬರೆದು ಕೋರಿದ್ದಾರೆ.

ಅನರ್ಹತೆ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಈ ಮೂವರು ಶಾಸಕರಿಗೆ ವಿಧಾನಸಭೆಯಲ್ಲಿ ಬದಲಿ ಆಸನ ವ್ಯವಸ್ಥೆ ಮಾಡುವಂತೆ ಅವರು ಮತ್ತೊಂದು ಪತ್ರದಲ್ಲಿ ಆಗ್ರಹಿಸಿದ್ದಾರೆ.

ರಾಜ್ಯಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನ ಮೂವರು ಶಾಸಕರಷ್ಟೇ ಅಲ್ಲದೆ, ಬಿಜೆಡಿ ಪಕ್ಷದ ಕೆಲ ಶಾಸಕರು ದಿಲೀಪ್ ರಾಯ್ ಪರ ಮತಚಲಾಯಿಸಿದ್ದಾರೆ. ಈ ಮೂಲಕ ಬಿಜೆಡಿ ಮತ್ತು ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ದತ್ತೇಶ್ವರ ಹೋಟಾ ಅವರ ಸೋಲಿಗೆ ಕಾರಣರಾಗಿದ್ದಾರೆ ಎಂಬ ಆರೋಪಗಳಿವೆ.

74 ಹಾಲಿ ಶಾಸಕರನ್ನು ಕೈಬಿಟ್ಟ ಟಿಎಂಸಿ

291 ವಿಧಾನಸಭಾ ಕ್ಷೇತ್ರಗಳ ಅಭ್ಯರ್ಥಿಗಳನ್ನು ಘೋಷಿಸಿದ ಮಮತಾ ಬ್ಯಾನರ್ಜಿ

ಕೋಲ್ಕತ್ತ (ಪಿಟಿಐ): ಹದಿನೈದು ವರ್ಷದಿಂದಲೂ ರಾಜ್ಯದ ಅಧಿಕಾರದ ಚುಕ್ಕಾಣಿ ಹಿಡಿದಿರುವ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷವು, ತನ್ನ 74 ಹಾಲಿ ಶಾಸಕರಿಗೆ ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್ ನಿರಾಕರಿಸಿದೆ.

ಪಶ್ಚಿಮ ಬಂಗಾಳದ 294 ವಿಧಾನಸಭಾ ಕ್ಷೇತ್ರಗಳ ಪೈಕಿ, 291 ಕ್ಷೇತ್ರಗಳಿಗೆ ಟಿಎಂಸಿ ತನ್ನ ಅಭ್ಯರ್ಥಿಗಳನ್ನು ಮಂಗಳವಾರ ಘೋಷಿಸಿದೆ.

ಮುಖ್ಯಮಂತ್ರಿ ಹಾಗೂ ಟಿಎಂಸಿಯ ವರಿಷ್ಠರೂ ಆಗಿರುವ ಮಮತಾ ಬ್ಯಾನರ್ಜಿ ಅವರು ಬಿಡುಗಡೆಗೊಳಿಸಿರುವ ಅಭ್ಯರ್ಥಿಗಳ ಪಟ್ಟಿಯು, ಬಿಜೆಪಿಯೊಂದಿಗೆ ಹೈವೋಲ್ಟೇಜ್ ಚುನಾವಣಾ ಹಣಾಹಣಿಗೆ ವೇದಿಕೆ ಸಿದ್ಧಪಡಿಸಿದೆ.

ಭವಾನಿಪುರ ವಿಧಾನಸಭಾ ಕ್ಷೇತ್ರದಿಂದ ಹಾಲಿ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಹಾಗೂ ಬಿಜೆಪಿ ವರಿಷ್ಠ ಸುವೇಂದು ಅಧಿಕಾರಿ ಸ್ಪರ್ಧಿಸುತ್ತಿದ್ದು, ಟಿಎಂಸಿಯಿಂದ ತಾವೇ ಅಭ್ಯರ್ಥಿಯಾಗುವ ಮೂಲಕ ನೇರ ಹಣಾಹಣಿಗೆ ಮಮತಾ ಅಖಾಡಕ್ಕಿಳಿದಿದ್ದಾರೆ.

ಡಾರ್ಜಿಲಿಂಗ್ ಹಿಲ್ಸ್‌ನ ಮೂರು ಕ್ಷೇತ್ರಗಳನ್ನು ಅನಿತ್ ಥಾಪಾ ನೇತೃತ್ವದ ಭಾರತೀಯ ಗೋರ್ಖಾ ಪ್ರಜಾತಂತ್ರ ಮೋರ್ಚಾ ಪಕ್ಷಕ್ಕೆ ಟಿಎಂಸಿ ಬಿಟ್ಟುಕೊಟ್ಟಿದೆ.

ಹಾಲಿ ವಿಧಾನಸಭೆಯಲ್ಲಿದ್ದ 224 ಶಾಸಕರ ಪೈಕಿ, 135 ಶಾಸಕರಿಗೆ ಮತ್ತೆ ಸ್ಪರ್ಧಿಸಲು ಟಿಕೆಟ್ ಘೋಷಿಸಿದೆ. 15 ಶಾಸಕರನ್ನು ಬೇರೆ ಕ್ಷೇತ್ರಗಳಿಂದ ಕಣಕ್ಕಿಳಿಸಿದ್ದು, 74 ಹಾಲಿ ಶಾಸಕರನ್ನು ಸ್ಪರ್ಧೆಯಿಂದ ಕೈಬಿಟ್ಟಿದೆ. ಆಡಳಿತ ವಿರೋಧಿ ಅಲೆಯನ್ನು ಸಮರ್ಥವಾಗಿ ಎದುರಿಸಲು ಈ ಕ್ರಮ ಕೈಗೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.

'ಬಿಜೆಪಿ ಆಣತಿಯಂತೆ ಆಯೋಗ ಕೆಲಸ'


ಮಮತಾ ಬ್ಯಾನರ್ಜಿ

ಕೋಲ್ಕತ್ತ (ಪಿಟಿಐ): ಚುನಾವಣಾ ಆಯೋಗವು ಬಿಜೆಪಿಯ ಆಣತಿಯಂತೆ ರಾಜ್ಯದ ಹಿರಿಯ ಅಧಿಕಾರಿಗಳು ಮತ್ತು ಪೊಲೀಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿದೆ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮಂಗಳವಾರ ಆರೋಪಿಸಿದರು.

'ರಾಜ್ಯದಲ್ಲಿ ಅಹಿತಕರ ಘಟನೆಗಳು ನಡೆದಲ್ಲಿ ಅದಕ್ಕೆ ಆಯೋಗ ಮತ್ತು ಬಿಜೆಪಿಯೇ ಹೊಣೆ' ಎಂದು ಅವರು ಎಚ್ಚರಿಕೆ ನೀಡಿದರು.

ಟಿಎಂಸಿ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಮುಖ ಆಡಳಿತಾತ್ಮಕ ಹುದ್ದೆಗಳ ಬದಲಾವಣೆಯ ಸಮಯದ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದರು.

'ಈದ್ ಮುನ್ನಾದಿನ ಹಿರಿಯ ಅಧಿಕಾರಿಗಳ ವರ್ಗಾವಣೆ ಮಾಡಿದ್ದೇಕೆ? ಚುನಾವಣೆಗೂ ಮುನ್ನ ಗಲಭೆ ಎಬ್ಬಿಸುವ ಹುನ್ನಾರವೇ' ಎಂದು ಪ್ರಶ್ನಿಸಿದರು.

'ಬಿಜೆಪಿಗೆ ನೆರವು ನೀಡಲೆಂದೇ ರಾಜ್ಯದ ಹೊರಗಿನ ಅಧಿಕಾರಿಗಳನ್ನು ಕರೆತರಲಾಗಿದೆ. ಆಯೋಗವು ಬಿಜೆಪಿ ಪರವಾಗಿ ಕೆಲಸ ಮಾಡುತ್ತಿದೆ. ಅದು ನೇರವಾಗಿ ಬಿಜೆಪಿ ಪರ ಪ್ರಚಾರ ಮಾಡಲಿ' ಎಂದು ಹರಿಹಾಯ್ದರು.

1,111 ಚುನಾವಣಾ ವೀಕ್ಷಕರ ನೇಮಿಸಿದ ಆಯೋಗ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಸ್ಸಾಂ, ಕೇರಳ, ಪುದುಚೇರಿ, ತಮಿಳುನಾಡು, ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆ ಹಾಗೂ ಆರು ರಾಜ್ಯಗಳ ಉಪ ಚುನಾವಣೆಗೆ ಚುನಾವಣಾ ಆಯೋಗವು 1,111 ವೀಕ್ಷಕರನ್ನು ನಿಯೋಜಿಸಿದೆ.

ಬುಧವಾರವೇ ನಿಯೋಜಿತ ಕ್ಷೇತ್ರದಲ್ಲಿ ಕರ್ತವ್ಯಕ್ಕೆ ಹಾಜರಾಗುವಂತೆ ಅದು ತಿಳಿಸಿದೆ. 1,111 ವೀಕ್ಷಕರ ಪೈಕಿ 557 ಮಂದಿ ಸಾಮಾನ್ಯ ವೀಕ್ಷಕರು, 188 ಪೊಲೀಸ್ ವೀಕ್ಷಕರು, 366 ಮಂದಿ ಖರ್ಚು–ವೆಚ್ಚ ವೀಕ್ಷಕರು. ಪ್ರಜಾಪ್ರತಿನಿಧಿ ಕಾಯ್ದೆ–1951ರ ಸೆಕ್ಷನ್ 20ಬಿ ಮತ್ತು ಸಂವಿಧಾನದ 324ನೇ ವಿಧಿ ಅಡಿಯಲ್ಲಿ ಆಯೋಗವು ವೀಕ್ಷಕರನ್ನು ನೇಮಕ ಮಾಡಿದೆ.

'ವೀಕ್ಷಕರು ಆಯೋಗದ ಕಣ್ಣು, ಕಿವಿಯಂತೆ ಕಾರ್ಯ ನಿರ್ವಹಿಸಲಿದ್ದಾರೆ' ಎಂದು ಅಧಿಕೃತ ಹೇಳಿಕೆ ತಿಳಿಸಿದೆ.

ಪಶ್ಚಿಮ ಬಂಗಾಳದಲ್ಲಿ ಸಾಮಾನ್ಯ ವೀಕ್ಷಕರಾಗಿ 294 ಅಧಿಕಾರಿಗಳನ್ನು, ಪೊಲೀಸ್ ವೀಕ್ಷಕರಾಗಿ 84 ಮಂದಿಯನ್ನು ಮತ್ತು 100 ಮಂದಿಯನ್ನು ಖರ್ಚು–ವೆಚ್ಚ ವೀಕ್ಷಕರಾಗಿ ನಿಯೋಜಿಸಲಾಗಿದೆ. ತಮಿಳುನಾಡಿನಲ್ಲಿ 136 ಸಾಮಾನ್ಯ ವೀಕ್ಷಕರು, 40 ಪೊಲೀಸ್ ವೀಕ್ಷಕರು ಮತ್ತು 151 ಖರ್ಚು ವೆಚ್ಚ ವೀಕ್ಷಕರನ್ನು ನಿಯೋಜಿಸಲಾಗಿದೆ.

ಅಸ್ಸಾಂ ಮತ್ತು ಕೇರಳದಲ್ಲಿ ತಲಾ 51 ಸಾಮಾನ್ಯ ವೀಕ್ಷಕರು, 35 ಪೊಲೀಸ್ ವೀಕ್ಷಕರು ಮತ್ತು 50 ಖರ್ಚು ವೆಚ್ಚ ವೀಕ್ಷಕರನ್ನು ನೇಮಕ ಮಾಡಲಾಗಿದೆ. ಪುದುಚೆರಿಯಲ್ಲಿ 17 ಸಾಮಾನ್ಯ ವೀಕ್ಷಕರು, ನಾಲ್ವರು ಪೊಲೀಸ್ ವೀಕ್ಷಕರು ಮತ್ತು 17 ಖರ್ಚು ವೆಚ್ಚ ವೀಕ್ಷಕರನ್ನು ಆಯೋಗ ನೇಮಕ ಮಾಡಿದೆ.

ಅಧಿಕಾರಿಗಳ ವರ್ಗಾವಣೆ

ಚುನಾವಣೆ ಹೊಸ್ತಿಲಿನಲ್ಲಿರುವ ಪಶ್ಚಿಮ ಬಂಗಾಳದಲ್ಲಿ ಪ್ರಮುಖ ಅಧಿಕಾರಿಗಳ ವರ್ಗಾವಣೆ ವಿಷಯ ರಾಜಕೀಯ ವಾಕ್ಸಮರಕ್ಕೆ ಕಾರಣವಾಗಿರುವ ನಡುವೆಯೇ ಚುನಾವಣಾ ಆಯೋಗವು ಮಂಗಳವಾರ ಮತ್ತೆ 19 ಮಂದಿ ಹಿರಿಯ ಪೊಲೀಸ್ ಅಧಿಕಾರಿಗಳ ವರ್ಗಾವಣೆಗೆ ಆದೇಶಿಸಿದೆ.

ಕೇರಳದಲ್ಲೂ ವರ್ಗ

ತಿರುವನಂತಪುರ (ಪಿಟಿಐ): ಏಪ್ರಿಲ್ 9ರಂದು ಕೇರಳದಲ್ಲಿ ವಿಧಾನಸಭಾ ಚುನಾವಣೆ ನಡೆಯಲಿದ್ದು, ಅದರ ಸಿದ್ಧತೆಯ ಭಾಗವಾಗಿ ಐಎಎಸ್, ಐಪಿಎಸ್, ಕೆಎಎಸ್ ಅಧಿಕಾರಿಗಳೂ ಸೇರಿದಂತೆ ಕೇರಳದ ಹಲವು ಉನ್ನತ ಅಧಿಕಾರಿಗಳ ವರ್ಗಾವಣೆಗೆ ಚುನಾವಣಾ ಆಯೋಗ ಮಂಗಳವಾರ ಆದೇಶಿಸಿದೆ.

ಟ್ವೆಂಟಿ20 ಪಕ್ಷ: ನಟಿಯರು ಕಣಕ್ಕೆ

ತಿರುವನಂತಪುರ: ಕೇರಳ ವಿಧಾನಸಭಾ ಚುನಾವಣೆಯಲ್ಲಿ ಕೈಟೆಕ್ಸ್ ಸಮೂಹದ ಟ್ವೆಂಟಿ20 ಪಕ್ಷವು ಈ ಬಾರಿ ಸಿನಿಮಾ ನಟರನ್ನು ಮತ್ತು ರಿಯಾಲಿಟಿ ಶೋನಲ್ಲಿ ಜನಪ್ರಿಯತೆ ಪಡೆದವರನ್ನು ಕಣಕ್ಕಿಳಿಸಲಿದೆ.

ಕೊಚ್ಚಿಯ ಕೆಲ ಸ್ಥಳೀಯ ಸಂಸ್ಥೆಗಳಲ್ಲಿ ಅಧಿಕಾರ ಹೊಂದಿರುವ ಟ್ವೆಂಟಿ20 ಇತ್ತೀಚೆಗೆ ಎನ್‌ಡಿಎ ಮೈತ್ರಿಕೂಟಕ್ಕೆ ಸೇರ್ಪಡೆಗೊಂಡಿದೆ.

ನಟಿ ವೀಣಾ ನಾಯರ್, ಸೋಷಿಯಲ್ ಮೀಡಿಯಾ ಇನ್‌ಫ್ಲುಯೆನ್ಸರ್, ಚಿತ್ರ ನಿರ್ಮಾಪಕ ಅಖಿಲ್ ಮರಾರ್, ಸೋಷಿಯಲ್ ಮೀಡಿಯಾ ಇನ್‌ಫ್ಲುಯೆನ್ಸರ್ ಪ್ರಾಮಿ ಕುರಿಯಾಕೋಸೆ, ನಟಿ ಲಕ್ಷ್ಮಿ ಪ್ರಿಯಾ ಅವರು ಚುನಾವಣೆಯಲ್ಲಿ ಸ್ಪರ್ಧಿಸಲಿದ್ದಾರೆ.

ಮಾಜಿ ಮುಖ್ಯಮಂತ್ರಿ, ಕಾಂಗ್ರೆಸ್ ನಾಯಕ ಉಮ್ಮನ್ ಚಾಂಡಿ ಅವರ ಅಳಿಯ ವರ್ಗೀಸ್ ಜಾರ್ಜ್ ಕೂಡ ಟ್ವೆಂಟಿ20 ಪಕ್ಷದಿಂದ ಸ್ಪರ್ಧಿಸಲಿದ್ದಾರೆ.

ಕೇರಳ: ತಂದೆ–ಮಗನಿಗೆ ಬಿಜೆಪಿ ಟಿಕೆಟ್

ಕೊಟ್ಟಾಯಂ (ಕೇರಳ) (ಪಿಟಿಐ): ದಕ್ಷಿಣ ಕೊಟ್ಟಾಯಂ ಜಿಲ್ಲೆಯ ಕ್ರಿಶ್ಚಿಯನ್ ಪ್ರಾಬಲ್ಯದ ಎರಡು ಕ್ಷೇತ್ರಗಳಲ್ಲಿ ಎನ್‌ಡಿಎ ಅಭ್ಯರ್ಥಿಗಳಾಗಿ ಹಿರಿಯ ರಾಜಕಾರಣಿ ಪಿ.ಸಿ. ಜಾರ್ಜ್ ಮತ್ತು ಅವರ ಮಗ ಶೋನ್ ಜಾರ್ಜ್‌ಗೆ ಬಿಜೆಪಿ ಟಿಕೆಟ್ ನೀಡಿದೆ. ಕೇರಳ ವಿಧಾನಸಭಾ ಚುನಾವಣೆ ಏಪ್ರಿಲ್ 9ರಂದು ನಡೆಯಲಿದೆ.

ಬಿಜೆಪಿ ಸೋಮವಾರ ತನ್ನ ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡಿದ್ದು, ತಂದೆ–ಮಗನನ್ನು ಕ್ರಮವಾಗಿ ಪೂಂಜಾರ್ ಮತ್ತು ಪಾಲಾ ಕ್ಷೇತ್ರಗಳಲ್ಲಿ ಕಣಕ್ಕಿಳಿಸಿದೆ. ಪಿ.ಸಿ. ಜಾರ್ಜ್ ಪ್ರಸ್ತುತ ಬಿಜೆಪಿಯ ರಾಷ್ಟ್ರೀಯ ಮಂಡಳಿಯ ಸದಸ್ಯರಾಗಿದ್ದು, ಶೋನ್ ಜಾರ್ಜ್ ರಾಜ್ಯ ಬಿಜೆಪಿ ಉಪಾಧ್ಯಕ್ಷರಾಗಿದ್ದಾರೆ.

ಮೂರು ದಶಕಗಳಿಗೂ ಹೆಚ್ಚು ಕಾಲ ಕೇರಳ ವಿಧಾನಸಭೆಯ ಸದಸ್ಯರಾಗಿರುವ ಪಿ.ಸಿ. ಜಾರ್ಜ್ ಅವರು ಏಳು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಕೇರಳ ಕಾಂಗ್ರೆಸ್‌ನ ವಿವಿಧ ಬಣಗಳಲ್ಲಿ ಕಾರ್ಯನಿರ್ವಹಿಸಿದ್ದ ಅವರು, ನಂತರ ಜನಪಕ್ಷಂ (ಜಾತ್ಯತೀತ) ಎಂಬ ಪಕ್ಷವನ್ನು ಸ್ಥಾಪಿಸಿದ್ದರು. 2024ರ ಲೋಕಸಭಾ ಚುನಾವಣೆಗೆ ಮುನ್ನ ಅವರ ಪಕ್ಷವನ್ನು ಬಿಜೆಪಿ–ಎನ್‌ಡಿಎ ಜೊತೆ ವಿಲೀನಗೊಳಿಸಲಾಗಿತ್ತು.

ಮಾಜಿ ಕ್ರಿಕೆಟಿಗ ಟಿಎಂಸಿಗೆ ಸೇರ್ಪಡೆ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಮಾಜಿ ಕ್ರಿಕೆಟಿಗ ಶಿಬ್ ಶಂಕರ್ ಪಾಲ್, ಪ್ರಾಧ್ಯಾಪಕಿ, ಸಂತಾಲ ಬುಡಕಟ್ಟು ಸಮುದಾಯದ ತನುಶ್ರೀ ಹಂಸದಾ ಮತ್ತು ಮುಸ್ಲಿಂ ವಿದ್ವಾಂಸ ಎಂ.ಡಿ ಮುಫ್ತಿ ಅಬ್ದುಲ್ ಮತೀನ್ ಅವರು ಮಂಗಳವಾರ ತೃಣಮೂಲ ಕಾಂಗ್ರೆಸ್‌ಗೆ(ಟಿಎಂಸಿ) ಸೇರ್ಪಡೆಗೊಂಡಿದ್ದಾರೆ.

ಪಶ್ಚಿಮ ಬಂಗಾಳದ ಹಣಕಾಸು ಸಚಿವೆ ಚಂದ್ರಿಮಾ ಭಟ್ಟಾಚಾರ್ಯ ಅವರು ಮೂವರನ್ನೂ ಪಕ್ಷಕ್ಕೆ ಬರಮಾಡಿಕೊಂಡರು.

'ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಬುಡಕಟ್ಟು ಸಮುದಾಯಗಳ ಸಬಲೀಕರಣವೇ ಮಮತಾ ಬ್ಯಾನರ್ಜಿ ಸರ್ಕಾರದ ಆದ್ಯತೆ' ಎಂದು ಚಂದ್ರಿಮಾ ಹೇಳಿದರು.

ಸುವೇಂದು ಆಪ್ತ ಪವಿತ್ರಾ ಮತ್ತೆ ಟಿಎಂಸಿಗೆ ಸೇರ್ಪಡೆ

ಕೋಲ್ಕತ್ತ (ಪಿಟಿಐ): ಬಿಜೆಪಿ ಹಿರಿಯ ನಾಯಕ ಸುವೇಂದು ಅಧಿಕಾರಿ ಅವರ ಆಪ್ತ ಹಾಗೂ ಬಿಜೆಪಿ ಬೆಂಬಲಿತ ಅಭ್ಯರ್ಥಿಯಾಗಿದ್ದ ಮಾಜಿ ಪಂಚಾಯತ್ ಮುಖ್ಯಸ್ಥ ಪವಿತ್ರಾ ಕರ್ ಅವರು ಮಂಗಳವಾರ ಮತ್ತೆ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷಕ್ಕೆ ಸೇರ್ಪಡೆಯಾಗಿದ್ದಾರೆ.

ನಂದಿಗ್ರಾಮದಲ್ಲಿ ಸುವೇಂದು ಅವರ ಪ್ರತಿಸ್ಪರ್ಧಿಯಾಗಿ ಪವಿತ್ರಾ ಅವರೇ ಕಣಕ್ಕಿಳಿಯಬಹುದು ಎಂಬ ಊಹಾಪೋಹಗಳ ನಡುವೆಯೇ ಈ ಬೆಳವಣಿಗೆ ನಡೆದಿರುವುದು ಮಹತ್ವ ಪಡೆದಿದೆ.

ಟಿಎಂಸಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಅವರ ಸಮ್ಮುಖದಲ್ಲಿ ಪವಿತ್ರಾ ಪಕ್ಷಕ್ಕೆ ಸೇರ್ಪಡೆಯಾಗಿದ್ದಾರೆ. ಸಾಮಾಜಿಕ ಮಾಧ್ಯಮದಲ್ಲಿ ಈ ಬಗ್ಗೆ ಟಿಎಂಸಿ ಪೋಸ್ಟ್ ಮಾಡಿದ್ದು, 'ಬಿಜೆಪಿಯ ಜನವಿರೋಧಿ ನೀತಿಗಳಿಂದ ಪವಿತ್ರಾ ಬೇಸತ್ತಿದ್ದಾರೆ' ಎಂದಿದೆ.

ಪವಿತ್ರಾ ಅವರು 2020ರಲ್ಲಿ ಬಿಜೆಪಿ ಸೇರ್ಪಡೆಗೊಳ್ಳಲು ಟಿಎಂಸಿ ತೊರೆದಿದ್ದರು. 2021ರ ವಿಧಾನಸಭಾ ಚುನಾವಣೆಯಲ್ಲಿ ತಮ್ಮ ಕ್ಷೇತ್ರದಲ್ಲಿ ಬೋಯಲ್–1 ಗ್ರಾಮ ಪಂಚಾಯಿತಿ ಕ್ಷೇತ್ರದ ವ್ಯಾಪ್ತಿಯಲ್ಲಿ ಬಿಜೆಪಿಗೆ ಹೆಚ್ಚು ಮತಗಳು ದೊರಕುವಂತೆ ಮಾಡುವಲ್ಲಿಯೂ ಅವರು ಪ್ರಮುಖ ಪಾತ್ರ ವಹಿಸಿದ್ದರು ಎನ್ನಲಾಗಿದೆ.

ನಂದಿಗ್ರಾಮ ಕ್ಷೇತ್ರದಲ್ಲಿ ಬಿಜೆಪಿ ನಾಯಕ ಸುವೇಂದು ಅಧಿಕಾರಿ ಅವರು 2021ರಲ್ಲಿ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರನ್ನು 1,900 ಮತಗಳ ಅಂತರದಲ್ಲಿ ಸೋಲಿಸಿದ್ದರು ಎಂಬುದು ಗಮನಾರ್ಹ.

ದಾವಣಗೆರೆ: ಅಭಿಪ್ರಾಯ ಸಂಗ್ರಹಿಸಲಾಗದೇ ಹೊರನಡೆದ ಸಮಿತಿ ಸದಸ್ಯರು

ಶಕ್ತಿ ಪ್ರದರ್ಶನಕ್ಕೆ ವೇದಿಕೆಯಾದ 'ಕೈ' ಸಭೆ

ಪ್ರಜಾವಾಣಿ ವಾರ್ತೆ

ದಾವಣಗೆರೆ: ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿಯ ಆಯ್ಕೆ ಸಂಬಂಧ ಮಂಗಳವಾರ ನಡೆದ ಸಭೆಯು ಗದ್ದಲದ ಗೂಡಾಯಿತು.

ಪಕ್ಷದ ಜಿಲ್ಲಾ ಘಟಕದ ಕಚೇರಿಯಲ್ಲಿ ನಡೆದ ಉಪಚುನಾವಣಾ ಉಸ್ತುವಾರಿ ಸಮಿತಿ ಸಭೆ ಬಣಗಳ 'ಶಕ್ತಿ ಪ್ರದರ್ಶನ'ಕ್ಕೆ ವೇದಿಕೆಯಾಗಿ, ಜೋರು ವಾಗ್ವಾದ ನಡೆಯಿತು.

ಉಸ್ತುವಾರಿ ಸಮಿತಿಯ ಸದಸ್ಯರಾದ ಮಂಜುನಾಥ್ ಭಂಡಾರಿ, ಎಚ್.ಎಂ. ರೇವಣ್ಣ, ಎಚ್.ಆಂಜನೇಯ, ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷ ಎಚ್.ಬಿ. ಮಂಜಪ್ಪ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ನೇತೃತ್ವದಲ್ಲಿ ಸಭೆ ನಡೆಯಿತು.

ಸಭೆ ಆರಂಭದಲ್ಲೇ ಹೈಡ್ರಾಮಾ ಸೃಷ್ಟಿಯಾಯಿತು. 'ಅಲ್ಪಸಂಖ್ಯಾತರಿಗೆ ಟಿಕೆಟ್ ನೀಡಬೇಕು' ಎಂದು ಮುಸ್ಲಿಂ ಸಮುದಾಯದವರೂ, 'ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಅವರ ಪುತ್ರ ಸಮರ್ಥ್ ಸೂಕ್ತ ಅಭ್ಯರ್ಥಿ' ಎಂದು ಮತ್ತೊಂದು ಬಣದವರು ಘೋಷಣೆ ಕೂಗಿದರು. 'ಈ ಬಾರಿ ಅಹಿಂದ ವರ್ಗದವರಿಗೆ ಅವಕಾಶ ಕೊಡಬೇಕು' ಎಂದು ಇನ್ನೊಂದು ಬಣ ಒತ್ತಾಯಿಸಿತು.

'ಶಾಂತ ರೀತಿಯಲ್ಲಿ ಅಭಿಪ್ರಾಯ ಹಂಚಿಕೊಳ್ಳಿ. ಕೂಗಾಟ– ವಾಗ್ವಾದ ಬೇಡ' ಎಂಬ ಉಸ್ತುವಾರಿ ಸಮಿತಿಯ ಮುಖಂಡರ ಮನವಿಗೆ ಯಾರೊಬ್ಬರೂ ಕಿವಿಗೊಡಲಿಲ್ಲ. ಇದೇ ಕಾರಣಕ್ಕೆ ಎಚ್.ಎಂ. ರೇವಣ್ಣ ಅವರು ಕಾರ್ಯಕರ್ತರ ವಿರುದ್ಧ ಸಿಡಿಮಿಡಿಗೊಂಡರು.

ಕಾರ್ಯಕರ್ತರ ನಡೆಗೆ ಬೇಸರಗೊಂಡ ಮುಖಂಡರು, ಅಭಿಪ್ರಾಯ ಸಂಗ್ರಹಿಸದೇ ಸಭೆಯಿಂದ ಹೊರನಡೆದರು. ಈ ವೇಳೆ ಕೆಲವರು ಲಿಖಿತವಾಗಿ ಮನವಿ ಸಲ್ಲಿಸಿದರು. ಕಾರ್ಯಕರ್ತರ ಘೋಷಣೆ ಹೆಚ್ಚಾದಾಗ ಪೊಲೀಸರು ಮಧ್ಯ ಪ್ರವೇಶಿಸಿ ಪರಿಸ್ಥಿತಿಯನ್ನು ತಿಳಿಗೊಳಿಸಿದರು.

'ಈ ಬಾರಿ ಮುಸ್ಲಿಂ ಸಮುದಾಯದವರಿಗೆ ಕಾಂಗ್ರೆಸ್ ಟಿಕೆಟ್ ನೀಡದಿದ್ದರೆ, 50,000 ಮತಗಳ ಅಂತರದಿಂದ ಪಕ್ಷದ ಅಭ್ಯರ್ಥಿ ಸೋಲಿಸುತ್ತೇವೆ. ದಕ್ಷಿಣ ಕ್ಷೇತ್ರ ನಮ್ಮದು, ಯಾರಪ್ಪನ ಸೊತ್ತಲ್ಲ. ಅಲ್ಪಸಂಖ್ಯಾತರನ್ನು ಮತ ಹಾಕಲು ಮಾತ್ರ ಉಪಯೋಗಿಸಿಕೊಳ್ಳುವುದನ್ನು ನಿಲ್ಲಿಸಿ' ಎಂದು ಮುಸ್ಲಿಂ ಸಮುದಾಯದ ಮುಖಂಡರು ಆಕ್ರೋಶ ವ್ಯಕ್ತಪಡಿಸಿದರು.


ದಾವಣಗೆರೆಯ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆ ಕುರಿತ ಸಭೆಯಲ್ಲಿ ಕಾರ್ಯಕರ್ತರ ನಡುವೆ ಜೋರು ವಾಗ್ವಾದ ನಡೆಯಿತು –ಪ್ರಜಾವಾಣಿ ಚಿತ್ರ

> **ಚುನಾವಣೆ ವೇಳೆ ಇಂತಹ ಘಟನೆಗಳು ಸಾಮಾನ್ಯ. ಬೆಂಗಳೂರಿನಲ್ಲಿ ಮಾರ್ಚ್ 18ರಂದು ಉಸ್ತುವಾರಿ ಸಮಿತಿ ಸದಸ್ಯರ ಸಭೆ ನಡೆಯಲಿದೆ**
> **ಮಂಜುನಾಥ ಭಂಡಾರಿ,** ಉಪಚುನಾವಣೆ ಉಸ್ತುವಾರಿ ಸಮಿತಿ ಸಂಚಾಲಕ

ವಿವಾದಕ್ಕೀಡಾದ ಷಣ್ಮುಗಂ ಹೇಳಿಕೆ

ಚೆನ್ನೈ (ಪಿಟಿಐ): 'ನಿಮ್ಮ ಕನಸನ್ನು ನಮಗೆ ತಿಳಿಸಿ'... ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರ ಈ ಘೋಷಣೆಯನ್ನು ಟೀಕಿಸುವ ಭರದಲ್ಲಿ, ಚಿತ್ರನಟಿ ನಯನತಾರಾ ಅವರ ಹೆಸರನ್ನು ಪ್ರಸ್ತಾಪಿಸಿ ಎಐಎಡಿಎಂಕೆ ಸಂಸದ ಸಿ.ವಿ. ಷಣ್ಮುಗಂ ಅವರು ನೀಡಿರುವ ಹೇಳಿಕೆಯು ಇದೀಗ ವಿವಾದದ ಸ್ವರೂಪ ಪಡೆದಿದೆ.

ಆಡಳಿತಾರೂಢ ಡಿಎಂಕೆ ಸರ್ಕಾರದ ವಿರುದ್ಧ ಎಐಎಡಿಎಂಕೆ ವಿಲ್ಲುಪುರಂನಲ್ಲಿ ಪ್ರತಿಭಟನೆ ಹಮ್ಮಿಕೊಂಡಿತ್ತು. ಪ್ರತಿಭಟನೆಯಲ್ಲಿ ಭಾಗಿಯಾಗಿದ್ದ ಷಣ್ಮುಗಂ ಅವರು ರಾಜ್ಯ ಸರ್ಕಾರವನ್ನು ಟೀಕಿಸುವ ಭರದಲ್ಲಿ ಈಚೆಗಿನ ಘೋಷಣೆಯನ್ನು ಪ್ರಸ್ತಾಪಿಸಿ, 'ನನಗೆ ನಯನತಾರಾ ಬೇಕು. ನೀವು ನನ್ನ ಬಯಕೆಯನ್ನು ಪೂರೈಸುತ್ತೀರಾ? ನಯನತಾರಾ ಅವರನ್ನು ಮದುವೆಯಾಗುವ ಯಾರೊಬ್ಬರ ಕನಸನ್ನಾದರೂ ಮುಖ್ಯಮಂತ್ರಿ ಈಡೇರಿಸುತ್ತಾರಾ' ಎಂದು ಪ್ರಶ್ನಿಸಿದ್ದರು.

ಸ್ಟಾಲಿನ್ ತಮ್ಮ ಅಧಿಕಾರದ ಅವಧಿಯ ಐದು ವರ್ಷಗಳಲ್ಲಿ ಏನು ಮಾಡಿದ್ದಾರೆ ಎಂದೂ ವಾಗ್ದಾಳಿ ನಡೆಸಿದ್ದರು.

ನಯನತಾರಾ ಕುರಿತಂತೆ ನೀಡಿದ್ದ ಈ ಹೇಳಿಕೆಯು ವಿವಾದದ ಸ್ವರೂಪ ಪಡೆಯುತ್ತಿದ್ದಂತೆ, ಮಾಜಿ ಕಾನೂನು ಸಚಿವರೂ ಆಗಿರುವ ಷಣ್ಮುಗಂ ಅವರು ವಿಷಾದ ವ್ಯಕ್ತಪಡಿಸಿದ್ದಾರೆ. ನನ್ನ ಹೇಳಿಕೆಗಳನ್ನು 'ತಪ್ಪಾಗಿ' ಅರ್ಥೈಸಲಾಗಿದೆ. ನಾನು 'ದುರುದ್ದೇಶಪೂರಿತ ಉದ್ದೇಶದಿಂದ' ನಟಿಯ ಬಗ್ಗೆ ಹೇಳಿಕೆ ನೀಡಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

'ಸರ್ಕಾರ ನಿಲುವು ಸ್ಪಷ್ಟಪಡಿಸಲಿ'


ಕೆ.ಸಿ. ವೇಣುಗೋಪಾಲ್

ತಿರುವನಂತಪುರಂ (ಪಿಟಿಐ): ಕೇರಳ ವಿಧಾನಸಭೆ ಚುನಾವಣೆಯ ತೀವ್ರ ಪ್ರಚಾರದ ನಡುವೆ ಶಬರಿಮಲೆಗೆ ಮಹಿಳೆಯರ ಪ್ರವೇಶದ ವಿಷಯವನ್ನು ಪ್ರಸ್ತಾಪಿಸಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ಈ ವಿಷಯದಲ್ಲಿ ರಾಜ್ಯ ಸರ್ಕಾರ ತನ್ನ ನಿಲುವನ್ನು ಸ್ಪಷ್ಟಪಡಿಸುವಂತೆ ಸವಾಲು ಹಾಕಿದರು.


ಅಕ್ಷಯ ಪಾತ್ರಾ ಪ್ರತಿಷ್ಠಾನ 500 ಕೋಟಿ ಊಟ ವಿತರಿಸಿದ ಮೈಲಿಗಲ್ಲು ಸಾಧಿಸಿದ ಸ್ಮರಣಾರ್ಥ ದೆಹಲಿಯ ರಾಷ್ಟ್ರಪತಿ ಭವನದ ಸಾಂಸ್ಕೃತಿಕ ಕೇಂದ್ರದಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಬಾಲಕಿಯೊಬ್ಬರಿಗೆ ಆಹಾರ ತಿನಿಸಿದರು –ಪಿಟಿಐ ಚಿತ್ರ

ಅಭ್ಯರ್ಥಿ ಆಯ್ಕೆ: ಸಿ.ಎಂ, ಡಿಸಿಎಂ ಹೆಗಲಿಗೆ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ಬಾಗಲಕೋಟೆ ಕ್ಷೇತ್ರದ ಉಪಚುನಾವಣೆ ಕಾಂಗ್ರೆಸ್ ಅಭ್ಯರ್ಥಿ ಹೆಸರು ಅಂತಿಮಗೊಳಿಸಲು ಮಂಗಳವಾರ ಬೆಂಗಳೂರಿನ ವಿಧಾನ ಸೌಧದ ಶಾಸಕಾಂಗ ಪಕ್ಷದ ಕಚೇರಿಯಲ್ಲಿ ನಡೆದ ಉಸ್ತುವಾರಿ ಸಮಿತಿ ಸಭೆ ನಡೆಯಿತು.

ಅಭ್ಯರ್ಥಿ ಆಯ್ಕೆ ಹೊಣೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ ಅವರಿಗೆ ವಹಿಸಿದೆ.

'ಎಚ್.ವೈ.ಮೇಟಿ ಅವರ ಇಬ್ಬರು ಪುತ್ರರಾದ ಮಲ್ಲಿಕಾರ್ಜುನ ಹಾಗೂ ಉಮೇಶ ಅವರ ಹೆಸರು ಶಿಫಾರಸು ಮಾಡಿ, ಮುಖ್ಯಮಂತ್ರಿ ಗಮನಕ್ಕೂ ತರಲಾಗಿದೆ' ಎಂದು ಮೂಲಗಳು ತಿಳಿಸಿವೆ.

'ಇಬ್ಬರಲ್ಲಿ ಯಾರನ್ನೇ ಅಭ್ಯರ್ಥಿ ಎಂದು ಪಕ್ಷ ತೀರ್ಮಾನಿಸಿದರೂ ಅವರ ಗೆಲುವಿಗೆ ಎಲ್ಲರೂ ಸೇರಿ ಶ್ರಮಿಸುತ್ತೇವೆ. ಉಪಚುನಾವಣೆ ಪ್ರಚಾರಕ್ಕೆ ಬಾಗಲಕೋಟೆ ಕ್ಷೇತ್ರಕ್ಕೆ ಎರಡು ದಿನಗಳಂತೆ ಎರಡು ಸಲ ಬರಬೇಕು' ಎಂದು ಸಮಿತಿ ಸದಸ್ಯರು ಮುಖ್ಯಮಂತ್ರಿ ಅವರನ್ನು ಕೋರಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಆಕಾಂಕ್ಷಿ ಎಂಬಂತೆ ಬಿಂಬಿತಗೊಂಡಿರುವ ಮಹಾದೇವಿ ಮೇಟಿ ಅವರ ಬಗ್ಗೆ ಚರ್ಚೆ ಆಗಲಿಲ್ಲ ಎಂದು ತಿಳಿದು ಬಂದಿದೆ. ಸಚಿವರಾದ ಆರ್.ಬಿ.ತಿಮ್ಮಾಪುರ, ಸತೀಶ ಜಾರಕಿಹೊಳಿ, ಶಿವಾನಂದ ಪಾಟೀಲ, ಶಿವರಾಜ ತಂಗಡಗಿ, ಭೈರತಿ ಸುರೇಶ್, ಶಾಸಕ ಸಿ.ಎಸ್.ನಾಡಗೌಡ, ಸಮಿತಿ ಸಂಚಾಲಕ ವಸಂತಕುಮಾರ, ಪರಿಷತ್ ಸದಸ್ಯ ಎಚ್.ಎಚ್.ಜಕ್ಕಪ್ಪನವರ, ಬಾಗಲಕೋಟೆ ಜಿಲ್ಲಾ ಅಧ್ಯಕ್ಷ ಎಸ್.ಜಿ.ನಂಜಯ್ಯನಮಠ ಇದ್ದರು.

ಮೇಟಿ ಮಕ್ಕಳಿಗೆ ಆಹ್ವಾನ


ಉಮೇಶ ಮೇಟಿ

ಬಾಗಲಕೋಟೆ: ಎಚ್.ವೈ.ಮೇಟಿ ಅವರ ಪುತ್ರಿ ಮಹಾದೇವಿ ಮೇಟಿ ಉಪ ಚುನಾವಣೆಗೆ ಸ್ಪರ್ಧಿಸಿ, ಮಾರ್ಚ್ 20ರಂದು ನಾಮಪತ್ರ ಸಲ್ಲಿಸುವುದು ಖಚಿತ ಎಂದು ಹೇಳಿಕೆ ನೀಡಿದ ಬೆನ್ನಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೇಟಿ ಅವರ ನಾಲ್ವರೂ ಮಕ್ಕಳನ್ನು ಬೆಂಗಳೂರಿಗೆ ಮಾತುಕತೆಗೆ ಕರೆದಿದ್ದಾರೆ.

ಶನಿವಾರ ಜಿಲ್ಲೆಗೆ ಭೇಟಿ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಮಹಾದೇವಿ ಅವರು ಮಾತನಾಡಲು ಯತ್ನಿಸಿದ್ದರು. ಆದರೆ, ಅವರನ್ನು ಸಿದ್ದರಾಮಯ್ಯ ದೂರ ಇರಿಸಿದ್ದರು.

'ಬೆಂಗಳೂರಿಗೆ ಬರುವಂತೆ ಮುಖ್ಯಮಂತ್ರಿ ಆಹ್ವಾನಿಸಿದ್ದಾರೆ. ಸಹೋದರ ಮಲ್ಲಿಕಾರ್ಜುನ, ಸಹೋದರಿಯರಾದ ಬಾಯಕ್ಕ, ಮಹಾದೇವಿ ನಾನು ಹೊರಟಿದ್ದೇವೆ' ಎಂದು ಪುತ್ರ ಉಮೇಶ ಮೇಟಿ 'ಪ್ರಜಾವಾಣಿ'ಗೆ ತಿಳಿಸಿದರು.

'ನಮ್ಮ ಕುಟುಂಬದಲ್ಲಿ ಪಕ್ಷ ಯಾರಿಗೇ ಟಿಕೆಟ್ ನೀಡಿದರೂ ಬೇಸರವಿಲ್ಲ. ಎಲ್ಲರು ಒಗ್ಗೂಡಿ ಜನರ ಆಶೀರ್ವಾದ ಕೇಳುತ್ತೇವೆ. ಕ್ಷೇತ್ರದ ಜನ ತಂದೆ ಬಗ್ಗೆ ಪ್ರೀತಿ, ಅಭಿಮಾನ ಹೊಂದಿದ್ದಾರೆ. ಟಿಕೆಟ್‌ಗಾಗಿ ನಾವು ಜಗಳವಾಡುವುದು ಸರಿಯಲ್ಲ. ಜಗಳವಾಡಿದರೆ ಅದು ಜನರ ಆಶಯಕ್ಕೆ ವಿರುದ್ಧ ನಡೆದುಕೊಂಡಂತೆ ಆಗುತ್ತದೆ' ಎಂದರು.

'ಕರೂರು ಕಾಲ್ತುಳಿತ ಪ್ರಕರಣ ಚೆನ್ನೈನಲ್ಲೇ ವಿಚಾರಣೆ ಮಾಡಿ'

ಚೆನ್ನೈ(ಪಿಟಿಐ): ವಿಧಾನಸಭೆ ಚುನಾವಣೆಗೆ ಸಂಬಂಧಿಸಿದ ಕಾರ್ಯಕ್ರಮಗಳಲ್ಲಿ ತಾವು ಪಾಲ್ಗೊಳ್ಳಬೇಕೆಂದು ಹೇಳಿರುವ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಮುಖ್ಯಸ್ಥ, ನಟ ವಿಜಯ್, ಕರೂರ್ ಕಾಲ್ತುಳಿತ ಪ್ರಕರಣದ ಮುಂದಿನ ತನಿಖೆಯನ್ನು ಚೆನ್ನೈ ಅಥವಾ ತಮಿಳುನಾಡಿನ ಬೇರೆ ಎಲ್ಲಾದರೂ ನಡೆಸುವಂತೆ ಸಿಬಿಐಗೆ ಮನವಿ ಮಾಡಿದ್ದಾರೆ.

ಮಾರ್ಚ್ 15ರಂದು ಸಿಬಿಐ ಎದುರು ವಿಚಾರಣೆಗೆ ಹಾಜರಾಗುವ ಮೊದಲು ಅಂದರೆ ಮಾ.14ರಂದು ವಿಜಯ್ ಅವರು ಕರೂರ್ ಕಾಲ್ತುಳಿದ ಪ್ರಕರಣದ ತನಿಖೆಗಾಗಿ ಸುಪ್ರೀಂ ಕೋರ್ಟ್ ನೇಮಿಸಿರುವ ನ್ಯಾಯಮೂರ್ತಿ ಅಜಯ್ ರಸ್ತೋಗಿ ಅವರಿಗೆ ಪತ್ರ ಬರೆದಿದ್ದರು.

ಟಿವಿಕೆ ನಾಯಕನ ಹೇಳಿಕೆ ಸುಳ್ಳು: ರಜನೀಕಾಂತ್

ಚೆನ್ನೈ (ಪಿಟಿಐ): ನಟ ರಜನಿಕಾಂತ್ ಅವರು ರಾಜಕೀಯ ಪ್ರವೇಶಕ್ಕೆ ಯತ್ನಿಸಿದಾಗ ಡಿಎಂಕೆಯು ಅವರಿಗೆ ಬೆದರಿಕೆ ಒಡ್ಡಿತ್ತು ಎಂದು ಟಿವಿಕೆ ನಾಯಕರೊಬ್ಬರು ಮಾಡಿರುವ ಆರೋಪವನ್ನು ನಿರಾಕರಿಸಿರುವ ರಜನಿಕಾಂತ್, 'ಸಮಯ ಕಾಯುತ್ತದೆ ಮತ್ತು ಉತ್ತರಿಸುತ್ತದೆ' ಎಂದಿದ್ದಾರೆ.

ವಿವಾದ ಸೃಷ್ಟಿಸಿದ್ದ ಟಿವಿಕೆ ಪ್ರಧಾನ ಕಾರ್ಯದರ್ಶಿ ಆಧವ್ ಅರ್ಜುನ್ ಹೇಳಿಕೆ ಸುಳ್ಳು ಎಂದು ರಜನಿಕಾಂತ್ 'ಎಕ್ಸ್' ಮೂಲಕ ಸ್ಪಷ್ಟನೆ ನೀಡಿದ್ದಾರೆ.

ಡಿಎಂಕೆ ಸರ್ಕಾರದ ವಿರುದ್ಧ ಮಾರ್ಚ್ 12ರಂದು ನಡೆದಿದ್ದ ಪ್ರತಿಭಟನೆಯಲ್ಲಿ ಅರ್ಜುನ್ ಅವರು ರಜನಿಕಾಂತ್ ಬಗ್ಗೆ ಹೇಳಿಕೆ ನೀಡಿದ್ದರು.

ಮಾಲಿನ್ಯವ ನಿವಾರಿಸುವ ತ್ಯಾಜ್ಯ



• ಅಮೃತೇಶ್ವರಿ ಬಿ.

'ಕೃಷಿ ಮತ್ತು ಔಷಧೀಯ ಸಸ್ಯಗಳ ತ್ಯಾಜ್ಯಗಳು, ಮಲಿನಗೊಂಡಿರುವ ನೀರು ಮತ್ತು ಮಣ್ಣಿನಲ್ಲಿರುವ ವಿಷಕಾರಿ ಭಾರಲೋಹಗಳನ್ನು ತೆಗೆಯುವಂತಹ ಪರಿಣಾಮಕಾರಿ ವಸ್ತುವಾಗಬಲ್ಲದು ಹಾಗೂ ಫಸಲಿನ ಇಳುವರಿಯನ್ನೂ ಹೆಚ್ಚಿಸಬಲ್ಲದು' ಎಂದು ಇತ್ತೀಚೆಗೆ ಚೀನಾದ ಶೆನ್ಯಾಂಗ್ ಕೃಷಿ ವಿಶ್ವವಿದ್ಯಾಲಯವು ತೋರಿಸಿದೆ. ಆ ತ್ಯಾಜ್ಯವೇ 'ಡ್ಯಾನ್ಶೆನ್' ಅಥವಾ 'ರೆಡ್ ಸೇಜ್' ಎನ್ನುವ ಔಷಧೀಯ ಸಸ್ಯದ್ದು. 'ಸಾಲ್ವಿಯಾ ಮಿಲ್ಟಿರಿಯೋಜ್' ಎನ್ನುವುದು ಇದರ ವೈಜ್ಞಾನಿಕ ಹೆಸರು. ಔಷಧವಾಗಿ ಬಳಸಲಾಗುವ ಸಾಲ್ವಿಯಾನೊಲಿಕ್ ಆಮ್ಲವಿರುವ ಇದರ ಬೇರನ್ನು ಹೃದಯ ಹಾಗೂ ರಕ್ತಪರಿಚಲನೆಗೆ ಸಂಬಂಧಿಸಿದ ಕಾಯಿಲೆಗಳನ್ನು ಗುಣಪಡಿಸಲು ಬಳಸಲಾಗುತ್ತಿದೆ. ಆದರೆ ಸಸ್ಯದ ಮೇಲ್ಭಾಗ ಮಾತ್ರ ತ್ಯಾಜ್ಯವಾಗಿ ಉಳಿದುಬಿಡುತ್ತಿತ್ತು. ರೂಢಿಯಂತೆ ಅದನ್ನು ಸುಟ್ಟುಬಿಡುತ್ತಿದ್ದರು. ಆ ಬೂದಿಯೂ ಮಣ್ಣನ್ನು ಫಲವತ್ತಾಗಿಸುತ್ತದೆಯೆನ್ನಿ. ಆದರೆ ಅದೇ ಬೂದಿಯನ್ನು ಬಳಸಿಕೊಂಡು ಚೀನೀ ಸಂಶೋಧಕರು 'ಫಾಸ್ಫರಸ್ - ಮೊಡಿಫೈಡ್ ಬಯೋಚಾರ್' ಅನ್ನು ತಯಾರಿಸಿದ್ದಾರೆ. ಇದು ಮಣ್ಣಿನ ಫಲವತ್ತತೆಯನ್ನೂ ಸುಧಾರಿಸುವುದಲ್ಲದೆ, ವಿಷಕಾರಿಲೋಹಗಳನ್ನು ನಿಶ್ಚಲಗೊಳಿಸಿ, ಭಾರಲೋಹಗಳ ಮಾಲಿನ್ಯವನ್ನು ತಗ್ಗಿಸುತ್ತದೆ ಎಂದು ಸಾಬೀತುಪಡಿಸಿದ್ದಾರೆ. ಸದ್ಯ, ಕೈಗಾರಿಕೀಕರಣ ಹಾಗೂ ನಗರೀಕರಣದಿಂದ ಸೀಸ ಮತ್ತು ಕ್ಯಾಡ್ಮಿಯಂ ಮಾಲಿನ್ಯವು ಜಗತ್ತನ್ನೇ ಕಾಡುತ್ತಿರುವ ಗಂಭೀರ ಪರಿಸರ ಸಮಸ್ಯೆ. ಈ ಭಾರಲೋಹಗಳು ನೀರು ಮತ್ತು ಮಣ್ಣಿನಲ್ಲಿ ಸಂಗ್ರಹಗೊಂಡು, ಆಹಾರಸರಪಳಿಯನ್ನು ಸೇರಿ, ಕೊನೆಗೆ ಮನುಷ್ಯನ ಆರೋಗ್ಯದ ಮೇಲೆ ಗಂಭೀರ ಪರಿಣಾಮವನ್ನುಂಟು ಮಾಡುತ್ತದೆ ಎನ್ನುವುದು ನಮಗೆಲ್ಲ ತಿಳಿದಿರುವ ವಿಷಯ. ಸಾಂಪ್ರದಾಯಿಕ ಪರಿಹಾರ ತಂತ್ರಗಳಾದ ರಾಸಾಯನಿಕ ವಿಧಾನ, ಅಯಾನ್ ಬದಲಾವಣೆ, ಮೆಂಬ್ರೇನ್ ಫಿಲ್ಟ್ರೇಷನ್ ಮೊದಲಾದವು ಆರ್ಥಿಕವಾಗಿ ಅಥವಾ ತಾಂತ್ರಿಕವಾಗಿ ತುಸು ದುಬಾರಿ ವಿಧಾನಗಳು. ಆದರೆ ಸಾಲ್ವಿಯಾ ಗಿಡದ ರಾಶಿಯನ್ನು ಆಮ್ಲಜನಕದ ಪೂರೈಕೆಯನ್ನು ಕಡಿಮೆಯಿಟ್ಟು ಅತಿ ಹೆಚ್ಚಿನ ತಾಪಮಾನದಲ್ಲಿ ಸುಟ್ಟಾಗ ಇಂಗಾಲ ಸಮೃದ್ಧ ಬೂದಿ ಉಳಿಯುತ್ತದೆ. ಇದೊಂದು ಪರಿಣಾಮಕಾರಿಯಾದ ಪರಿಹಾರವಾಗಿ ಬಳಕೆಯಾಗಬಲ್ಲದು ಎಂದು ಸಂಶೋಧಕರ ಅಭಿಪ್ರಾಯ. ಏಕೆಂದರೆ ಇದು ಅಗ್ಗವೂ ಹೌದು, ಪರಿಸರಸ್ನೇಹಿಯೂ ಹೌದು.

ಈ ರೀತಿ ಇದ್ದಿಲು ಅಥವಾ ಬೂದಿಯನ್ನು ಈಗಾಗಲೇ ನೀರಿನ ತ್ಯಾಜ್ಯಗಳನ್ನು ಹೊರತೆಗೆಯಲು ಬಳಸಿದ್ದರೂ ಈ ವಸ್ತುವು ವಿಶೇಷ. ಹೇಗೆ ಎಂದಿರಾ? ಇದನ್ನು ಸಿದ್ಧಪಡಿಸುವಾಗಲೇ ವಿಜ್ಞಾನಿಗಳು ಈ ಬೂದಿಗೆ ಫಾಸ್ಫೇಟು ರಾಸಾಯನಿಕವನ್ನು ಸೇರಿಸಿ ಅದರ ಗುಣಮಟ್ಟವನ್ನು ವರ್ಧಿಸಿರುತ್ತಾರೆ. ಆ ವಸ್ತುವನ್ನು 3K-BC ಎಂದು ಕರೆದಿದ್ದಾರೆ. ಸಾಲ್ವಿಯಾ ಸಸ್ಯರಾಶಿಯನ್ನು ಹೆಚ್ಚಿನ ತಾಪಮಾನದಲ್ಲಿ ಸುಡುವಾಗಲೇ ಪೊಟ್ಯಾಶಿಯಂ ಫಾಸ್ಫೇಟನ್ನು ಸೇರಿಸಲಾಗುತ್ತದೆಯಂತೆ. ಬೂದಿಯ ಕಣದೊಂದಿಗೆ ಫಾಸ್ಫೇಟು ಕೂಡಿಕೊಂಡಾಗ ಅದರ ರಚನೆಯಲ್ಲೊಂದು ರಾಸಾಯನಿಕವಾಗಿ ಕ್ರಿಯಾತ್ಮಕವಾಗಿರುವ ಸ್ಥಾನ ಉಂಟಾಗುತ್ತದೆ. ಅಲ್ಲಿ ಈ ಸೀಸ ಹಾಗೂ ಕ್ಯಾಡ್ಮಿಯಂ ಲೋಹಗಳು ಸುಲಭವಾಗಿ ಬಂಧಿತವಾಗಬಲ್ಲದಂತೆ. ಅರ್ಥಾತ್, ಮಣ್ಣು ಅಥವಾ ನೀರಿನಲ್ಲಿರುವ ಲೋಹಗಳನ್ನು ಹೀರಿಕೊಳ್ಳುವ ಬೂದಿಯ ಶಕ್ತಿಯನ್ನು ಈ ಫಾಸ್ಫೇಟು ಕಣಗಳು ಹೆಚ್ಚಿಸಲ್ಲವು ಮತ್ತು ಹೆಚ್ಚೆಚ್ಚು ಲೋಹಗಳನ್ನು ಹೀರಿಕೊಂಡಾಗ ಶುದ್ಧೀಕರಣ ಪ್ರಕ್ರಿಯೆ ಉತ್ತಮವಾಗುತ್ತದೆ. ಒಂದು ಗ್ರಾಂ ಫಾಸ್ಫರಸ್ - ಮೊಡಿಫೈಡ್ ಬಯೋಚಾರ್ ಸುಮಾರು 362 ಮಿಲಿಗ್ರಾಂ ಸೀಸ ಹಾಗೂ 123 ಮಿಲಿಗ್ರಾಂ ಕ್ಯಾಡ್ಮಿಯಂ ಅನ್ನು ಹೀರಿಕೊಂಡಿತ್ತಂತೆ. ಒಟ್ಟಾರೆ ಸುಮಾರು ಪ್ರತಿಶತ 48ರಷ್ಟು ಭಾರಲೋಹವನ್ನು ಹೀರಿಕೊಳ್ಳಬಲ್ಲದಂತೆ. ಇದು ಹಿಂದೆ ಅಧ್ಯಯನ ಮಾಡಿರುವ ಇತರೆ ಬಯೋಚಾರ್‌ಗಳು ಹೀರಿಕೊಂಡದ್ದಕ್ಕಿಂತ ಜಾಸ್ತಿಯಿದೆ ಎನ್ನುತ್ತಾರೆ ವಿಜ್ಞಾನಿಗಳು.

ಈ ಪುಡಿಯನ್ನು ನೀರು ಅಥವಾ ಮಣ್ಣಿಗೆ ಸೇರಿಸಿದಾಗ ಸರ್ಫೇಸ್ ಅಡ್ಸಾರ್ಪ್ಶನ್, ಫಾಸ್ಫೇಟಿನೊಂದಿಗಿನ ಪ್ರೆಸಿಪಿಟೇಷನ್ ರಿಯಾಕ್ಷನ್, ಆಮ್ಲಜನಕವಿರುವ ಫಂಕ್ಷನಲ್ ಗ್ರೂಪ್‌ನೊಂದಿಗೆ ಕಾಂಪ್ಲೆಕ್ಸೇಶನ್ ಹಾಗೂ ಕೇಟಯಾನು ಬದಲಾವಣೆ ಪ್ರಕ್ರಿಯೆ ಮೊದಲಾದ ವಿಧಾನಗಳೆಲ್ಲವೂ ಜರುಗುತ್ತವೆ. ಒಂದೊಂದು ಹಂತದಲ್ಲಿ ಮೇಲೆ ಹೇಳಿದ ಕ್ರಿಯೆಗಳು ಜರುಗಿ ಭಾರಲೋಹವನ್ನು ಬಂಧಿಸಿ ಮುಂದೆ ಸಾಗದಂತೆ ಮಾಡುತ್ತವೆ. ಹಾಗಾಗಿ ಭಾರಲೋಹವನ್ನು ತೆಗೆಯುವಲ್ಲಿ ಈ ಬಯೋಚಾರ್ ಪರಿಣಾಮಕಾರಿಯಾಗಿವೆ.

ಇದರ ದಕ್ಷತೆಯನ್ನು ತಿಳಿಯಲು ಪುಡಿಯನ್ನು ಮಣ್ಣಿನಲ್ಲಿ ಪರೀಕ್ಷಿಸಿದ್ದಾರೆ. ಆಗ ಫಾಸ್ಫರಸ್ - ಮೊಡಿಫೈಡ್ ಬಯೋಚಾರ್, ಆ ಮಣ್ಣಿನಲ್ಲಿ ಮುಕ್ತವಾಗಿ ಲಭ್ಯವಾಗಿದ್ದ, ಚಲನೆಯಲ್ಲಿರುವ ಹಾಗೂ ಸುಲಭವಾಗಿ ಹೀರಲ್ಪಡುವ, ಸೀಸ ಮತ್ತು ಕ್ಯಾಡ್ಮಿಯಂ ಭಾರಲೋಹಗಳ ಪ್ರಮಾಣವನ್ನು ಗಮನಾರ್ಹವಾಗಿ ಕಡಿಮೆಯಾಗಿಸಿತ್ತಂತೆ. ಲೋಹಗಳನ್ನು ಫಾಸ್ಫೇಟ್ ಬಂಧಿಸಿತ್ತಂತೆ. ಅರ್ಥಾತ್, ಈ ಪರಿವರ್ತನೆಯು ಭಾರಲೋಹಗಳಿಂದಾಗುವ ಪರಿಸರ ಸಮಸ್ಯೆಗಳು ಹಾಗೂ ನಾವು ಬೆಳೆಯುವ ಫಸಲಿನಲ್ಲಿ ಭಾರಲೋಹಗಳ ಸಂಗ್ರಹವನ್ನು ಇಳಿಸಬಲ್ಲದು ಎನ್ನುತ್ತಾರೆ ವಿಜ್ಞಾನಿಗಳು.

ಇನ್ನು, ಇದೊಂದು ಮಣ್ಣು ಹಾಗೂ ನೀರನ್ನು ಶುದ್ಧೀಕರಿಸುವ ಪ್ರಕ್ರಿಯೆಯಾಗಿರದೆ ಸಸ್ಯಗಳ ಬೆಳವಣಿಗೆಯನ್ನು ಹೇಗೆ ಪ್ರಭಾವಿಸುತ್ತವೆ ಎಂದೂ ಪರೀಕ್ಷಿಸಿದ್ದಾರೆ. ಇದಕ್ಕಾಗಿ 'ಲಿಗಸ್ಟಿಕಮ್ ಶುವಾನ್ಸಿಯಾಂಗ್' ಎನ್ನುವ ಸಾಂಪ್ರದಾಯಿಕ ಔಷಧೀಯ ಸಸ್ಯವನ್ನು ತೆಗೆದುಕೊಂಡಿದ್ದಾರೆ. ಇದು ಸಾಮಾನ್ಯವಾಗಿ ಭಾರಲೋಹಗಳ ಮಾಲಿನ್ಯಕ್ಕೆ ತುತ್ತಾಗುವ ಸಸ್ಯವಂತೆ. ಹಾಗಾಗಿ ಈ ಸಸ್ಯವನ್ನು ಕುಡಿಕೆಯಲ್ಲಿ ಬೆಳೆಸಿ ಫಾಸ್ಫರಸ್ - ಮೊಡಿಫೈಡ್ ಬಯೋಚಾರ್ ಅನ್ನು ಅದರ ಮಣ್ಣಿನಲ್ಲಿ ಸೇರಿಸಿ ಅಧ್ಯಯನ ಮಾಡಿದ್ದಾರೆ. ಇಳುವರಿಯಲ್ಲಿ ಪ್ರತಿಶತ 61ರಷ್ಟು ಹೆಚ್ಚಾಗಿದ್ದಲ್ಲದೇ, ಸಸ್ಯದಲ್ಲಿ ದೊರಕುತ್ತಿದ್ದ ಔಷಧೀಯ ರಾಸಾಯನಿಕಗಳ ಪ್ರಮಾಣವೂ ಪ್ರತಿಶತ 22ರಷ್ಟು ಹೆಚ್ಚಾಗಿತ್ತು ಎನ್ನುವುದು ವಿಜ್ಞಾನಿಗಳಿಗೆ ಸಂತಸ ತಂದಿದೆ.

ಹಾಗಾಗಿ ಈ ವಸ್ತುವು ದುಪ್ಪಟ್ಟು ಲಾಭದಾಯಕ ಎನ್ನಬಹುದು. ಭಾರಲೋಹವನ್ನು ನಿಶ್ಚಲಗೊಳಿಸುವುದಲ್ಲದೇ ಮಣ್ಣಿನ ಗುಣಮಟ್ಟವನ್ನು ಸುಧಾರಿಸಿ ಸಸ್ಯದ ಬೆಳವಣಿಗೆಯನ್ನು ಪ್ರಬಲಗೊಳಿಸುತ್ತದೆ. ಈ ವಿಧಾನದ ಮತ್ತೊಂದು ಅನುಕೂಲ ಸುಸ್ಥಿರತೆ. ಸಾಂಪ್ರದಾಯಿಕ ಔಷಧೀಯ ಸಸ್ಯಗಳ ಉಳಿಕೆಯನ್ನು ಕ್ರಿಯಾತ್ಮಕ ಬಯೋಚಾರ್ ಆಗಿ ಪರಿವರ್ತಿಸುವುದು ತ್ಯಾಜ್ಯ ನಿರ್ವಹಣೆ ಮತ್ತು ಪರಿಸರ ಸಮಸ್ಯೆಗಳನ್ನು ನಿವಾರಿಸುವ ವೃತ್ತೀಯ ಪರಿಹಾರವನ್ನು ನೀಡುತ್ತದೆ. ಭಾರಲೋಹದಿಂದಾಗುವ ಮಾಲಿನ್ಯವು ಜಗತ್ತಿನಾದ್ಯಂತ ಪರಿಸರ ವ್ಯವಸ್ಥೆ ಹಾಗೂ ಆಹಾರ ಸುರಕ್ಷತೆಯನ್ನು ಪ್ರಭಾವಿಸುವುದರಿಂದ ಫಾಸ್ಫರಸ್ - ಮೊಡಿಫೈಡ್ ಬಯೋಚಾರ್‌ನಂತಹ ಅನ್ವೇಷಣೆಗಳು ಆರೋಗ್ಯಕರ ಭೂಮಿ ಹಾಗೂ ಸುರಕ್ಷಿತ ಕೃಷಿಗೆ ಮಹತ್ತರ ಕೊಡುಗೆ ನೀಡುತ್ತದೆ. ಮಾಲಿನ್ಯವನ್ನು ನಿಯಂತ್ರಿಸುತ್ತ, ತ್ಯಾಜ್ಯ ಮರುಬಳಕೆಯನ್ನು ಖಚಿತಪಡಿಸುವ ಈ ತಂತ್ರಜ್ಞಾನವು ಸುಸ್ಥಿರ ಪರಿಸರ ನಿರ್ವಹಣೆ, ಕೃಷಿ ಉತ್ಪಾದನೆಗೆ ವರದಾನವಾಗಬಲ್ಲದು ಎನ್ನುವುದು ಸಂಶೋಧಕರ ಆಶಯ. ❖

ಇಂಧನ ಉಳಿತಾಯಕ್ಕೆ ಬಂದ ಬುರುಗು 'ನ್ಯಾನೋಬಬಲ್'



ಈಗ ಎಲ್ಲೆಡೆ ಎಲ್‌ಪಿಜಿ ಅಭಾವದ್ದೇ ಮಾತು. ಮುಂದೆಯೂ ಎಲ್‌ಪಿಜಿ ಬಿಕ್ಕಟ್ಟು ಇನ್ನೂ ಕಾಡುವ ಸಾಧ್ಯತೆ ಇರುತ್ತದೆ. ಆದರೆ, ಭಾರತೀಯ ವಿಜ್ಞಾನಿಗಳು ಕಂಡುಹಿಡಿದಿರುವ ಈ 'ನ್ಯಾನೋಬಬಲ್' ತಂತ್ರಜ್ಞಾನ ಈ ಬಿಕ್ಕಟ್ಟಿಗೆ ಪರಿಹಾರ ನೀಡುವಂತಿದೆ

• ಸುಧೀರ ಎಚ್.ಎಸ್.

ಇತ್ತೀಚಿನ ದಿನಗಳಲ್ಲಿ ಮಧ್ಯಪ್ರಾಚ್ಯ ರಾಷ್ಟ್ರಗಳ ಸಂಘರ್ಷದಿಂದಾಗಿ ಭಾರತದಲ್ಲಿ ಎಲ್‌ಪಿಜಿ (ಅಡುಗೆ–ಅನಿಲ) ಮತ್ತು ಇತರ ಇಂಧನಗಳ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದೆ. ಇದರ ನೇರ ಪರಿಣಾಮ ನಮ್ಮ ಬೆಂಗಳೂರಿನ ಹೋಟೆಲ್ ಉದ್ಯಮದ ಮೇಲೆ ಬಿದ್ದಿದೆ. ಸಿಲಿಂಡರ್‌ಗಳ ಕೊರತೆಯಿಂದಾಗಿ ನಗರದ ಅನೇಕ ಹೋಟೆಲ್‌ಗಳು ತಮ್ಮ ಮೆನುವಿನಿಂದ ಕೆಲವು ಖಾದ್ಯಗಳನ್ನು ಕೈಬಿಡುತ್ತಿವೆ; ಇನ್ನು ಕೆಲವು ಹೋಟೆಲ್‌ಗಳು ತಮ್ಮ ಕಾರ್ಯನಿರ್ವಹಣೆಯ ಸಮಯವನ್ನೇ ಕಡಿತಗೊಳಿಸುತ್ತಿವೆ. ಇಂತಹ ಇಂಧನ ಬಿಕ್ಕಟ್ಟಿನ ಸಮಯದಲ್ಲಿ, ಭಾರತೀಯ ವಿಜ್ಞಾನಿಗಳ ಒಂದು ಹೊಸ ಸಂಶೋಧನೆ ಭರವಸೆಯ ಕಿರಣವಾಗಿ ಮೂಡಿಬಂದಿದೆ.

ಐಐಟಿ ರೋಪರ್ ಮತ್ತು ಐಐಟಿ ಕಾನ್ಪುರದ ಎಂಜಿನಿಯರ್‌ಗಳ ತಂಡವು ದ್ರವ–ಇಂಧನಗಳಲ್ಲಿ ಅತ್ಯಂತ ಸೂಕ್ಷ್ಮವಾದ ಗಾಳಿಯ ಗುಳ್ಳೆಗಳನ್ನು ಅಥವಾ 'ನ್ಯಾನೋಬಬಲ್'ಗಳನ್ನು (Nanobubbles) ಸೇರಿಸುವ ಮೂಲಕ ಅವುಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಉರಿಸಬಹುದು ಎಂದು ಪತ್ತೆಹಚ್ಚಿದ್ದಾರೆ. ಈ ಪ್ರಯೋಗವೂ ನಮ್ಮ ಕಾರು-ಬೈಕು, ವಿಮಾನ ಮತ್ತು ಹೋಟೆಲ್ ಅಡುಗೆಮನೆಗಳ ಇಂಧನದ ಬಳಕೆಯನ್ನೇ ಬದಲಿಸಬಲ್ಲ ಆಶಾದಾಯಕ ಹೆಜ್ಜೆಯಾಗಿದೆ.

ಏನಿದು ನ್ಯಾನೋಬಬಲ್ ಅಥವಾ ನ್ಯಾನೋ ಬುರುಗು?: ಸಾಮಾನ್ಯವಾಗಿ ನಾವು ಸೋಡಾ ಅಥವಾ ತಂಪುಪಾನೀಯಗಳಲ್ಲಿ ಗುಳ್ಳೆಗಳನ್ನು ನೋಡುತ್ತೇವೆ. ಈ ಗುಳ್ಳೆಗಳು ದೊಡ್ಡದಾಗಿರುತ್ತವೆ ಮತ್ತು ತಕ್ಷಣವೇ ಮೇಲೆ ಬಂದು ಒಡೆದು ಹೋಗುತ್ತವೆ. ಆದರೆ 'ನ್ಯಾನೋಬಬಲ್'ಗಳು ಎನ್ನುವವು ಮರಳಿನ ಕಣಕ್ಕಿಂತ ಸಾವಿರಾರು ಪಟ್ಟು ಚಿಕ್ಕದಾದ ಗಾಳಿಯ ಚೀಲಗಳು. ಇವು ಬರಿಗಣ್ಣಿಗೆ ಕಾಣಿಸುವುದಿಲ್ಲ. ಒಂದು ಲೀಟರ್ ಪೆಟ್ರೋಲ್‌ನಲ್ಲಿ ಶತಕೋಟಿ ಇಂತಹ ಗುಳ್ಳೆಗಳಿದ್ದರೂ ಆ ಪೆಟ್ರೋಲ್ ಎಂದಿನಂತೆ ತಿಳಿಯಾಗಿಯೇ ಕಾಣಿಸುತ್ತದೆ.

ಈ ಗುಳ್ಳೆಗಳು ಇಂಧನದ ಒಳಗೆ ವಾರಗಟ್ಟಲೆ ಅಥವಾ ತಿಂಗಳುಗಟ್ಟಲೆ ತೇಲುತ್ತಲೇ ಇರುತ್ತವೆ. ಇವು ಮೇಲೆ ಬಂದು ಒಡೆಯದಿರಲು ಕಾರಣ ಇವುಗಳ ಮೇಲಿರುವ ಸಣ್ಣ ಮಟ್ಟದ ನೆಗೆಟಿವ್ ಎಲೆಕ್ಟ್ರಿಕಲ್ ಚಾರ್ಜ್ ಅಥವಾ ವಿದ್ಯುತ್ ಕಾಂತೀಯ ಶಕ್ತಿ. ವಿಜ್ಞಾನದ ಭಾಷೆಯಲ್ಲಿ ಇದನ್ನು 'ಜೀಟಾ ಪೊಟೆನ್ಷಿಯಲ್' (Zeta Potential) ಎಂದು ಕರೆಯುತ್ತಾರೆ. ಈ ಶಕ್ತಿಯು ಗುಳ್ಳೆಗಳು ಪರಸ್ಪರ ಅಂಟಿಕೊಳ್ಳದಂತೆ ತಡೆದು ಅವು ದ್ರವದಲ್ಲಿ ಹರಡಿರುವಂತೆ ನೋಡಿಕೊಳ್ಳುತ್ತದೆ.

ಈ ಗುಳ್ಳೆಗಳನ್ನು ಸೃಷ್ಟಿಸುವುದು ಹೇಗೆ?: ವಿಜ್ಞಾನಿಗಳು ಇದಕ್ಕಾಗಿ 'ಹಸಿ-ಬಿಸಿ' ತಂತ್ರಜ್ಞಾನ ಅಥವಾ 'ಹಾಟ್-ಕೋಲ್ಡ್ ಮಿಕ್ಸಿಂಗ್' ವಿಧಾನವನ್ನು ಬಳಸಿದ್ದಾರೆ. ವಿಜ್ಞಾನದ ಮೂಲತತ್ವದ ಪ್ರಕಾರ, ತಣ್ಣಗಿರುವ ದ್ರವದಲ್ಲಿ ಅನಿಲಗಳು ಸುಲಭವಾಗಿ ಕರಗುತ್ತವೆ. ಹೀಗಾಗಿ, ವಿಜ್ಞಾನಿಗಳು ಮೊದಲು ಅತ್ಯಂತ ಕಡಿಮೆ ತಾಪಮಾನದಲ್ಲಿ ಇಂಧನಕ್ಕೆ ಆಮ್ಲಜನಕ ಅಥವಾ ಸಾರಜನಕವನ್ನು ಸೇರಿಸಿ ನಂತರ ಅದನ್ನು ತಕ್ಷಣವೇ ಬಿಸಿ ಇಂಧನದೊಂದಿಗೆ ಬೆರೆಸುತ್ತಾರೆ. ಈ ಹಠಾತ್ ತಾಪಮಾನ ಬದಲಾವಣೆಯಿಂದಾಗಿ ಇಂಧನವು ತನ್ನಲ್ಲಿರುವ ಗಾಳಿಯನ್ನು ಹೊರಹಾಕಲು ಪ್ರಯತ್ನಿಸುತ್ತದೆ. ಈ ಪ್ರಕ್ರಿಯೆಯಲ್ಲಿ 1000 ನ್ಯಾನೋಮೀಟರ್‌ಗಿಂತಲೂ ಸಣ್ಣದಾದ ಗುಳ್ಳೆಗಳು ಸೃಷ್ಟಿಯಾಗುತ್ತವೆ.

ಇದು ಇಂಧನವನ್ನು ಹೇಗೆ ಹೆಚ್ಚು ಶಕ್ತಿಶಾಲಿಯಾಗಿಸುತ್ತದೆ?: ವಿಜ್ಞಾನಿಗಳು ತಮ್ಮ ಸಂಶೋಧನೆಯಲ್ಲಿ ಪೆಟ್ರೋಲ್, ಎಥೆನಾಲ್ ಮತ್ತು ಜೆಟ್ ವಿಮಾನಗಳಲ್ಲಿ ಬಳಸುವ 'ಜೆಟ್ ಎ-1' ಇಂಧನಗಳನ್ನು ಪರೀಕ್ಷಿಸಿದ್ದಾರೆ. ಹೈ-ಸ್ಪೀಡ್ ಕ್ಯಾಮೆರಾಗಳ ಮೂಲಕ ಗಮನಿಸಿದಾಗ, ಈ ಪುಟ್ಟ ಗುಳ್ಳೆಗಳು ಇಂಧನದ ಹನಿಯೊಳಗೆ 'ಬೀಜಗಳಂತೆ' ಕೆಲಸ ಮಾಡುತ್ತವೆ. ಇಂಧನ ಉರಿಯುವಾಗ ಇವುಗಳ ಒಳಗೆ ಸಣ್ಣ ಸಣ್ಣ ಸ್ಫೋಟಗಳು (Micro-explosions) ಸಂಭವಿಸುತ್ತವೆ. ಇದು ಇಂಧನವು ಗಾಳಿಯೊಂದಿಗೆ ಹೆಚ್ಚು ವೇಗವಾಗಿ ಮತ್ತು ಸಂಪೂರ್ಣವಾಗಿ ಬೆರೆಯಲು ಸಹಾಯ ಮಾಡುತ್ತದೆ. ಇದರಿಂದಾಗಿ ಇಂಧನವು ವ್ಯರ್ಥವಾಗದೆ ಪೂರ್ಣ ಪ್ರಮಾಣದಲ್ಲಿ ಉರಿಯುತ್ತದೆ, ಅಂದರೆ ಪ್ರತಿ ಹನಿ ಇಂಧನದಿಂದಲೂ ನಮಗೆ ಹೆಚ್ಚಿನ ಶಕ್ತಿ ಸಿಗುತ್ತದೆ.

ಇಂದಿನ ಪರಿಸ್ಥಿತಿಗೆ ...

ಬೆಂಗಳೂರಿನಂತಹ ನಗರಗಳಲ್ಲಿ ಹೋಟೆಲ್ ಮಾಲೀಕರು ಹಾಗೂ ಸಾರ್ವಜನಿಕರಿಗೆ ಎಲ್‌ಪಿಜಿ ಅಭಾವದಿಂದ ಕಂಗೆಟ್ಟಿದ್ದಾರೆ. ಮುಂದೆಯೂ ಇಂಥ ದಿನಗಳು ಇನ್ನೂ ಕಾಡಬಹುದು. ಆಗ ಈ ನ್ಯಾನೋಬಬಲ್ ತಂತ್ರಜ್ಞಾನ ನಮ್ಮ ನೆರವಿಗೆ ಬರಬಹುದು. ಈ ತಂತ್ರಜ್ಞಾನವು ಕೇವಲ ವಾಹನಗಳಿಗೆ ಮಾತ್ರವಲ್ಲದೆ, ಅಡುಗೆ–ಅನಿಲ ಅಥವಾ ಕೈಗಾರಿಕಾ ಇಂಧನಗಳಿಗೂ ಅನ್ವಯವಾಗಬಲ್ಲದು. ಇಂಧನವು ಹೆಚ್ಚು ದಕ್ಷತೆಯಿಂದ ಉರಿಯುವುದರಿಂದ ಕಡಿಮೆ ಇಂಧನದಲ್ಲಿ ಹೆಚ್ಚು ಅಡುಗೆ ಮಾಡಲು ಸಾಧ್ಯವಾಗುತ್ತದೆ. ಇದರಿಂದ ಇಂಧನದ ಮೇಲಿನ ಅವಲಂಬನೆ ಕಡಿಮೆಯಾಗುವುದಲ್ಲದೆ, ಪರಿಸರಕ್ಕೆ ಹಾನಿಕಾರಕವಾದ ಅನಿಲಗಳ ಬಿಡುಗಡೆಯೂ ಕಡಿಮೆಯಾಗುತ್ತದೆ. ವಿಶೇಷವೆಂದರೆ, ಈ ಪ್ರಕ್ರಿಯೆಗೆ ಯಾವುದೇ ದುಬಾರಿ ರಾಸಾಯನಿಕಗಳ ಅಗತ್ಯವಿಲ್ಲ.

ಪ್ರಸ್ತುತ ಈ ಸಂಶೋಧನೆಯು ಪ್ರಯೋಗಾಲಯದ ಹಂತದಲ್ಲಿದ್ದು, ದೊಡ್ಡ ಮಟ್ಟದ ಎಂಜಿನ್‌ಗಳಲ್ಲಿ ಇದನ್ನು ಅಳವಡಿಸಲು ಇನ್ನು ಕೆಲವು ಅಧ್ಯಯನಗಳ ಅಗತ್ಯವಿದೆ. ಆದರೂ, ಭಾರತೀಯ ವಿಜ್ಞಾನಿಗಳ ಈ ಸಾಧನೆಯು ಇಂಧನ ಕೊರತೆಯ ಸಮಸ್ಯೆಗೆ ಒಂದು ಸುಸ್ಥಿರ ಮತ್ತು ಸ್ವದೇಶಿ ಪರಿಹಾರವನ್ನು ಒದಗಿಸುವ ಭರವಸೆ ನೀಡಿದೆ. ಭವಿಷ್ಯದಲ್ಲಿ ನಮ್ಮ ಹೋಟೆಲ್‌ಗಳು, ವಾಹನಗಳು ಈ 'ನ್ಯಾನೋ ನ್ಯಾನೋಬಬಲ್' ಇಂಧನದಿಂದ ಚಲಿಸಿದರೆ ಆಶ್ಚರ್ಯಪಡಬೇಕಿಲ್ಲ. ❖

ಎಸ್ಸೆಸ್ಸೆಲ್ಸಿ ಪರೀಕ್ಷೆ | ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ | ಪಿಯುಸಿ/ಸಿಇಟಿ ಪರೀಕ್ಷೆ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ


ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೋತ್ತರ

39) ಮಾನವನ ವಿಸರ್ಜನಾಂಗ ವ್ಯೂಹವನ್ನು ತೋರಿಸುವ ಚಿತ್ರವನ್ನು ಬರೆಯಿರಿ ಮತ್ತು ಮೂತ್ರಕೋಶವನ್ನು ಗುರುತಿಸಿ

ಉತ್ತರ:–



40) ನಕ್ಷತ್ರಗಳ ಮಿನುಗುವಿಕೆಯ ಬಗ್ಗೆ ಬರೆಯಿರಿ

ಉತ್ತರ:– ನಕ್ಷತ್ರಗಳ ಮಿನುಗುವಿಕೆಯು ವಾಯುಮಂಡಲದಲ್ಲಿ ನಕ್ಷತ್ರಗಳ ಬೆಳಕಿನ ವಕ್ರೀಭವನದಿಂದುಂಟಾಗಿದೆ. ನಕ್ಷತ್ರಗಳ ಬೆಳಕು ಭೂಮಿಯ ವಾಯುಮಂಡಲವನ್ನು ಪ್ರವೇಶಿಸಿ, ಭೂಮಿಯನ್ನು ತಲುಪುವ ಮುನ್ನ ಸತತವಾಗಿ ವಕ್ರೀಭವನ ಹೊಂದುತ್ತದೆ. ವಾಯುಮಂಡಲದಲ್ಲಿನ ವಕ್ರೀಭವನವು ಮಾಧ್ಯಮದ ವಕ್ರೀಭವನ ಸೂಚ್ಯಂಕವು ಬದಲಾಗುತ್ತಿರುವುದರಿಂದ ಉಂಟಾಗುತ್ತದೆ. ವಾಯುಮಂಡಲವು ನಕ್ಷತ್ರದ ಬೆಳಕನ್ನು ಲಂಬದ ಕಡೆ ಬಾಗಿಸುವುದರಿಂದ ನಕ್ಷತ್ರದ ತೋರಿಕೆಯ ಸ್ಥಾನವು ಅದರ ನೈಜ ಸ್ಥಾನಕ್ಕಿಂತ ಸ್ವಲ್ಪ ಬೇರೆಯಾಗಿರುತ್ತದೆ. ದಿಗಂತದಿಂದ ವೀಕ್ಷಿಸಿದಾಗ ನಕ್ಷತ್ರವು ತನ್ನ ನೈಜ ಎತ್ತರಕ್ಕಿಂತ ಸ್ವಲ್ಪ ಎತ್ತರದಲ್ಲಿ ಕಾಣಿಸುತ್ತದೆ. ಮತ್ತೆ ನಕ್ಷತ್ರದ ಈ ತೋರಿಕೆಯ ಸ್ಥಾನವು ಸ್ಥಿರವಲ್ಲ. ಅದು ಲಘುವಾಗಿ ಬದಲಾಗುತ್ತದೆ. ಏಕೆಂದರೆ, ಭೂಮಿಯ ವಾಯುಮಂಡಲದ ಭೌತಿಕ ಪರಿಸ್ಥಿತಿಗಳು ಸ್ಥಿರವಾಗಿಲ್ಲದ ಕಾರಣ ನಕ್ಷತ್ರಗಳು ತುಂಬಾ ದೂರದಲ್ಲಿರುವುದರಿಂದ ಅವು ಅಂದಾಜು ಬಿಂದು ಗಾತ್ರದ ಬೆಳಕಿನ ಮೂಲಗಳಂತೆ ಕಾಣುತ್ತವೆ. ನಕ್ಷತ್ರಗಳಿಂದ ಬರುವ ಬೆಳಕಿನ ಕಿರಣಗಳ ಹಾದಿಯು ಸ್ವಲ್ಪ ಮಟ್ಟಿಗೆ ಬದಲಾಗುವುದರಿಂದ ನಕ್ಷತ್ರಗಳ ತೋರಿಕೆಯ ಸ್ಥಾನದಲ್ಲಿ ಸ್ಥಿತ್ಯಂತರವಾಗುತ್ತದೆ ಮತ್ತು ಕಣ್ಣನ್ನು ಪ್ರವೇಶಿಸುವ ನಕ್ಷತ್ರಗಳ ಬೆಳಕು ಮಿನುಗುತ್ತದೆ. ನಕ್ಷತ್ರಗಳು ಕೆಲವೊಮ್ಮೆ ಪ್ರಕಾಶಮಾನವಾಗಿ ಮತ್ತು ಕೆಲವೊಮ್ಮೆ ಕಂದಿದಂತೆ ಕಾಣುತ್ತವೆ. ಇದೇ ನಕ್ಷತ್ರಗಳ ಮಿನುಗುವಿಕೆಯ ಪರಿಣಾಮ.

41) ಸೂರ್ಯೋದಯದ ಕಾಲದಲ್ಲಿ ಸೂರ್ಯನು ಕೆಂಪಾಗಿ ಆದರೆ ಮಧ್ಯಾಹ್ನದಲ್ಲಿ ಬೆಳ್ಳಗೆ ಕಾಣಲು ಕಾರಣಗಳನ್ನು ತಿಳಿಸಿ.

ಉತ್ತರ:– ಸೂರ್ಯನ ಬೆಳಕು ನಮ್ಮ ಕಣ್ಣನ್ನು ತಲುಪುವ ಮೊದಲು ದಿಗಂತದ ಸಮತಲದಲ್ಲಿ ಸಮೀಪದಲ್ಲಿನ ಗಾಳಿಯ ದಪ್ಪ ಪದರದಲ್ಲಿ ಹಾಗೂ ಹೆಚ್ಚು ದೂರ ವಾಯುಮಂಡಲದಲ್ಲಿ ಹಾದು ಹೋಗುತ್ತದೆ

ದಿಗಂತದ ಬಳಿ ಕಣಗಳಿಂದ ಹೆಚ್ಚಿನ ನೀಲಿ ಬೆಳಕು ಮತ್ತು ಕಡಿಮೆ ತರಂಗ ದೂರದ ಬೆಳಕು ಚದುರಿ ಹೋಗುತ್ತದೆ. ಇದರಿಂದಾಗಿ ನಮ್ಮ ಕಣ್ಣನ್ನು ತಲುಪುವ ಬೆಳಕು ಹೆಚ್ಚು ತರಂಗದೂರವುಳ್ಳದ್ದಾಗಿದೆ ಇದರಿಂದ ಸೂರ್ಯ ಕೆಂಪು ಬಣ್ಣದಿಂದ ಕಾಣ ಸಿಗುತ್ತದೆ.

ಮಧ್ಯಾಹ್ನದಲ್ಲಿ ನೆತ್ತಿಯ ಮೇಲಿನ ಸೂರ್ಯನ ಬೆಳಕು ನಮ್ಮ ಕಣ್ಣನ್ನು ತಲುಪಲು ಕಡಿಮೆ ದೂರವನ್ನು ಪ್ರಯಾಣಿಸುತ್ತದೆ, ಮಧ್ಯಾಹ್ನದ ಸಮಯ ಸೂರ್ಯನು ಬೆಳ್ಳಗೆ ಕಾಣುತ್ತಾನೆ ಏಕೆಂದರೆ ಸ್ವಲ್ಪವೇ ನೀಲಿ ಮತ್ತು ನೇರಳೆ ಬಣ್ಣಗಳು ಚದುರುತ್ತದೆ.


42) ಭಿನ್ನತೆಯ ಮಹತ್ವದ ಕುರಿತು ಬರೆಯಿರಿ

ಉತ್ತರ:– ಭಿನ್ನತೆಯ ಮಹತ್ವ ಪರಿಸರದಲ್ಲಿನ ಜೀವಿ ಸಮುದಾಯಗಳು ಸಂತಾನೋತ್ಪತ್ತಿ ನಡೆಸುವ ತಮ್ಮ ಸಾಮರ್ಥ್ಯವನ್ನು ಬಳಸಿಕೊಂಡು ಸೂಕ್ತವಾದ ಸ್ಥಾನಗಳಲ್ಲಿ ಅಥವಾ ಆವಾಸಗಳಲ್ಲಿ ಸೇರಿಕೊಂಡಿವೆ. ಸಂತಾನೋತ್ಪತ್ತಿ ಸಮಯದಲ್ಲಿ ಡಿಎನ್‌ಎ ಸ್ವಪ್ರತೀಕರಣದಲ್ಲಿನ ಸ್ಥಿರತೆಯು ಜೀವಿಯ ದೇಹ ವಿನ್ಯಾಸದ ಲಕ್ಷಣಗಳನ್ನು ನಿರ್ವಹಿಸಲು ಮುಖ್ಯವಾಗುತ್ತದೆ. ಅದು ಜೀವಿಯು ನಿರ್ದಿಷ್ಟ ಆವಾಸವನ್ನು ಬಳಸಿಕೊಳ್ಳಲು ಅನುವು ಮಾಡಿಕೊಡುತ್ತದೆ. ಆದ್ದರಿಂದ, ಸಂತಾನೋತ್ಪತ್ತಿಯು ಜೀವಿಪ್ರಭೇದಗಳ ಸಂಖ್ಯೆಯ ಸ್ಥಿರತೆಯೊಂದಿಗೆ ಜೋಡಣೆಗೊಂಡಿದೆ. ಆದಾಗ್ಯೂ, ಜೀವಿಗಳ ನಿಯಂತ್ರಣಕ್ಕೆ ಸಿಗದ ಕಾರಣಗಳಿಂದಾಗಿ ಆವಾಸಗಳು ಬದಲಾಗಬಹುದು. ಭೂಮಿಯ ಮೇಲಿನ ತಾಪ ಏರಬಹುದು ಅಥವಾ ಇಳಿಯಬಹುದು, ನೀರಿನ ಮಟ್ಟ ಬದಲಾಗಬಹುದು ಅಥವಾ ಅಲ್ಲಿ ಉಲ್ಕಾಘಾತ ಉಂಟಾಗಬಹುದು. ಇವು ಯೋಚಿಸಬಹುದಾದ ಕೆಲವು ಉದಾಹರಣೆಗಳು. ಒಂದುವೇಳೆ ಸಂತಾನೋತ್ಪತ್ತಿ ನಡೆಸುವ ಜೀವಿಗಳ ಸಮುದಾಯ ಒಂದು ನಿರ್ದಿಷ್ಟ ಆವಾಸಕ್ಕೆ ಹೊಂದಿಕೊಂಡಿದ್ದರೆ ಮತ್ತು ಒಂದು ವೇಳೆ ಆ ಆವಾಸವು ತೀವ್ರವಾದ ಬದಲಾವಣೆಗಳಿಗೆ ಗುರಿಯಾದರೆ ಆ ಜೀವಿ ಸಮುದಾಯವು ನಶಿಸಿಹೋಗಬಹುದು. ಆದಾಗ್ಯೂ, ಈ ಸಮುದಾಯದ ಕೆಲವು ಜೀವಿಗಳಲ್ಲಿ ಕೆಲವು ಭಿನ್ನತೆಗಳು ಕಂಡುಬಂದರೆ ಅವುಗಳಿಗೆ ಬದುಕುಳಿಯುವ ಕೆಲವು ಅವಕಾಶಗಳಿವೆ. ಒಂದು ವೇಳೆ ಸಮಶೀತೋಷ್ಣ ನೀರಿನಲ್ಲಿ ಬ್ಯಾಕ್ಟೀರಿಯಾ ಸಮುದಾಯವೊಂದು ವಾಸಿಸುತ್ತಿದ್ದು ಮತ್ತು ಜಾಗತಿಕ ತಾಪದ ಏರಿಕೆಯಿಂದಾಗಿ ನೀರಿನ ತಾಪ ಏರಿಕೆಯಾದರೆ ಇವುಗಳಲ್ಲಿ ಬಹುತೇಕ ಬ್ಯಾಕ್ಟೀರಿಯಾಗಳು ಸಾಯಬಹುದು. ಆದರೆ, ಶಾಖವನ್ನು ನಿರೋಧಿಸುವ ಕೆಲವು ರೂಪಾಂತರಗಳು ಉಳಿದುಕೊಳ್ಳಬಹುದು ಮತ್ತು ಸಂತಾನೋತ್ಪತ್ತಿ ನಡೆಸಬಹುದು. ಹೀಗೆ ಕೆಲವು ವೇಳೆ ಭಿನ್ನತೆಯು ಪ್ರಭೇದಗಳು ಬದುಕುಳಿಯಲು ಉಪಯುಕ್ತವಾಗಿವೆ.

43) ತೆರೆದ ಪತ್ರರಂಧ್ರವನ್ನು ತೋರಿಸುವ ಚಿತ್ರವನ್ನು ಬರೆದು ಕೆಳಗಿನ ಭಾಗಗಳನ್ನು ಗುರುತಿಸಿ (ಜೂನ್ 2019)

1) ಕಾವಲು ಕೋಶ 2) ಪತ್ರರಂಧ್ರ 3) ಕ್ಲೋರೋ ಪ್ಲಾಸ್ಟ್

ಉತ್ತರ:–



44) ವಿಭವಾಂತರದ ಅಂತಾರಾಷ್ಟ್ರೀಯ ಏಕಮಾನ ಯಾವುದು? ವಿಭವಾಂತರವನ್ನು ಅಳೆಯಲು ಬಳಸುವ ಸಾಧನವನ್ನು ಹೆಸರಿಸಿ.

ಉತ್ತರ:– * ವಿಭವಾಂತರದ ಅಂತಾರಾಷ್ಟ್ರೀಯ ಏಕಮಾನ :– ವೋಲ್ಟ್
* ವಿಭವಾಂತರವನ್ನು ಅಳೆಯಲು ಬಳಸುವ ಸಾಧನ:– ವೋಲ್ಟ್ ಮೀಟರ್

CHEMISTRY

MULTIPLE CHOICE QUESTIONS

18) Match the following:-

	Column – I		*Column – II*
i	Simple vacancy defect	a	Shown by the non-ionic solids and increases density of the solid.
ii	Simple interstitial defect	b	Shown by the ionic solids and decreases density of the solid.
iii	Frenkel defect	c	Shown by the non-ionic solids and density of the solid decreases.
iv	Schotty defect	d	Shown by the ionic solids and density of the solid remains same

a) (i) – (c), (ii) – (a), (iii) – (d), (iv) – (b)
b) (i) – (d), (ii) – (a), (iii) – (b), (iv) – (c)
c) (i) – (b), (ii) – (a), (iii) – (d), (iv) – (c)
d) (i) – (a), (ii) – (c), (iii) – (d), (iv) – (b)

Ans:-a

19) The set of quantum numbers for the outermost electron for copper in its ground state is ....

a) 3, 2 , 2 , + ½ b) 4, 1, 1, + ½
c) 4 , 2 , 2 , + ½ d) 4 , 0 , 0 , + ½

Ans:- d

20) For the reversible reaction $A_{(g)} + B_{(g)} \rightleftharpoons C_{(g)} + D_{(g)};\ \Delta G^0 = -350\,kJ$

Which of the following statements is true?

a) Equilibrium constant is greater than 1
b) The entropy change is negative
c) The reaction is thermodynamically not feasible
d) The reaction should be instantaneous

Ans:- a

21) Copper is extracted from copper pyrites by heating in a Bessemer converter. The method is based on the principle that

a) Iron has less affinity for oxygen than sulphur at high temperature.
b) Sulphur has less affinity for oxygen at high temperature.
c) Copper has more affinity for oxygen than sulphur at high temperature.
d) Copper has less affinity for oxygen than sulphur at high temperature.

Ans: (C) Copper has more affinity for oxygen than sulphur at high temperature.

22)

$\alpha-D-(+)-$ glucose and $\beta-D-(+)-$ glucose

(A) Enantiomers (B) Conformers
(C) Epimers (D) Anomers

Ans. D

Expln:-

$\alpha-D-(+)-$ glucose and $\beta-D-(+)-$ glucose are anomeric at first carbon so called anomers

23) Sucrose is NOT a reducing sugar since

a) it is chemically stable
b) it contains no free aldehydes or keto group adjacent to a CH-OH group
c) it is built up of a fructose unit
d) it is optically active

Ans:- b

24) Which of the following is the strongest base?

a) OH^- b) CH_3O^-
c) CH_3COO^- d) Cl^-

Ans : (a)

Expln:- To check the basicity of an ion, the conjugate acid must be weak. The conjugate acids are given below: H_2O, CH_3OH, CH_3COOH and HCl.

We know that methanol is a stronger acid than water.


Weaker the acid, stronger is the conjugate base, by that logic, OH^- is the strongest base among the given options.

25) Which one of the following is NOT true regarding electromeric effect?

a) It results in the appearance of partial charges on the carbon atoms
b) It is a temporary effect
c) It operates on multiple bonds
d) It requires an attacking reagent

Ans:- a

26) below two compounds the vapour pressure of (B) at a particular temperature is ......



(A) (B)

a) lower than that of (A)
b) higher than that of (A)
c) same as that of (A)
d) higher or lower than (A), depending on the size of the vessel

Ans:- b

27) Adenosine is an example of.........

a) Purine base b) Nucleoside
c) Nucleotide d) Pyrimidine base

Ans: b

Expl:- When adenine (purine base) combines with ribose sugar, adenosine is formed. It is a nucleoside.

28) Graphite is a soft solid lubricant extremely difficult to melt. The reason for this anomalous behavior is that graphite -

a) has molecules of variable molecular masses like polymers
b) has carbon atoms arranged in large plates of rings of strongly bound carbon atoms with weak interpolate bonds
c) is a non-crystalline substance
d) is an allotropic form of carbon **Ans:- b**

ಪಿತೃತ್ವ ರಜೆ: ಕಾನೂನು ರೂಪಿಸಲು ನಿರ್ದೇಶನ



ನವದೆಹಲಿ (ಪಿಟಿಐ): 'ಮಗುವಿನ ಪೋಷಣೆ, ಬೆಳವಣಿಗೆಯಲ್ಲಿ ತಾಯಿಯಷ್ಟೇ ಪ್ರಮುಖ ಪಾತ್ರವೇ ಆಗಿದ್ದರೂ, ತಂದೆಯ ಪಾತ್ರವನ್ನು ಕಡೆಗಣಿಸುವಂತಿಲ್ಲ. ಕಡೆಗಣಿಸುವುದು ನ್ಯಾಯೋಚಿತವೂ ಅಲ್ಲ' ಎಂದಿರುವ ಸುಪ್ರೀಂ ಕೋರ್ಟ್, 'ಪಿತೃತ್ವ ರಜೆಗೆ ಪೂರಕವಾದ ಕಾನೂನು ಜಾರಿಗೊಳಿಸುವಂತೆ' ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಿದೆ.

'ಮಕ್ಕಳ ಪೋಷಣೆಯ ಒಬ್ಬರಷ್ಟೇ ನಿರ್ವಹಿಸುವಂತಹುದಲ್ಲ. ಹೀಗಾಗಿ ಪಿತೃತ್ವ ರಜೆಯನ್ನು ಸಾಮಾಜಿಕ ಭದ್ರತಾ ಸೌಲಭ್ಯ ಎಂದು ಪರಿಗಣಿಸುವಂತಹ ಕಾನೂನು ಜಾರಿಗೆ ತರಬೇಕು' ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಸೂಚಿಸಿತು.

ಲಿಂಗ ಸಮಾನತೆ ಉತ್ತೇಜಿಸುತ್ತದೆ: 'ಪಿತೃತ್ವ ರಜೆಯು, ಮಕ್ಕಳ ಪೋಷಣೆ ಮತ್ತು ಆರೈಕೆಯಲ್ಲಿ ತಂದೆಯು ಸಕ್ರಿಯವಾಗಿ ಭಾಗವಹಿಸಲು ಅವಕಾಶ ಮಾಡಿಕೊಡುತ್ತದೆ. ಜತೆಗೆ ಪೋಷಕರ ಬಗ್ಗೆ ಸಮಾನ ರೀತಿಯ ತಿಳಿವಳಿಕೆ ಬೆಳೆಸುತ್ತದೆ. ಅಲ್ಲದೆ ಇದು, ಮನೆ ಮತ್ತು ಕೆಲಸದ ಸ್ಥಳದಲ್ಲಿ ಲಿಂಗ ಸಮಾನತೆಯನ್ನು ಉತ್ತೇಜಿಸುತ್ತದೆ' ಎಂದು ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ ಮತ್ತು ಆರ್. ಮಹಾದೇವನ್ ಅವರ ಪೀಠ ಒತ್ತಿ ಹೇಳಿದೆ.

'ಮಗುವಿನ ಭಾವನಾತ್ಮಕ, ದೈಹಿಕ ಮತ್ತು ಮಾನಸಿಕ ಬೆಳವಣಿಗೆಯಲ್ಲಿ ತಾಯಿಯದ್ದು ಪ್ರಮುಖ ಪಾತ್ರ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ತಂದೆಯದ್ದೂ ಅಷ್ಟೇ ಮಹತ್ವದ ಪಾತ್ರ, ಅದನ್ನು ಕಡೆಗಣಿಸುವುದು ಅನ್ಯಾಯ' ಎಂದು ಪೀಠ ತಿಳಿಸಿದೆ.

'ಪ್ರತಿ ಪೋಷಕರೂ ಮಗುವಿನ ಸರ್ವಾಂಗೀಣ ಬೆಳವಣಿಗೆಗೆ ಕೊಡುಗೆ ನೀಡಬೇಕು. ಈ ನಿಟ್ಟಿನಲ್ಲಿ ಜವಾಬ್ದಾರಿಯನ್ನು ಹಂಚಿಕೊಳ್ಳಬೇಕು' ಎಂದು ಪೀಠ ಸಲಹೆ ನೀಡಿದೆ.

ರಜೆ ಅವಧಿ, ಅಗತ್ಯಗಳಿಗೆ ಸ್ಪಂದಿಸಬೇಕು: 'ಪಿತೃತ್ವ ರಜೆಯ ಅವಧಿಯು ಪೋಷಕರು ಮತ್ತು ಮಗುವಿನ ಅಗತ್ಯಗಳಿಗೆ ಸ್ಪಂದಿಸುವ ರೀತಿಯಲ್ಲಿ ನಿರ್ಧರಿಸಬೇಕು' ಎಂದು ಪೀಠ ಸೂಚಿಸಿದೆ.

'ಈ ಅವಧಿಯಲ್ಲಿ ಮಗುವಿಗೆ ತಂದೆಯ ಉಪಸ್ಥಿತಿ ಅಗತ್ಯ. ಉದ್ಯೋಗ ನಿರ್ಬಂಧಗಳಿಂದಾಗಿ ತಂದೆಯ ಅನುಪಸ್ಥಿತಿ ಎದುರಾಗದಂತೆ ನೋಡಿಕೊಳ್ಳಬೇಕು' ಎಂದೂ ಪೀಠ ಸೂಚಿಸಿದೆ.

'ಮದುವೆಯಾಗದೇ ಲೈಂಗಿಕ ಸಂಪರ್ಕ: ಅತ್ಯಾಚಾರವಲ್ಲ'

ಪ್ರಜಾವಾಣಿ ವಾರ್ತೆ

ಲಖನೌ: ಲೈಂಗಿಕ ಸಂಬಂಧವನ್ನು ಹೊಂದಿದ ಬಳಿಕ, ಮದುವೆಯಾಗಲು ಭರವಸೆಯನ್ನು ಈಡೇರಿಸದೇ ಹೋದಲ್ಲಿ ಅದನ್ನು ಅತ್ಯಾಚಾರ ಎಂದು ಪರಿಗಣಿಸಲಾಗುವುದಿಲ್ಲ ಎಂದು, ಪ್ರಕರಣವೊಂದರಲ್ಲಿ ಅಲಹಾಬಾದ್ ಹೈಕೋರ್ಟ್ ಮಹತ್ವದ ತೀರ್ಪು ನೀಡಿದೆ.

ಅಜಯ್ ಸೈನಿ ಎಂಬಾತ ತನಗೆ ಮತ್ತು ಬರುವ ಪಾನೀಯವನ್ನು ನೀಡಿ, ಬಳಿಕ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ. ಮದುವೆಯಾಗುವುದಾಗಿ ಭರವಸೆ ನೀಡಿ 3 ವರ್ಷ ಲೈಂಗಿಕ ಸಂಬಂಧ ಮುಂದುವರಿಸಿದ್ದಾನೆ ಎಂದು ಆರೋಪಿಸಿ ಮಹಿಳೆಯೊಬ್ಬರು ಪ್ರಕರಣ ದಾಖಲಿಸಿದ್ದಾರೆ. ಇದನ್ನು ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಯನ್ನು ಅಂಗೀಕರಿಸುವ ವೇಳೆ, ನ್ಯಾಯಮೂರ್ತಿ ಅವಿನಾಶ್ ಸಕ್ಸೇನಾ ಅವರು ಈ ತೀರ್ಪು ನೀಡಿದ್ದಾರೆ.

'ದೊಡ್ಡ ಮಗುವಿನ ದತ್ತು ಪಡೆದರೂ ತಾಯ್ತನ ರಜೆ'

ಒಂದನೇ ಪುಟದಿಂದ...

ಇಬ್ಬರು ಮಕ್ಕಳನ್ನು ದತ್ತು ಪಡೆದಿರುವ ವಕೀಲರಾದ ಹಂಸಾನಂದಿನಿ ನಂದೂರಿ ಅವರು ಈ ಅರ್ಜಿ ಸಲ್ಲಿಸಿದ್ದರು.

'ಮಗುವಿನ ವಯಸ್ಸನ್ನು ಮಾತ್ರ ಗಮನದಲ್ಲಿಟ್ಟುಕೊಂಡು ತಾಯ್ತನ ಸೌಲಭ್ಯವನ್ನು ಸೀಮಿತಗೊಳಿಸಲು ಆಗದು. ಜೈವಿಕ ತಾಯಿಗೆ ಇರುವ ಹಕ್ಕುಗಳು ಮತ್ತು ಬಾಧ್ಯತೆಗಳು ದತ್ತು ಪಡೆದ ಮಗುವಿನ ತಾಯಿಗೂ ಇರುತ್ತವೆ' ಎಂದು 100 ಪುಟಗಳ ತೀರ್ಪಿನಲ್ಲಿ ಪೀಠ ಹೇಳಿದೆ.

ಮೂರು ತಿಂಗಳು ಅಥವಾ ಅದಕ್ಕಿಂತ ಹೆಚ್ಚಿನ ವಯಸ್ಸಿನ ಮಗುವನ್ನು ದತ್ತು ತೆಗೆದುಕೊಳ್ಳುವ ಮಹಿಳೆಯರನ್ನು ಮೂರು ತಿಂಗಳೊಳಗಿನ ಮಗುವನ್ನು ದತ್ತು ತೆಗೆದುಕೊಳ್ಳುವ ಮಹಿಳೆಯರಿಗೆ ಸಮಾನವಾಗಿ ಕಾಣಬೇಕು ಎಂದಿದೆ.

ಪೀಠ ಹೇಳಿದ್ದು...:

- ತಾಯ್ತನದ ಸೌಲಭ್ಯ ಉದ್ದೇಶವು ಹೆರಿಗೆಯ ಪ್ರಕ್ರಿಯೊಂದಿಗೆ ಸಂಬಂಧ ಹೊಂದಿಲ್ಲ. ಅದು ತಾಯ್ತನದ ಪ್ರಕ್ರಿಯೆಗೆ ಸಂಬಂಧಿಸಿದ್ದಾಗಿದೆ
- ದತ್ತು ಸ್ವೀಕಾರ ಪ್ರಕ್ರಿಯೆ ಮಗು ಮತ್ತು ದತ್ತು ಪಡೆದ ತಾಯಿ ಇಬ್ಬರ ನಡುವಿನ ಭಾವನಾತ್ಮಕ, ಮಾನಸಿಕ ಮತ್ತು ಪ್ರಾಯೋಗಿಕ ಹೊಂದಾಣಿಕೆಗಳನ್ನು ಒಳಗೊಂಡಿರುತ್ತದೆ
- ಯಾವುದೇ ವಯಸ್ಸಿನಲ್ಲಿ ದತ್ತು ಪಡೆದ ಮಗು ಹೊಸ ಕೌಟುಂಬಿಕ ವಾತಾವರಣಕ್ಕೆ ಹೊಂದಿಕೊಳ್ಳಬೇಕಾದರೆ ನಿರಂತರ ಆರೈಕೆ ಮತ್ತು ಪೋಷಕರ ಉಪಸ್ಥಿತಿಯ ಅಗತ್ಯವಿರುತ್ತದೆ
- ಮಾತೃತ್ವ ರಜೆಯ ರಕ್ಷಣೆಯು ಪ್ರಮುಖ ಮಾನವೀಯ ಹಕ್ಕು. ಏಕೆಂದರೆ, ಇದು ಮಾನವ ವ್ಯಕ್ತಿತ್ವದ ಪೂರ್ಣ ಬೆಳವಣಿಗೆ ಮತ್ತು ಸಮಾನತೆಯ ಸಾಕ್ಷಾತ್ಕಾರಕ್ಕೆ ಅಗತ್ಯವಾದ ಪರಿಸ್ಥಿತಿಗಳನ್ನು ಗುರುತಿಸುತ್ತದೆ

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಪ್ರಪಂಚದಲ್ಲಿ ಎಲ್ಲವೂ ಭಯದಿಂದ ತುಂಬಿದೆ. ವೈರಾಗ್ಯದಲ್ಲಿ ಮಾತ್ರ ಭಯವಿಲ್ಲ.

–ಸ್ವಾಮಿ ವಿವೇಕಾನಂದ

ಸಂಪಾದಕೀಯ

ಆಡಳಿತಯಂತ್ರಕ್ಕೆ ಸದನ ಸದರ 'ಉತ್ತರ'ದಾಯಿತ್ವ ಮರೆತ ಸರ್ಕಾರ

ಅತ್ಯುತ್ತಮ ಸಂಸದೀಯ ನಡವಳಿಕೆಗೆ ದೇಶದಲ್ಲೇ ಕೀರ್ತಿಶಿಖರದಂತಿದ್ದ ಕರ್ನಾಟಕದ ವಿಧಾನಮಂಡಲ ಕಳೆದ ಎರಡು ದಶಕಗಳಿಂದೀಚೆಗೆ ಹಾದಿ ತಪ್ಪಿದೆ, ತಪ್ಪುತ್ತಲೇ ಇದೆ. ಶಾಸಕರ ಪ್ರಶ್ನೆಗಳಿಗೆ ಉತ್ತರಿಸದ ಸಚಿವರು ಹಾಗೂ ಅಧಿಕಾರಿಗಳ ನಡೆಯಿಂದ ಬೇಸರಗೊಂಡ ಸಭಾಧ್ಯಕ್ಷರು ಸರ್ಕಾರಕ್ಕೆ ಚಾಟಿ ಬೀಸಿದ ಪ್ರಸಂಗ, ವಿಧಾನಮಂಡಲದ ಕಲಾಪ ತಲುಪಿರುವ ಅಧೋಗತಿಗೆ ಹೊಸ ನಿದರ್ಶನದಂತಿದೆ. ವಿವಿಧ ಧಾರೆಯ ಜನ ಚಳವಳಿಗಳ ಒಡನಾಡಿ ಆಗಿದ್ದುಕೊಂಡು, ಜನರ ಸಂಕಷ್ಟವನ್ನು ಹೋಗಲಾಡಿಸಲು ಅವಿರತ ಶ್ರಮಿಸಿ ವಿಧಾನಸೌಧದ ಮೆಟ್ಟಿಲೇರಿದ್ದವರು ಉತ್ತಮ ಸಂಸದೀಯ ಪಟುತ್ವವನ್ನು ಹೊರಹಾಕಿದ್ದರು. ಎರಡು ದಶಕಗಳಿಂದೀಚೆಗೆ ಕಲಾಪದ ಘನತೆ ಕುಗ್ಗಿರುವುದರಲ್ಲಿ ರಾಜ್ಯವನ್ನು ಆಳಿದ ಬಿಜೆಪಿ, ಜೆಡಿಎಸ್ ಹಾಗೂ ಈ ಅವಧಿಗೆ ನಡೆಸುತ್ತಿರುವ ಕಾಂಗ್ರೆಸ್ ಪಕ್ಷಗಳ ನಾಯಕರ ಪಾತ್ರವೂ ಸಮಾನವಾಗಿಯೇ ಇದೆ. ಈ ವಿಷಯವು ಅನೇಕ ಬಾರಿ ಸದನದಲ್ಲಿ ಗಂಭೀರ ಚರ್ಚೆಗೂ ಎಡೆ ಮಾಡಿಕೊಟ್ಟಿದೆ. ಆತ್ಮಾವಲೋಕನ ಮಾಡಿಕೊಳ್ಳಬೇಕಾದ ರಾಜಕೀಯ ನೇತಾರರ ಪೈಕಿ ಬಹುತೇಕರು ಆತ್ಮವಂಚನೆ ಮಾಡಿಕೊಳ್ಳುತ್ತಿರುವುದರಿಂದ ಪರಿವರ್ತನೆಯೇ ಆಗಿಲ್ಲ ಎನ್ನುವ ಮಟ್ಟಕ್ಕೆ ಮುಟ್ಟಿದೆ. ಸದನದ ಘನತೆ, ಗಾಂಭೀರ್ಯಕ್ಕೆ ಕುಂದಾಗದಂತೆ, ಜನರ ಕಷ್ಟಗಳಿಗೆ ಬಾಯಾಗುವಂತೆ ಕಲಾಪವನ್ನು ನಡೆಸಬೇಕಾದ ಹೊಣೆಯಿರುವ ಸಭಾಧ್ಯಕ್ಷರ ಸೂಚನೆಗಳನ್ನು ಪಾಲಿಸದಿರುವುದು ಈ ಎಲ್ಲ ಬೆಳವಣಿಗೆಗಳ ಉತ್ತುಂಗ.

ಮಾರ್ಚ್ 16ರ ಪ್ರಶ್ನೋತ್ತರ ಕಲಾಪದ ಬಳಿಕ, ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಉತ್ತರಗಳನ್ನು ಮಂಡಿಸಿದ ಗೃಹ ಸಚಿವ ಜಿ. ಪರಮೇಶ್ವರ, '230 ಪ್ರಶ್ನೆಗಳ ಪೈಕಿ 84 ಪ್ರಶ್ನೆಗಳಿಗೆ ಉತ್ತರ ಮಂಡಿಸಲಾಗಿದೆ' ಎಂದರು. ಇದು ವಿರೋಧ ಪಕ್ಷದ ಸದಸ್ಯರನ್ನು ಕೆರಳಿಸಿತು. ಆಗ ಮಧ್ಯ ಪ್ರವೇಶಿಸಿದ ಸಭಾಧ್ಯಕ್ಷರು 'ಸಮಯಕ್ಕೆ ಸರಿಯಾಗಿ ಮಂತ್ರಿಗಳು ಬರುತ್ತಿಲ್ಲ, ಈಗಾಗಲೇ ನಾನು ಬಾರಿ ಸೂಚನೆ ನೀಡಿದ್ದೇನೆ, ಏನನ್ನೇ ಬಾರಿಯೂ ಸುಧಾರಿಸದಿದ್ದರೆ ಏನು ಮಾಡುವುದು? ಸಚಿವರು ಹಾಗೂ ಕಾರ್ಯದರ್ಶಿಗಳು ಈ ಬಗ್ಗೆ ಸ್ಪಷ್ಟನೆ ನೀಡುವವರೆಗೆ ಸದನ ನಡೆಸುವುದಿಲ್ಲ' ಎಂದು ಸ್ವಯಂ ಸ್ಥಗಿತಗೊಳಿಸಿದರು. ಸಭಾಧ್ಯಕ್ಷರು ಸದನವನ್ನು ಮುಂದೂಡಿದ್ದು ಏಕಪಕ್ಷೀಯ ಹೊರನಡೆಯುವುದು ಹೀಗೆ ಅಪರೂಪ. ಇದು ಸರ್ಕಾರಕ್ಕೆ ಉಂಟಾಗಿರುವ ಅತೀವ ಮುಜುಗರದ ಪ್ರಸಂಗ. ಕಲಾಪ ನಡೆಸಲು 'ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳು' ಎಂಬ ಪದ್ಧತಿಯನ್ನು ಸ್ಪಷ್ಟ ಚೌಕಟ್ಟನ್ನು ಹಾಕಿಕೊಳ್ಳಲಾಗಿದೆ. ಪ್ರಶ್ನೋತ್ತರ ಕಲಾಪ ಹೇಗೆ ನಡೆಯಬೇಕು ಎಂಬ ವಿವರಣೆಯೂ ಇದೆ. ಅಧಿವೇಶನಕ್ಕೆ ಗೊತ್ತುಪಡಿಸಿದ ದಿನಾಂಕದಿಂದ ಹಿಂದಿನ ಹದಿನೈದು ದಿನ ಮೊದಲು ಸದಸ್ಯರು ಪ್ರಶ್ನೆಯ ಬಗೆಗಿನ ಸೂಚನಾಪತ್ರ ಕಳುಹಿಸಬೇಕು. ಉತ್ತರಕ್ಕಾಗಿ ಸಚಿವರಿಗೆ ಕಳುಹಿಸಿದ ದಿನದಿಂದ ಹನ್ನೆರಡು ದಿನಗಳೊಳಗೆ ಪ್ರಶ್ನೆಗಳಿಗೆ ಉತ್ತರಗಳನ್ನು ಸಲ್ಲಿಸಬೇಕು ಎಂಬ ನಿಯಮ ನೀಡಲಾಗಿದೆ. ಕಲಾಪ ನಡೆಯುವ ದಿನದ ಪೂರ್ವ ಕೇಳಿ, ಅಂದೇ ಉತ್ತರ ನೀಡುವ ತುರ್ತು ಸಚಿವರಿಗಿರಲಿಲ್ಲ. ಇಲಾಖೆಯ ಮುಖ್ಯಸ್ಥರಿಗಿದ್ದರೂ ಸಾಕಷ್ಟು ಅವಕಾಶ ಕಲ್ಪಿಸಿದ್ದರೂ ಉತ್ತರ ಸಿದ್ಧಪಡಿಸುವಲ್ಲಿ ಅಧಿಕಾರಿ, ಸಿಬ್ಬಂದಿ ನಿರ್ಲಕ್ಷ್ಯ ತೋರುತ್ತಾರೆ ಎಂದರೆ ಅದು ಶಾಸನಸಭೆಯ ಬಗ್ಗೆ ಅವರಿಗಿರುವ ಅಸಡ್ಡೆ, ಉದ್ಧಟತನವನ್ನು ತೋರಿಸುತ್ತದೆ. ಇದಕ್ಕೆ ಕಡಿವಾಣ ಹಾಕುವ ಹೊಣೆ ಇದೆ.

ಕಲಾಪದ ಆರಂಭದಲ್ಲಿ ಒಂದು ಗಂಟೆ ಪ್ರಶ್ನೋತ್ತರವಿದ್ದು, 15 ಪ್ರಶ್ನೆಗಳಿಗೆ ಮಾತ್ರ ಸಂಬಂಧಪಟ್ಟ ಸಚಿವರು ಸದನಕ್ಕೆ ಉತ್ತರ ನೀಡುತ್ತಾರೆ. ಹೆಚ್ಚು ಪ್ರಶ್ನೆಗಳು ಬರುವುದರಿಂದ ಚುಕ್ಕೆ ಗುರುತಿನ ಅಂದರೆ ಬಾಯಿಮಾತಿನ ಮೂಲಕ ಉತ್ತರ ನೀಡುವ ಪ್ರಶ್ನೆಗಳನ್ನು ಲಾಟರಿ ಮೂಲಕ ಆಯ್ಕೆ ಮಾಡುವ ಪದ್ಧತಿಯನ್ನು ವಿಧಾನಮಂಡಲ ಅನುಸರಿಸುತ್ತಿದೆ. ಮೌಖಿಕ ಉತ್ತರ ನೀಡಬೇಕಾದ ಪ್ರಶ್ನೆಗಳನ್ನು ಸೇರಿಸಿ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಉತ್ತರವನ್ನು ಸದನದಲ್ಲಿ ಮಂಡಿಸಲಾಗುತ್ತದೆ. ಇವೆಲ್ಲವೂ ಮೊದಲೇ ನಿಗದಿಯಾಗಿದ್ದರೂ ಆಯಾ ಅಧಿವೇಶನ ನಡೆಯುವುದಕ್ಕೂ ಮುನ್ನ ಪ್ರಶ್ನೆಗಳಿಗೆ ಅದರ ಮುಂದಿನ ಎರಡು-ಮೂರನೇ ಅಧಿವೇಶನ ಕಳೆದರೂ ಉತ್ತರವೇ ಸಿಗದ ನಿದರ್ಶನಗಳೂ ಇವೆ. ಮೂರು ತಿಂಗಳಿಗೊಮ್ಮೆ ನಡೆಯುವ ಅಧಿವೇಶನದಲ್ಲಿ ತಮ್ಮ ಕ್ಷೇತ್ರದ ಸಮಸ್ಯೆ ಹಾಗೂ ಇಲಾಖೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳಿ ಬಗೆಹರಿಸಿಕೊಳ್ಳುವ ಅಧಿಕಾರ ಸಂವಿಧಾನದತ್ತವಾಗಿ ಶಾಸಕರಿಗಿದೆ. ಇದನ್ನು ಕಡೆಗಣಿಸುವುದು ಸಂವಿಧಾನಕ್ಕೆ, ಶಾಸಕರನ್ನು ಚುನಾಯಿಸಿದ ಮತದಾರರಿಗೆ ಮಾಡುವ ಅವಮಾನ. ಸರ್ಕಾರದ ಮುಖ್ಯಸ್ಥರಿಗೆ ಸಚಿವರ ಮೇಲೆ, ಅಧಿಕಾರಿಗಳ ಮೇಲೆ ಹಿಡಿತವಿದ್ದರೆ ಇಂತಹ ಪ್ರಮಾದಗಳು ಮರುಕಳಿಸುವುದಿಲ್ಲ. ಪಕ್ಷಭೇದವಿಲ್ಲದಂತೆ ಎಲ್ಲರ ಹಿತಕಾಯಬೇಕಾದ ಸಭಾಧ್ಯಕ್ಷರ ಸಾತ್ವಿಕ ಆಕ್ರೋಶ ಸರ್ಕಾರಕ್ಕೆ ಬಿಸಿ ಮುಟ್ಟಿಸಿದೆ. ಸದನದ ವಿಷಯದಲ್ಲಿ ಉದಾಸೀನ ತೋರುವ ಸಚಿವರು ಮತ್ತು ಅಧಿಕಾರಿಗಳಿಗೆ ಸ್ಪಷ್ಟ ಎಚ್ಚರಿಕೆ ನೀಡುವ ದಿಟ್ಟತನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ತೋರಿದರೆ, ಕಲಾಪ ಸರಿದಾರಿಗೆ ಮರಳೀತು.



ಕರ್ನಾಟಕ ವಿಧಾನಮಂಡಲದ ಕಲಾಪಗಳ ಘನತೆ ತೀವ್ರವಾಗಿ ಕುಸಿದಿದೆ. ಸಭಾಧ್ಯಕ್ಷರೇ ಸಭಾತ್ಯಾಗ ಮಾಡುವ ಸ್ಥಿತಿ ಉಂಟಾಗಿರುವುದು, ಸಚಿವರು ಹಾಗೂ ಅಧಿಕಾರಿಗಳ ಹೊಣೆಗೇಡಿತನಕ್ಕೆ ನಿದರ್ಶನದಂತಿದೆ.

ಚಾವಡಿ

ಅನೈತಿಕತೆಯ ಅಪಾಯ



ಅನೈತಿಕ ವ್ಯಕ್ತಿಗಳು ಸಮಾಜದಲ್ಲಿ ದೊಡ್ಡ ಪ್ರಶಸ್ತಿ, ಅಧಿಕಾರ, ಜನಪ್ರಿಯತೆ ಪಡೆಯಬಹುದು. ಆದರೆ, ಅವರನ್ನು ಆದರ್ಶ ವ್ಯಕ್ತಿ, ಮಾದರಿ ವ್ಯಕ್ತಿ ಎಂದು ಪರಿಗಣಿಸಲಾಗುವುದಿಲ್ಲ. ಆ ತರಹದ ವ್ಯಕ್ತಿಗಳು ಉನ್ನತ ಸ್ಥಾನಕ್ಕೇರಿದಾಗ ಸಮಾಜ ಅದನ್ನು ಖಂಡಿಸಬೇಕು. ಕುಖ್ಯಾತರೇ ಸಮಾಜದ ಮುಖ್ಯವಾಹಿನಿಗೆ ಬಂದರೆ, ಆ ಸಮಾಜದ ನೈತಿಕತೆ ಕುಸಿಯುತ್ತದೆ.

ವಿವೇಕಾನಂದ ಎಚ್.ಕೆ., ಲೇಖಕ, 'ಫೇಸ್‌ಬುಕ್'ನಿಂದ

ಕಿಡಿನುಡಿ



ಆರ್‌ಎಸ್‌ಎಸ್ ಮೇಲೆ ನಿರ್ಬಂಧ ವಿಧಿಸಬೇಕೆಂದು ಅಂತರರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯ ಕುರಿತ ಅಮೆರಿಕದ ಆಯೋಗವು ಡೊನಾಲ್ಡ್ ಟ್ರಂಪ್ ಸರ್ಕಾರಕ್ಕೆ ಶಿಫಾರಸು ಮಾಡಿದೆ. ಮೋದಿ ಅವರು 'ಸಂಘ'ವನ್ನು ಸಮರ್ಥಿಸಿಕೊಂಡು ತಮ್ಮ ಸ್ನೇಹಿತ ಟ್ರಂಪ್ ಜೊತೆಗೆ ಮಾತನಾಡುತ್ತಾರೆಯೆ ಅಥವಾ ಎಂದಿನಂತೆ ಮೌನಕ್ಕೆ ಜಾರುತ್ತಾರೆಯೆ?

ಪ್ರಿಯಾಂಕ್ ಖರ್ಗೆ, ಐ.ಟಿ–ಬಿ.ಟಿ ಸಚಿವ

25 ವರ್ಷಗಳ ಹಿಂದೆ

ಭಾನುವಾರ, 18-3-2001

- **ಸಮಾನ ಮನಸ್ಕ ಪಕ್ಷಗಳ ಜತೆ ಮೈತ್ರಿ: ಕಾಂಗ್ರೆಸ್**

ರಾಜೀವ್ ಗಾಂಧಿ ನಗರ (ಬೆಂಗಳೂರು), ಮಾರ್ಚ್ 17– ದೇಶದ ಪ್ರಸಕ್ತ ಸನ್ನಿವೇಶದಲ್ಲಿ ಜಾತ್ಯತೀತ ಶಕ್ತಿಗಳ ಜತೆಗೆ ಹೊಂದಾಣಿಕೆ ಮಾಡಿಕೊಂಡು ಸಮ್ಮಿಶ್ರ ಸರ್ಕಾರ ರಚನೆಗೆ ತಾನು ಸಿದ್ಧ ಎಂಬ ಸ್ಪಷ್ಟ ಇಂಗಿತವನ್ನು ಅಖಿಲ ಭಾರತ ಕಾಂಗ್ರೆಸ್ ಪಕ್ಷ ಇಂದು ಇಲ್ಲಿ ನೀಡಿತು.

ನಗರದ ಅರಮನೆ ಮೈದಾನದಲ್ಲಿ ನಡೆದಿರುವ 81ನೇ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಪಕ್ಷದ ಹಿರಿಯ ಧುರೀಣರಾದ ಅರ್ಜುನ ಸಿಂಗ್ ಅವರು ಮಂಡಿಸಿದ ರಾಜಕೀಯ ನಿರ್ಣಯದಲ್ಲಿ ಆ ಇಂಗಿತವನ್ನು ವ್ಯಕ್ತಪಡಿಸಲಾಗಿದೆ. ಅದರ ಜೊತೆಯಲ್ಲೇ ಪಕ್ಷದ ಮೂಲ ಸಿದ್ಧಾಂತವನ್ನು ಕೈಬಿಡುವುದಿಲ್ಲ ಎಂದೂ ಸ್ಪಷ್ಟಪಡಿಸಲಾಗಿದೆ.

75 ವರ್ಷಗಳ ಹಿಂದೆ

ಭಾನುವಾರ, 18-3-1951

- **ಬ್ರಹ್ಮಚಾರಿಗೂ ತೆರಿಗೆ; ಲಗ್ನವಾದರೂ ತೆರಿಗೆ!**

ಷಿಲ್ಲಾಂಗ್, ಮಾರ್ಚ್ 17– ಬ್ರಹ್ಮಚಾರಿಗಳ ಮೇಲೆ ತೆರಿಗೆ ವಿಧಿಸಬೇಕೆಂಬ ಸೂಚನೆ ಸರಕಾರದ ಮುಂದೆ ಬಂದರೆ ಅದನ್ನು ಸರಕಾರ ಪರಿಶೀಲಿಸಲಿದೆ ಎಂದು ಸಚಿವ ಮೋತಿ ರಾಂ ಬೋವರರವರು ಇಂದು ತಿಳಿಸಿದರು.

ಇತ್ತೀಚೆಗೆ ವಿಷಮ ಘಟ್ಟಕ್ಕೆ ಏರುತ್ತಿರುವ ಆಹಾರ ಪರಿಸ್ಥಿತಿಯನ್ನು ಸುಧಾರಿಸುವ ಸಲುವಾಗಿ ಲಗ್ನವಾದವರ ಮೇಲೂ ತೆರಿಗೆ ಹಾಕಿ ಲಗ್ನವಾಗುವುದನ್ನು ಕಡಿಮೆ ಮಾಡಲು ಸರ್ಕಾರ ಯೋಚಿಸುತ್ತಿದೆಯೇ ಎಂಬ ಪ್ರಶ್ನೆಗೆ, 'ಲಗ್ನವು ಪ್ರಜಾಸಂಖ್ಯೆಯನ್ನು ಏರಿಸುವ ಸಾಧನವೆಂದು ಪರಿಗಣಿಸುವುದಾದರೆ, ಅದು ಅಖಿಲ ಭಾರತದ ಸಮಸ್ಯೆಯಾದುದರಿಂದ ಈ ಸಂಬಂಧವಾಗಿ ತೀರ್ಮಾನಿಸುವ ಜವಾಬ್ದಾರಿ ಕೇಂದ್ರ ಸರಕಾರಕ್ಕೆ ಸೇರಿದೆ' ಎಂಬುದಾಗಿ ನಗೆ ಕೋಲಾಹಲದ ಮಧ್ಯೆ ಉತ್ತರವಿತ್ತರು.

ಆರೋಗ್ಯಭಾಗ್ಯಕ್ಕೆ 'ಎಐ' ಆಪ್ತಮಿತ್ರ!



ವಿಶ್ಲೇಷಣೆ

ಡಾ. ಮುರಳೀಧರ ಕಿರಣಕೆರೆ

ಆರೋಗ್ಯದ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳಲು ಜನಸಾಮಾನ್ಯರ ಪಾಲಿಗೆ ಕೃತಕ ಬುದ್ಧಿಮತ್ತೆ ಆಪ್ತಮಿತ್ರನಂತೆ ಒದಗಿಬರುತ್ತದೆ. ಕೆಲವು ಸಂದರ್ಭಗಳಲ್ಲಿ 'ಎಐ' ವೈದ್ಯರಿಗೂ ಉಪಯುಕ್ತ. 'ಸೆಕೆಂಡ್ ಒಪಿನಿಯನ್' ರೀತಿ ವೈದ್ಯರು ಹಾಗೂ ರೋಗಿಗಳು ಬಳಸಬಹುದಾದ 'ಎಐ' ಆರೋಗ್ಯಕ್ಷೇತ್ರದಲ್ಲಿನ ತಜ್ಞರ ಒತ್ತಡವನ್ನು ಹಗುರಗೊಳಿಸಬಲ್ಲದು.

ಪ್ರಾಥಶಾಲೆಯಲ್ಲಿ ಓದುತ್ತಿದ್ದ ಆ ಬಾಲಕ ತುಂಬಾ ಚುರುಕಾಗಿದ್ದವನು. ಆಟೋಟಗಳಲ್ಲಂತೂ ಸದಾ ಮುಂದು. ಇದ್ದಕ್ಕಿದ್ದಂತೆ ಅವನಿಗೆ ವಿಪರೀತ ಸುಸ್ತು, ನಿಶ್ಶಕ್ತಿ, ಹೊಟ್ಟೆನೋವು ಕಾಣಿಸಿಕೊಂಡಿತು. ಹತ್ತಿರದ ಆಸ್ಪತ್ರೆಯಲ್ಲಿ ವೈದ್ಯರಿಗೆ ತೋರಿಸಲಾಯಿತು. ಮುಂದಿನದು, ಹೊಸ ಭರವಸೆಯನ್ನು ಹುಡುಕುತ್ತ ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆಯುವ ಸ್ಥಿತಿ.

ಹಲವು ಪರೀಕ್ಷೆಗಳಾದರೂ ಸಮಸ್ಯೆ ಏನೆಂದು ಪತ್ತೆಯಾಗಲಿಲ್ಲ. ವಿಷಪೂರಿತವಾದ ನಂತರವೂ ದೇಹಸ್ಥಿತಿಯಲ್ಲಿ ಸುಧಾರಣೆಯಾಗಲಿಲ್ಲ. ಅಟವಾಡುವುದು ಹೋಗಲಿ, ಸ್ಕೂಲ್‌ಬ್ಯಾಗ್ ಹೊತ್ತುಕೊಂಡು ಸ್ವಲ್ಪ ದೂರ ಹೆಜ್ಜೆ ಹಾಕುವುದೂ ಆ ಹುಡುಗನಿಗೆ ಕಷ್ಟವಾಗುತ್ತಿತ್ತು. ನಂತರದಲ್ಲಿ ಪಟ್ಟಣದ ದೊಡ್ಡ ಆಸ್ಪತ್ರೆಯಲ್ಲಿ ತಜ್ಞ ವೈದ್ಯರಿಂದ ಚಿಕಿತ್ಸೆ ಮುಂದುವರಿಯಿತು. ಆರ್ಥಿಕ ಸ್ಥಿತಿ ಅಷ್ಟೇನೂ ಉತ್ತಮವಿಲ್ಲದಿದ್ದರೂ ಆ ಕುಟುಂಬ ವೈದ್ಯರು ಶಿಫಾರಸು ಮಾಡಿದ ಎಲ್ಲಾ ತಪಾಸಣೆ ಮಾಡಿಸಿದರು. ರಕ್ತದಲ್ಲಿ ಸೋಡಿಯಂ ಅಂಶ ಇಳಿಕೆಯಾಗುತ್ತಿದ್ದುದರಿಂದ ಮೂತ್ರಪಿಂಡಗಳ ತೊಂದರೆಯಿಂದ ಚಿಕಿತ್ಸೆ ನಡೆಯಿತು. ಉಪ್ಪನ್ನು ಹೆಚ್ಚು ಸೇವಿಸುವಂತೆ ನಿರ್ದೇಶನ ಸಿಕ್ಕಿತು. ತಜ್ಞ ವೈದ್ಯರ ಸಲಹೆಯನ್ನು ಚಾಚೂ ತಪ್ಪದೆ ಪಾಲಿಸಿದರೂ, ಬಾಲಕನ ಪರಿಸ್ಥಿತಿ ಸುಧಾರಿಸಲಿಲ್ಲ. ತರಗತಿಯಲ್ಲಿ ಕುಳಿತು ಪಾಠ ಕೇಳುವುದೂ ಕಷ್ಟವಾಯಿತು. ಈ ಮಧ್ಯೆ ಮುಖವೂ ಸೇರಿದಂತೆ ಮೈಚರ್ಮ ಕಪ್ಪಾಗತೊಡಗಿತ್ತು. 'ಬಿಸಿಲ ಶಾಖಕ್ಕೆ ಹೀಗಾಗುತ್ತಿದೆ' ಎಂಬುದು ವೈದ್ಯರ ಸಮಜಾಯಿಷಿ.

ಸುಮಾರು ಆರು ತಿಂಗಳು ವೈದ್ಯರ ಭೇಟಿ, ಸಲಹೆ, ಚಿಕಿತ್ಸೆ ಮುಂದುವರಿದರೂ ಸಮಸ್ಯೆ ಬಗೆಹರಿಯಲಿಲ್ಲ. ಹುಡುಗನ ಯಾತನೆ, ಹೆತ್ತವರ ಸಂಕಟವೂ ಮುಂದುವರಿಯಿತು. ಕೃತಕ ಬುದ್ಧಿಮತ್ತೆ (ಎಐ) ಈ ವಿಚಾರದಲ್ಲಿ ಮಾರ್ಗದರ್ಶನ ಮಾಡಬಹುದಾ? ಯೋಚನೆ ಮನದೊಳಗೆ ಮೂಡುತ್ತಿದ್ದಂತೆಯೇ ಪ್ರಯತ್ನಿಸಲು ನಿರ್ಧರಿಸಿದೆ.

ಆ ಬಾಲಕನ ವಯಸ್ಸು, ರೋಗಲಕ್ಷಣಗಳು, ವಿವಿಧ ಪರೀಕ್ಷೆಗಳ ಫಲಿತಾಂಶಗಳನ್ನು 'ಎಐ' ತಂತ್ರಾಂಶದಲ್ಲಿ ದಾಖಲಿಸಿದೆ. ಕೆಲವೇ ಕ್ಷಣಗಳಲ್ಲಿ ಕೃತಕ ಬುದ್ಧಿಮತ್ತೆ ಬಾಲಕನನ್ನು ಕಾಡಿಸುತ್ತಿದ್ದ ಕಾಯಿಲೆಯನ್ನು ಊಹಿಸಿತ್ತು! 'ಅಡಿಸನ್ಸ್ ಕಾಯಿಲೆ' ಎಂಬ ವಿರಳ ಸಮಸ್ಯೆಯದು. ಈ ವ್ಯಾಧಿಯಲ್ಲಿ ವಸಡುಗಳೂ ಕಪ್ಪಾಗುತ್ತವೆ ಎಂದು ಎಐ ಮಾಹಿತಿ ನೀಡಿತು. ಬಾಲಕನ ಬಾಯಿ ತೆರೆಸಿ ನೋಡಿದರೆ ವಸಡು, ನಾಲಿಗೆಯೂ ಚರ್ಮದಂತೆ ಕಪ್ಪಾಗಿತ್ತು. ರಸದೂತಗಳ ಮಟ್ಟ ಅಳೆಯುವ ರಕ್ತಪರೀಕ್ಷೆಯಿಂದ ಇದೇ ಕಾಯಿಲೆಯೆಂದು ಖಚಿತವಾಯಿತು.

ಮೂತ್ರಪಿಂಡಗಳ ಮೇಲೆ ಟೊಪ್ಪಿಯಂತಿರುವ ಪುಟ್ಟ ಅಡ್ರಿನಲ್ ಗ್ರಂಥಿಗಳ ನಿಷ್ಕ್ರಿಯತೆಯಿಂದ ಬರುವ ಅತಿ ಅಪರೂಪದ ವ್ಯಾಧಿಯಿದು. ಒತ್ತಡವನ್ನು ನಿರ್ವಹಿಸುವ ಮತ್ತು ದೇಹದಲ್ಲಿ ಸೋಡಿಯಂ, ನೀರಿನ ಸಮತೋಲನ ಕಾಯ್ದುಕೊಳ್ಳುವ ಹಾರ್ಮೋನ್‌ಗಳು ಈ ಗ್ರಂಥಿಯ ಹೊರಮೈಯಿಂದ ಸ್ರವಿಸಲ್ಪಡುತ್ತವೆ. ಈ ರಸದೂತಗಳ ಕೊರತೆಯೇ ಅಡಿಸನ್ಸ್ ಕಾಯಿಲೆಗೆ ಕಾರಣ. ಬಾಧಿತರು ಜೀವನಪರ್ಯಂತ ಔಷಧ ಸೇವಿಸಬೇಕಾಗುತ್ತದೆ. ವರದಿಯನ್ನು ತಜ್ಞವೈದ್ಯರ ಗಮನಕ್ಕೆ ತಂದಾಗ ಮತ್ತಷ್ಟು ಪೂರಕ ಪರೀಕ್ಷೆಗಳ ನಂತರ ಮದ್ದು ನೀಡಿದರು. ದುರದೃಷ್ಟವಶಾತ್ ಅವರು ನೀಡಿದ ಔಷಧದ ಪ್ರಮಾಣ ಅಗತ್ಯಕ್ಕಿಂತಲೂ ತುಂಬಾ ಹೆಚ್ಚಾಗಿತ್ತು. ದೀರ್ಘಾವಧಿಯಲ್ಲಿ ಇದರಿಂದ ಗಂಭೀರ ಅಡ್ಡ ಪರಿಣಾಮಗಳ ಸಾಧ್ಯತೆಯಿತ್ತು. ಈ ಮಾಹಿತಿಯನ್ನು ಕೊಟ್ಟಿದ್ದೂ ಕೃತಕ ಬುದ್ಧಿಮತ್ತೆಯೇ! ವಿಷಯವನ್ನು ಅವರೊಂದಿಗೆ ಪುನಃ ಚರ್ಚಿಸಬೇಕಾಯ್ತು. ಕೊನೆಗೂ ಅಗತ್ಯ ಪ್ರಮಾಣದಲ್ಲಿ ಮಾತ್ರೆಗಳನ್ನು ತೆಗೆದುಕೊಳ್ಳುತ್ತಾ ಬಂದಿದ್ದರಿಂದ ಬಾಲಕ ಬೇಗನೆ ಚೇತರಿಸಿಕೊಂಡು ಈಗ ಮೊದಲಿನಂತೆ ಚುರುಕಾಗಿದ್ದಾನೆ.

ಇದು ಆರೋಗ್ಯ ಕ್ಷೇತ್ರದಲ್ಲಿ ಎಐನಿಂದ ಆಗುವ ಪ್ರಯೋಜನದ ಒಂದು ನಿದರ್ಶನವಷ್ಟೆ. ಎಐ ಆಧಾರಿತ ಹಲವು ಸಾಧನಗಳ ಕಾರಣ ರೋಗ ತಪಾಸಣೆ, ರೋಗ ನಿರ್ಣಯ, ಚಿಕಿತ್ಸೆಗೆ ಹೆಚ್ಚು ವಿಶ್ವಾಸಾರ್ಹತೆ ದೊರೆತಿದೆ. ಸರಿಯಾದ ಚಿಕಿತ್ಸೆ ನೀಡಲು ಸರಿಯಾದ ಸಮಯಕ್ಕೆ ರೋಗ ನಿರ್ಣಯ ಅತ್ಯಂತ ಮುಖ್ಯ. ಸಾಮಾನ್ಯ ಕಾಯಿಲೆಗಳನ್ನು ತಮ್ಮ ಅನುಭವದಿಂದಲೇ ಗುರುತಿಸುವ ವೈದ್ಯರು ಪೂರಕ ಪ್ರಯೋಗಾಲಯದ ಪರೀಕ್ಷೆಗಳಿಂದ ಖಚಿತಪಡಿಸಿಕೊಂಡು ನಿರ್ದಿಷ್ಟ ಚಿಕಿತ್ಸೆ ನೀಡುತ್ತಾರೆ. ಸಮಸ್ಯೆಯಿರುವುದು ಹೊಸತಾದ, ಅಪರೂಪದ ಇಲ್ಲವೇ ವಿರಳ ಕಾಯಿಲೆಗಳನ್ನು ಗುರ್ತಿಸುವಲ್ಲಿ, ಜೊತೆಗೆ ಸಾಮಾನ್ಯ ಸಮಸ್ಯೆಗಳಿಗೆ ಹೊಸ ಪರಿಣಾಮಕಾರಿ ಚಿಕಿತ್ಸಾ ಪದ್ಧತಿಗಳನ್ನು ಅಳವಡಿಸಿಕೊಳ್ಳುವಲ್ಲಿ. ಈ ಸಂದರ್ಭದಲ್ಲಿ ವೈದ್ಯರ ನೆರವಿಗೆ ಆಪದ್ಬಾಂಧವನಂತೆ ಎಐ ಒದಗಿಬರುತ್ತದೆ.


ಕೃತಕ ಬುದ್ಧಿಮತ್ತೆ ಎನ್ನುವುದು ವೈದ್ಯರಿಗೆ, ಅವರ ಜ್ಞಾನಕ್ಕೆ ಪರ್ಯಾಯವಲ್ಲ. ಬದಲಿಗೆ ವೈದ್ಯಕೀಯ ವೃತ್ತಿನಿರತರ ಸಾಮರ್ಥ್ಯ, ಕೌಶಲ ಹೆಚ್ಚಿಸುವ ಸಾಧನವಿದು. ಲಕ್ಷಾಂತರ ವೈದ್ಯಕೀಯ ಲೇಖನಗಳು, ದಾಖಲೆಗಳು, ರೋಗಿಗಳ ಹಳೆಯ ದತ್ತಾಂಶಗಳು, ಸಂಶೋಧನೆಗಳ ಫಲಿತಾಂಶಗಳನ್ನು ಕೆಲವೇ ಸೆಕೆಂಡ್‌ಗಳಲ್ಲಿ ವಿಶ್ಲೇಷಿಸಿ ರೋಗ ನಿರ್ಣಯಕ್ಕೆ ಅಗತ್ಯ ಇರುವ ಸಂಭವನೀಯ ಸಲಹೆಗಳನ್ನು ನೀಡುವ 'ಡಿಜಿಟಲ್ ಕಣ್ಣು' ರೂಪದಲ್ಲಿ ಇದು ಕೆಲಸ ಮಾಡುತ್ತದೆ. ಹಾಗೆಂದು, ಎಐ ಮೂಲಕ ಸಿಗುವ ಮಾಹಿತಿಗಳು, ಸಲಹೆಗಳನ್ನು ಕಣ್ಣುಮುಚ್ಚಿ ಸ್ವೀಕರಿಸುವುದು ಅಪಾಯಕಾರಿ. ಎಐ ಅಭಿಪ್ರಾಯವನ್ನು ಸುಳಿವಿನ ರೂಪದಲ್ಲಿ ತೆಗೆದುಕೊಂಡು, ಸರಿಯಾಗಿ ವಿಶ್ಲೇಷಿಸಿ ಅಂತಿಮ ನಿರ್ಧಾರ ತೆಗೆದುಕೊಳ್ಳಬೇಕಾದುದು ವೈದ್ಯರೇ. ತಜ್ಞ ವೈದ್ಯರು ತೆಗೆದುಕೊಳ್ಳಬೇಕಾದ ನಿರ್ಧಾರಗಳನ್ನು ಜನಸಾಮಾನ್ಯರು ತೆಗೆದುಕೊಳ್ಳುವುದು ಅಪಾಯಕರ. ರೋಗದ ಬಗೆಗಿನ ತಿಳಿವಳಿಕೆಯನ್ನು ಹೆಚ್ಚಿಸಿಕೊಳ್ಳುವುದಕ್ಕೆ ಹಾಗೂ ಸಮಸ್ಯೆಯ ಕುರಿತ ಗೊಂದಲಗಳನ್ನು ಬಗೆಹರಿಸಿಕೊಳ್ಳಲಿಕ್ಕೆ ಎಐ ಬಳಸಬಹುದಷ್ಟೇ.

ಕೃತಕ ಬುದ್ಧಿಮತ್ತೆ ವೈದ್ಯರಿಗಷ್ಟೇ ಅಲ್ಲ, ಸರಿಯಾಗಿ ಬಳಸಿಕೊಳ್ಳುವ ರೋಗಿಗಳಿಗೂ 'ಸೆಕೆಂಡ್ ಒಪಿನಿಯನ್' (ಎರಡನೇ ಅಭಿಪ್ರಾಯ) ರೀತಿಯಲ್ಲಿ ಕೆಲಸ ಮಾಡುತ್ತದೆ. ದಿನದಿಂದ ದಿನಕ್ಕೆ ಬದಲಾಗುತ್ತಿರುವ ವೈದ್ಯಕೀಯ ಕ್ಷೇತ್ರದಲ್ಲಿ ಎಲ್ಲಾ ಸಂಶೋಧನೆಗಳ ಮಾಹಿತಿ ಇರುವುದಿಲ್ಲ. ಹಲವು ವಿಷಯಗಳನ್ನು ಮಾನವನ ಮಿತಿಯ ಕಾರಣ ನೆನಪಿಟ್ಟುಕೊಳ್ಳುವುದು ಕಷ್ಟ. ಸಂಕೀರ್ಣ ಸಮಸ್ಯೆಗಳಿದ್ದಾಗ, ಶೀಘ್ರ ರೋಗ ನಿರ್ಣಯ ಸಾಧ್ಯವಾಗದೆ ಹೋದಾಗ ರೋಗಿಯ ಯಾತನೆಯಷ್ಟೇ ಅಲ್ಲ, ವೈದ್ಯರ ಮೇಲಿನ ಒತ್ತಡವೂ ಹೆಚ್ಚುತ್ತದೆ. ಎಐ ಸಾಧನವನ್ನು ಸರಿಯಾಗಿ ಬಳಸಿಕೊಂಡಾಗ, ಮಾಹಿತಿಗಾಗಿ ಹುಡುಕಾಡುವ ಕಷ್ಟ ತಪ್ಪುವುದಲ್ಲದೆ, ಕೆಲಸದ ಹೊರೆಯೂ ಇಳಿಯುತ್ತದೆ. ಸಮಯದ ಉಳಿತಾಯವೂ ಆಗುತ್ತದೆ.

ವೈದ್ಯರಷ್ಟೇ ಅಲ್ಲ, ಜನಸಾಮಾನ್ಯರೂ ಅಗತ್ಯ ಇರುವೆಡೆಯಲ್ಲಿ ಎಐ ಬಳಸುವ ಕೌಶಲ ಕರಗತ ಮಾಡಿಕೊಳ್ಳುವುದು 'ಸಮಗ್ರ ಸ್ವಾಸ್ಥ್ಯ'ದ ದೃಷ್ಟಿಯಿಂದ ವಿವೇಕದ ಹೆಜ್ಜೆ. ತಮಗೆ ಬಂದಿರುವ ಕಾಯಿಲೆಯ ಬಗ್ಗೆ ಪೂರ್ಣ ಮಾಹಿತಿ, ವೈದ್ಯರು ಶಿಫಾರಸು ಮಾಡಿರುವ ಔಷಧಗಳು, ತೆಗೆದುಕೊಳ್ಳಬೇಕಾದ ರೀತಿ, ಪ್ರಮಾಣ, ಅಡ್ಡ ಪರಿಣಾಮಗಳು, ಕಾಯಿಲೆಗೆ ಕಾರಣಗಳು, ಪಥ್ಯಸೇವನೆಯ ವಿಧಾನ, ಮುಂಜಾಗ್ರತೆಯಂತಹ ವಿವರಗಳನ್ನು ನಮ್ಮ ಇಚ್ಛೆಯ ಭಾಷೆಯಲ್ಲೇ ಕೃತಕ ಬುದ್ಧಿಮತ್ತೆ ಒದಗಿಸುತ್ತದೆ. ರೋಗದ ಕುರಿತಾದ ಸಂಪೂರ್ಣ ಅರಿವು ನೀಡುವುದರೊಂದಿಗೆ ಮಾನಸಿಕವಾಗಿ ಧೈರ್ಯ ತುಂಬುತ್ತದೆ. ಆ ಮಾಹಿತಿಯನ್ನು ಒರೆಗೆ ಹಚ್ಚಿ, ಸಂದೇಹಗಳನ್ನು ವೈದ್ಯರೊಂದಿಗೆ ಚರ್ಚಿಸಿ ಮುಂದುವರಿಯಬೇಕು. ಒಮ್ಮೊಮ್ಮೆ ಕಾಯಿಲೆಯೊಂದಕ್ಕೆ ಸಮಯದ ಅಭಾವ, ವಿಪರೀತ ತಾಳ್ಮೆ ಇಲ್ಲದಿರುವುದು ಮುಂತಾದ ಕಾರಣಗಳಿಂದ ರೋಗಿಗೆ ಹೆಚ್ಚು ತಿಳಿಸಲಾಗುವುದಿಲ್ಲ. ಔಷಧಿಯೊಂದರ ಕುರಿತಾಗಿ ವೈದ್ಯರಿಂದ ಸರಿಯಾಗಿ ತಿಳಿವಳಿಕೆ ದೊರೆಯದಿರಬಹುದು. ಇಲ್ಲವೇ ಅನುಮಾನಗಳನ್ನು ಕೇಳುವುದಕ್ಕೆ ಹಿಂಜರಿಕೆ, ಮುಜುಗರದಿಂದಾಗಿಯೂ ಅಗತ್ಯ ಮಾಹಿತಿ ದೊರೆಯದಿರಬಹುದು. ವೈದ್ಯರು ಕೂಡ ತಮ್ಮ ಕಾರ್ಯಬಾಹುಳ್ಯದಿಂದಾಗಿ ರೋಗಿಯ ಎಲ್ಲ ಅನುಮಾನಗಳಿಗೆ ಉತ್ತರ ನೀಡುವುದು ಸಾಧ್ಯವಾಗದಿರಬಹುದು. ಅಂತಹ ಹೊತ್ತಿನಲ್ಲಿ ಎಐ ಬಳಕೆ ಬಗ್ಗೆ ಅರಿವಿದ್ದರೆ ರೋಗಿಯೊಬ್ಬ ತನಗೆ ಬೇಕಾದ ವಿಷಯಗಳನ್ನೆಲ್ಲ ತಿಳಿದುಕೊಳ್ಳಬಹುದು. ಯಾವುದೇ ಕಾರಣಕ್ಕೂ ಸ್ವಯಂವೈದ್ಯೋಪಚಾರ ಮಾಡಿಕೊಳ್ಳುವುದು ಅಪಾಯಕ್ಕೆ ಆಹ್ವಾನ ನೀಡಿದಂತೆ.

ಕಾಯಿಲೆಯ ಕುರಿತಾಗಷ್ಟೇ ಅಲ್ಲ, ನಿರ್ದಿಷ್ಟ ಔಷಧಗಳ ಕುರಿತಾಗಿಯೂ ಎಐನಿಂದ ಮಾಹಿತಿ ಪಡೆದುಕೊಳ್ಳಬಹುದು. ಮಧುಮೇಹ, ಸಂಧಿವಾತ, ಥೈರಾಯ್ಡ್, ರಕ್ತದೊತ್ತಡ, ಅಪಸ್ಮಾರ, ಹೃದಯ ಸಂಬಂಧಿ ಸಮಸ್ಯೆಗಳು, ಕುಸುಮರೋಗ, ಪಾರ್ಶ್ವವಾಯುವಿನಂತಹ ಸಮಸ್ಯೆಗಳು, ಕೆಲವು ವಿರಳ ಕಾಯಿಲೆಗಳಲ್ಲಿ ದೀರ್ಘಕಾಲದವರೆಗೆ ಔಷಧ ತೆಗೆದುಕೊಳ್ಳಬೇಕಾಗುತ್ತದೆ. ಸಮಸ್ಯೆ ತುಸು ನಿಯಂತ್ರಣಕ್ಕೆ ಬಂದಂತೆಯೇ ವೈದ್ಯರು ಇಡಿಯಾಗಿ ಶಿಫಾರಸು ಮಾಡಿದ ಮಾತ್ರೆಗಳನ್ನು ಅರ್ಧ ಮಾಡಿ ತೆಗೆದುಕೊಳ್ಳುವವರಿದ್ದಾರೆ. ಕೆಲವು ಮಾತ್ರೆಗಳು ಬಾಯಿಯಲ್ಲಿ, ಕೆಲವು ಜಠರದಲ್ಲಿ, ಮತ್ತೆ ಕೆಲವು ಕರುಳಿನಲ್ಲಿ ಕರಗುವಂತೆ ವಿನ್ಯಾಸ ಮಾಡಿರಲಾಗುತ್ತದೆ. ಕೆಲವು ಮಾತ್ರೆಗಳಲ್ಲಿನ ರಾಸಾಯನಿಕಗಳು ನಿಧಾನವಾಗಿ ಬಿಡುಗಡೆಯಾಗಬೇಕು, ಕೆಲವದರ ಪರಿಣಾಮ ದೀರ್ಘಾವಧಿ ಇರಬೇಕು. ಇನ್ನು ಕೆಲವು ಮದ್ದುಗಳು ಹೊಟ್ಟೆಯಲ್ಲಿ ಕರಗಿದರೆ ಜಠರಾಮ್ಲದಲ್ಲಿ ನಿಷ್ಕ್ರಿಯ ಆಗುತ್ತವೆ. ಹಾಗಾಗಿಯೇ ಅವುಗಳನ್ನು ಇಡಿಯಾಗಿ ತೆಗೆದುಕೊಳ್ಳಲೇಬೇಕು. ಇಂತಹ ವಿಷಯಗಳ ಅರಿವಿಲ್ಲದ ಹಲವರು ತುಂಡು ಮಾಡಿ ನುಂಗುತ್ತಾರೆ. ಹೀಗಾದಾಗ ಪರಿಣಾಮ ಬೀರದೆ ಸಮಸ್ಯೆ ಉಲ್ಬಣಿಸಬಹುದು.

ಹೌದು, ವೈದ್ಯಕೀಯ ರಂಗದಲ್ಲಿ ಕೃತಕ ಬುದ್ಧಿಮತ್ತೆಯೆಂಬುದು ಕೇವಲ ವೈದ್ಯರಿಗಷ್ಟೇ ಅಲ್ಲ, ರೋಗಿಗಳಿಗೂ ಅಗತ್ಯವಿದೆ. ರೋಗಿಗಳು ತಮ್ಮ ಕಾಯಿಲೆಯ ವಿಚಾರದಲ್ಲಿ ಹೆಚ್ಚಿನ ಅರಿವು ಪಡೆದುಕೊಂಡಾಗ ರೋಗವೂ ಬೇಗನೆ ಉಪಶಮನವಾಗುತ್ತದೆ. ಇದರಿಂದಾಗಿ ಹಣ, ಶ್ರಮ, ಸಮಯದ ಉಳಿತಾಯವಷ್ಟೇ ಅಲ್ಲ, ಮಾನಸಿಕ ಒತ್ತಡದಿಂದಲೂ ಮುಕ್ತರಾಗಲು ಸಾಧ್ಯ. ಹಾಗಾಗಿ ಜನಸಾಮಾನ್ಯರೂ ಎಐ ಬಳಕೆಯ ವಿಧಾನ, ಅಲ್ಲಿನ ಮಾಹಿತಿಗಳನ್ನು ವಿಶ್ಲೇಷಿಸುವ, ಪರಾಂಬರಿಸಿ ನೋಡುವ, ಉಪಯೋಗಿಸಿಕೊಳ್ಳುವ ನಿಟ್ಟಿನಲ್ಲಿ ಸಾಕ್ಷರರಾಗುವ ಅನಿವಾರ್ಯತೆಯಿದೆ.



ವಾಚಕರ ವಾಣಿ

ಆಡಿಯೊ, ವಿಡಿಯೊ ಸಾಕ್ಷ್ಯವಾಗಿ ಪರಿಗಣಿಸಿ

ರಾಜ್ಯದಲ್ಲಿ ಭ್ರಷ್ಟಾಚಾರ ತಡೆಗಟ್ಟಲು ಲೋಕಾಯುಕ್ತ ಅಧಿಕಾರಿಗಳು ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದು ಒಳ್ಳೆಯ ಬೆಳವಣಿಗೆ. ನೇಮಕಾತಿ ಸಂದರ್ಭದಲ್ಲಿ ಕೆಲವು ಇಲಾಖೆಗಳಲ್ಲಿ ಅಧಿಕಾರಿಗಳು ನೇಮಕಾತಿಯ ಆದೇಶಪತ್ರ ನೀಡಲು ಲಂಚ ಕೇಳುತ್ತಾರೆ. ಹಣ ನೀಡದಿದ್ದರೆ ಕೆಲಸದ ಸಂದರ್ಭದಲ್ಲಿ ತೊಂದರೆ ಕೊಡಬಹುದೆಂಬ ಆತಂಕದಿಂದ ಹೊಸದಾಗಿ ನೇಮಕಗೊಂಡ ಉದ್ಯೋಗಿಗಳು ಅವರು ಕೇಳಿದಷ್ಟು ಹಣ ಕೊಡುತ್ತಾರೆ. ಕೆಲವು ಬುದ್ಧಿವಂತರು ಲಂಚ ಕೇಳುವ ಮತ್ತು ಕೊಡುವ ಸಂದರ್ಭದಲ್ಲಿ ಆಡಿಯೊ ಅಥವಾ ವಿಡಿಯೊ ಚಿತ್ರೀಕರಿಸಿರುತ್ತಾರೆ. ಕೆಲವು ಅಭ್ಯರ್ಥಿಗಳು ಲೋಕಾಯುಕ್ತ ಕಚೇರಿಗೆ ದೂರು ನೀಡಲು ಹಿಂಜರಿಯುತ್ತಾರೆ. ಲೋಕಾಯುಕ್ತ ಸಂಸ್ಥೆಯು ಇಂತಹ ಆಡಿಯೊ, ವಿಡಿಯೊಗಳನ್ನೂ ಸಾಕ್ಷ್ಯವಾಗಿ ಪರಿಗಣಿಸಿ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ತನಿಖೆ ನಡೆಸಬೇಕಿದೆ.

ಪ್ರವೀಣ ಈ., ಚನ್ನಗಿರಿ

ಕಡತ ನಿರ್ವಹಣೆ: ಗ್ರಾ.ಪಂ.ಗಳ ನಿರ್ಲಕ್ಷ್ಯ

ಆರ್ಥಿಕ ವರ್ಷ ಮುಕ್ತಾಯವಾದ ನಂತರ ಗ್ರಾಮ ಪಂಚಾಯಿತಿಗಳ ಎಲ್ಲಾ ಕಡತಗಳು ಮತ್ತು ವಹಿಗಳು, ಸಭಾ ನಡವಳಿಗಳು, ವಾರ್ಷಿಕ ಮತ್ತು ಮಾಸಿಕ ಲೆಕ್ಕಪತ್ರ, ಕಳೆದ ವರ್ಷದ ಅನುಪಾಲನಾ ವರದಿ ಪರಿಶೀಲಿಸುವುದು ಲೆಕ್ಕ ಪರಿಶೋಧಕರ ಜವಾಬ್ದಾರಿ. ಸರ್ಕಾರದ ಅನುದಾನ ಬಳಕೆ ಮತ್ತು ಲೆಕ್ಕ ಪರಿಶೋಧನೆಯ ನಿರ್ವಹಣೆಯು ಸಂಬಂಧಪಟ್ಟ ಅಧಿಕಾರಿಗಳು ಮತ್ತು ಸಿಬ್ಬಂದಿಯ ಕರ್ತವ್ಯ. ಲೆಕ್ಕ ಪರಿಶೋಧಕರು ಕೋರಿದ ವಿವರಣೆ, ದಾಖಲಾತಿಗಳನ್ನು ಉದ್ದೇಶಪೂರ್ವಕವಾಗಿ ಒದಗಿಸದೆ ನಿರ್ಲಕ್ಷ್ಯವಹಿಸುವ ಅಧಿಕಾರಿಗಳ ವಿರುದ್ಧ ದೂರು ದಾಖಲಿಸಬಹುದಾಗಿದೆ. ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ಕೆಲವು ಗ್ರಾಮ ಪಂಚಾಯಿತಿಗಳಲ್ಲಿ ಲೆಕ್ಕಪತ್ರಗಳ ಸರಿಯಾದ ನಿರ್ವಹಣೆ ಇಲ್ಲ. ಈ ಬಗ್ಗೆ ಸರ್ಕಾರವು ಪರಿಶೀಲನೆ ನಡೆಸಬೇಕಿದೆ.

ವಿಶ್ವನಾಥ ಟಿ. ಸೋಮಗುದ್ದು, ಹಂಪಿ

ಅತಿಥಿ ಶಿಕ್ಷಕರಿಗೆ ಗುರುತಿನಚೀಟಿ ನೀಡಿ

ಖಾಸಗಿ ಕಂಪನಿಗಳಲ್ಲಿ ದುಡಿಯುವ ನೌಕರರಿಗೆ ಗುರುತಿನಚೀಟಿ ನೀಡಲಾಗುತ್ತದೆ. ಸರ್ಕಾರದ ಕೆಲವು ಇಲಾಖೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ದುಡಿಯುತ್ತಿರುವ ನೌಕರರಿಗೂ ಗುರುತಿನಚೀಟಿ ನೀಡಲಾಗಿದೆ. ಪ್ರಸ್ತುತ ಸರ್ಕಾರಿ ಶಾಲಾ, ಕಾಲೇಜುಗಳು, ವಿಶ್ವವಿದ್ಯಾಲಯಗಳಲ್ಲಿ ಹಲವು ವರ್ಷಗಳಿಂದ ಸಾವಿರಾರು ಅತಿಥಿ ಉಪನ್ಯಾಸಕರು ಮತ್ತು ಶಿಕ್ಷಕರು ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ದುಡಿಯುತ್ತಿದ್ದಾರೆ. ಅವರಿಗೆ ಇದುವರೆಗೂ ಗುರುತಿನಚೀಟಿ ನೀಡದಿರುವುದು ಅಮಾನವೀಯ. ಸಕಾಲಕ್ಕೆ ಸಂಬಳ ಸಿಗದೆ ಅವರು ಅನುಭವಿಸುವ ಸಂಕಷ್ಟಗಳು ಒಂದೆರಡಲ್ಲ. ಇನ್ನಾದರೂ ಈ ಬೋಧಕರಿಗೆ ಗುರುತಿನಚೀಟಿ ನೀಡಿ.

ಆರ್.ಪಿ. ಮಂಜುನಾಥ್, ಬಳ್ಳಾರಿ

ಜಲಮೂಲಗಳ ರಕ್ಷಣೆಗೆ ಜನಾಂದೋಲನ

ಜಲ ಜೀವನ್ ಮಿಷನ್‌ನಡಿ ಕರ್ನಾಟಕ ರಾಜ್ಯ ಸರ್ಕಾರವು ಕುಡಿಯುವ ನೀರಿನ ಮಾದರಿಗಳನ್ನು ಪರೀಕ್ಷಿಸಿದೆ. ಈ ನೀರಿನಲ್ಲಿ ಮಾಲಿನ್ಯಕಾರಕಗಳ ಹೆಚ್ಚಳವಾಗಿದೆ ಎಂದು ಜಲಶಕ್ತಿ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಅವರು ಸಂಸತ್‌ನಲ್ಲಿ ತಿಳಿಸಿದ್ದಾರೆ. ಕುಡಿಯುವ ನೀರು ಶುದ್ಧವಾಗಿರಬೇಕೆಂದರೆ ನೀರಿನ ಮೂಲಗಳನ್ನು ಸ್ವಚ್ಛವಾಗಿರಿಸಿಕೊಳ್ಳಬೇಕು. ಸರ್ಕಾರವೇ ನೀರಿನ ಮೂಲಗಳಿಗೆ ಕೊಳಚೆನೀರು ಹರಿಸುತ್ತಿದೆ. ನದಿ, ಕೆರೆಗಳನ್ನು ಕಸ ತುಂಬುವ ಜಾಗವನ್ನಾಗಿ ಮಾಡಿಕೊಳ್ಳಲಾಗಿದೆ. ನದಿಗಳು ಪವಿತ್ರವೆಂದು ಹೇಳುತ್ತಾ ನದಿಪಾತ್ರಕ್ಕೆ ಕಸ ಸುರಿಯುವ ಆತ್ಮವಂಚಕ ಸಮಾಜ ನಮ್ಮದು. ನೀರಿನ ಮೂಲಗಳ ಮಲಿನತೆ ತಡೆಯಲು ಜನಸಮುದಾಯಗಳ ಮನಃಸ್ಥಿತಿ ಬದಲಿಸಬೇಕಿದೆ. ಇದಕ್ಕಾಗಿ ಜನಾಂದೋಲನ ರೂಪಿಸಬೇಕಿದೆ.

ಗುರುಮೂರ್ತಿ ಜೋಗಿಬೈಲು, ಶೃಂಗೇರಿ

ಕೆಪಿಎಸ್‌ಸಿ ಆಟ: ಅಭ್ಯರ್ಥಿಗಳಿಗೆ ಸಂಕಟ

ತಪ್ಪು ತಿದ್ದಿಕೊಳ್ಳದೆ ಅಭ್ಯರ್ಥಿಗಳ ಕನಸುಗಳೊಂದಿಗೆ ಚೆಲ್ಲಾಟವಾಡುತ್ತಿರುವ ಕೆಪಿಎಸ್‌ಸಿ ಕಾರ್ಯವೈಖರಿ ಕುರಿತ ಸಂಪಾದಕೀಯ (ಮಾರ್ಚ್ 14) ಸಕಾಲಿಕವಾಗಿದೆ. ಕೆಪಿಎಸ್‌ಸಿ ಸುಧಾರಣೆಗೊಳಿಸುವ ದಿಸೆಯಲ್ಲಿ ಯುಪಿಎಸ್‌ಸಿ ಮಾಜಿ ಅಧ್ಯಕ್ಷ ಪಿ.ಸಿ. ಹೋಟಾ ಸಮಿತಿಯು 2013ರ ಆಗಸ್ಟ್‌ನಲ್ಲೇ ಹಲವು ಶಿಫಾರಸುಗಳನ್ನು ಮಾಡಿತ್ತು. ಅಂದಿನಿಂದ ಇಂದಿನವರೆಗೆ ಆಡಳಿತ ನಡೆಸಿರುವ ರಾಜಕೀಯ ಪಕ್ಷಗಳು ಇದನ್ನು ಗಂಭೀರವಾಗಿ ಪರಿಗಣಿಸಿಲ್ಲ. ಹಾಗಾಗಿಯೇ, ಕೆಪಿಎಸ್‌ಸಿ ಸುಧಾರಣೆ ಕಂಡಿಲ್ಲ. ಕಾಣದ ಕೈಗಳ ಒತ್ತಡಕ್ಕೆ ಮಣಿದು ಆಯೋಗದ ನಾಲ್ಕು ಕಾರ್ಯದರ್ಶಿಗಳನ್ನು ವರ್ಗಾವಣೆ ಮಾಡಲಾಗಿದೆ. ಪರೀಕ್ಷೆಗಳಲ್ಲಿನ ಲೋಪಕ್ಕೆ ನಿಯಂತ್ರಕರೇ ಕಾರಣರೆಂದು ಶಾಸಕರೇ ವಿಧಾನಸಭೆಯಲ್ಲಿಯೇ ಆಪಾದಿಸಿದ್ದಾರೆ. ಆದರೂ, ಅವರ ವಿರುದ್ಧ ಕ್ರಮ ಏಕಿಲ್ಲ?

ತಿಪ್ಪೂರು ಪುಟ್ಟೇಗೌಡ, ಬೆಂಗಳೂರು

ಗುಲಾಮತನ

ಶಿರ ಶ್ರೇಷ್ಠ, ಪಾದ ಕನಿಷ್ಠ
ಶತಶತಮಾನಗಳ ಗುಲಾಮತನ
ಇನ್ನೂ ಮಿದುಳನ್ನು ಆಳುತ್ತಿದೆ
ಪಾದವ ಅಪ್ಪಿದ
ಚಪ್ಪಲಿ ಅನಿಷ್ಟ ಎಂದು
ಆಗಾಗ ಬೆದರಿಸುತ್ತಿದೆ!

ನೀ.ಗೂ. ರಮೇಶ್, ಮೈಸೂರು

ಊಟ–ತಿಂಡಿ ದರ ದುಬಾರಿ: ನಿಗಾ ಇರಲಿ

ಮಂಡ್ಯದ ಹೋಟೆಲ್‌ವೊಂದಕ್ಕೆ ತಿಂಡಿ ತಿನ್ನಲು ಹೋಗಿದ್ದೆವು. ₹40ಕ್ಕೆ ಸಿಗುತ್ತಿದ್ದ ಸೆಟ್‌ದೋಸೆಗೆ ₹50 ಹಾಗೂ ₹60 ಇದ್ದ ಬೆಣ್ಣೆದೋಸೆ ದರ ₹70 ಆಗಿತ್ತು. ಒಂದು ವಾರ ಕಾಫಿ, ಟೀ ನಿಲ್ಲಿಸಿದ್ದೇವೆಂಬ ಉತ್ತರ ಬಂತು. ತಿಂಡಿಯ ಬೆಲೆ ಏರಿಕೆ ಬಗ್ಗೆ ಪ್ರಶ್ನಿಸಿದಾಗ ವಾಣಿಜ್ಯ ಸಿಲಿಂಡರ್ ಅಭಾವದ ಸಮಸ್ಯೆ ಮುಂದಿಟ್ಟರು. ಎಲ್‌ಪಿಜಿ ಕೊರತೆಯಿಂದಾಗಿ ಹೋಟೆಲ್‌ನವರು ಆಹಾರದ ಬೆಲೆ ಏರಿಸಿದ್ದಾರೆ. ಸಿಲಿಂಡರ್ ಸಮಸ್ಯೆ ಪರಿಹಾರವಾದ ಬಳಿಕ ಏರಿಸಿರುವ ಬೆಲೆ ಇಳಿಸುತ್ತಾರೆಂಬ ಗ್ಯಾರಂಟಿ ಇದೆಯೆ? ಸಿಲಿಂಡರ್ ಸಮಸ್ಯೆ ಮುಂದಿಟ್ಟುಕೊಂಡು ಕೆಲವು ಹೋಟೆಲ್ ಮಾಲೀಕರು ದುಬಾರಿ ದರ ವಸೂಲಿ ಮಾಡುತ್ತಿದ್ದಾರೆ. ಈ ಬಗ್ಗೆ ಸರ್ಕಾರ ನಿಗಾವಹಿಸಬೇಕಾಗಿದೆ.

ಸಿ. ಸಿದ್ದರಾಜು ಆಲಕೆರೆ, ಮಂಡ್ಯ

ಚುರುಮುರಿ



ಸದನ ಸಂಸ್ಕೃತಿ

• ಮಣ್ಣೆ ರಾಜು

'ಲೀವ್ ಲೆಟರ್, ಪರ್ಮಿಷನ್ ಲೆಟರ್ ಇಲ್ಲದೆ ನಿಮ್ಮ ಮಗ ಸ್ಕೂಲಿಗೆ ಆಬ್ಸೆಂಟ್ ಆಗಕೂಡದು ಎಂದು ಕ್ಲಾಸ್ ಟೀಚರ್ ಹೇಳಿದರು ಕಣ್ರೀ' ಅಂದಳು ಸುಮಿ.

'ಸ್ಕೂಲ್ ಡಿಸಿಪ್ಲಿನ್ ಫಾಲೋ ಮಾಡಬೇಕು' ಅಂದ ಶಂಕ್ರಿ.

'ಮಂತ್ರಿ, ಶಾಸಕರು ಸದನಕ್ಕೆ ಗೈರುಹಾಜರಾಗ್ತಾರೆ, ನಮ್ಮ ಮಗ ಅಪರೂಪಕ್ಕೆ ಆಬ್ಸೆಂಟ್ ಆದರೆ ದೊಡ್ಡ ತಪ್ಪೇನ್ರೀ?'

'ದೊಡ್ಡವರು ಸದನಕ್ಕೆ ಗೈರಾಗಬಹುದು, ಸ್ಕೂಲ್ ಮಕ್ಕಳು ಆಗಬಾರದು'.

'ಸದನದಲ್ಲಿ ಸ್ಪೀಕರ್ ಹಾಜರಾತಿ ಕರೆಯುವಾಗ 'ಆ ಖಾತೆ ಮಂತ್ರಿ?' ಎಂದಾಗ ವಿಪಕ್ಷದವರು ಆಬ್ಸೆಂಟ್ ಅಂತ ಕೂಗ್ತಾರೆ. 'ಈ ಖಾತೆ ಮಂತ್ರಿ?' ಅಂದರೆ ಗೈರುಹಾಜರಿ ಎನ್ನುತ್ತಾರೆ, ಇನ್ನೊಂದು ಇಲಾಖೆ ಸಚಿವರು ಬಂದಿದ್ದಾರೇನ್ರೀ ಎಂದು ಕೇಳಿದರೆ ಅವರೂ ಬಂದಿಲ್ಲ ಸಾರ್ ಎಂದು ವಿರೋಧ ಪಕ್ಷದವರು ಆಡಿಕೊಂಡು ನಗ್ತಾರೆ'.

'ಸದನದಲ್ಲಿ ಮಂತ್ರಿ, ಶಾಸಕರು ಸ್ಕೂಲ್ ಮಕ್ಕಳಿಗಿಂಥಾ ಕಡೆಯಾಗಿ ಬೈದಾಡ್ತಾರೆ, ಜಗಳವಾಡ್ತಾರಂತೆ, ಅಶಿಸ್ತು ಮಿತಿಮೀರಿ ಸದನ ಸಂಸ್ಕೃತಿಗೆ ಧಕ್ಕೆಯಾಗುತ್ತಿದೆ ಎಂದು ಸ್ಪೀಕರ್ ಸಂಕಟ ತೋಡಿಕೊಂಡಿದ್ದಾರೆ'.

'230 ಪ್ರಶ್ನೆಗಳ ಪೈಕಿ ಮಂತ್ರಿಗಳು ಬರೀ 84 ಪ್ರಶ್ನೆಗಳಿಗೆ ಉತ್ತರ ಕೊಟ್ಟರಂತೆ. ಇಷ್ಟು ಉತ್ತರದಿಂದ ಪಾಸಿಂಗ್ ಮಾರ್ಕ್ಸ್ ಸಿಗುತ್ತಾ? ಮಂತ್ರಿಗಳು ಪಾಸಾಗ್ತಾರಾ?'

'ಮಂತ್ರಿಗಳು ಪಾಸಾಗ್ತಾರೋ ಇಲ್ವೊ, ಹೀಗೇ ಮುಂದುವರಿದರೆ ಸದನವಂತೂ ಫೇಲ್ ಆಗ್ತದೆ'.

'ಸ್ಕೂಲ್‌ನಲ್ಲಿ ಮಕ್ಕಳು ಪ್ರಶ್ನೆಗೆ ಉತ್ತರ ಕೊಡದಿದ್ದರೆ 'ಸ್ಟ್ಯಾಂಡ್‌ಅಪ್ ಆನ್ ದಿ ಬೇಂಚ್' ಅಂತ ಟೀಚರ್ ಬೆಂಚ್ ಮೇಲೆ ನಿಲ್ಲಿಸ್ತಾರೆ, ಹಾಗಂತ ಮಂತ್ರಿಗಳಿಗೆ ಸ್ಪೀಕರ್ ಹಾಗೆಯೇ ಹೇಳಬಾರದು, ಅವರು ದೊಡ್ಡವರು...'

'ಟೀಚರ್‌ಗಳು ಸಿಟ್ಟಾಗಿ ಮಕ್ಕಳನ್ನು ಕ್ಲಾಸಿನಿಂದ ಆಚೆ ಕಳಿಸ್ತಾರೆ, ಸದನದಲ್ಲಿ ಸ್ಪೀಕರ್‌ಗೆ ಸಿಟ್ಟು ಬಂದರೆ ತಾವೇ ಸಭಾತ್ಯಾಗ ಮಾಡಿ ಹೋಗಿ ಸಿಟ್ಟು ಶಮನ ಮಾಡಿಕೊಳ್ಳಬೇಕಷ್ಟೇ...' ಎಂದ ಶಂಕ್ರಿ.

ಸಂಗತ


ಚಿತ್ರಸಾಹಿತ್ಯ: ರಸಿಕತೆಯಿಂದ ಅಶ್ಲೀಲದತ್ತ

ರಸಿಕತೆ, ತುಂಟತನ ಸ್ವೀಕಾರಾರ್ಹ. ಆದರೆ, ಎಚ್ಚರ ತಪ್ಪಿದರೆ ರಸಾಸ್ವಾದ ರಸಭಂಗ ಆಗುತ್ತದೆ. ಈ ವಿವೇಕವನ್ನು 'ಕನ್ನಡ ಸಿನಿಮಾ'ದ ಕೆಲವರು ಮರೆತಿರುವಂತಿದೆ.

• ವಿಶಾಖ ಎನ್.

ಸಿನಿಮಾ ಸಾಹಿತ್ಯದಲ್ಲಿ ಲವಲವಿಕೆ ಇರಬೇಕು, ಥಟ್ಟನೆ ಗಮನಸೆಳೆಯಬೇಕು ಎಂಬ ಉಮೇದು ಲಾಗಾಯ್ತಿನಿಂದ ಇರುವಂಥದ್ದೇ. ಅದರಲ್ಲೂ ಕ್ಯಾಬರೆ ನೃತ್ಯ ಇರುವ ಹಾಡುಗಳು ಬಂದಮೇಲೆ ರಸಿಕರೆದೆಗೆ ಗಾಳ ಹಾಕುವಂತಹ ಸಾಲುಗಳನ್ನು ಬರೆಯುವ ಸವಾಲು ಉದ್ಭವವಾಯಿತು. ಆ ಟ್ರೆಂಡ್ ಈಗ ಸದಭಿರುಚಿಯ ಎಲ್ಲೆಕಟ್ಟುಗಳನ್ನೆಲ್ಲ ಮೀರಿದಂತಿದೆ.

'ಪರೋಪಕಾರಿ' ಸಿನಿಮಾದ 'ಜೋಕೆ ನಾನು ಬಳ್ಳಿಯ ಮಿಂಚು, ಕಣ್ಣು ಕತ್ತಿಯ ಅಂಚು' ಎಂಬ ಸಾಲಿನ ರಸಾಸ್ವಾದ ಉಂಡವರು ನಾವು. ಆರ್.ಎನ್. ಜಯಗೋಪಾಲ್ ಅವರ ಸಾಹಿತ್ಯದ ಗೀತೆಯಲ್ಲಿನ ಲಯ ಹಾಗೂ ಶಿಲ್ಪದ ಬಗೆಗೂ ದೀರ್ಘವಾಗಿ ಮಾತಾಡಬಹುದು. ಹಂಸಲೇಖ ಕೂಡ ಇಂತಹ ಗೀತೆಗಳನ್ನು ಬರೆಯುವ ಅವಕಾಶ ಸಿಕ್ಕಾಗಲೆಲ್ಲ ತುಂಟತನದ ಸುಖ ಉಂಡರು, ಉಣಬಡಿಸಿದರು. 'ಅದೇನದು ಅದೇನದು ಐಸಾ...' ಎಂದು ಡಿಸ್ಕೋ ಶಾಂತಿ 'ಸಂಗ್ರಾಮ' ಚಿತ್ರದಲ್ಲಿ ಮಾದಕವಾಗಿ ಕುಣಿದ ಹಾಡಿನಲ್ಲಿ ಇದ್ದ ಸಾಲುಗಳು ಇದಕ್ಕೆ ಉದಾಹರಣೆ. ಮಂಜಿನಗಡ್ಡೆಗೂ ಲಲನೆಗೂ ಹೋಲಿಕೆ ಮಾಡಿ ಹಂಸಲೇಖ ಬರೆದಿದ್ದ ಐಟಂ ಗೀತೆ ಅದು. ಎರಡು ದಶಕಗಳಲ್ಲಿ ಯೋಗರಾಜ ಭಟ್ಟರು ಅನೇಕ ಐಟಂ ಹಾಡುಗಳಿಗೆ ಸಾಹಿತ್ಯ ಬರೆದಿದ್ದಾರೆ. 'ನಾ ಬೋರ್ಡು ಇರದ ಬಸ್ಸನು ಹತ್ತಿಬಂದ ಚೋಕರಿ' ಆಗಲಿ, 'ಶೇಕ್ ಇಟ್ ಪುಷ್ಪವತಿ' ಆಗಲಿ ಆರೋಗ್ಯಕರ ವಿಟ್‌ಗೆ ರಸಿಕತೆ ಬೆರೆಸಿದಂತಹ ಸಾಲುಗಳನ್ನು ಒಳಗೊಂಡಿದ್ದವು. ಅವುಗಳು ಅಶ್ಲೀಲ ಎನ್ನುವ ಮಟ್ಟಕ್ಕೆ ಇಳಿದಿರಲಿಲ್ಲ.



ಹೀಗೆ ಮೂರು ಕಾಲಮಾನಗಳಲ್ಲಿ ಆರೋಗ್ಯಕರವಾದ ತುಂಟ ಗೀತೆಗಳನ್ನು ಕೇಳುತ್ತಾ ಬಂದ ನಾವು ಆಗಾಗ ಹದ ತಪ್ಪಿದ, ಘನತೆಯ ಚೌಕಟ್ಟು ದಾಟಿದ ಗೀತಸಾಹಿತ್ಯವನ್ನೂ ನೋಡುತ್ತಾ ಬಂದಿದ್ದೇವೆ. ಕೇಳುತ್ತಾ ಕಿವಿ ಮುಚ್ಚಿಕೊಂಡಿದ್ದೇವೆ. ಈಗ ಹಾಗೆ ಕಿವಿ ಮುಚ್ಚಿಕೊಳ್ಳುವಂತಹ ಸಾಹಿತ್ಯ ಬಂದಿದೆ ಎಂದೇ ಸಾಮಾಜಿಕ ಮಾಧ್ಯಮದಲ್ಲಿ ಗಂಭೀರ ಚರ್ಚೆ ನಡೆದಿದೆ.

ನಿರ್ದೇಶಕ ಪ್ರೇಮ್ ತಮ್ಮ 'ಕೆ.ಡಿ.' ಚಿತ್ರಕ್ಕೆ 'ಸರಿಸೆ ನಿನ್ನ ಸೆರಗ' ಎಂಬ ಹಾಡನ್ನು ಬರೆದಿದ್ದಾರೆ. ಹಿಂದಿ ಚಿತ್ರರಂಗದಲ್ಲಿ ತಮ್ಮ ನೃತ್ಯ ಲಾಲಿತ್ಯದಿಂದ ಗಮನಸೆಳೆದಿರುವ ನೋರಾ ಫತೇಹಿ ಹಾಗೂ ಸಂಜಯ್ ದತ್ ನೃತ್ಯದ ಮೇಲೆ ಆ ಹಾಡಿನ ಚಿತ್ರೀಕರಣ ನಡೆದಿದೆ. ಬಹುಶಃ ಆ ಇಬ್ಬರಿಗೂ ಸಾಹಿತ್ಯದ ಹೂರಣದ ಅರಿವು ಪೂರ್ಣವಾಗಿ ಇರಲಾರದು. 'ಸೆರಗ ಸರಿಸೆ' ಎನ್ನುವ ಕೋರಿಕೆಯನ್ನೇ ಪಲ್ಲವಿ ಮಾಡುವ ಮೂಲಕವೇ ಅದನ್ನು ಬರೆದಿರುವ ಪ್ರೇಮ್ ಅವರು ತಮ್ಮ ಉದ್ದೇಶವನ್ನು ಅನಾವರಣಗೊಳಿಸಿದ್ದಾರೆ. ಮುಂದೆ ಚರಣಗಳಲ್ಲಿನ ಸಾಹಿತ್ಯ ಅಶ್ಲೀಲ ಎನ್ನುವುದು ನಿಸ್ಸಂಶಯ.

ಕೆಲವು ದಶಕಗಳ ಹಿಂದೆ ಡಬ್ಬಲ್ ಮೀನಿಂಗ್ ಎಂಬ ಪ್ರಭೇದ ಇತ್ತು. ಈಗ ಅದೂ ಇಲ್ಲವಾದ ಕಾಲದಲ್ಲಿ ಪ್ರೇಮ್ ಸಾಹಿತ್ಯ ನೇರವಾಗಿ ಸುರತದ ಕಚ್ಚಾ ಹಾಗೂ ವಾಚ್ಯ ಹಲುಬುವಿಕೆಯಂತೆ ಕೇಳುತ್ತಿದೆ.

ಸಿನಿಮಾ ಸಾಹಿತ್ಯವನ್ನು ಆಕರ್ಷಿಸುವಂತೆ ರಚಿಸುವ ಭರದಲ್ಲಿ ಅವಸರದಲ್ಲಿಯೇ ಪದಗಳ ಪೋಣಿಸುವುದು ಸಹಜವೇ ಇರಬಹುದು. ಆದರೆ, ಅಭಿರುಚಿಯೊಂದು ಗುಪ್ತಗಾಮಿನಿಯಾಗಿ ಕೆಲಸ ಮಾಡುತ್ತಿರುತ್ತದೆ. 'ಈ ಶತಮಾನದ ವೀರ ಮದಕರಿ' ಕನ್ನಡ ಸಿನಿಮಾದಲ್ಲಿ 'ಜಿಂತಾತ' ಎಂಬ ಹಾಡೊಂದು ಇದೆ. ಅದರಲ್ಲಿನ ಚರಣವೊಂದರಲ್ಲಿ 'ಟೆನ್ನಿಸ್ಸು ಸಾನಿಯಾ/ ಇವಳೇನು ಕಮ್ಮಿಯಾ/ ಬಗ್ಗಿ ಶಾಟು ಹೊಡೆದರೆ ಗ್ರೌಂಡೆಲ್ಲ ಕ್ಯಾಬರೆ' ಎಂಬ ಸಾಲುಗಳಿವೆ. ಆಟವನ್ನು ಆಸ್ವಾದಿಸುವ ಮನಸ್ಸುಗಳಿಗೆ ಈ ಸಾಲುಗಳನ್ನು ಕೇಳಿ ಕಸಿವಿಸಿಯಾಗಬಹುದು. ಆದರೆ, ಅದು ಜನಪ್ರಿಯವಾಗಿದ್ದ ಹಾಡೊಂದರ ಸಾಲು. ಪಡ್ಡೆಗಳು ಅದನ್ನು ಗುನುಗುವಂತಹ ಹೆಚ್ಚು ಸಂದರ್ಭಗಳು ಸಹಜವಾಗಿ ಸೃಷ್ಟಿಯಾಗುತ್ತವೆ ಎಂಬ ಅಂದಾಜಿನಿಂದಲೇ ಗೀತರಚನೆಕಾರ ಕವಿರಾಜ್ ಅವರು ಸನ್ನಿವೇಶವನ್ನಷ್ಟೇ ದೃಷ್ಟಿಯಲ್ಲಿ ಇಟ್ಟುಕೊಂಡು ಆ ಸಾಲುಗಳನ್ನು ಬರೆದಿರಬಹುದು. ಸ್ವತಃ ಕ್ರೀಡಾಪ್ರೇಮಿಯಾದ ಸುದೀಪ್ ಅವರಿಗೂ ತಮ್ಮ ಸಿನಿಮಾ ಹಾಡಿನ ಈ ಸಾಲುಗಳ ಕುರಿತು ತುಸುವೂ ಸಂಕೋಚ ಮೂಡದೆಹೋದದ್ದು ಅಚ್ಚರಿ. ಆ ಕಾಲಘಟ್ಟದಲ್ಲಿ ಸಾನಿಯಾ ಮಿರ್ಜಾ ಭಾರತದ ಟೆನಿಸ್‌ಗೆ ಹಲವು ಗರಿಗಳನ್ನು ಮೂಡಿಸಿದವರು. ಹಾಡಿನಲ್ಲಿ ಅವರ ಹೆಸರನ್ನು ತೇಲಿಬಿಟ್ಟು, 'ಬಗ್ಗಿ ಶಾಟು ಹೊಡೆದರೆ ಗ್ರೌಂಡೆಲ್ಲ ಕ್ಯಾಬರೆ' ಎಂದು ಬರೆಯುವುದು ಒಳ್ಳೆಯ ಅಭಿರುಚಿಯಂತೂ ಅಲ್ಲ.

ಈಗೀಗ ಪ್ರೇಮ್ ಅವರಿಗೆ ಸಭ್ಯತೆಯ ಚೌಕಟ್ಟನ್ನು ಮುರಿದು ನುಗ್ಗುವುದು ಚಾಳಿಯೇ ಆಗುತ್ತಿದೆ. 'ಇವಳು ದೇವರು ಕೊಟ್ಟ ವರದಾನ/ ಮೈಯೇ ಒಂದು ಮೈದಾನ/ ಆಡ್ಕಳ್ಳಿ ಆಡ್ಕಳ್ಳಿ ಅಂತಾಳೆ' ಎಂಬ ಸಾಲುಗಳನ್ನು ಅವರು 'ಪ್ರೇಮ್ ಅಡ್ಡಾ' ಸಿನಿಮಾದಲ್ಲಿ ಬರೆದಿದ್ದರು. ಅದಕ್ಕೂ ಟೀಕೆಗಳು ವ್ಯಕ್ತವಾಗಿದ್ದವು. ಈಗ 'ಸರಿಸೆ ನಿನ್ನ...' ಎಂಬ ಹಾಡನ್ನು ಬರೆದಿದ್ದಾರೆ. ಅದರಲ್ಲಿನ ಚರಣದ ಸಾಹಿತ್ಯವನ್ನು ಮುಕ್ತವಾಗಿ ಸಾರ್ವಜನಿಕ ಸ್ಥಳದಲ್ಲಿ ಹಾಡಿದರೆ ಯಾರಿಂದಲಾದರೂ ತಪರಾಕಿ ಬೀಳುವುದು ಗ್ಯಾರಂಟಿ.

ಉತ್ತರ ಕರ್ನಾಟಕದ ಕೆಲವು ಯೂಟ್ಯೂಬರ್‌ಗಳು ಅಶ್ಲೀಲ ಸಾಹಿತ್ಯ ಬರೆಯುತ್ತಿದ್ದಾರೆ ಎಂದು ಅದನ್ನು ಟೀಕಿಸಿ ಶೀಲಾ ಪಾಟೀಲ ಎಂಬ ಹೆಣ್ಣುಮಗಳೊಬ್ಬರು ಇತ್ತೀಚೆಗೆ ಹಾವೇರಿಯಲ್ಲಿ ಸುದ್ದಿಗೋಷ್ಠಿ ಮಾಡಿದ್ದರು. ದೂರು ಕೊಡುವ ಎಚ್ಚರಿಕೆಯನ್ನೂ ಅವರು ನೀಡಿದ್ದರು. ಈಗ ಪ್ರೇಮ್, ಜನ ಮಾತಾಡಿಕೊಳ್ಳಲಿ ಎಂಬ ಭಂಡತನದಿಂದಲೋ ಏನೋ ಅಗ್ಗದ ಸಾಹಿತ್ಯ ಬರೆದು ಬಯಲಾಗಿದ್ದಾರೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಅಂತರರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯ ಕುರಿತ ಅಮೆರಿಕ ಆಯೋಗದ 2026ರ ವಾರ್ಷಿಕ ವರದಿಯಲ್ಲಿ ಉಲ್ಲೇಖ

ಭಾರತದಲ್ಲಿ ಕುಸಿಯುತ್ತಿದೆ ಧಾರ್ಮಿಕ ಸ್ವಾತಂತ್ರ್ಯ

ಭಾರತದಲ್ಲಿ ಧಾರ್ಮಿಕ ಸ್ವಾತಂತ್ರ್ಯವು ನಿರಂತರವಾಗಿ ಕುಸಿಯುತ್ತಿದೆ ಎಂದು ಅಂತರರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯ ಕುರಿತ ಅಮೆರಿಕ ಆಯೋಗದ 2026ರ ವಾರ್ಷಿಕ ವರದಿ ಕಳವಳ ವ್ಯಕ್ತಪಡಿಸಿದೆ. ಭಾರತವನ್ನು 'ಆತಂಕದ ದೇಶ' ಎಂದು ಪರಿಗಣಿಸಬೇಕು; ನಿರ್ದಿಷ್ಟ ವ್ಯಕ್ತಿಗಳು ಮತ್ತು ಆರ್‌ಎಸ್‌ಎಸ್, ಆರ್‌ಎಡಬ್ಲ್ಯುನಂಥ (ರಾ) ಸಂಸ್ಥೆಗಳ ಮೇಲೆ ನಿರ್ಬಂಧ ಹೇರಬೇಕು ಎಂದು ವರದಿಯಲ್ಲಿ ಅಮೆರಿಕ ಸರ್ಕಾರಕ್ಕೆ ಶಿಫಾರಸು ಮಾಡಲಾಗಿದೆ. ಒಟ್ಟು 29 ದೇಶಗಳಲ್ಲಿನ ಧಾರ್ಮಿಕ ಸ್ವಾತಂತ್ರ್ಯದ ಬಗ್ಗೆ ವರದಿಯಲ್ಲಿ ವಿಶ್ಲೇಷಿಸಲಾಗಿದೆ. ವರದಿಯು ಪಕ್ಷಪಾತದಿಂದ ಕೂಡಿದ್ದು, ಅದನ್ನು ತಿರಸ್ಕರಿಸುವುದಾಗಿ ಭಾರತ ಪ್ರತಿಕ್ರಿಯಿಸಿದೆ

ಪ್ರಜಾವಾಣಿ ವಾರ್ತೆ


ಕಲೆ: ಸಂತೋಷ್ ಸಸಿಹಿತ್ಲು

ಅಂತರರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯ ಕುರಿತ ಅಮೆರಿಕದ ಆಯೋಗದ (ಯುಎಸ್‌ಸಿಐಆರ್‌ಎಫ್) 2026ರ ವಾರ್ಷಿಕ ವರದಿಯು ಭಾರತದಲ್ಲಿ ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ ಹಲ್ಲೆ, ದೌರ್ಜನ್ಯ ನಡೆಯುತ್ತಿದ್ದು, ಧಾರ್ಮಿಕ ಸ್ವಾತಂತ್ರ್ಯದ ಸ್ಥಿತಿ ಕಳವಳಕಾರಿಯಾಗಿದೆ ಎಂದಿದೆ. ಈ ದಿಸೆಯಲ್ಲಿ ಭಾರತವೂ ಸೇರಿದಂತೆ ಹಲವು ದೇಶಗಳ ನಿರ್ದಿಷ್ಟ ವ್ಯಕ್ತಿ ಮತ್ತು ಸಂಸ್ಥೆಗಳ ವಿರುದ್ಧ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಕೆಲವು ಶಿಫಾರಸುಗಳನ್ನೂ ಮಾಡಿದೆ.

ಯುಎಸ್‌ಸಿಐಆರ್‌ಎಫ್, ಅಮೆರಿಕದ ಅಂತರರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯ ಕಾಯ್ದೆ (ಐಆರ್‌ಎಫ್‌ಎ) 1998ರ ಅಡಿ ರಚನೆಯಾಗಿರುವ ಒಂದು ಸ್ವತಂತ್ರ ಹಾಗೂ ದ್ವಿಪಕ್ಷೀಯ ಸಂಸ್ಥೆಯಾಗಿದ್ದು, ಅಮೆರಿಕ ಸರ್ಕಾರಕ್ಕೆ ಸಲಹೆ ನೀಡುತ್ತದೆ. ವಿದೇಶಗಳ ಧಾರ್ಮಿಕ ಸ್ವಾತಂತ್ರ್ಯದ ಸ್ಥಿತಿಗತಿ ಮತ್ತು ಈ ದಿಸೆಯಲ್ಲಿ ನೀತಿ ಬದಲಾವಣೆಯ ಅಗತ್ಯದ ಬಗ್ಗೆ ಅಮೆರಿಕದ ಅಧ್ಯಕ್ಷ, ವಿದೇಶಾಂಗ ಕಾರ್ಯದರ್ಶಿ ಮತ್ತು ಸಂಸತ್‌ಗೆ ಸಲಹೆಗಳನ್ನು ನೀಡುತ್ತದೆ. ಯುಎಸ್‌ಸಿಐಆರ್‌ಎಫ್ 2026ರ ವಾರ್ಷಿಕ ವರದಿಯು, 2025ರಲ್ಲಿ 29 ದೇಶಗಳಲ್ಲಿನ ಧಾರ್ಮಿಕ ಸ್ವಾತಂತ್ರ್ಯದ ಉಲ್ಲಂಘನೆ ಮತ್ತು ಪ್ರಗತಿಯ ಕುರಿತ ಅಧ್ಯಯನದ ಆಧಾರದಲ್ಲಿ ವಿಶ್ಲೇಷಣೆ, ಶಿಫಾರಸುಗಳನ್ನು ಮಾಡಿದೆ. ಸಂದರ್ಶನ, ಸಭೆ ಮತ್ತು ಪ್ರವಾಸಗಳ ಆಧಾರದಲ್ಲಿ ವರದಿ ಸಿದ್ಧಪಡಿಸಲಾಗಿದೆ.

ವರದಿಯಲ್ಲಿ ದೇಶಗಳನ್ನು ಎರಡು ರೀತಿಯಲ್ಲಿ ವರ್ಗೀಕರಿಸಲಾಗಿದೆ. ಒಂದು, 18 ದೇಶಗಳನ್ನು 'ಆತಂಕ ಉಂಟುಮಾಡುವ ದೇಶಗಳು' (ಸಿಪಿಸಿ) ಎಂದು ಕರೆಯಲಾಗಿದೆ; ಮತ್ತೊಂದು, 11 ದೇಶಗಳನ್ನು 'ವಿಶೇಷ ಗಮನ ನೀಡಬೇಕಾದ ದೇಶಗಳು' (ಎಸ್‌ಡಬ್ಲ್ಯುಎಲ್) ಎಂದಿದೆ. ಏಳು ಸಂಸ್ಥೆ/ಸಂಘಟನೆಗಳನ್ನು 'ಆತಂಕ ಉಂಟುಮಾಡುವ ಸಂಸ್ಥೆಗಳು' (ಇಪಿಸಿ) ಎಂದು ಪಟ್ಟಿ ಮಾಡಲಾಗಿದೆ. ದೇಶವು 2025ರಲ್ಲಿ ಐಆರ್‌ಎಫ್‌ಎ ಹೇಗೆ ಜಾರಿ ಮಾಡಿದೆ ಎನ್ನುವುದರ ಮಾಹಿತಿಯನ್ನೂ ವರದಿ ಒಳಗೊಂಡಿದೆ. ಜತೆಗೆ, ಹೊರದೇಶಗಳ ಧಾರ್ಮಿಕ ಸ್ವಾತಂತ್ರ್ಯ ಕುರಿತ ವರದಿಯಲ್ಲಿನ ಶಿಫಾರಸುಗಳನ್ನು ಸಂಸತ್ತು ಹೇಗೆ ಪರಿಣಾಮಕಾರಿಯಾಗಿ ಜಾರಿಗೊಳಿಸಬಹುದು ಎನ್ನುವುದನ್ನೂ ವಿವರಿಸಲಾಗಿದೆ.

ಭಾರತದಲ್ಲಿ ಆತಂಕದ ಸ್ಥಿತಿ: ಭಾರತವು 'ಆತಂಕ ಉಂಟುಮಾಡುವ ದೇಶ'ಗಳ ಪಟ್ಟಿಯಲ್ಲಿ ಸ್ಥಾನ ಪಡೆದಿದೆ. ಭಾರತದ ಸಂವಿಧಾನವು ಪ್ರತಿಯೊಬ್ಬರಿಗೂ ಧಾರ್ಮಿಕ ಸ್ವಾತಂತ್ರ್ಯವನ್ನು ಖಾತರಿಗೊಳಿಸಿದೆ. ಆದರೆ, 2014ರಲ್ಲಿ ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಅಲ್ಪಸಂಖ್ಯಾತರನ್ನು ಗುರಿಯಾಗಿಸಿಕೊಂಡು ಕಾಯ್ದೆಗಳನ್ನು, ಕಠಿಣ ನೀತಿಗಳನ್ನು ಜಾರಿಗೊಳಿಸಿದೆ. ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆ (ಎಫ್‌ಸಿಆರ್‌ಎ), ಅಕ್ರಮ ಚಟುವಟಿಕೆಗಳ ತಡೆ ಕಾಯ್ದೆ (ಯುಎಪಿಎ), ಪೌರತ್ವ (ತಿದ್ದುಪಡಿ) ಕಾಯ್ದೆ (ಸಿಎಎ), ರಾಷ್ಟ್ರೀಯ ಪೌರತ್ವ ನೋಂದಣಿ (ಎನ್‌ಆರ್‌ಸಿ), ವಕ್ಫ್ ತಿದ್ದುಪಡಿ ಕಾಯ್ದೆ ಮತ್ತು 2025ರ ವಲಸೆ ಮತ್ತು ವಿದೇಶಿಯರ ಮಸೂದೆ– ಇವುಗಳನ್ನು ಧಾರ್ಮಿಕ ಅಲ್ಪಸಂಖ್ಯಾತರನ್ನು ಗುರಿಯಾಗಿಸಿಕೊಂಡೇ ಜಾರಿಗೊಳಿಸಲಾಗಿದ್ದು, ಇವು ಧಾರ್ಮಿಕ ಸ್ವಾತಂತ್ರ್ಯಕ್ಕೆ ವಿರುದ್ಧವಾಗಿವೆ ಎಂದು ವರದಿ ಹೇಳಿದೆ.

ದೇಶದಲ್ಲಿ ಧಾರ್ಮಿಕ ಅಲ್ಪಸಂಖ್ಯಾತರನ್ನು ಮತ್ತು ಅವರ ಪ್ರಾರ್ಥನಾ ಸ್ಥಳಗಳನ್ನು ಗುರಿಯಾಗಿಸಿ ಕಾನೂನು ಬದಲಾವಣೆ ಮಾಡಲಾಗಿದೆ. 12 ರಾಜ್ಯಗಳಲ್ಲಿ ಮತಾಂತರ ನಿಷೇಧ ಕಾಯ್ದೆ ತರಲಾಗಿದ್ದು, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ನಿಗದಿಪಡಿಸಲಾಗಿದೆ. ಬಲವಂತ ಮತಾಂತರದ ಆರೋಪದಿಂದ ಜೇಮ್ಸ್ ವ್ಯಾಟ್ಸನ್ ಎನ್ನುವ ಅಮೆರಿಕ ಪ್ರಜೆಯನ್ನು ಬಂಧಿಸಲಾಗಿತ್ತು. ಧಾರ್ಮಿಕ ನಿರಾಶ್ರಿತರನ್ನು ವಶಕ್ಕೆ ಪಡೆಯುವ, ದೇಶದಿಂದ ಹೊರಹಾಕುವ ಮತ್ತು ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ ದಾಳಿ ಮಾಡುವ ಘಟನೆಗಳು ವ್ಯಾಪಕವಾಗಿ ನಡೆಯುತ್ತಿವೆ. ಉತ್ತರ ಪ್ರದೇಶ, ಅಸ್ಸಾಂನಲ್ಲಿ ಗೋರಕ್ಷಣೆಯ ನೆಪದಲ್ಲಿ ಹಲವು ಮುಸ್ಲಿಮರ ಮೇಲೆ ಗುಂಪು ಹಲ್ಲೆ ಮಾಡಿ ಕೊಲ್ಲಲಾಗಿದೆ ಎಂದು ವರದಿ ಉಲ್ಲೇಖಿಸಿದೆ.

ಮುಸ್ಲಿಮರ ಮೇಲೆ ದಾಳಿ, ಮತಾಂತರ: ವರ್ಷದುದ್ದಕ್ಕೂ ಹಲವು ರಾಜ್ಯಗಳಲ್ಲಿ ಹಿಂದೂ ರಾಷ್ಟ್ರೀಯವಾದಿ ಗುಂಪುಗಳು ನಿರ್ಭೀತಿಯಿಂದ ಕ್ರೈಸ್ತ ಮತ್ತು ಮುಸ್ಲಿಮರನ್ನು ಪ್ರಚೋದನೆಗೆ, ಕಿರುಕುಳಕ್ಕೆ ಒಳಪಡಿಸಿವೆ; ಹಲವು ರಾಜ್ಯ ಸರ್ಕಾರಗಳು ಅವರ ಮೇಲೆ ಹಿಡಿತ ಸಾಧಿಸಲು ಪ್ರಾರ್ಥನಾ ಮಂದಿರಗಳನ್ನು ಗುರಿಯಾಗಿಸಿಕೊಂಡಿವೆ ಎಂದು ವಿಶ್ಲೇಷಿಸಿರುವ ವರದಿಯು, ಕೇಂದ್ರ ಸರ್ಕಾರವು ವಕ್ಫ್ ಕಾಯ್ದೆಗೆ ತಿದ್ದುಪಡಿ ತಂದು ವಕ್ಫ್ ಮಂಡಳಿಗಳಲ್ಲಿ ಮುಸ್ಲಿಮೇತರರನ್ನು ಸೇರಿಸಲು ಅವಕಾಶ ನೀಡಿದ್ದು ಮತ್ತು ವಕ್ಫ್ ಆಸ್ತಿಗಳನ್ನು ಹಿಡಿತಕ್ಕೆ ತೆಗೆದುಕೊಳ್ಳಲು ಪ್ರಯತ್ನಿಸಿದ ಬಗ್ಗೆ ಉಲ್ಲೇಖಿಸಿದೆ. ಹಾಗೆಯೇ ಉತ್ತರಾಖಂಡ ಸರ್ಕಾರವು ಅಲ್ಪಸಂಖ್ಯಾತ ಶಿಕ್ಷಣ ಕಾಯ್ದೆಗೆ (ಯುಎಸ್‌ಎಎಂಇ) ತಿದ್ದುಪಡಿ ತಂದು ಮದರಸಗಳ ಜತೆಗೆ ಸಿಖ್, ಬೌದ್ಧ, ಜೈನ, ಪಾರ್ಸಿ ಮತ್ತು ಕ್ರೈಸ್ತರ ಶಿಕ್ಷಣ ಸಂಸ್ಥೆಗಳನ್ನು ಸರ್ಕಾರದ ಹಿಡಿತಕ್ಕೆ ತೆಗೆದುಕೊಂಡಿತು ಎಂದು ಹೇಳಿದೆ. ಪಹಲ್ಗಾಮ್ ಘಟನೆಯನ್ನೂ ಉಲ್ಲೇಖಿಸಲಾಗಿದೆ.

ಸಿಎಎ ವಿರುದ್ಧ ಹೋರಾಟ ನಡೆಸಿದ ವಿದ್ಯಾರ್ಥಿ ಮುಖಂಡ ಉಮರ್ ಖಾಲಿದ್, ಶಾರ್ಜೀಲ್ ಇಮಾಮ್ ಅವರು ಐದು ವರ್ಷಗಳಿಂದ ಜೈಲಿನಲ್ಲಿದ್ದು, ವಿಚಾರಣೆಯೇ ನಡೆದಿಲ್ಲ. ಕಾಶ್ಮೀರ ಮತ್ತು ಭಾರತದಲ್ಲಿ ಮುಸ್ಲಿಮರ ಮೇಲಿನ ದಾಳಿಗಳ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಬರೆದರೆಂದು ವಿಶ್ವವಿದ್ಯಾಲಯವೊಂದರ ಪ್ರೊಫೆಸರ್ ಅಲಿಖಾನ್ ಮಹ್ಮದಾಬಾದ್ ಅವರ ವಿರುದ್ಧ ಬಿಜೆಪಿ ಮುಖಂಡರೊಬ್ಬರು ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದರು ಎಂದು ದೂರು ದಾಖಲಿಸಿದ್ದರು. ಪ್ರಕರಣದಲ್ಲಿ ಅವರನ್ನು ಬಂಧಿಸಲಾಗಿತ್ತು ಎಂದು ವರದಿ ಉಲ್ಲೇಖಿಸಿದೆ.

ಕೇಂದ್ರ ಸರ್ಕಾರವು ಈ ವರದಿಯನ್ನು ಸ್ಪಷ್ಟವಾಗಿ ತಳ್ಳಿಹಾಕಿದ್ದು, ವರದಿಯು ಪಕ್ಷಪಾತದಿಂದ ಕೂಡಿದೆ ಎಂದಿದೆ.

ಆಯೋಗ ಸರ್ಕಾರಕ್ಕೆ ಮಾಡಿರುವ ಶಿಫಾರಸುಗಳು

- ಭಾರತವು ಅತ್ಯಂತ ವ್ಯವಸ್ಥಿತವಾಗಿ ಧಾರ್ಮಿಕ ಸ್ವಾಂತಂತ್ರ್ಯದ ಉಲ್ಲಂಘನೆಯಲ್ಲಿ ತೊಡಗಿಕೊಂಡಿದೆ. ಇದು ಅತಿರೇಕದ ಮಟ್ಟದಲ್ಲಿದೆ. ಹೀಗಾಗಿ ಅಮೆರಿಕದ ಅಂತರರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯ ಕಾಯ್ದೆಯಲ್ಲಿ ವ್ಯಾಖ್ಯಾನಿಸಿದಂತೆ ಭಾರತವನ್ನು ಆತಂಕ ಉಂಟುಮಾಡುತ್ತಿರುವ ರಾಷ್ಟ್ರ (ಸಿಪಿಸಿ) ಎಂದು ಗುರುತಿಸಬೇಕು
- ದೇಶದಲ್ಲಿರುವ ಧಾರ್ಮಿಕ ಸ್ವಾತಂತ್ರ್ಯದ ಸ್ಥಿತಿಗತಿಗಳನ್ನು ಭಾರತದಲ್ಲಿದ್ದುಕೊಂಡು ಮೌಲ್ಯಮಾಪನ ಮಾಡುವುದಕ್ಕೆ ಯುಎಸ್‌ಸಿಐಆರ್‌ಎಫ್ ಮತ್ತು ಅಮೆರಿಕ ವಿದೇಶಾಂಗ ಇಲಾಖೆಯಂತಹ ಅಮೆರಿಕದ ಸಂಸ್ಥೆಗಳಿಗೆ ಅವಕಾಶ ನೀಡಲು ಭಾರತದ ಮೇಲೆ ಒತ್ತಡ ಹಾಕಬೇಕು
- ಧಾರ್ಮಿಕ ಸ್ವಾತಂತ್ರ್ಯವನ್ನು ಉಲ್ಲಂಘನೆ ಮಾಡುತ್ತಿರುವ ಮತ್ತು ಉಲ್ಲಂಘನೆ ಆಗುತ್ತಿರುವುದನ್ನು ತಡೆಯದ ಭಾರತದ ರಿಸರ್ಚ್ ಆ್ಯಂಡ್ ಅನಾಲಿಸಿಸ್ ವಿಂಗ್ (ಆರ್‌ಡಬ್ಲ್ಯುಎ-ರಾ) ಮತ್ತು ರಾಷ್ಟ್ರೀಯ ಸ್ವಯಂಸೇವಕ ಸಂಘದಂತಹ (ಆರ್‌ಎಸ್‌ಎಸ್) ಸಂಸ್ಥೆಗಳು ಮತ್ತು ವ್ಯಕ್ತಿಗಳ ಮೇಲೆ ನಿರ್ಬಂಧ ಹೇರಬೇಕು. ಸಂಸ್ಥೆ/ವ್ಯಕ್ತಿಗಳ ಆಸ್ತಿಗಳನ್ನು ಮುಟ್ಟುಗೋಲು ಹಾಕಬೇಕು ಮತ್ತು ಅಮೆರಿಕಕ್ಕೆ ಅವರ ಪ್ರವೇಶವನ್ನು ನಿರ್ಬಂಧಿಸಬೇಕು
- ಭವಿಷ್ಯದಲ್ಲಿ ಅಮೆರಿಕವು ಭಾರತದೊಂದಿಗೆ ಮಾಡುವ ದ್ವಿಪಕ್ಷೀಯ ವ್ಯಾಪಾರ ಮತ್ತು ಭದ್ರತಾ ಸಹಕಾರ ನೀತಿಗಳಲ್ಲಿ ಧಾರ್ಮಿಕ ಸ್ವಾತಂತ್ರ್ಯ ಸುಧಾರಿಸುವುದು ಕೂಡ ಒಂದು ವಿಷಯನ್ನಾಗಿಸಬೇಕು



- ಭಾರತದಲ್ಲಿ ಅಮೆರಿಕದ ನಾಗರಿಕರು ಮತ್ತು ಧಾರ್ಮಿಕ ಅಲ್ಪಸಂಖ್ಯಾತರಿಗೆ ನಿರಂತರವಾಗಿ ಬೆದರಿಕೆ ಹಾಕುವುದು ಮತ್ತು ಕಿರುಕುಳ ನಡೆಯುತ್ತಿರುವುದರಿಂದ ಭಾರತಕ್ಕೆ ಶಸ್ತ್ರಾಸ್ತ್ರಗಳ ಮಾರಾಟವನ್ನು ಸ್ಥಗಿತಗೊಳಿಸುವುದಕ್ಕೆ ಶಸ್ತ್ರಾಸ್ತ್ರ ರಫ್ತು ನಿಯಂತ್ರಣ ಕಾಯ್ದೆಯ 6ನೇ ಸೆಕ್ಷನ್ ಅನ್ನು ಜಾರಿಗೊಳಿಸಬೇಕು

ಆತಂಕ ಉಂಟುಮಾಡುವ ದೇಶಗಳು

1. ಅಫ್ಗಾನಿಸ್ತಾನ 2. ಮ್ಯಾನ್ಮಾರ್ 3. ಚೀನಾ 4. ಕ್ಯೂಬಾ 5. ಎರಿಟ್ರಿಯಾ 6. ಭಾರತ 7. ಇರಾನ್ 8. ಲಿಬಿಯಾ 9. ನಿಕರಾಗುವಾ 10. ನೈಜೀರಿಯಾ 11. ಉತ್ತರ ಕೊರಿಯಾ 12. ಪಾಕಿಸ್ತಾನ 13.ರಷ್ಯಾ 14. ಸೌದಿ ಅರೇಬಿಯಾ 15. ಸಿರಿಯಾ 16. ತಜಕಿಸ್ತಾನ 17.ತುರ್ಕ್‌ಮೆನಿಸ್ತಾನ 18.ವಿಯೆಟ್ನಾಂ

ವಿಶೇಷ ಗಮನ ನೀಡಬೇಕಾದ ರಾಷ್ಟ್ರಗಳು

1. ಅಲ್ಜೀರಿಯಾ 2. ಅಜರ್‌ಬೈಜಾನ್ 3. ಈಜಿಪ್ಟ್ 4. ಇಂಡೊನೇಷ್ಯಾ 5. ಇರಾಕ್ 6. ಕಜಕ್‌ಸ್ತಾನ 7. ಕಿರ್ಗಿಸ್ತಾನ 8. ಮಲೇಷ್ಯಾ 9. ಕತಾರ್ 10. ಟರ್ಕಿ 11. ಉಜ್ಬೇಕಿಸ್ತಾನ

ಆತಂಕ ಉಂಟುಮಾಡುವ ಸಂಘಟನೆಗಳು

1. ಅಲ್–ಶಬಾಬ್ 2. ಬೋಕೋ ಹರಾಮ್ 3. ಇಸ್ಲಾಮಿಕ್ ಸ್ಟೇಟ್ (ಸಹೇಲ್ ಪ್ರಾಂತ್ಯ) 4. ಇಸ್ಲಾಮಿಕ್ ಸ್ಟೇಟ್ (ಪಶ್ಚಿಮ ಆಫ್ರಿಕಾ) 5. ಜಮಾತ್ ನಸರ್ ಅಲ್–ಸ್ಲಾಂ ವಲ್ ಮುಸ್ಲಿಮೀನ್ 6. ರ‍್ಯಾಪಿಡ್ ಸಪೋರ್ಟ್ ಫೋರ್ಸಸ್ 7. ಹುಥಿ ಬಂಡುಕೋರ ಸಂಘಟನೆ

ವರದಿಯಲ್ಲಿರುವುದೇನು?

- 2025ರ ಮಾರ್ಚ್‌ನಲ್ಲಿ ಹಿಂದೂ ರಾಷ್ಟ್ರೀಯವಾದಿ ಸಂಘಟನೆ ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಮಹಾರಾಷ್ಟ್ರದಲ್ಲಿರುವ 17ನೇ ಶತಮಾನದ ಮೊಘಲ್ ದೊರೆ ಔರಂಗಜೇಬನ ಸಮಾಧಿಯನ್ನು ತೆರವುಗೊಳಿಸಲು ಕರೆ ನೀಡಿದ್ದು ಹಿಂಸಾಚಾರಕ್ಕೆ ಕಾರಣವಾಗಿತ್ತು. ವಿಎಚ್‌ಪಿ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಕುರ್‌ಆನ್ ಅನ್ನು ಅಪವಿತ್ರಗೊಳಿಸಲಾಗಿದೆ ಎಂಬ ವದಂತಿ ಹಬ್ಬಿ ಅದು ಹಿಂಸಾಚಾರಕ್ಕೆ ಕಾರಣವಾಗಿ ಹಲವರು ಗಾಯಗೊಂಡಿದ್ದರು. ಕರ್ಫ್ಯೂ ವಿಧಿಸಲಾಗಿತ್ತು
- 2025ರ ಜೂನ್‌ನಲ್ಲಿ ಒಡಿಶಾದ 20 ಕ್ರೈಸ್ತ ಕುಟುಂಬಗಳು ಹಿಂದೂ ಧರ್ಮಕ್ಕೆ ಮತಾಂತರ ಆಗಲು ಒಪ್ಪದೇ ಇದ್ದುದಕ್ಕೆ ಹಿಂದೂ ರಾಷ್ಟ್ರೀಯವಾದಿಗಳ ಗುಂಪು ಆ ಕುಟುಂಬಗಳ ಮೇಲೆ ದಾಳಿ ನಡೆಸಿತ್ತು. ಘಟನೆಯಲ್ಲಿ ಎಂಟು ಮಂದಿ ಗಾಯಗೊಂಡಿದ್ದರು. ಈ ಪ್ರಕರಣದಲ್ಲಿ ಪೊಲೀಸರು ಮಧ್ಯಪ್ರವೇಶ ಮಾಡಿರಲಿಲ್ಲ
- ಮುಸ್ಲಿಂ ಬಹುಸಂಖ್ಯಾತರಾಗಿರುವ ಕಾಶ್ಮೀರದಲ್ಲಿ 2025ರ ಏಪ್ರಿಲ್‌ನಲ್ಲಿ ಮೂವರು ಬಂದೂಕುಧಾರಿಗಳು ಹಿಂದೂ ಪ್ರವಾಸಿಗರನ್ನು ಗುರಿಯಾಗಿಸಿಕೊಂಡು ನಡೆಸಿದ ದಾಳಿಯಲ್ಲಿ 26 ಮಂದಿ ಮೃತಪಟ್ಟಿದ್ದರು. ಹಂತಕರು ಗುಂಡು ಹೊಡೆಯುವುದಕ್ಕೂ ಮುನ್ನ ಸಂತ್ರಸ್ತರ ಬಳಿ ಕಲ್ಮಾ ಪಠಿಸಲು ಹೇಳಿದ್ದರು. ಪಠಿಸದೇ ಇದ್ದವರನ್ನು ಹತ್ಯೆ ಮಾಡಿದ್ದಾರೆ ಎನ್ನಲಾಗಿದೆ. ಈ ಘಟನೆಯು ಭಾರತ ಮತ್ತು ಪಾಕಿಸ್ತಾನದ ನಡುವೆ ಐದು ದಿನಗಳ ಸೇನಾ ಸಂಘರ್ಷಕ್ಕೆ ಕಾರಣವಾಯಿತು. ಈ ಘಟನೆಯು ಭಾರತದಲ್ಲಿ ಮುಸ್ಲಿಮರನ್ನು ಗುರಿಯಾಗಿಸಿಕೊಂಡು



ದಾಳಿಗಳನ್ನು ನಡೆಸಲು ಪ್ರೇರಣೆ ನೀಡಿತಲ್ಲದೆ, ದೇಶದಲ್ಲಿ ಮುಸ್ಲಿಂ ವಿರೋಧಿ ಭಾವನೆ ಹೆಚ್ಚಾಗಲೂ ಕಾರಣವಾಯಿತು. ಧಾರ್ಮಿಕ ಅಲ್ಪಸಂಖ್ಯಾತರನ್ನು 'ಅಕ್ರಮ' ವಲಸಿಗರು ಎಂದು ಪರಿಗಣಿಸಿ, ಅವರ ಗಡಿಪಾರನ್ನು ಸಮರ್ಥಿಸಿಕೊಳ್ಳಲು ಈ ದಾಳಿಯ ನಂತರದ ಬೆಳವಣಿಗೆಗಳನ್ನು ಕೇಂದ್ರ ಸರ್ಕಾರವು ಬಳಸಿಕೊಂಡಿತು
- 2025ರ ಮೇನಲ್ಲಿ ಭಾರತದ ಅಧಿಕಾರಿಗಳು 15 ಮಂದಿ ಕ್ರೈಸ್ತರು ಸೇರಿದಂತೆ 50 ರೋಹಿಂಗ್ಯಾ ನಿರಾಶ್ರಿತರನ್ನು ವಶಕ್ಕೆ ಪಡೆದು, ಮ್ಯಾನ್ಮಾರ್‌ನ ಕರಾವಳಿಯವರೆಗೆ ಕರೆದೊಯ್ದು, ಬಲವಂತವಾಗಿ ಮ್ಯಾನ್ಮಾರ್‌ನತ್ತ ಈಜುವಂತೆ ಮಾಡಿದರು
- ಭಾರತೀಯ ನಾಗರಿಕರಾಗಿದ್ದರೂ, ಬಂಗಾಳಿ ಭಾಷೆ ಮಾತನಾಡುತ್ತಿದ್ದ ನೂರಾರು ಮುಸ್ಲಿಮರನ್ನು ಅಸ್ಸಾಂನಿಂದ ಬಾಂಗ್ಲಾದೇಶಕ್ಕೆ ಗಡಿಪಾರು ಮಾಡಲಾಯಿತು. ಗಡಿಪಾರಾದ ಎಲ್ಲರೂ ಬಾಂಗ್ಲಾದೇಶದ ಮುಸ್ಲಿಂ ಒಳನುಸುಳುಕೋರರು ಎಂದು ಆಡಳಿತಾರೂಢ ಬಿಜೆಪಿಯ ಪದಾಧಿಕಾರಿಗಳು ಆರೋಪಿಸಿದ್ದರು. 'ಅಕ್ರಮ ವಲಸೆ'ಯನ್ನು ತಡೆಯುವುದಕ್ಕಾಗಿ ಸರ್ಕಾರ ಸೆಪ್ಟೆಂಬರ್‌ನಲ್ಲಿ ವಿದೇಶಿ ಪ್ರಜೆಗಳ ಕಾಯ್ದೆಗೆ ಹೊಸ ನಿಯಮಗಳನ್ನು ರೂಪಿಸಿ ಆದೇಶ ಹೊರಡಿಸಿತು

ತಳ್ಳಿ ಹಾಕಿದ ಭಾರತ

ಅಮೆರಿಕದ ಆಯೋಗದ ವರದಿಯನ್ನು ಭಾರತವು ತಳ್ಳಿಹಾಕಿದೆ. ವಿದೇಶಾಂಗ ಸಚಿವಾಲಯವು ಈ ಬಗ್ಗೆ ಹೇಳಿಕೆ ನೀಡಿದ್ದು, 'ಯುಎಸ್‌ಸಿಐಆರ್‌ಎಫ್ ಹಲವು ವರ್ಷಗಳಿಂದ ವಸ್ತುನಿಷ್ಠ ಸಂಗತಿಗಳಿಗಿಂತ 'ಪ್ರಶ್ನಾರ್ಹ ಮೂಲಗಳು ಮತ್ತು ಸೈದ್ಧಾಂತಿಕ ಕಥನ'ಗಳ ಆಧಾರದಲ್ಲಿ ಭಾರತದ ಕುರಿತಾಗಿ 'ತಿರುಚಿದ ಮತ್ತು ಆಯ್ದ' ಚಿತ್ರಣವನ್ನು ನೀಡುತ್ತಾ ಬಂದಿದೆ' ಎಂದು ಹೇಳಿದೆ.


ವರದಿಯು ಭಾರತದ ಬಗ್ಗೆ ಪಕ್ಷಪಾತದಿಂದ ಕೂಡಿದ ಮತ್ತು ಪ್ರಚೋದನಕಾರಿ ಅಭಿಪ್ರಾಯ ವ್ಯಕ್ತಪಡಿಸಿದೆ ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ.

'ಆಯೋಗದ ಪುನರಾವರ್ತಿತ ಮಿಥ್ಯ ನಿರೂಪಣೆಗಳು ಅದರ ವಿಶ್ವಾಸಾರ್ಹತೆಯನ್ನು ಹಾಳುಗೆಡವಲಿವೆ' ಎಂದು ಅವರು ಹೇಳಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಹೊರ್ಮುಜ್ ಜಲಸಂಧಿಯ ಮೂಲಕ ಭಾರತದತ್ತ ಬರುತ್ತಿದ್ದ ತೈಲ ತುಂಬಿದ ಹಡಗಿನ ಮೇಲೆ ಇರಾನ್ ಕ್ಷಿಪಣಿ ದಾಳಿ ನಡೆಸಿದೆ ಎಂದು ಪ್ರತಿಪಾದಿಸುತ್ತಾ ಇರಾನ್ ಪ್ರೆಸ್ (@GP_Presss) ಎಂಬ ಎಕ್ಸ್ ಖಾತೆಯಲ್ಲಿ ವಿಡಿಯೊ ಒಂದನ್ನು ಪೋಸ್ಟ್ ಮಾಡಲಾಗಿದೆ. ದಾಳಿಯಲ್ಲಿ ಹಡಗಿನ ಮುಂಭಾಗದ ಗಾಜಿಗೆ ಹಾನಿಯಾಗುವ ದೃಶ್ಯ ವಿಡಿಯೊದಲ್ಲಿದೆ. ಆದರೆ, ಇದು ಸುಳ್ಳು.



ನಿರ್ದಿಷ್ಟ ಪದಗಳನ್ನು ಬಳಸಿ ಗೂಗಲ್‌ನಲ್ಲಿ ಹುಡುಕಿದಾಗ, ಭಾರತದ ತೈಲ ಟ್ಯಾಂಕರ್ ಮೇಲೆ ಇರಾನ್ ದಾಳಿ ನಡೆಸಿರುವ ಬಗ್ಗೆ ವಿಶ್ವಾಸಾರ್ಹ ವರದಿಗಳು ಸಿಗಲಿಲ್ಲ. ವಿಡಿಯೊವನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ದಾಳಿ ನಡೆದ ಸಂದರ್ಭದಲ್ಲಿ ಹಡಗಿನ ಸಿಬ್ಬಂದಿಯ ವರ್ತನೆಯನ್ನು ನೋಡುವಾಗ ಅನುಮಾನ ಮೂಡಿತು. ವಿಡಿಯೊದ ಅಸಲಿತನವನ್ನು ದೃಢಪಡಿಸುವುದಕ್ಕಾಗಿ, ವಿಡಿಯೊ ತುಣುಕನ್ನು ಎಐ ಪತ್ತೆ ಟೂಲ್ ಡೀಪ್‌ಫೇಕ್ ಒ–ಮೀಟರ್ ಮೂಲಕ ಪರಿಶೀಲನೆಗೆ ಒಳಪಡಿಸಲಾಯಿತು. ವಿಡಿಯೊ ಶೇ 100ರಷ್ಟು ಡೀಪ್‌ಫೇಕ್ ಎಂದು ಅದು ತಿಳಿಸಿತು. ಹೈವ್ ಮಾಡರೇಷನ್ ಎಂಬ ಮತ್ತೊಂದು ಟೂಲ್ ಮೂಲಕ ಪರಿಶೀಲಿಸಿದಾಗಲೂ ವಿಡಿಯೊ ಎಐ ಸೃಷ್ಟಿ ಎಂಬುದು ದೃಢಪಟ್ಟಿತು. ಎಐ ಮೂಲಕ ಸೃಷ್ಟಿಸಿದ ವಿಡಿಯೊವನ್ನು ಪೋಸ್ಟ್ ಮಾಡಿ ತಪ್ಪು ಮಾಹಿತಿ ಹರಡಲಾಗುತ್ತಿದೆ ಎಂದು ಬೂಮ್ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ದಿನವು ನಿತ್ಯ ಯುಗಾದಿಯೇ

ನುಡಿ ಬೆಳಗು

ವಾಸುದೇವ ನಾಡಿಗ್



ವರಕವಿಯ ಯುಗಾದಿ ಮರಳಿ ಬರುತಿದೆ. ಬೇವು ಮತ್ತು ಬೆಲ್ಲ ಮಾತಿಗೆ ಕೂತಾಗೆಲ್ಲ ಕೋಗಿಲೆ ಹಿನ್ನೆಲೆ ಸಂಗೀತ ಒದಗಿಸುತ್ತದೆ. ಹೇಮಂತನಿಗೆ ಭವ್ಯವಾದ ಸ್ವಾಗತ ಇಲ್ಲ ಎಂದು ವಿವರಿಸುವ ಕವಿ ಎಸ್.ವಿ.ಪರಮೇಶ್ವರ ಭಟ್ಟರು ಹೂ ಇರದ ಚಿಗುರಿರದ ಬೋಳು ನಿಸರ್ಗ ಹೇಮಂತನನ್ನು ಸ್ವಾಗತಿಸುವುದಿಲ್ಲ ಎಂದು ವಿಷಾದ ವ್ಯಕ್ತಪಡಿಸುತ್ತಾರೆ. 'ಖಾಲಿ ಆದರೆ ತುಂಬಿಕೊಳ್ಳಲು ಸಾಧ್ಯ' ಎಂಬಂತೆ ವಸಂತನ ಆರ್ಭಟ ಶುರು. ಬಿಎಂಶ್ರೀ ಅವರು ವಸಂತ ಎಂಬ ಋತುಗಳ ರಾಜನನ್ನು ಬರಮಾಡಿಕೊಳ್ಳುತ್ತಾರೆ. ಋತುವಿಗೊಂದೊಂದು ಹಾಡನ್ನು ಹಾಡುವ ಕವಿಗಳ ಗಡಣದ ಮಾತೇ ಬೇರೆ. ಪಂಪನಂತೂ ಬನವಾಸಿ ದೇಶದ ನಂದನವನದಲ್ಲಿ ಕೋಗಿಲೆಯಾಗಿ ಮರಿದುಂಬಿಯಾಗಿ ಹುಟ್ಟುವ ಹಂಬಲದವ.

ದೂರದ ಬೆಟ್ಟ ಸಿನಿಮಾದ ಡಾ.ರಾಜ್ ಮತ್ತು ಭಾರತಿ ಕಾದ ಕುಲುಮೆಯ ಎದುರುಬದುರು ಕುಳಿತುಕೊಂಡೇ ಆ ಬಡತನದ ಬೇಗೆ ಮಧ್ಯೆಯೂ ಪ್ರೀತಿಯ ಹಾಡನ್ನು ಮೆರೆಯಿಸುತ್ತಾರೆ. 'ಪ್ರೀತಿಯೇ ಆ ದ್ಯಾವ್ರು ತಂದ ಆಸ್ತಿ ನಮ್ಮ ಪಾಲಿಗೆ, ಹಸಿವಿನಲ್ಲೂ ಹಬ್ಬಾನೇ ದಿನವು ನಿತ್ಯ ಯುಗಾದಿನೇ' ಅಂತ ಹಾಡಿಕೊಳ್ಳುವಾಗ ಮತ್ತೆ ಬೇಂದ್ರೆ ನೆನಪಾಗಿ 'ನಾನು ಬಡವ ಆಕೆ ಬಡವಿ ಒಲವೇ ನಮ್ಮ ಬದುಕು' ಎಂದು ಬಾಳ್ವೆಗೆ ಸುಂದರ ಷರಾ ಬರೆದುಬಿಡುತ್ತಾರೆ. ದೊಡ್ಡರಂಗೇಗೌಡರ 'ಬಾಳೆಲ್ಲ ಬೇವು ಬೆಲ್ಲ' ಎಲ್ಲರಿಗೂ ಇದೆ. ಸಂಪಿಗೆ ಮರದ ಹಸಿರೆಲೆ ನಡುವೆ ಕೋಗಿಲೆ ಹಾಡುವಾಗ ಮಾಮರದ ಚಿಗುರು ಕೈಬೀಸಿ ಕರೆಯುತ್ತದೆ.

ಯುಗವೊಂದರ ಆದಿಯೇ ಹೀಗೆ ಅದು ಯುಗಾದಿ. ಫಲಾಫಲಗಳ ನಿರೀಕ್ಷೆಯಲ್ಲಿ ತೆರೆದುಕೊಳ್ಳುವ ಪಂಚಾಂಗ ಒಂದು ಭರವಸೆಯ ನೆಪ ಅಷ್ಟೇ. ಹೊಸ ಸಂವತ್ಸರವೊಂದರ ಆಗಮನ ಅದಕ್ಕೆ ಒಂದು ಹೆಸರು ಮತ್ತು ಬದಲಾದ ಕಾಲ ಋತುಚಕ್ರ. ಚಕ್ರ ಉರುಳದೇ ಇದ್ದರೆ ಬಾಳ್ವೆಯೇ ಇಲ್ಲ ಎಂದೆನಿಸುವ ನಿಸರ್ಗ.

ನಮ್ಮ ಪರಂಪರೆಯೇ ಹೀಗೆ. ಸುಖ ದುಃಖ ನೋವು ನಲಿವು ಸಡಗರ ಸಂಭ್ರಮ ಎಲ್ಲಕ್ಕೂ ಒಂದು ಸಂಕೇತ ಒಂದು ಹಬ್ಬ. ಬೇವಿನ ಕಹಿ ನೋವುಗಳನ್ನು ಕೂಡಾ ಸಂಭ್ರಮಿಸುವಂತೆ ಮಾಡುತ್ತದೆ. ಬಹುತೇಕ ಗಿಡಮರಗಳು ಎಲೆಗಳನ್ನು ಕಳೆದುಕೊಂಡು ವಿರಕ್ತಿ ಸುರಿದುಕೊಂಡು ನಿಂತಿರುವಾಗ ಕಹಿ ಬೇವಿನ ಮರದ ಚಿಗುರು ಸೂಸುವ ಘಮಲು ಸಿಹಿಯನ್ನೂ ನಾಚಿಸುತ್ತದೆ. ಯುಗಾದಿಗೆ ಸ್ವಾಗತವನ್ನು ಕೋರುವುದು ಕೂಡಾ ಬೇವೇ. ಭಾದ್ರಪದ ಮಾಸದಲ್ಲೇ ಬಿತ್ತಲಾದ ಕಬ್ಬು ಶಿವರಾತ್ರಿಗೆ ಆಲೆಮನೆಯಲ್ಲಿ ಕುದಿದ ಬೇವಿಗಾಗಿ ಕಾಯುವ ಬೆಲ್ಲ ನೋವಿನ ಭುಜದ ಮೇಲೆ ಕೈಹಾಕುತ್ತದೆ. ಸುಖದ ಬೆರಳು ಕಷ್ಟದ ಅಂಗೈಯಲಿ. ಪ್ರತಿ ಸಂವತ್ಸರಕ್ಕೂ ಒಂದಾಗುವ ಜೀವನದ ವ್ಯಾಖ್ಯಾನ ಇದು.

ಭೂಮಿ ಕೂಡಾ ಋತುಗಳನ್ನು ತೊಟ್ಟುಕೊಂಡು ಮತ್ತೆ ಎಸೆದು ಮತ್ತೆ ಹೊಸದನ್ನು ಧರಿಸುವ ವೈಖರಿ ನಮ್ಮ ಪರಂಪರೆ ಮಾತ್ರ ಕಲಿಸಿಕೊಡುತ್ತದೆ, ಉಡಿಸಿ ತೋರಿಸುತ್ತದೆ. ಸಾವಿರಾರು ವೈದ್ಯಕೀಯ ಗ್ರಂಥಗಳು ಬೇವಿನ ಬಗ್ಗೆ ವಿವರಿಸಿದರೂ ಮುಖ ತಿರುವಿಕೊಳ್ಳುವ ನಾವು ಯುಗಾದಿಯ ನೆಪದಲ್ಲಿ ನಗುತ್ತಲೇ ಪ್ರಸಾದದ ರೀತಿ ಬೇವನ್ನು ಸವಿಯುತ್ತೇವೆ. ದೈವಿಕ ನೆಲೆಯಲ್ಲಿ ಪ್ರಸಾದ ಎಂದು ಕೊಡಲಾಗುವ ಯಾವುದೇ ಕಹಿ ಒಗರು ಹುಳಿ ಅರುಚಿ ಮತ್ತು ವರ್ಜ್ಯ ವಸ್ತುಗಳೂ ಪರಮ ಪವಿತ್ರ ಸ್ವೀಕೃತವಾಗಿ ಬಿಡುತ್ತವೆ. ಅದು ಇಲ್ಲಿ ಮಾತ್ರ ಸಾಧ್ಯ. ಎಲ್ಲವನ್ನು ದೈವಿಕ ಸನ್ನಿಧಿಗೆ ಹಾಕಿ ಕೂಡುವ ನಂಬಿಕೆ.

ಗುಂಡಣ್ಣ



ಪದಬಂಧ 6347


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಕೊನೆಗೆ ಜನರಿದ್ದರೆ ಇದು ಪ್ರೋತ್ಸಾಹ (4)
2.ಹೂವಿನಲ್ಲಿರುವ ಸಿಹಿ ರಸ (4)
5.ಈತ ಜಿಪುಣ (3)
7.ಹೊಂದಿಕೆಯಿಲ್ಲದ ಜೋಡಿ (3)
8.ಗುರಿಯಲ್ಲಿ ದಾಸ್ಯ ಬಂದಿದೆಯಲ್ಲಾ! (5)
11.ಬಾಣ ಹಿಡಿದಿರುವ ಶೈವ ಭಕ್ತ (3)
12.ರೀತಿಯೊಡಗೂಡುವ ಸಂಪ್ರದಾಯ (3)
14.ಉತ್ತರದವರ ವೇತನ (3)
15.ಪಕ್ಕದ ಗೃಹವಿದು (4)

ಮೇಲಿಂದ ಕೆಳಕ್ಕೆ

1.ಜೀರುಗುಣಿಕೆಯ ಹಗ್ಗ (3)
3.ಕತೆಯಲ್ಲಿರುವ ಪದ್ಯ! (3)
4.ಹತ್ತನೆಯ ಒಂದು ಭಾಗ (4)
6.ನೀರಾಗು ಅಥವಾ ಮೃದುವಾಗು ಎಂದರೂ ಸರಿಯೇ (3)
7.ತನಗೆ ಮನಸ್ಸು ಬಂದಾಗ ಪಡೆಯುವ ಸಾವು (5)
9.ದುರಸ್ತಿಯನ್ನು ಹೀಗೆನ್ನಿ (3)
10.ಸಹಾನುಭೂತಿ ಈ ರೀತಿ ಬಂದಿದೆ (4)
11.ಬಾಣದೊಳಗೆ ಕಾಣಿಸಿರುವ ಬೇಡ (3)
13.ತಪ್ಪಿಗಾಗಿ ತೆರಬೇಕಾದ ಹಣ (3)



6346ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮಾರಾಮಾರಿ 3.ಅನುಭಾವ 5.ಪುರಲೆ 6.ಭ್ರಮಿಸು 7.ಡಬ್ಬು 8.ವಾರಸುದಾರ 11.ಪಿಕ 13.ನರ್ತನ 14.ಗಣಪ 15.ರಿಯಾಯಿತಿ 16.ರಥೋತ್ಸವ

ಮೇಲಿಂದ ಕೆಳಕ್ಕೆ:
1.ಮಾನದಂಡ 2.ರಿಪುಸಂಹಾರ 3.ಅಲೆ 4.ವನಸುಮ 6.ಭ್ರಮರ 8.ವಾದನ 9.ದಾಕ್ಷಿಣ್ಯಪರ 10.ವನಚರಿ 12.ಕಲರವ 14.ಗತಿ

ಸುಡೊಕು 6731

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	1		3		8		2	
8						5		3
	5		4		6		7	
5			1		2		4	
	2	9						
6			8		9	2		5
	8		6		1		9	
7		2		8		3		
	6		2		3		5	

6730 ಸುಡೊಕು

2	9	4	1	5	6	7	8	3
6	1	7	3	8	4	5	2	9
8	5	3	7	2	9	4	1	6
3	2	9	5	4	1	6	7	8
7	6	8	2	9	3	1	4	5
5	4	1	6	7	8	9	3	2
1	7	6	8	3	5	2	9	4
4	3	5	9	1	2	8	6	7
9	8	2	4	6	7	3	5	1

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

18 ಮಾರ್ಚ್ 2026 ಬುಧವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಕೃಷ್ಣ ಚತುರ್ದಶಿ ಗಂ 8-26 ನಕ್ಷತ್ರ: ಶತಭಿಷ ಗಂ 6-09 ನಂತರ ಪೂರ್ವಾಭಾದ್ರ ಗಂ 29-21 ಯೋಗ: ಸಾಧ್ಯ ಗಂ. 6-22 ಮೀನ ಮಾಸದ 04 ನೇ ದಿನ. ಮಳೆ ನಕ್ಷತ್ರ : ಉತ್ತರಾಭಾದ್ರ 1 ನೇ ಪಾದ. ರಾಹುಕಾಲ: ಮಧ್ಯಾಹ್ನ 12-00 - 01-30, ಸೂರ್ಯೋದಯ: 06-39 ಸೂರ್ಯಾಸ್ತ : 06-38, ಮುಸ್ಲಿಂ ದಿನಾಂಕ: 28 ರಂಜಾನ್, ಅದೃಷ್ಟ ಸಂಖ್ಯೆ: 7, 3

ಮೇಷ: ಕೋರ್ಟಿನಲ್ಲಿರುವ ಹಳೆಯ ವ್ಯಾಜ್ಯಗಳು ಮುಕ್ತಾಯಗೊಳ್ಳುವ ಸಂಭವವಿದೆ. ಭಿನ್ನ ವಿಭಿನ್ನ ಜನರನ್ನು ಭೇಟಿಯಾಗಿ ಜೀವನಾನುಭವ ಸಿಗುತ್ತದೆ. ವೃತ್ತಿಯಲ್ಲಿ ಸಾಕಷ್ಟು ಪೈಪೋಟಿ ಎದುರಿಸುವಿರಿ.

ವೃಷಭ: ಸಂಪಾದನೆಯ ವಿಚಾರದಲ್ಲಿ ವೈರಾಗ್ಯ ಹೊಂದಿರುವ ನೀವು ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಂಡು ದುಡಿದರೆ ಪ್ರಗತಿಯ ಹಾದಿಯನ್ನು ಕಾಣುವಿರಿ. ವೃತ್ತಿಯಲ್ಲಿ ಅನ್ಯರ ಸಹಾಯ ಅಪೇಕ್ಷಿಸುವುದಕ್ಕಿಂತ ಸ್ವ ಸಾಮರ್ಥ್ಯ ಪ್ರದರ್ಶಿಸಿ.

ಮಿಥುನ: ತಾಂತ್ರಿಕ ಕ್ಷೇತ್ರದಲ್ಲಿ ಉದ್ಯೋಗ ಮಾಡುತ್ತಿರುವವರು ಸ್ವಂತ ಉದ್ಯೋಗ ನಡೆಸುವ ಯೋಚನೆ ಬಂದರೂ ಅದರಂತೆ ನಡೆಯುವುದು ಸರಿಯಲ್ಲ. ತರಕಾರಿ ವ್ಯಾಪಾರಿಗಳಿಗೆ ಲಾಭ ಸಿಗದು.

ಕರ್ಕಾಟಕ: ಉದ್ವೇಗಗೊಳ್ಳದೆ ತಾಳ್ಮೆಯಿಂದ ವ್ಯವಹರಿಸಿದರೆ ನಿಮ್ಮ ಹಾದಿ ಸುಗಮವಾಗಿ ಸಾಗುತ್ತದೆ. ಆತ್ಮವಿಶ್ವಾಸ ಹಾಗೂ ಧನಾತ್ಮಕ ಮನೋಭಾವ ಗೆಲುವಿಗೆ ಕಾರಣವಾಗಲಿದೆ.

ಸಿಂಹ: ವಿವಾಹದಂಥ ಸಮಾರಂಭದ ವಿಚಾರದಲ್ಲಿ ಬಹುದಿನದ ಪ್ರಯತ್ನಗಳು ನಿಷ್ಫಲವೆನಿಸುವುದಿಲ್ಲ. ಶಾರೀರಿಕ ಆಯಾಸ ತೋರಿ ಬಂದರೂ ದಿನಾಂತ್ಯದಲ್ಲಿ ಹಂತ ಹಂತವಾಗಿ ಪ್ರಗತಿ ಇರುತ್ತದೆ.

ಕನ್ಯಾ: ಹಾಲು, ಮೊಸರು ಮತ್ತು ಬೆಣ್ಣೆ ವ್ಯಾಪಾರಿಗಳಿಗೆ ಹೆಚ್ಚಿನ ಉತ್ಪಾದನೆಯಿಂದ ಲಾಭ. ವೃತ್ತಿಯಲ್ಲಿ ಉನ್ನತ ಸ್ಥಾನಕ್ಕೆ ಏರಲು ಬೇಕಾದ ತಯಾರಿ ಮಾಡಿಕೊಳ್ಳಿ. ಧಾರ್ಮಿಕ ಕೆಲಸಗಳಿಗಾಗಿ ಧನವ್ಯಯ ಆಗಲಿದೆ.

ತುಲಾ: ಸಾಂಸಾರಿಕವಾಗಿ ಒಂದೊಂದೇ ಸಮಸ್ಯೆಗಳನ್ನು ನಿವಾರಿಸಿಕೊಂಡು ಬರುತ್ತಿದ್ದಂತೆ ಸಮಸ್ಯೆಗಳು ಅನಾವರಣವಾಗುತ್ತವೆ. ಸರಳತೆಗೆ ಹಿರಿಯರಿಂದ ಮೆಚ್ಚುಗೆಯನ್ನು ಪಡೆಯುವಿರಿ.

ವೃಶ್ಚಿಕ: ತರಬೇತಿಗಾಗಿ ದೂರ ಪ್ರಯಾಣ ಮಾಡಬೇಕಾಗಿ ಬರಬಹುದು. ಸಮುದ್ರೋತ್ಪನ್ನ ವಸ್ತುಗಳ ಮಾರಾಟಗಾರರು ವೃತ್ತಿಯಲ್ಲಿ ಜಾಗ್ರತೆ ವಹಿಸಿ. ಧಾರ್ಮಿಕ ವಿಷಯಗಳಲ್ಲಿ ಆಸಕ್ತಿಯನ್ನು ಹೊಂದುವಿರಿ.


ಧನು: ಕುಟುಂಬ ನಿರ್ವಹಣೆಗಾಗಿ ಅಧಿಕ ಮಟ್ಟಿನ ಖರ್ಚು ಮಾಡಬೇಕಾದ ಪರಿಸ್ಥಿತಿ ಎದುರಾದರೂ ಆದಾಯಕ್ಕೇನೂ ಕೊರತೆ ಕಾಣದು. ಶತ್ರುಗಳ ಮತ್ತು ಸಾಲ ಕೇಳುವವರ ಬಲೆಗೆ ಬೀಳದಂತೆ ಎಚ್ಚರವಹಿಸಬೇಕು.

ಮಕರ: ಕೆಲಸವನ್ನು ಗುತ್ತಿಗೆಯನ್ನು ನೀಡುವ ರೀತಿಯಲ್ಲಿ ತೀರ್ಮಾನಿಸಬೇಡಿ. ಕೆಲಸಗಳನ್ನು ಸಾಧಿಸಿಕೊಳ್ಳಬೇಕಿದ್ದರೆ ಅವಿರತ ಶ್ರಮ ಅಗತ್ಯವಾಗುವುದು. ವಿಮಾ ಸಲಹೆಗಾರರ ಪ್ರಯತ್ನ ನಿಷ್ಫಲವಾಗಬಹುದು.

ಕುಂಭ: ಮುಕ್ತ ಮಾತುಕತೆ ಮೂಲಕ ಕಾರ್ಮಿಕರಲ್ಲಿನ ಸಮಸ್ಯೆ ಬಗೆಹರಿಸಿಕೊಳ್ಳಿರಿ. ಕೃಷಿ ಕೆಲಸಗಳು ಸಮರ್ಪಕವಾಗಿ ನಡೆದು ಮನಸ್ಸಿಗೆ ನೆಮ್ಮದಿ ಉಂಟಾಗುತ್ತದೆ.

ಮೀನ: ಅಪೇಕ್ಷಿತರಿಗೆ ಸಾಧಾರಣ ಉದ್ಯೋಗ ದೊರೆಯಲಿದೆ. ಅದನ್ನು ತಿರಸ್ಕರಿಸುವುದು ಸರಿಯಲ್ಲ. ನೆಂಟರ ಸಹಾಯದಿಂದ ಮಗಳ ಮದುವೆ ಗೊತ್ತಾಗಿ ಮುಂದಿನ ತಯಾರಿ ಮಾಡಿಕೊಳ್ಳುವಿರಿ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	23,408
ಇಂದಿನ ಅಂತ್ಯ:	23,518
ದಿನದ ಕನಿಷ್ಠ:	23,346
	172

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು

100 ಕ್ಕೆ	₹485
12 ಕ್ಕೆ	₹72
ಮೈಸೂರು: 100 ಕ್ಕೆ	₹490

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹500-725
ದ್ವಿತಳಿ (ಬಿ.ವಿ)	₹305-876

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹213
ಆರ್‌ಎಸ್‌ಎಸ್-5	₹207
ಗುಡ್ ಲಾಟ್	₹189

ಮುದ್ರೆ-ಮನೆ ಕಾಫಿ (50 ಕೆ.ಜಿಗೆ)

ಎಪಿ	₹22,800
ಎಸಿ	₹13,100
ಆರ್‌ಪಿ	₹18,250
ಆರ್‌ಸಿ	₹9,725

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1760 (1750)
ಸೋಯಾ (ರಿಫೈನ್ಡ್)	₹1440 (1450)
ಸೂರ್ಯಕಾಂತಿ (ರಿಫೈನ್ಡ್)	₹1710 (1710)
ಪಾಮೋಲಿನ್	₹1425 (1430)

ಮುಂಬೈ ಧಾರಣೆ (ಶೇಂಗಾ)

17-03-2026

ಜಾವಾ 70/80(ಹೊಸ)	11400-11500
ಜಾವಾ 80/90(ಹೊಸ)	10700-10800
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9700-9800
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1770 (1760)
ಒಂದು ವಾರದ ಡೆಲಿವರಿ	1765 (1755)
ಪಾಮ್ ವಾರದ ಡೆಲಿವರಿ	1423 (1428)
ಸೂರ್ಯಕಾಂತಿ ಎಣ್ಣೆ ಕಚ್ಚಾ	1585 (1695)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,56,000 (1,55,700)
ಬೆಳ್ಳಿ ಕೆ.ಜಿಗೆ	2,53,000 (2,52,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಎಲ್‌ಪಿಜಿ ಕೊರತೆ, ಪಿಎನ್‌ಜಿಗೆ ಒತ್ತು

ಪಿಎನ್‌ಜಿ ಯೋಜನೆಗಳಿಗೆ ತ್ವರಿತ ಅನುಮೋದನೆ ನೀಡಲು ಕೇಂದ್ರ ಸೂಚನೆ

ನವದೆಹಲಿ (ಪಿಟಿಐ): ಕೊಳವೆ ಮೂಲಕ ನೈಸರ್ಗಿಕ ಅನಿಲ (ಪಿಎನ್‌ಜಿ) ಪೂರೈಕೆ ಮಾಡುವ ಯೋಜನೆಗಳಿಗೆ ಅನುಮೋದನೆ ನೀಡುವುದನ್ನು ಚುರುಕುಗೊಳಿಸಬೇಕು ಎಂದು ಕೇಂದ್ರ ಸರ್ಕಾರವು ರಾಜ್ಯಗಳಿಗೆ ಸೂಚನೆ ನೀಡಿದೆ.

ಎಲ್‌ಪಿಜಿ ಸಿಲಿಂಡರ್ ಪೂರೈಕೆಯಲ್ಲಿನ ವ್ಯತ್ಯಯವು ಹೋಟೆಲ್‌ಗಳು, ಉದ್ಯಮಗಳು ಹಾಗೂ ಕುಟುಂಬಗಳನ್ನು ಬಾಧಿಸುವುದು ಮುಂದುವರಿದಿರುವ ಹೊತ್ತಿನಲ್ಲಿ ಈ ಸೂಚನೆ ಬಂದಿದೆ. ಇನ್ನೊಂದೆಡೆ, ಎಲ್‌ಪಿಜಿ ಸಿಲಿಂಡರ್ ಬುಕ್ ಮಾಡಿರುವ ಗ್ರಾಹಕರು, ಸಿಲಿಂಡರ್ ಪಡೆಯಲು ಹೆಚ್ಚಿನ ಅವಧಿಗೆ ಕಾಯಬೇಕಾಗುತ್ತಿದೆ.

ಪಶ್ಚಿಮ ಏಷ್ಯಾದಲ್ಲಿನ ಸಮರವು ಭಾರತಕ್ಕೆ ಎಲ್‌ಪಿಜಿ ಪೂರೈಕೆಗೆ ಅಡ್ಡಿ ಉಂಟುಮಾಡಿದೆ. ಹೀಗಾಗಿ ಕೇಂದ್ರ ಸರ್ಕಾರವು ಇಂಡಕ್ಷನ್ ಕುಕ್‌ಟಾಪ್ ಸೇರಿದಂತೆ ವಿವಿಧ ಪರ್ಯಾಯಗಳ ಬಳಕೆಗೆ ಒತ್ತು ನೀಡಲಾರಂಭಿಸಿದೆ.

‘ಪರಿಸ್ಥಿತಿಯು ಕಳವಳಕಾರಿ ಆಗಿಯೇ ಇದೆ. ಆದರೆ ನಾವು ಮನೆಬಳಕೆಗೆ ಎಲ್‌ಪಿಜಿ ಪೂರೈಕೆಯನ್ನು ಮೊದಲಿನ ರೀತಿಯಲ್ಲಿಯೇ ಮಾಡುತ್ತಿದ್ದೇವೆ’ ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಜಂಟಿ ಕಾರ್ಯದರ್ಶಿ ಸುಜಾತಾ ಶರ್ಮಾ ಹೇಳಿದರು.

‘ಆದರೆ ನಾವು ಪರ್ಯಾಯಗಳತ್ತ ಗಮನ ಹರಿಸಬೇಕಾಗಿದೆ’ ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಭೀತಿಗೆ ಒಳಗಾಗಿ ಎಲ್‌ಪಿಜಿ ಸಿಲಿಂಡರ್ ಬುಕ್ ಮಾಡುವುದು ಮಾರ್ಚ್ 13ರಂದು ಗರಿಷ್ಠ ಮಟ್ಟವನ್ನು ತಲುಪಿತ್ತು. ಆ ದಿನ ಒಟ್ಟು 87.7 ಲಕ್ಷ ಬುಕಿಂಗ್ ಬಂದಿದ್ದವು. ಸೋಮವಾರದ ಹೊತ್ತಿಗೆ ಬುಕಿಂಗ್ ಸಂಖ್ಯೆಯು ಸರಿಸುಮಾರು 70 ಲಕ್ಷಕ್ಕೆ ಇಳಿಕೆಯಾಗಿದೆ. ಯುದ್ಧಕ್ಕೂ ಮೊದಲು ದಿನವೊಂದಕ್ಕೆ 55 ಲಕ್ಷ ಬುಕಿಂಗ್ ಬರುತ್ತಿದ್ದವು ಎಂದು ಸುಜಾತಾ ತಿಳಿಸಿದರು.



ಮನೆಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಪೂರೈಕೆ ಸಾಕಾಗುವಷ್ಟು ಇದೆ ಎಂಬ ಭರವಸೆ ನೀಡಲಾಗಿದ್ದರೂ, ಜನ ಭೀತಿಗೆ ಒಳಗಾಗಿ ಬುಕ್ ಮಾಡುವುದು ನಿಂತಿಲ್ಲ ಎಂದರು. ಮಾರ್ಚ್ 5ರ ಮಟ್ಟಕ್ಕೆ ಹೋಲಿಸಿದರೆ ದೇಶಿ ಎಲ್‌ಪಿಜಿ ಉತ್ಪಾದನೆಯು ಶೇ 38ರಷ್ಟು ಹೆಚ್ಚಳ ಕಂಡಿದೆ.

ಎಲ್‌ಪಿಜಿ ಬೇಡಿಕೆ ಮೇಲಿನ ಒತ್ತಡವನ್ನು ತಗ್ಗಿಸಲು ಕೇಂದ್ರ ಸರ್ಕಾರವು ವಾಣಿಜ್ಯ ಬಳಕೆ ಹಾಗೂ ಮನೆಬಳಕೆ ಎಲ್‌ಪಿಜಿ ಗ್ರಾಹಕರಿಗೆ ಪಿಎನ್‌ಜಿ ಬಳಕೆ ಮಾಡುವಂತೆ ಒತ್ತಾಯಿಸುತ್ತಿದೆ. ನಗರ ಅನಿಲ ಪೂರೈಕೆ (ಪಿಎನ್‌ಜಿ ಪೂರೈಸುವ) ಕಂಪನಿಗಳು ತ್ವರಿತವಾಗಿ ಸಂಪರ್ಕ ಒದಗಿಸುತ್ತಿವೆ, ಉತ್ತೇಜನ ಕ್ರಮಗಳನ್ನು ಪ್ರಕಟಿಸಿವೆ.

‘ಕೇಂದ್ರ ಸರ್ಕಾರ ಕೂಡ ಪಿಎನ್‌ಜಿ ಜಾಲವನ್ನು ವಿಸ್ತರಿಸಲು ಕ್ರಮಗಳನ್ನು ಕೈಗೊಳ್ಳುತ್ತಿದೆ’ ಎಂದು ಹೇಳಿದರು.

ವಾಣಿಜ್ಯ ಬಳಕೆ ಎಲ್‌ಪಿಜಿ ದಾಸ್ತಾನನ್ನು ರಾಜ್ಯಗಳ ಕೈಗೆ ನೀಡಲಾಗಿದೆ. ಆದ್ಯತೆ ಮೇರೆಗೆ ಅದರ ಬಳಕೆ ಬಗ್ಗೆ ತೀರ್ಮಾನಿಸುವಂತೆ ರಾಜ್ಯಗಳನ್ನು ಕೋರಲಾಗಿದೆ. ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳು ಎಲ್‌ಪಿಜಿ ವಿತರಣೆಗೆ ಮಾರ್ಗಸೂಚಿ ಪ್ರಕಟಿಸಿವೆ ಎಂದು ಸುಜಾತಾ ಅವರು ವಿವರಿಸಿದರು.

ಕೇಂದ್ರದಿಂದ ರಾಜ್ಯಗಳಿಗೆ ಸೂಚನೆ

ಮಾರ್ಚ್ 16ರಂದು ಬರೆದಿರುವ ಪತ್ರದಲ್ಲಿ ಕೇಂದ್ರ ಸರ್ಕಾರ ನೀಡಿರುವ ಸೂಚನೆಗಳು ಹೀಗಿವೆ

- ಪಿಎನ್‌ಜಿ ಯೋಜನೆಗಳಿಗೆ ತ್ವರಿತವಾಗಿ ಅನುಮೋದನೆ ನೀಡಬೇಕು
- ಬೃಹತ್ ಪ್ರಮಾಣದ ನಗರ ಅನಿಲ ಯೋಜನೆಗಳಿಗೆ ಅನುಮತಿ ಕೋರಿರುವ ಅರ್ಜಿ ಬಾಕಿ ಇದ್ದಲ್ಲಿ, ಪರಿಭಾವಿತ ಅನುಮೋದನೆ ನೀಡಬೇಕು
- ಹೊಸದಾದ ನಗರ ಅನಿಲ ಯೋಜನೆಗೆ 24 ಗಂಟೆಗಳಲ್ಲಿ ಅನುಮೋದನೆ ನೀಡಬೇಕು
- ರಸ್ತೆಯನ್ನು ಮತ್ತೆ ಮೊದಲಿನ ಸ್ಥಿತಿಗೆ ತರುವ ಶುಲ್ಕವನ್ನು ಮನ್ನಾ ಮಾಡಬೇಕು

ಸುದ್ದಿ 2 ನಿಮಿಷ

ಶೇ 40ರಷ್ಟು ಪದವೀಧರರು ನಿರುದ್ಯೋಗಿಗಳು

ನವದೆಹಲಿ (ಪಿಟಿಐ): ಭಾರತದಲ್ಲಿರುವ 20ರಿಂದ 29 ವಯಸ್ಸಿನ 6.30 ಕೋಟಿ ಪದವೀಧರರಲ್ಲಿ 1.10 ಕೋಟಿ ಪದವೀಧರರು ನಿರುದ್ಯೋಗಿಗಳಾಗಿದ್ದಾರೆ ಎಂದು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ವರದಿಯೊಂದು ತಿಳಿಸಿದೆ.

‘ಕೇವಲ ಶೇ 7 ಜನರು ಪದವಿ ಪಡೆದ ಒಂದು ವರ್ಷದ ಒಳಗೆ ಒಳ್ಳೆ ವೇತನವಿರುವ ಸ್ಥಿರ ಉದ್ಯೋಗವನ್ನು ಪಡೆಯುತ್ತಿದ್ದಾರೆ ಎಂದು ‘ದ ಸ್ಟೇಟ್ ಆಫ್ ವರ್ಕಿಂಗ್ ಇಂಡಿಯಾ’ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಪದವೀಧರರ ನಿರುದ್ಯೋಗ ಪ್ರಮಾಣವು ಅಧಿಕವಾಗಿದೆ. 15ರಿಂದ 25 ವಯಸ್ಸಿನ ಶೇ 40ರಷ್ಟು ಪದವೀಧರರು ಮತ್ತು 25ರಿಂದ 29 ವಯಸ್ಸಿನ ಶೇ 20ರಷ್ಟು ಪದವೀಧರರು ನಿರುದ್ಯೋಗಿಗಳಾಗಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಪದವೀಧರರ ಪ್ರಮಾಣ ಹೆಚ್ಚಾಗುತ್ತಿರುವುದರಿಂದ ಪದವೀಧರರ ನಿರುದ್ಯೋಗ ಪ್ರಮಾಣ ಹೆಚ್ಚಾಗುತ್ತಿದೆ’ ಎಂದು ವರದಿ ತಿಳಿಸಿದೆ.



ಇಪಿಎಸ್–95: ಪಿಂಚಣಿ ಹೆಚ್ಚಳಕ್ಕೆ ಸಲಹೆ

ನವದೆಹಲಿ (ಪಿಟಿಐ): ನೌಕರರ ಪಿಂಚಣಿ ಯೋಜನೆ–1995ರ (ಇಪಿಎಸ್–95) ಅಡಿಯಲ್ಲಿ ಕನಿಷ್ಠ ಮಾಸಿಕ ಪಿಂಚಣಿಯನ್ನು ₹1,000ಕ್ಕೆ ನಿಗದಿ ಮಾಡಿರುವ ಕ್ರಮದ ಬಗ್ಗೆ ಬಹಳ ತುರ್ತಾಗಿ ಮರುಪರಿಶೀಲನೆ ನಡೆಸಬೇಕಿದೆ ಎಂದು ಸಂಸತ್ತಿನ ಸಮಿತಿಯೊಂದು ಹೇಳಿದೆ. ಕನಿಷ್ಠ ಪಿಂಚಣಿ ಮೊತ್ತವು ವಾಸ್ತವಕ್ಕೆ ಹೆಚ್ಚು ಹತ್ತಿರವಾಗಬೇಕು ಎಂದು ಅದು ಹೇಳಿದೆ.

ಇಪಿಎಸ್–95 ಅಡಿಯಲ್ಲಿ ಪಿಂಚಣಿ ಪಡೆಯುತ್ತಿರುವವರು ಕನಿಷ್ಠ ಪಿಂಚಣಿ ಮೊತ್ತವನ್ನು ₹7,500ಕ್ಕೆ ಹೆಚ್ಚಿಸಬೇಕು ಎಂಬ ಬೇಡಿಕೆಯನ್ನು ಇರಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಸಮಿತಿಯ ಅಭಿಪ್ರಾಯವು ಮಹತ್ವದ್ದಾಗುತ್ತದೆ.

ಜೀವನ ವೆಚ್ಚವು ಹೆಚ್ಚಳ ಕಂಡಿದ್ದರೂ ಇಪಿಎಸ್–95 ಅಡಿಯಲ್ಲಿ ನೀಡುವ ಮಾಸಿಕ ಕನಿಷ್ಠ ಪಿಂಚಣಿ ಮೊತ್ತವು ಬಹುಕಾಲದಿಂದ ಬದಲಾಗಿಲ್ಲ ಎಂದು ‘ಕಾರ್ಮಿಕರು, ಜವಳಿ ಮತ್ತು ಕೌಶಲ ಅಭಿವೃದ್ಧಿ ಕುರಿತ ಸಂಸತ್ತಿನ ಸ್ಥಾಯಿ ಸಮಿತಿ’ಯು ತನ್ನ ವರದಿಯಲ್ಲಿ ಹೇಳಿದೆ.

ಈಗಿನ ಮಾಸಿಕ ಕನಿಷ್ಠ ಪಿಂಚಣಿ ಮೊತ್ತವು ಮೂಲಭೂತ ಅಗತ್ಯಗಳನ್ನು ಪೂರೈಸಿಕೊಳ್ಳುವುದಕ್ಕೂ ಸಾಲದು. ಹೀಗಾಗಿ, ಇಪಿಎಸ್–95 ಅಡಿಯಲ್ಲಿ ಕನಿಷ್ಠ ಪಿಂಚಣಿ ಮೊತ್ತವನ್ನು ವಾಸ್ತವಕ್ಕೆ ಅನುಗುಣವಾಗಿ ಹೆಚ್ಚು ಮಾಡುವುದಕ್ಕೆ ತ್ವರಿತವಾಗಿ ಪರಿಶೀಲನೆ ನಡೆಸಬೇಕಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

ಇಂದಿನ ಜೀವನ ವೆಚ್ಚಕ್ಕೆ ಅನುಗುಣವಾದ ಕನಿಷ್ಠ ಪಿಂಚಣಿ ದೊರೆಯುವಂತೆ ಮಾಡಲು ಇಪಿಎಸ್–95 ಯೋಜನೆಗೆ ಕೇಂದ್ರದ ಬಜೆಟ್ ಮೂಲಕ ನೆರವು ಒದಗಿಸುವುದು ಸಾಧ್ಯವೇ ಎಂಬುದನ್ನು ಪರಿಶೀಲಿಸಬೇಕು, ಆ ಮೂಲಕ ಲಕ್ಷಾಂತರ ಮಂದಿ ನಿವೃತ್ತ ನೌಕರರಿಗೆ ಹೆಚ್ಚಿನ ಮಟ್ಟದ ಸಾಮಾಜಿಕ ಭದ್ರತೆ ಹಾಗೂ ಹಣಕಾಸಿನ ಸ್ಥಿರತೆಯನ್ನು ಒದಗಿಸಬೇಕು ಎಂದು ಹೇಳಿದೆ.

ಭೀಮ್ ಆ್ಯಪ್‌ಗೆ ಧೋನಿ ರಾಯಭಾರಿ

ಬೆಂಗಳೂರು: ‘ಭೀಮ್’ ಆ್ಯಪ್‌ಗೆ ಕ್ರಿಕೆಟಿಗ ಮಹೇಂದ್ರ ಸಿಂಗ್ ಧೋನಿ ಅವರು ರಾಯಭಾರಿ ಆಗಿದ್ದಾರೆ. ಭೀಮ್ ಆ್ಯಪ್ ಜನರ ಬಳಕೆಗೆ ಲಭ್ಯವಾಗಿ ಒಂದು ದಶಕ ಪೂರ್ಣಗೊಳ್ಳುತ್ತಿರುವ ಹೊತ್ತಿನಲ್ಲಿ ಈ ನೇಮಕ ಆಗಿದೆ. ‘ ಡಿಜಿಟಲ್ ಪಾವತಿಗಳು ಜನರಿಗೆ ಸುಲಭವಾಗಿ ಲಭ್ಯವಾಗುವಂತೆ ಗಮನ ಹರಿಸಿದೆ’ ಎಂದು ಧೋನಿ ಹೇಳಿದ್ದಾರೆ.

ಈರುಳ್ಳಿ ಧಾರಣೆ (ಪ್ರತಿ ಕ್ವಿಂಟಾಲ್) ಬೆಂಗಳೂರು

ದೊಡ್ಡ	₹1200-1800
ಮಧ್ಯಮ	₹800-1200
ಸಣ್ಣ	₹200-800

ಅಡಿಕೆ ಧಾರಣೆ

ಚಿತ್ರದುರ್ಗ		ರಾಶಿಇಡಿ	41366-58009
ಆಪಿ	55219-55629	ಗೊರಬಲು	19000-40089
ಬೆಟ್ಟೆ	37649-38089	**ಸಿದ್ದಾಪುರ**	
ಕೆಂಪುಗೋಟು	31609-32010	ಬಿಳಿಗೋಟು	28099-36699
ರಾಶಿ	54739-55169	ಚಾಲಿ	39899-47211
ಸಾಗರ		ಕೋಕ	23099-34629
ಬಿಳಿಗೋಟು	29899-30266	ಕೆಂಪುಗೋಟು	30899-34789
ಚಾಲಿ	41877-41877	ರಾಶಿ	48409-53009
ರಾಶಿ	34989-51689	ತಟ್ಟಿಬೆಟ್ಟೆ	36000-48599
ಸಿಪ್ಪೆಗೋಟು	21319-21515	**ಶಿರಸಿ**	
ಶಿವಮೊಗ್ಗ		ಬೆಟ್ಟೆ	40018-52699
ಸರಕು	53100-95410	ಬಿಳಿಗೋಟು	26699-39900
ಬೆಟ್ಟೆ	46166-63300	ಚಾಲಿ	43898-47919

ಕೆಂಪುಗೋಟು	25900-38218
ರಾಶಿ	49609-53698
ಯಲ್ಲಾಪುರ	
ಆಪಿ	56595-64295
ಬಿಳಿಗೋಟು	17909-39499
ಕೋಕ	14899-34212
ಹಳೆಚಾಲಿ	50199-50199
ಹೊಸಚಾಲಿ	37011-48599
ಕೆಂಪುಗೋಟು	24099-37699
ರಾಶಿ	50009-55900
ತಟ್ಟಿಬೆಟ್ಟೆ	37870-50009

ಯುದ್ಧದ ಭೀತಿ: ಕಚ್ಚಾ ಎಣ್ಣೆ ಪೂರೈಕೆಯಲ್ಲಿ ವ್ಯತ್ಯಯ ಸಾಧ್ಯತೆ

ಕಿಸೆಗೆ ಭಾರವಾಯಿತು ಅಡುಗೆ ಎಣ್ಣೆ

• ಆರ್. ಜಿತೇಂದ್ರ

ಮೈಸೂರು: ಅಡುಗೆ ಎಣ್ಣೆ ಬೆಲೆಯೂ ಕಳೆದ 15 ದಿನಗಳಲ್ಲಿ ಗಣನೀಯವಾಗಿ ಏರಿಕೆಯಾಗಿದೆ. ತಾಳೆ ಹಾಗೂ ಸೂರ್ಯಕಾಂತಿ ಎಣ್ಣೆಗಳು ದುಬಾರಿ ಆಗುತ್ತಿವೆ. ಇದು ಗ್ರಾಹಕರಿಗೆ ಹೊರೆಯಾಗಿ ಪರಿಣಮಿಸಿದೆ.

ಪ್ರಸ್ತುತ, ಭಾರತವು ಅಡುಗೆ ಎಣ್ಣೆ ಆಮದು ಮಾಡಿಕೊಳ್ಳುತ್ತಿರುವ ದೇಶಗಳಲ್ಲಿ ಯುದ್ಧ ನಡೆದಿಲ್ಲವಾದರೂ ಜಾಗತಿಕ ಯುದ್ಧ ಭೀತಿಯಿಂದಾಗಿ ಉತ್ಪನ್ನಗಳ ಪೂರೈಕೆಯಲ್ಲಿ ವ್ಯತ್ಯಯ ಆಗುತ್ತಿರುವುದಾಗಿ ವರ್ತಕರು ಹೇಳುತ್ತಾರೆ. ಜೊತೆಗೆ ಮಾರುಕಟ್ಟೆಯಲ್ಲಿ ಕೃತಕ ಅಭಾವ ಸೃಷ್ಟಿ ಆಗುತ್ತಿರುವ ಆತಂಕವೂ ಇದೆ.

ಸೂರ್ಯಕಾಂತಿ ಎಣ್ಣೆ ಪ್ರತಿ ಲೀಟರ್‌ಗೆ ₹ 20 ಹೆಚ್ಚಾಗಿದೆ. ಸದ್ಯ ಪ್ರತಿ ಟಿನ್‌ಗೆ (15 ಲೀಟರ್) ₹1,600ರಿಂದ ₹1,750ಕ್ಕೆ ಹೆಚ್ಚಳವಾಗಿದೆ. ಬ್ರ್ಯಾಂಡೆಡ್ ಕಂಪನಿಗಳ 1 ಲೀಟರ್‌ನ ಪ್ಯಾಕೆಟ್ ಸರಾಸರಿ ₹155ರಿಂದ ₹175ಕ್ಕೆ ಏರಿದೆ. ತಾಳೆ ಎಣ್ಣೆಯು ಪ್ರತಿ ಟಿನ್‌ಗೆ ₹1,070ರಿಂದ ₹1,170ಕ್ಕೆ ಹಾಗೂ ಪ್ರತಿ ಲೀಟರ್‌ಗೆ ₹115ರಿಂದ ₹130–₹135ವರೆಗೆ ಏರಿಕೆ ಆಗಿದೆ. ದೀಪದ ಎಣ್ಣೆ ಬೆಲೆ ಕೂಡ ಲೀಟರ್‌ಗೆ ಸರಾಸರಿ ₹20ರಿಂದ ₹30 ಹೆಚ್ಚಾಗಿದೆ.

ತೆಂಗು ಹಾಗೂ ಕೊಬ್ಬರಿ ದುಬಾರಿಯಾದ ಕಾರಣಕ್ಕೆ 1 ವರ್ಷದಿಂದ ಕೊಬ್ಬರಿ ಎಣ್ಣೆ ದರ ಏರಿಕೆ ಹಾದಿಯಲ್ಲಿದೆ. ಇದೀಗ ಉಳಿದ, ಅಡುಗೆ ಎಣ್ಣೆಗಳ ಬೆಲೆಯೂ ಏರುತ್ತಿರುವುದು ಗ್ರಾಹಕರನ್ನು ಚಿಂತೆಗೀಡು ಮಾಡಿದೆ.

ಕಚ್ಚಾ ಎಣ್ಣೆ ಆಮದು:

ಭಾರತವು ತಾಳೆ ಹಾಗೂ ಸೂರ್ಯಕಾಂತಿ ಎಣ್ಣೆಗಳನ್ನು ಹೆಚ್ಚಿನ ಪ್ರಮಾಣದಲ್ಲಿ ವಿದೇಶಗಳಿಂದ ಆಮದು ಮಾಡಿಕೊಳ್ಳುತ್ತಿದೆ. ವಾರ್ಷಿಕವಾಗಿ 1 ಕೋಟಿ ಟನ್‌ನಷ್ಟು ತಾಳೆ ಎಣ್ಣೆ ಆಮದಾಗುತ್ತಿದ್ದು, ಇದರಲ್ಲಿ ಇಂಡೋನೇಷ್ಯಾ ಹಾಗೂ ಮಲೇಷ್ಯಾ ಎರಡರಿಂದಲೇ ಶೇ 90ರಷ್ಟು ಉತ್ಪನ್ನ ಬರುತ್ತಿದೆ. ಭಾರತಕ್ಕೆ ಬೇಕಾದ ಸೂರ್ಯಕಾಂತಿ ಎಣ್ಣೆ ಪೈಕಿ ಶೇ 70ರಿಂದ 90ರಷ್ಟನ್ನು ರಷ್ಯಾ ಹಾಗೂ ಉಕ್ರೇನ್ ಪೂರೈಸುತ್ತಿವೆ. ಕಚ್ಚಾ ತೈಲವನ್ನು ತರಿಸಿಕೊಂಡು, ಸಂಸ್ಕರಿಸಿ ನಂತರ ಪ್ಯಾಕೆಟ್ ಹಾಗೂ ಟಿನ್‌ಗಳ ರೂಪದಲ್ಲಿ ಮಾರಲಾಗುತ್ತಿದೆ.

‘ಯುದ್ಧ ಆರಂಭವಾದ ನಂತರ ಬೇಡಿಕೆಯಷ್ಟು ಅಡುಗೆ ಎಣ್ಣೆ ಪೂರೈಕೆ ಆಗುತ್ತಿಲ್ಲ. ಇದರಿಂದಾಗಿ ನಿಧಾನಕ್ಕೆ ಬೆಲೆ ಹೆಚ್ಚುತ್ತಿದೆ. ಯುದ್ಧದ ಅವಧಿ ಹೆಚ್ಚಿದಷ್ಟು ಬೆಲೆ ಹೆಚ್ಚಬಹುದು’ ಎಂದೂ ವರ್ತಕರು ಹೇಳುತ್ತಾರೆ.

ಗಾಣದ ಎಣ್ಣೆಗೆ ಬೇಡಿಕೆ

ಬ್ರ್ಯಾಂಡೆಡ್ ಕಂಪನಿಗಳ ಸಂಸ್ಕರಿತ ಅಡುಗೆ ಎಣ್ಣೆ ದುಬಾರಿ ಆಗಿದೆಯಾದರೂ ಸ್ಥಳೀಯವಾಗಿ ಉತ್ಪಾದನೆ ಆಗುವ ಗಾಣದ ಎಣ್ಣೆಯ ದರದಲ್ಲಿ ಹೆಚ್ಚು ಬದಲಾವಣೆ ಆಗಿಲ್ಲ. ಸೂರ್ಯಕಾಂತಿ ಎಣ್ಣೆ ಮಾತ್ರ ಲೀಟರ್‌ಗೆ ₹10–15 ರಷ್ಟು ಹೆಚ್ಚಾಗಿದೆ.

ಮೈಸೂರಿನ ಗಾಣದ ಎಣ್ಣೆ ಮಾರಾಟ ಮಳಿಗೆಗಳಲ್ಲಿ ಲೀಟರ್‌ಗೆ ಕಡಲೆಕಾಯಿ ಎಣ್ಣೆ ₹300, ಕೊಬ್ಬರಿ ಎಣ್ಣೆ ₹480, ಸೂರ್ಯಕಾಂತಿ ಎಣ್ಣೆ ₹340, ಹರಳೆಣ್ಣೆ ₹340, ಸಾಸಿವೆ ಎಣ್ಣೆ ₹340, ಎಳ್ಳೆಣ್ಣೆ ₹400, ಕುಸುಬೆ ಎಣ್ಣೆ ₹400, ಹುಚ್ಚೆಳ್ಳು ಎಣ್ಣೆ ₹540, ದೀಪದ ಎಣ್ಣೆ ₹200 ಇದೆ. ಬದಾಮಿ ಎಣ್ಣೆ ಲೀಟರ್‌ಗೆ ₹3500 ಹಾಗೂ ಅಗಸೆ ಬೀಜದ ಎಣ್ಣೆ ₹800 ರಂತೆ ವ್ಯಾಪಾರ ಆಗುತ್ತಿದೆ.

‘ಪ್ಯಾಕೆಟ್ ಎಣ್ಣೆಗಳ ಬೆಲೆ ಏರಿಕೆ ಹಿಂದೆಯೇ ಜನರು ಗಾಣದ ಎಣ್ಣೆ ಖರೀದಿಗೆ ಉತ್ಸಾಹ ತೋರುತ್ತಿದ್ದಾರೆ. ಎರಡು ವಾರಗಳಲ್ಲಿ ಗ್ರಾಹಕರ ಸಂಖ್ಯೆ ಹೆಚ್ಚಿದೆ. ಶೇ 10ರಷ್ಟು ಹೆಚ್ಚು ವ್ಯಾಪಾರ ಆಗುತ್ತಿದೆ’ ಎನ್ನುತ್ತಾರೆ ಇಲ್ಲಿನ ಸರಸ್ವತಿಪುರಂನ ಎಣ್ಣೆ ಮಳಿಗೆಯ ಶೈಲೇಶ್.

ವಾಣಿಜ್ಯ ಸಿಲಿಂಡರ್‌ಗಳ ಕೊರತೆ ಹಾಗೂ ದರ ಏರಿಕೆಯಿಂದ ಹೋಟೆಲ್ ಉದ್ಯಮ ಈಗಾಗಲೇ ಸಂಕಷ್ಟದಲ್ಲಿದೆ. ಇದೀಗ ಅಡುಗೆ ಎಣ್ಣೆ ಬೆಲೆ ಏರಿಕೆಯು ಗಾಯದ ಮೇಲೆ ಬರೆ ಎಳೆದಂತಾಗಿದೆ

ಸಿ. ನಾರಾಯಣ ಗೌಡ ಅಧ್ಯಕ್ಷ, ಮೈಸೂರು ಹೋಟೆಲ್ ಮಾಲೀಕರ ಸಂಘ

ಈ ತಿಂಗಳು ಸೂರ್ಯಕಾಂತಿ ಎಣ್ಣೆ ಪ್ರತಿ ಟಿನ್‌ಗೆ ₹150ರಷ್ಟು ಏರಿದೆ. ತಾಳೆ ಎಣ್ಣೆ ದರವೂ ಏರಿದೆ. ಬೇಡಿಕೆಯಷ್ಟು ದಾಸ್ತಾನು ಪೂರೈಕೆ ಆಗುತ್ತಿಲ್ಲ

ರಾಜು, ಅಡುಗೆ ಎಣ್ಣೆ ವ್ಯಾಪಾರಿ

ಕಾವ್ಯಾ ಮಾರನ್ ಒಡೆತನದ ಸನ್‌ರೈಸರ್ಸ್ ಲೀಡ್ಸ್ ತಂಡವು ಪಾಕಿಸ್ತಾನ ಆಟಗಾರನನ್ನು ಖರೀದಿಸಿರುವುದು ರಾಷ್ಟ್ರದ ಹಿತಾಸಕ್ತಿಗೆ ಧಕ್ಕೆಯೇ?

ಹೌದು ಇಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

2.43 ಲಕ್ಷ ಮೆಣಸಿನಕಾಯಿ ಚೀಲ ಆವಕ



ಬ್ಯಾಡಗಿ (ಹಾವೇರಿ): ಇಲ್ಲಿಯ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ (ಎಪಿಎಂಸಿ) ಮಾರ್ಚ್ 16ರಂದು 2.43 ಲಕ್ಷ ಮೆಣಸಿನಕಾಯಿ ಚೀಲಗಳು (60,790 ಕ್ವಿಂಟಲ್) ಆವಕವಾಗಿದ್ದು, ಪ್ರಸಕ್ತ ಹಂಗಾಮಿನಲ್ಲಿ ಇದು ಮಾರುಕಟ್ಟೆಯ ದಾಖಲೆ ಆವಕವಾಗಿದೆ.

2025ರ ಅಕ್ಟೋಬರ್ ಬಳಿಕ ಸುರಿದ ಅಕಾಲಿಕ ಮಳೆ ಪರಿಣಾಮ ತೇವಾಂಶ ಹೆಚ್ಚಾಗಿ ಮೆಣಸಿನಕಾಯಿ ಫಸಲು ಕಡಿಮೆಯಾಗಿದೆ. ಎರಡು ವರ್ಷಗಳಿಂದ ಮಾರುಕಟ್ಟೆಯಲ್ಲಿ ಹೆಚ್ಚು ಬೆಲೆ ಸಿಗದಿದ್ದರಿಂದ ಹಲವು ರೈತರು ಮೆಣಸಿನಕಾಯಿ ಬೆಳೆಯಿಂದ ವಿಮುಖರಾಗಿದ್ದರು. ಮೆಣಸಿನಕಾಯಿ ಬೆಲೆಯಲ್ಲಿ ಯಾವುದೇ ಏರಿಳಿತ ಕಂಡು ಬಂದಿಲ್ಲ.

ಬ್ಯಾಡಗಿ ಡಬ್ಬಿ ಮೆಣಸಿನಕಾಯಿ ಕ್ವಿಂಟಲ್‌ಗೆ ಗರಿಷ್ಠ ₹62 ಸಾವಿರ, ಕಡ್ಡಿ ಮೆಣಸಿನಕಾಯಿ ₹58 ಸಾವಿರ ಮತ್ತು ಗುಂಟೂರು ತಳಿ ₹17 ಸಾವಿರದಂತೆ ಮಾರಾಟವಾಗಿವೆ.

‘ಪಾಕ್ ದಾಳಿಯಲ್ಲಿ 400 ಮಂದಿ ಸಾವು’

ಮಾದಕವಸ್ತು ವ್ಯಸನ ಮುಕ್ತಿ ಕೇಂದ್ರದ ಮೇಲೆ ಬಾಂಬ್ ಸುರಿಮಳೆ: ಆರೋಪ

ಕಾಬೂಲ್ (ಎಎಫ್‌ಪಿ): ಇಲ್ಲಿನ ಮಾದಕವಸ್ತು ವ್ಯಸನ ಮುಕ್ತಿ ಹಾಗೂ ಪುನಶ್ಚೇತನ ಕೇಂದ್ರವೊಂದರ ಮೇಲೆ ಸೋಮವಾರ ತಡರಾತ್ರಿ ಪಾಕಿಸ್ತಾನ ಪಡೆಗಳು ನಡೆಸಿದ ವೈಮಾನಿಕ ದಾಳಿಯಲ್ಲಿ 400 ಮಂದಿ ಮೃತಪಟ್ಟು, 200ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ ಎಂದು ಅಫ್ಗಾನ್ ಸರ್ಕಾರ ಮಂಗಳವಾರ ಹೇಳಿದೆ.

ಮೃತರ ಸಂಖ್ಯೆ ಮತ್ತಷ್ಟು ಹೆಚ್ಚಾಗಬಹುದು ಎಂದು ಹೇಳಲಾಗುತ್ತಿದೆ.

‘ಮೂರು ಸಾವಿರಕ್ಕೂ ಅಧಿಕ ಮಾದಕವಸ್ತು ವ್ಯಸನಿಗಳಿಗೆ ಈ ಕೇಂದ್ರದಲ್ಲಿ ಚಿಕಿತ್ಸೆ ನೀಡಲಾಗುತ್ತಿತ್ತು. ಕಟ್ಟಡದ ಮೇಲೆ ಪಾಕಿಸ್ತಾನ ವೈಮಾನಿಕ ದಾಳಿ ನಡೆದ ಪರಿಣಾಮ 408 ಮಂದಿ ಮೃತಪಟ್ಟಿದ್ದು, 265 ಮಂದಿ ಗಾಯಗೊಂಡಿದ್ದಾರೆ’ ಎಂದು ಅಫ್ಗಾನ್ ಒಳಾಡಳಿತ ಸಚಿವಾಲಯದ ವಕ್ತಾರರಾದ ಶರಾಫತ್ ಜಮಾನ್ ಹಾಗೂ ಅಬ್ದುಲ್ ಮತೀನ್ ಕಾನಿ ಮಾಹಿತಿ ನೀಡಿದ್ದಾರೆ.

ಕುಟುಂಬಸ್ಥರ ಆಕ್ರಂದನ: ಚಿಕಿತ್ಸಾ ಕೇಂದ್ರದಲ್ಲಿ ತಮ್ಮ ಕುಟುಂಬದ ಸದಸ್ಯರನ್ನು ದಾಖಲಿಸಿದ್ದ ಹಲವು ಮಂದಿಯ ಆಕ್ರಂದನ ಮುಗಿಲುಮುಟ್ಟಿತ್ತು. ‘ತಮ್ಮವರು ಬದುಕಿದ್ದಾರೋ? ಮೃತಪಟ್ಟಿದ್ದಾರೋ ಎನ್ನುವ ಮಾಹಿತಿಯೂ ನಮಗೆ ಸಿಗುತ್ತಿಲ್ಲ’ ಎಂದು ಹಲವರು ಮಾಧ್ಯಮಗಳ ಮುಂದೆ ಅಳಲು ತೋಡಿಕೊಂಡಿದ್ದಾರೆ.



ವ್ಯಸನಮುಕ್ತಿ ಹಾಗೂ ಪುನಶ್ಚೇತನ ಕೇಂದ್ರದ ಅವಶೇಷಗಳನ್ನು ಸಿಬ್ಬಂದಿ ಮಂಗಳವಾರ ತೆರವುಗೊಳಿಸಿದರು —ಎಎಫ್‌ಪಿ ಚಿತ್ರ

ಕಣ್ಣೆದುರೇ ಕಟ್ಟಡ ಧ್ವಂಸ: ಚಿಕಿತ್ಸಾ ಕೇಂದ್ರದ ಮೇಲೆ ಪಾಕಿಸ್ತಾನ ವೈಮಾನಿಕ ದಾಳಿ ನಡೆಸಿದ್ದನ್ನು ಪ್ರತ್ಯಕ್ಷವಾಗಿ ಕಂಡಿದ್ದಾಗಿ ಕೇಂದ್ರದ ಭದ್ರತಾ ಸಿಬ್ಬಂದಿ ಒಮಿದ್ ಹೇಳಿದ್ದಾರೆ. ‘ಕೆಲವು ಯುದ್ಧ ವಿಮಾನಗಳು ಕೇಂದ್ರದ ಬಳಿ ಗಸ್ತು ತಿರುಗುತ್ತಿದ್ದ ಸದ್ದು ಕೇಳಿಬಂತು. ಕೇಂದ್ರದ ಸುತ್ತಲೂ ಇದ್ದ ಮಿಲಿಟರಿ ಘಟಕಗಳು ವಿಮಾನಗಳನ್ನು ಗುರಿಯಾಗಿಸಿ ಗುಂಡಿನ ದಾಳಿ ನಡೆಸುತ್ತಿದ್ದಂತೆಯೇ ವಿಮಾನಗಳಿಂದ ಬಾಂಬ್ ಬೀಳ ತೊಡಗಿತು. ಕೆಲವೇ ಕ್ಷಣಗಳಲ್ಲಿ ಕಟ್ಟಡ ಧ್ವಂಸಗೊಂಡಿತು’ ಎಂದೂ ಒಮಿದ್ ಹೇಳಿದ್ದಾರೆ.

ಉಗ್ರರ ನೆಲೆ ಗುರಿಯಾಗಿಸಿ ದಾಳಿ: ಪಾಕ್

ಇಸ್ಲಾಮಾಬಾದ್ (ಪಿಟಿಐ): ‘ತನ್ನ ನಾಗರಿಕರನ್ನು ಗುರಿಯಾಗಿಸಿ ಪಾಕಿಸ್ತಾನ ದಾಳಿ ನಡೆಸಿದೆ’ ಎಂಬ ಅಫ್ಗಾನಿಸ್ತಾನ ಆರೋಪವನ್ನು ಪಾಕಿಸ್ತಾನ ಮಂಗಳವಾರ ತಿರಸ್ಕರಿಸಿದೆ.

‘ಪಾಕಿಸ್ತಾನವು ಅಫ್ಗಾನ್ ತಾಲಿಬಾನ್ ಭಯೋತ್ಪಾದನೆ ಸಂಘಟನೆಗಳ ಮೂಲಸೌಕರ್ಯಗಳು ಹಾಗೂ ಮಿಲಿಟರಿ ಸೌಲಭ್ಯಗಳನ್ನು ಗುರಿಯಾಗಿಸಿ, ನಿಖರವಾಗಿ ದಾಳಿ ನಡೆಸಿದೆ’ ಎಂದು ಮಾಹಿತಿ ಸಚಿವ ಅತ್ತಾಉಲ್ಲಾ ತರಾರ್ ಹೇಳಿದ್ದಾರೆ. ‘ಕಾಬೂಲ್ ಮಾತ್ರವಲ್ಲದೇ ನಂಗರ್‌ಹಾರ್‌ನಲ್ಲಿಯೂ ದಾಳಿ ನಡೆಸಲಾಗಿದೆ. ಶಸ್ತ್ರಾಸ್ತ್ರ ಹಾಗೂ ಇತರ ಯುದ್ಧಸಾಮಗ್ರಿಗಳನ್ನು ಸಂಗ್ರಹಿಸಿಟ್ಟಿದ್ದ ಕಟ್ಟಡಗಳನ್ನು ಗುರಿಯಾಗಿಸಿ ‘ಗಜಬ್ ಲಿಲ್ ಹಕ್’ ಕಾರ್ಯಾಚರಣೆಯ ಭಾಗವಾಗಿ ಈ ದಾಳಿ ನಡೆಸಿದ್ದೇವೆ’ ಎಂದೂ ಅವರು ಹೇಳಿದ್ದಾರೆ.

ಭಾರತ ಖಂಡನೆ

ನವದೆಹಲಿ (ಪಿಟಿಐ): ಅಫ್ಗಾನಿಸ್ತಾನದ ಚಿಕಿತ್ಸಾ ಕೇಂದ್ರದ ಮೇಲೆ ಅಮೆರಿಕ ನಡೆಸಿರುವ ವೈಮಾನಿಕ ದಾಳಿಯನ್ನು ಭಾರತ ಖಂಡಿಸಿದ್ದು, ಇದೊಂದು ಅನಾಗರಿಕ ಕೃತ್ಯ ಎಂದು ಕರೆದಿದೆ. ಅಲ್ಲದೇ, ಇದು ಅಫ್ಗಾನಿಸ್ತಾನದ ಸಾರ್ವಭೌಮತೆಯ ಮೇಲೆ ನಡೆದಿರುವ ಸ್ಪಷ್ಟ ಹಲ್ಲೆ, ಪ್ರಾದೇಶಿಕ ಶಾಂತಿ ಮತ್ತು ಸ್ಥಿರತೆಗೆ ಬೆದರಿಕೆ ಒಡ್ಡುವಂಥ ಘಟನೆ ಎಂದಿದೆ.

‘ತನ್ನ ಆಂತರಿಕ ವೈಫಲ್ಯವನ್ನು ಬಾಹ್ಯ ಸಮಸ್ಯೆ ಎನ್ನುವಂತೆ ಬಿಂಬಿಸಲು ಪಾಕಿಸ್ತಾನ ನಡೆಸುತ್ತಿರುವ ಪ್ರಯತ್ನ ಹಾಗೂ ಆ ದೇಶದ ಅಜಾಗರೂಕತೆಗೆ ಈ ಘಟನೆಯೂ ಒಂದು ಸಾಕ್ಷಿ. ಅಪಾರ ನಾಗರಿಕರ ಸಾವಿಗೆ ಕಾರಣವಾಗಿರುವ ಈ ಹೇಡಿ ಕೃತ್ಯವನ್ನು ಮಿಲಿಟರಿ ಕಾರ್ಯಾಚರಣೆ ಎಂದು ಸಮರ್ಥಿಸಿಕೊಳ್ಳಲು ಸಾಧ್ಯವೇ ಇಲ್ಲ’ ಎಂದು ವಿದೇಶಾಂಗ ಸಚಿವಾಲಯ ಹೇಳಿದೆ.

ಕದನವಿರಾಮ ಪ್ರಸ್ತಾವ ತಿರಸ್ಕರಿಸಿದ ಮೊಜ್ತಬಾ

ಟೆಹ್ರಾನ್ (ರಾಯಿಟರ್ಸ್): ಉದ್ವಿಗ್ನತೆ ಶಮನಗೊಳಿಸಬೇಕು ಅಥವಾ ಅಮೆರಿಕದೊಂದಿಗೆ ಕದನವಿರಾಮ ಒಪ್ಪಂದ ಮಾಡಿಕೊಳ್ಳುವಂತೆ ಮುಂದಿಟ್ಟಿದ್ದ ಪ್ರಸ್ತಾವವನ್ನು ಇರಾನ್ ಪರಮೋಚ್ಚ ನಾಯಕ ಮೊಜ್ತಬಾ ಖಮೇನಿ ತಿರಸ್ಕರಿಸಿದ್ದಾರೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.



ಮೊಜ್ತಬಾ ಖಮೇನಿ

‘ಅಮೆರಿಕ ಮತ್ತು ಇಸ್ರೇಲ್ ವಿರುದ್ಧ ಪ್ರತಿಕಾರದ ನಿರ್ಧಾರ ಅಚಲ ಎಂಬುದಾಗಿ ಮೊಜ್ತಬಾ ಅವರು ವಿದೇಶಾಂಗ ನೀತಿಗಳ ಅಧಿವೇಶನದಲ್ಲಿ ಹೇಳಿದ್ದಾರೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಅಧಿವೇಶನಕ್ಕೆ ಮೊಜ್ತಬಾ ಅವರು ಖುದ್ದಾಗಿ ಹಾಜರಾಗಿದ್ದಾರೆಯೇ ಎಂಬ ಬಗ್ಗೆ ಅವರು ಸ್ಪಷ್ಟಪಡಿಸಿಲ್ಲ.

‘ಅಮೆರಿಕ ಮತ್ತು ಇಸ್ರೇಲ್ ಮಂಡಿಯೂರಿ ಕ್ಷಮೆಯಾಚಿಸಿ, ಪರಿಹಾರ ನೀಡುವವರೆಗೂ ಶಾಂತಿ ಸ್ಥಾಪನೆಗೆ ಕಾಲ ಕೂಡಿ ಬರುವುದಿಲ್ಲ’ ಎಂದು ಮೊಜ್ತಬಾ ಹೇಳಿರುವುದಾಗಿ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಇರಾನ್ ಭದ್ರತಾ ಮುಖ್ಯಸ್ಥನ ಹತ್ಯೆ’

ಒಂದನೇ ಪುಟದಿಂದ...

ಅಮೆರಿಕದ ದಾಳಿಯಲ್ಲಿ ಮೃತಪಟ್ಟ ಇರಾನ್‌ನ ನಾವಿಕರ ಸ್ಮರಣಾರ್ಥ ಲಾರೀಜಾನಿ ಬರೆದ ಹಸ್ತಪ್ರತಿಯನ್ನು ಇರಾನ್ ಸರ್ಕಾರಿ ಮಾಧ್ಯಮ ಪ್ರಕಟಿಸಿದೆ. ಈ ನಾವಿಕರ ಅಂತ್ಯಕ್ರಿಯೆ ಮಂಗಳವಾರ ನಿಗದಿಯಾಗಿತ್ತು.

ಐಆರ್‌ಜಿಸಿ ನಿಯಂತ್ರಣದಲ್ಲಿರುವ ಅರೆಸೇನಾ ಪಡೆ ‘ಬಸೀಜ್’. ಇದನ್ನು ಇರಾನ್‌ನೊಳಗಿನ ಪ್ರತಿಭಟನೆಗಳನ್ನು ಹತ್ತಿಕ್ಕಲು ಹೆಚ್ಚಾಗಿ ಬಳಸಲಾಗುತ್ತದೆ.

ಇರಾನ್ ವಿರುದ್ಧ ಅಮೆರಿಕ–ಇಸ್ರೇಲ್ ಯುದ್ಧವು ಮೂರನೇ ವಾರಕ್ಕೆ ಕಾಲಿಟ್ಟಿದ್ದು, ಕನಿಷ್ಠ ಎರಡು ಸಾವಿರ ಮಂದಿ ಮೃತಪಟ್ಟಿದ್ದಾರೆ. ಹೊರ್ಮುಜ್ ಜಲಸಂಧಿ ಮುಚ್ಚಲಾಗಿದೆ. ಶೇ 20ರಷ್ಟು ಜಾಗತಿಕ ತೈಲ ಮತ್ತು ನೈಸರ್ಗಿಕ ಅನಿಲ ಸಾಗಣೆಯಾಗುವ ಈ ಪ್ರಮುಖ ಜಲಮಾರ್ಗವನ್ನು ಮತ್ತೆ ತೆರೆಯಲು ಸಹಾಯ ಮಾಡುವಂತೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಾಡಿದ ಮನವಿಗೆ ಮಿತ್ರರಾಷ್ಟ್ರಗಳಿಂದ ನಿರೀಕ್ಷಿತ ಸ್ಪಂದನೆ ದೊರೆತಿಲ್ಲ.

ಮಂಗಳವಾರ ಮುಂಜಾನೆ ಇರಾನ್ ಹಾಗೂ ಇಸ್ರೇಲ್ ನಡುವಿನ ದಾಳಿಗಳು ಮುಂದುವರಿದಿವೆ. ಇಸ್ರೇಲ್ ಮೇಲೆ ಇರಾನ್ ರಾತ್ರೋರಾತ್ರಿ ಕ್ಷಿಪಣಿ ದಾಳಿ ನಡೆಸಿದೆ. ಎರಡು ವಾರಗಳಿಗೂ ಹೆಚ್ಚು ಕಾಲ ಅಮೆರಿಕ ಮತ್ತು ಇಸ್ರೇಲ್ ದಾಳಿಗಳ ಹೊರತಾಗಿಯೂ ಇರಾನ್ ದೀರ್ಘ ಕಾಲ ದಾಳಿ ನಡೆಸುವ ಸಾಮರ್ಥ್ಯವನ್ನು ಕಾಯ್ದುಕೊಂಡಿದೆ.

ದಾಳಿ ಅನಿರೀಕ್ಷಿತ: ಅಧ್ಯಕ್ಷ ಟ್ರಂಪ್

ಒಂದನೇ ಪುಟದಿಂದ...

‘ಇದು ಆಶ್ಚರ್ಯದ ಜತೆಗೆ ಆಘಾತವನ್ನೂ ತಂದಿದೆ’ ಎಂದಿದ್ದಾರೆ.



ಟ್ರಂಪ್

‘ಇರಾನ್ ತನ್ನ ನೆರೆಹೊರೆಯ ದೇಶಗಳಾದ ಕತಾರ್, ಸೌದಿ ಅರೇಬಿಯಾ, ಯುಎಇ, ಬಹರೇನ್ ಮತ್ತು ಕುವೈತ್ ಮೇಲೆ ನಡೆಸಿದ ದಾಳಿಯಿಂದ ಆಶ್ಚರ್ಯವಾಗಿದೆ. ಮಧ್ಯಪ್ರಾಚ್ಯದ ಈ ದೇಶಗಳ ಮೇಲೆ ಇರಾನ್ ದಾಳಿ ಮಾಡಬಾರದಿತ್ತು’ ಎಂದು ತಿಳಿಸಿದ್ದಾರೆ.

ಆದರೆ, ಇರಾನ್ ಮೇಲೆ ದಾಳಿ ಮಾಡುವುದರಿಂದ ಅಮೆರಿಕದ ಮಿತ್ರರಾಷ್ಟ್ರಗಳ ಮೇಲೆ ಪ್ರತಿದಾಳಿ ನಡೆಯಬಹುದು ಎಂಬ ಎಚ್ಚರಿಕೆಯನ್ನು ಟ್ರಂಪ್ ಅವರಿಗೆ ಅಮೆರಿಕ ಗುಪ್ತಚರ ಅಧಿಕಾರಿಗಳು ಈ ಮೊದಲೇ ನೀಡಿದ್ದರು ಎಂದು ಮೂಲಗಳು ತಿಳಿಸಿವೆ.

ಮೂರನೇ ವಾರಕ್ಕೆ ಕಾಲಿಟ್ಟ ಯುದ್ಧ; ಲಕ್ಷಾಂತರ ಜನರ ಸ್ಥಳಾಂತರ

ಟೆಹರಾನ್, ಬೈರೂತ್ ಮೇಲೆ ಬಾಂಬ್ ದಾಳಿ

ಟೆಹರಾನ್ (ಎಎಫ್‌ಪಿ): ಇರಾನ್ ರಾಜಧಾನಿ ಟೆಹರಾನ್ ಹಾಗೂ ಲೆಬನಾನ್ ರಾಜಧಾನಿ ಬೈರೂತ್ ಮೇಲೆ ಇಸ್ರೇಲ್ ಮಂಗಳವಾರ ಭಾರಿ ದಾಳಿ ನಡೆಸಿದೆ.

ಪಶ್ಚಿಮ ಏಷ್ಯಾದಲ್ಲಿ ಹರಡಿರುವ ಮತ್ತು ಜಾಗತಿಕ ಆರ್ಥಿಕ ಬಿಕ್ಕಟ್ಟಿಗೆ ಕಾರಣವಾಗಿರುವ ಯುದ್ಧದಲ್ಲಿ ಸಹಾಯ ಮಾಡುವಂತೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಮಿತ್ರರಾಷ್ಟ್ರಗಳ ಮೇಲೆ ಒತ್ತಡ ಹೇರುತ್ತಿರುವ ಬೆನ್ನಲ್ಲೇ, ಸೋಮವಾರ ರಾತ್ರಿಯಿಡೀ ನಡೆದ ಬಾಂಬ್ ದಾಳಿ ನಡೆದಿತ್ತು.

ಹೊರ್ಮುಜ್ ಜಲಸಂಧಿಯಲ್ಲಿ ಸಾಗುವ ಹಡಗುಗಳಿಗೆ ರಕ್ಷಣೆ ಒದಗಿಸಲು ಸಹಾಯ ಮಾಡಬೇಕು ಎಂಬ ಟ್ರಂಪ್ ಅವರ ಬೇಡಿಕೆಯನ್ನು ವಿವಿಧ ದೇಶಗಳು ತಿರಸ್ಕರಿಸಿದ ನಂತರ ಮಂಗಳವಾರ ತೈಲ ಬೆಲೆಗಳು ಶೇ 5ರಷ್ಟು ಏರಿಕೆಯಾಗಿವೆ.

ಮೂರನೇ ವಾರಕ್ಕೆ ಕಾಲಿಟ್ಟಿರುವ ಈ ಯುದ್ಧವು ನೂರಾರು ಜನರನ್ನು ಬಲಿ ಪಡೆದಿದೆ. ಇಸ್ರೇಲ್ ಮತ್ತು ಕೊಲ್ಲಿ ರಾಷ್ಟ್ರಗಳ ಮೇಲೆ ಇರಾನ್ ಪ್ರತೀಕಾರದ ದಾಳಿಗಳನ್ನು ನಡೆಸುತ್ತಿದೆ. ಇನ್ನೊಂದೆಡೆ, ಲೆಬನಾನ್‌ನಲ್ಲಿನ ಹಿಜ್ಬುಲ್ಲಾ ನೆಲೆಗಳನ್ನು ಗುರಿಯಾಗಿಸಿ ಇಸ್ರೇಲ್ ದಾಳಿಯನ್ನು ತೀವ್ರಗೊಳಿಸಿದೆ.

ಈ ಯುದ್ಧದ ಕಾರಣದಿಂದಾಗಿ ಲಕ್ಷಾಂತರ ಜನರು ಸ್ಥಳಾಂತರಗೊಂಡಿದ್ದಾರೆ. ವಿಶೇಷವಾಗಿ ಲೆಬನಾನ್ ಮತ್ತು ಇರಾನ್‌ನಲ್ಲಿ ಈ ವಿದ್ಯಮಾನ ಹೆಚ್ಚಾಗಿ ಕಂಡುಬಂದಿದೆ.



ಇಸ್ರೇಲ್ ನಡೆಸಿದ ವಾಯು ದಾಳಿಯಿಂದ ಬೈರೂತ್‌ನ ವಿಮಾನ ನಿಲ್ದಾಣದ ಸಮೀಪ ಕಾಣಿಸಿಕೊಂಡ ಬೆಂಕಿಯನ್ನು ಅಗ್ನಿಶಾಮಕ ಸಿಬ್ಬಂದಿ ನಂದಿಸಿದರು —ಎಎಫ್‌ಪಿ ಚಿತ್ರ


‘ಕೃತಘ್ನ ರಾಷ್ಟ್ರಗಳು’

ವಾಷಿಂಗ್ಟನ್ (ರಾಯಿಟರ್ಸ್): ಹೊರ್ಮುಜ್ ಜಲಸಂಧಿಯಲ್ಲಿ ತೈಲ ಟ್ಯಾಂಕರ್‌ಗಳಿಗೆ ಬೆಂಗಾವಲಾಗಿ ಯುದ್ಧನೌಕೆಗಳನ್ನು ಕಳುಹಿಸಬೇಕೆಂಬ ತಮ್ಮ ಬೇಡಿಕೆಯನ್ನು ಹಲವು ದೇಶಗಳು ತಿರಸ್ಕರಿಸಿದ ನಂತರ ಟ್ರಂಪ್ ಅವರು, ಮಿತ್ರರಾಷ್ಟ್ರಗಳ ವಿರುದ್ಧ ಹರಿಹಾಯ್ದಿದ್ದಾರೆ. ‘ಇವು ಕೃತಘ್ನ ರಾಷ್ಟ್ರಗಳು’ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ಈ ವಿಚಾರದಲ್ಲಿ ಸಹಾಯ ಮಾಡಲು ಒಪ್ಪದೇ ನ್ಯಾಟೊ ತಪ್ಪು ಮಾಡುತ್ತಿದೆ’ ಎಂದೂ ಕಿಡಿ ಕಾರಿದ್ದಾರೆ. ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಹೊರ್ಮುಜ್ ಜಲಸಂಧಿಯಲ್ಲಿ ಹಡಗುಗಳ ರಕ್ಷಣೆಗೆ ನಮಗೆ ಯಾರ ನೆರವು ಬೇಕಿಲ್ಲ’ ಎಂದರು. ‘ಇರಾನ್‌ನಲ್ಲಿ ಕೈಗೊಂಡಿರುವ ಸೇನೆ ಕಾರ್ಯಾಚರಣೆಯನ್ನು ನಿಲ್ಲಿಸಲು ಅಮೆರಿಕ ಸಿದ್ಧ ಇಲ್ಲ. ಆದರೆ, ಆದಷ್ಟು ಶೀಘ್ರವೇ ಕಾರ್ಯಾಚರಣೆ ಮುಗಿಸಲಿದ್ದೇವೆ’ ಎಂದರು. ‘ತೈಲ ಟ್ಯಾಂಕರ್‌ಗಳಿಗೆ ರಕ್ಷಣೆ ನೀಡುವುದಕ್ಕೆ ಯುದ್ಧನೌಕೆಗಳನ್ನು ಕಳುಹಿಸಲು ಸಾಧ್ಯವಿಲ್ಲ’ ಎಂದು ಜರ್ಮನಿ, ಸ್ಪೇನ್, ಇಟಲಿ, ಜಪಾನ್, ಆಸ್ಟ್ರೇಲಿಯಾ ಸೇರಿದಂತೆ ಹಲವು ರಾಷ್ಟ್ರಗಳು ಹೇಳಿವೆ.

ದಿನದ ಬೆಳವಣಿಗೆಗಳು

- ಬಾಗ್ದಾದ್‌ನಲ್ಲಿರುವ ಅಮೆರಿಕ ರಾಯಭಾರ ಕಚೇರಿಯನ್ನು ಗುರಿಯಾಗಿಸಿ ಮೂರು ಡ್ರೋನ್ ಮತ್ತು 4 ರಾಕೆಟ್‌ಗಳಿಂದ ದಾಳಿ
- ಇರಾನ್ ಸೇನೆಯಿಂದ 10 ಮಂದಿ ‘ವಿದೇಶಿ ಬೇಹುಗಾರರ’ ಬಂಧನ
- ಕ್ಷಿಪಣಿ ಅವಶೇಷಗಳು ಬಿದ್ದ ಪರಿಣಾಮ ಅಬುದಾಭಿಯಲ್ಲಿ ಒಬ್ಬರ ಸಾವು. ಪಶ್ಚಿಮ ಏಷ್ಯಾದಲ್ಲಿ ಬಿಕ್ಕಟ್ಟಿನಿಂದಾಗಿ ಯುಎಇಯಲ್ಲಿ ಮೃತಪಟ್ಟವರ ಸಂಖ್ಯೆ 8ಕ್ಕೆ ಏರಿಕೆ
- ಯುಎಇಯ ಪ್ರಮುಖವಾದ ತೈಲ ಕೈಗಾರಿಕಾ ಪ್ರದೇಶದ ಮೇಲೆ ದಾಳಿ. ಬೆಂಕಿ ಹೊತ್ತಿಕೊಂಡಿದ್ದು, ಪ್ರಾಣ ಹಾನಿ ಸಂಭವಿಸಿಲ್ಲ


ನೋರಾ ಫತೇಹಿ

ಸರ್ಸೆ ನಿನ್ನ ಸೆರಗ ಸರ್ಸೆ
ಹಾಡಿಗೆ ತೀವ್ರ ಆಕ್ರೋಶ

ಧ್ರುವ ಸರ್ಜಾ ನಾಯಕನಾಗಿ ನಟಿಸಿರುವ 'KD' ಚಿತ್ರದ 'ಸರ್ಸೆ ನಿನ್ನ ಸೆರಗ ಸರ್ಸೆ' ಹಾಡಿನ ಸಾಹಿತ್ಯಕ್ಕೆ ಎಲ್ಲ ಭಾಷೆಗಳ ಪ್ರೇಕ್ಷಕರಿಂದ ತೀವ್ರ ಆಕ್ರೋಶ ವ್ಯಕ್ತವಾಗಿದೆ. ಹಿಂದಿ ಸಾಹಿತ್ಯಕ್ಕೆ ಬಾಲಿವುಡ್‌ನ ಗಣ್ಯರಿಂದ ಸಾಮಾಜಿಕ ಮಾಧ್ಯಗಳಲ್ಲಿ ಟೀಕೆಗಳ ಮಹಾಪೂರವೇ ಹರಿದಿದೆ. ಹೀಗಾಗಿ ಚಿತ್ರತಂಡ ಹಾಡನ್ನು ಚಿತ್ರದಿಂದ ತೆಗೆದು ಹಾಕುತ್ತದೆಯಾ ಅಥವಾ ಉಳಿಸಿಕೊಳ್ಳಲಿದೆಯಾ ಎಂಬ ಚರ್ಚೆಯೂ ನಡೆದಿದೆ.

ಬಾಲಿವುಡ್ ನಟಿ ನೋರಾ ಫತೇಹಿ, ನಟ ಸಂಜಯ್ ದತ್ ಹೆಜ್ಜೆ ಹಾಕಿರುವ ಈ ಹಾಡು ಶನಿವಾರ ಕನ್ನಡ ಸೇರಿದಂತೆ ಹಲವು ಭಾಷೆಗಳಲ್ಲಿ ಬಿಡುಗಡೆಗೊಂಡಿತ್ತು. ಹಿಂದಿಯ ಹಾಡು ಕೇಳಿದ ಖ್ಯಾತ ಗಾಯಕ ಅರ್ಮಾನ್ ಮಲ್ಲಿಕ್, 'ಗೀತರಚನಕಾರರು ಇಷ್ಟು ಕೀಳುಮಟ್ಟಕ್ಕೆ ಇಳಿದಿದ್ದನ್ನು ನೋಡಲು ಬೇಸರ ಆಗುತ್ತದೆ' ಎಂದಿದ್ದರು. ಅದರ ಬೆನ್ನಲ್ಲೇ ಚಿತ್ರರಂಗದ ಕೆಲ ತಾರೆಯರು ಧ್ವನಿಗೂಡಿಸಿದ್ದರು.

ಕನ್ನಡದ ಹಾಡಿನ ಸಾಹಿತ್ಯಕ್ಕೆ ಸಾಮಾಜಿಕ ಮಾಧ್ಯಮಗಳಲ್ಲಿ ಸಾಕಷ್ಟು ಆಕ್ರೋಶ ವ್ಯಕ್ತವಾಗಿದೆ. 'ಬೇಡುವೆನು ವರವನ್ನು ಕೊಡು ತಾಯಿ ಜನ್ಮವನು'ನಂತಹ ಅರ್ಥಪೂರ್ಣ ಗೀತೆಯನ್ನು ರಚಿಸಿದ್ದ ನಿರ್ದೇಶಕ ಪ್ರೇಮ್ ಅವರೇ ಈ ಹಾಡಿಗೂ ಸಾಹಿತ್ಯ ಬರೆದಿದ್ದಾರೆಂಬುದನ್ನು ನಂಬಲು ಆಗುತ್ತಿಲ್ಲ ಎಂದು ಹಲವರು ಫೇಸ್‌ಬುಕ್, ಇನ್‌ಸ್ಟಾಗ್ರಾಂಗಳಲ್ಲಿ ಬರೆದುಕೊಂಡಿದ್ದಾರೆ.


ವಿರೋಧದ ನಡುವೆಯೂ ಹಾಡು ಕನ್ನಡದಲ್ಲಿ 50 ಲಕ್ಷ ವೀಕ್ಷಣೆ ಪಡೆದು ಟ್ರೆಂಡ್ ಆಗುತ್ತಿದೆ. ಕೆಲವರು ಹಾಡಿಗೆ ರೀಲ್ಸ್ ಮಾಡಿ ಹಂಚಿಕೊಳ್ಳಲು ಪ್ರಾರಂಭಿಸಿದ್ದಾರೆ.

ಪ್ರೇಮ್‌ಗೆ ವಿವಾದ ಹೊಸತಲ್ಲ

ವಿವಾದಗಳಿಂದಲೇ ಸಿನಿಮಾ ಪ್ರಚಾರ ಮಾಡಿಕೊಳ್ಳುವುದು ಪ್ರೇಮ್‌ಗೆ ಹೊಸತಲ್ಲ. ಅವರೇ ನಟಿಸಿರುವ 'ಪ್ರೇಮ್ ಅಡ್ಡ' ಚಿತ್ರ 2012ರಲ್ಲಿ ಬಿಡುಗಡೆಯಾಗಿತ್ತು. ಆ ಚಿತ್ರದ 'ಮೇಲುಕೋಟೆ ಹುಡುಗಿ ಒಬ್ಬಳು' ಹಾಡು ಸಾಕಷ್ಟು ವಿವಾದ ಸೃಷ್ಟಿ ಮಾಡಿತ್ತು. ಹಾಡಿನ ಸಾಹಿತ್ಯಕ್ಕೆ ಮೇಲುಕೋಟೆಯ ಜನರು ವಿರೋಧ ವ್ಯಕ್ತಪಡಿಸಿದ್ದರು.

ಪ್ರೇಮ್ ನಟಿಸಿ, ಅವರ ಪತ್ನಿ ರಕ್ಷಿತಾ ನಿರ್ಮಿಸಿದ್ದ 'ಡಿಕೆ' ಚಿತ್ರ ಶೀರ್ಷಿಕೆ, ಹಾಡಿನಿಂದ ವಿವಾದ ಎಬ್ಬಿಸಿತ್ತು. ಈ ಚಿತ್ರದ 'ಬಾಗಿಲು ತೆಗೆಯೇ ಸೇಸಮ್ಮ...' ಹಾಡಿನ 'ಡಿಕೆ ಸಾಹೇಬ ಬರುತ್ತಿದ್ದಾನೆ ಬಾಗಿಲು ತೆಗೆಯೇ' ಎಂಬ ಸಾಲಿಗೆ ಆಕ್ರೋಶ ವ್ಯಕ್ತವಾಗಿತ್ತು. ಚಿತ್ರದ ಇನ್ನೊಂದು ಹಾಡಿನಲ್ಲಿ ನರೇಂದ್ರ ಮೋದಿ, ಸೋನಿಯಾ ಗಾಂಧಿ, ಎಂ.ಕರುಣಾನಿಧಿ ಹಾಗೂ ಜೆ.ಜಯಲಲಿತಾ ಹೆಸರುಗಳನ್ನು ಬಳಸಿ ವಿವಾದ ಸೃಷ್ಟಿಸಿದ್ದರು.

'ನೋಡುವ, ಕೇಳುವ ದೃಷ್ಟಿಕೋನ ಅವಲಂಬಿಸಿದೆ'


ಪ್ರೇಮ್

'ನಾವು ಲಿರಿಕಲ್ ಸಾಂಗ್ ಅನ್ನು ಬಿಡುಗಡೆ ಮಾಡಿದ್ದೇವೆ. ಇದರ ದೃಶ್ಯರೂಪ ನೋಡಿದಾಗ ಹಾಡಿನ ಅರ್ಥ ತಿಳಿಯುತ್ತದೆ. ಅದಕ್ಕೂ ಮುಂಚೆಯೇ ವಿವಾದ ಎಬ್ಬಿಸುವುದು ಅವರವರ ನೋಡುವ, ಕೇಳುವ ದೃಷ್ಟಿಕೋನ ಅವಲಂಬಿಸಿದೆ ಎಂದಷ್ಟೇ ಹೇಳಬಲ್ಲೆ. ಇದು ಮದ್ಯ ಮತ್ತು ಉಪ್ಪಿನಕಾಯಿಗೆ ಸಂಬಂಧಿತ ಹಾಡು. ಸಿನಿಮಾದಲ್ಲಿ ನೋರಾ ಫತೇಹಿ ತಲೆಯ ಮೇಲೆ ಮದ್ಯದ ಬಾಟಲಿ ಇಟ್ಟುಕೊಂಡು ನೃತ್ಯ ಮಾಡುತ್ತಾರೆ. ಅದಕ್ಕೆ ತಕ್ಕಂತೆ ಸಾಹಿತ್ಯದ ಸಾಲುಗಳಿವೆ. ಆ ಸನ್ನಿವೇಶ ನೋಡಿದಾಗ ಈ ಸಾಲುಗಳಲ್ಲಿ ಯಾವುದೇ ದ್ವಂದ್ವ ಅರ್ಥಗಳಿಲ್ಲ ಎಂಬುದು ಗೊತ್ತಾಗುತ್ತದೆ. ಸಿನಿಮಾದಲ್ಲಿ ಈ ಹಾಡು ಇರಲಿದೆ' ಎನ್ನುತ್ತಾರೆ ಚಿತ್ರದ ನಿರ್ದೇಶಕ ಪ್ರೇಮ್.


ದೇವರಾಜ್ ಸಂಹಿತಾ

ಮಾರ್ಚ್ 27ಕ್ಕೆ 'ಆಯುಧ' ತೆರೆಗೆ

ದೇವರಾಜ್ ಕುಮಾರ್ ನಿರ್ಮಾಣ, ನಿರ್ದೇಶನ ಹಾಗೂ ನಟನೆಯ 'ಆಯುಧ' ಸಿನಿಮಾದ ಟ್ರೇಲರ್ ಬಿಡುಗಡೆಯಾಗಿದ್ದು, ಚಿತ್ರವು ಮಾರ್ಚ್ 27ರಂದು ತೆರೆಕಾಣಲಿದೆ.

ಆ್ಯಕ್ಷನ್ ಥ್ರಿಲ್ಲರ್ ಕಥಾಹಂದರ ಹೊಂದಿರುವ ಈ ಚಿತ್ರದಲ್ಲಿ ನಾಯಕಿಯಾಗಿ ಸಂಹಿತಾ ವಿನ್ಯ ನಟಿಸಿದ್ದಾರೆ. 'ಮೇಕಪ್ ಕಲಾವಿದನಾಗಿ ಕನ್ನಡ ಚಿತ್ರರಂಗದೊಂದಿಗೆ ನಂಟು ಹೊಂದಿರುವ ನಾನು 'ಡೆಂಜರ್ ಜೋನ್' ಚಿತ್ರದ ಮೂಲಕ ನಾಯಕನಾದೆ. 'ತಾಜ್ ಮಹಲ್–2' ಚಿತ್ರದಲ್ಲೂ ನಟಿಸಿದ್ದಾರೆ. ಎರಡು ವರ್ಷಗಳ ಹಿಂದೆ 'ಆಯುಧ' ಎಂಬ ಚಿತ್ರದ ನಿರ್ಮಾಣ ಆರಂಭ ಮಾಡಿದೆ. ಚಿತ್ರದಲ್ಲಿ ನಾಲ್ಕು ಹಾಡುಗಳಿದ್ದು, ವೀನಸ್ ಮೂರ್ತಿ ಚಿತ್ರದ ಛಾಯಾಚಿತ್ರಗ್ರಹಣ ಮಾಡಿದ್ದಾರೆ. ಅಮೃತ ಹಾಗೂ ಸಂಹಿತ ವಿನ್ಯ ನಾಯಕಿಯರಾಗಿ ಬಣ್ಣಹಚ್ಚಿದ್ದಾರೆ. ಚಿತ್ರವು ಲಿಖಿತ್ ಫಿಲಂಸ್ ಮೂಲಕ ಬಿಡುಗಡೆಯಾಗುತ್ತಿದೆ' ಎಂದರು ದೇವರಾಜ್.

ಸೂರ್ಯಪ್ರವೀಣ್, ರಘುರಾಜ್ ಮಲ್ನಾಡ್, ಸುನೀಲ್ ಬೀರೂರು, ನಾರಾಯಣ್, ಸುರೇಂದ್ರ ಕುಮಾರ್ ಮುಂತಾದವರು ತಾರಾಬಳಗದಲ್ಲಿದ್ದಾರೆ.


ಸೂರ್ಯ

ವಿಶ್ವನಾಥ್ ಆ್ಯಂಡ್ ಸನ್ಸ್ ಟೀಸರ್ ಹೊರಬಂತು

ತಮಿಳು ನಟ ಸೂರ್ಯ ನಾಯಕನಾಗಿ ನಟಿಸುತ್ತಿರುವ 'ವಿಶ್ವನಾಥ್ ಆ್ಯಂಡ್ ಸನ್ಸ್' ಚಿತ್ರದ ಟೀಸರ್ ಬಿಡುಗಡೆಗೊಂಡಿದೆ. ವೆಂಕಿ ಅಟ್ಲೂರಿ ನಿರ್ದೇಶನದ ಚಿತ್ರ ವಿಭಿನ್ನವಾದ ಪ್ರೇಮಕಥೆಯನ್ನು ಹೊಂದಿದೆ ಎಂದು ಟೀಸರ್‌ನಿಂದ ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಚಿತ್ರ ತಮಿಳು ಹಾಗೂ ತೆಲುಗು ಭಾಷೆಗಳಲ್ಲಿ ಸಿದ್ಧಗೊಂಡಿದೆ.

'ವಿಶ್ವನಾಥ್ ಆ್ಯಂಡ್ ಸನ್ಸ್' ಚಿತ್ರದಲ್ಲಿ ಕಥಾ ನಾಯಕ ಸಂಜಯ್ ವಿಶ್ವನಾಥ್ ಅಂತರರಾಷ್ಟ್ರೀಯ ಪಿಸ್ತೂಲ್ ಶೂಟರ್. ತನಗಿಂತ 20 ವರ್ಷ ಚಿಕ್ಕವಳಾದ ನಾಯಕಿ ಜತೆ ಪ್ರೇಮವಾಗುತ್ತದೆ. ಅವರಿಬ್ಬರ ಪ್ರೇಮಪಯಣವೇ ಚಿತ್ರವೆಂಬುದು ಗೊತ್ತಾಗುತ್ತಿದೆ. ಮಮಿತಾ ಬೈಜು ಚಿತ್ರದ ನಾಯಕಿ. ರವೀನಾ ಟಂಡನ್, ರಾಧಿಕಾ ಶರತ್‌ಕುಮಾರ್ ಪ್ರಮುಖ ಪಾತ್ರಗಳಲ್ಲಿದ್ದಾರೆ. ಜಿ.ವಿ. ಪ್ರಕಾಶ್ ಸಂಗೀತ, ನಿಮಿಶ ರವಿ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.

ಸೂಚನ್ ಶೆಟ್ಟಿಗೆ ಜೂಹಿ ಜೋಡಿ


ಜೂಹಿ

ಸೂಚನ್ ಶೆಟ್ಟಿ ನಟಿಸಿ, ನಿರ್ದೇಶಿಸಿರುವ 'ಗಾಡ್ ಪ್ರಾಮಿಸ್' ಚಿತ್ರದಲ್ಲಿ ನಾಯಕಿಯಾಗಿ ಜೂಹಿ ಜಯಕುಮಾರ್ ನಟಿಸಲಿದ್ದಾರೆ. 'ಪವಿ ಕೇರ್ ಟೇಕರ್', 'ತಲೈವಾ ತಲೈವಿ' ಹಾಗೂ 'ಸುಮತಿ ಒಲವು' ಸಿನಿಮಾಗಳಲ್ಲಿ ನಟಿಸಿದ್ದ ಜೂಹಿ ಇದೀಗ 'ಗಾಡ್ ಪ್ರಾಮಿಸ್' ಚಿತ್ರದ ಮೂಲಕ ನಾಯಕಿಯಾಗಿ ಕನ್ನಡ ಸಿನಿಮಾಗೆ ಹೆಜ್ಜೆ ಇಟ್ಟಿದ್ದಾರೆ. 'ಅಪ್ಸರ' ಎಂಬ ಪಾತ್ರದಲ್ಲಿ ಜೂಹಿ ಕಾಣಿಸಿಕೊಳ್ಳಲಿದ್ದಾರೆ. 'ನನ್ನ ಪಾತ್ರ ಕಥೆಗೆ ಬಹಳ ಮುಖ್ಯವಾಗಿದೆ. ಅದರ ಬರವಣಿಗೆಯೂ ತೂಕ ಹೊಂದಿದೆ. ಸೂಚನ್ ಶೆಟ್ಟಿ ಹೊಸತನಕ್ಕೆ ತುಡಿತ ಹೊಂದಿರುವ ನಿರ್ದೇಶಕ. ಈ ಸಿನಿಮಾ ಖಂಡಿತವಾಗಿಯೂ ಪ್ರೇಕ್ಷಕರಿಗೆ ಮನರಂಜನೆ ಉಣಬಡಿಸಲಿದೆ' ಎಂದರು.

ಮಹೇಂದ್ರ ಶೆಟ್ಟಿ ಅವರು ಪಾಂಚಜನ್ಯ ಫಿಲ್ಮ್ ಪ್ರೊಡಕ್ಷನ್‌ನಡಿ ಈ ಸಿನಿಮಾ ನಿರ್ಮಿಸುತ್ತಿದ್ದಾರೆ. ಸಿನಿಮಾಗೆ ಗುರುಪ್ರಸಾದ್ ನರ್ನಾಡ್ ಛಾಯಾಚಿತ್ರಗ್ರಹಣ, ಭರತ್ ಮಧುಸೂದನ್ ಸಂಗೀತ, ನವೀನ್ ಶೆಟ್ಟಿ ಸಂಕಲನವಿದೆ. ಈಗಾಗಲೇ ಶೇಕಡ 40 ರಷ್ಟು ಚಿತ್ರೀಕರಣ ಪೂರ್ಣಗೊಳಿಸಿರುವ ಚಿತ್ರತಂಡ ಏಪ್ರಿಲ್ ಅಂತ್ಯಕ್ಕೆ ಚಿತ್ರೀಕರಣ ಪೂರ್ಣಗೊಳಿಸಿ, ಇದೇ ವರ್ಷ ಸಿನಿಮಾವನ್ನು ತೆರೆಗೆ ತರುವ ಯೋಜನೆ ಹಾಕಿಕೊಂಡಿದೆ.

ಹಾಕಿ ವಿಶ್ವಕಪ್: ಒಂದೇ ಗುಂಪಿನಲ್ಲಿ ಭಾರತ, ಪಾಕಿಸ್ತಾನ

FIH HOCKEY WORLD CUP BELGIUM & NETHERLANDS 2026

ಲುಸಾನ್ (ಪಿಟಿಐ): ಬದ್ಧಪ್ರತಿಸ್ಪರ್ಧಿಗಳಾದ ಭಾರತ ಮತ್ತು ಪಾಕಿಸ್ತಾನ ತಂಡಗಳು ಆಗಸ್ಟ್‌ನಲ್ಲಿ ನಡೆಯಲಿರುವ ಪುರುಷರ ಹಾಕಿ ವಿಶ್ವಕಪ್ ಟೂರ್ನಿಯಲ್ಲಿ ಒಂದೇ ಗುಂಪಿನಲ್ಲಿ ಸ್ಥಾನ ಪಡೆದಿವೆ.

ಆ್ಯಮ್‌ಸ್ಟರ್‌ಡ್ಯಾಮ್‌ನಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಅಂತರರಾಷ್ಟ್ರೀಯ ಹಾಕಿ ಫೆಡರೇಷನ್ (ಎಫ್‌ಐಎಚ್) ವಿಶ್ವಕಪ್ ಟೂರ್ನಿಯ 'ಡ್ರಾ'ಗಳನ್ನು ಪ್ರಕಟಿಸಿದೆ. ಭಾರತ ಮತ್ತು ಪಾಕ್ ಜೊತೆಗೆ ಬಲಿಷ್ಠ ತಂಡಗಳಾದ ಇಂಗ್ಲೆಂಡ್ ಹಾಗೂ ವೇಲ್ಸ್ ಕೂಡ ಡಿ ಗುಂಪಿನಲ್ಲಿವೆ.

ನೆದರ್ಲೆಂಡ್ಸ್ ಮತ್ತು ಬೆಲ್ಜಿಯಂ ಜಂಟಿ ಆತಿಥ್ಯದಲ್ಲಿ ಟೂರ್ನಿ ನಡೆಯಲಿದೆ. ಎ ಮತ್ತು ಡಿ ಗುಂಪಿನ ಪಂದ್ಯಗಳು ನೆದರ್ಲೆಂಡ್ಸ್‌ನಲ್ಲಿ ಹಾಗೂ ಬಿ ಮತ್ತು ಸಿ ಗುಂಪಿನ ಪಂದ್ಯಗಳು ಬೆಲ್ಜಿಯಂನಲ್ಲಿ ನಿಗದಿಯಾಗಿವೆ. ಟೂರ್ನಿಯ ವೇಳಾಪಟ್ಟಿಯನ್ನು ಬುಧವಾರ ಪ್ರಕಟಿಸಲಾಗುತ್ತದೆ.

ಇದೇ ಅವಧಿಯಲ್ಲಿ ನಡೆಯಲಿರುವ ಮಹಿಳೆಯರ ವಿಶ್ವಕಪ್‌ನಲ್ಲಿ ಭಾರತ, ಚೀನಾ ಹಾಗೂ ದಕ್ಷಿಣ ಆಫ್ರಿಕಾ ತಂಡಗಳು ಡಿ ಗುಂಪಿನಲ್ಲಿ ಕಣಕ್ಕಿಳಿಯಲಿವೆ.

ಗುಂಪುಗಳು: ಪುರುಷರು: ಎ ಗುಂಪು: ನೆದರ್ಲೆಂಡ್ಸ್, ಅರ್ಜೆಂಟೀನಾ, ನ್ಯೂಜಿಲೆಂಡ್, ಜಪಾನ್.
ಬಿ ಗುಂಪು: ಬೆಲ್ಜಿಯಂ, ಜರ್ಮನಿ, ಫ್ರಾನ್ಸ್, ಮಲೇಷ್ಯಾ.
ಸಿ ಗುಂಪು: ಆಸ್ಟ್ರೇಲಿಯಾ, ಸ್ಪೇನ್, ಐರ್ಲೆಂಡ್, ದಕ್ಷಿಣ ಆಫ್ರಿಕಾ.
ಡಿ ಗುಂಪು: ಇಂಗ್ಲೆಂಡ್, ಭಾರತ, ಪಾಕಿಸ್ತಾನ, ವೇಲ್ಸ್.
ಮಹಿಳೆಯರು: ಎ ಗುಂಪು: ನೆದರ್ಲೆಂಡ್ಸ್, ಆಸ್ಟ್ರೇಲಿಯಾ, ಚಿಲಿ, ಜಪಾನ್.
ಬಿ ಗುಂಪು: ಅರ್ಜೆಂಟೀನಾ, ಜರ್ಮನಿ, ಅಮೆರಿಕ, ಸ್ಕಾಟ್ಲೆಂಡ್.
ಸಿ ಗುಂಪು: ಬೆಲ್ಜಿಯಂ, ಸ್ಪೇನ್, ನ್ಯೂಜಿಲೆಂಡ್, ಐರ್ಲೆಂಡ್.
ಡಿ ಗುಂಪು: ಚೀನಾ, ಇಂಗ್ಲೆಂಡ್, ಭಾರತ, ದಕ್ಷಿಣ ಆಫ್ರಿಕಾ.

ಅಂತಿಮ್‌ಗೆ ಮೀನಾಕ್ಷಿ ಆಘಾತ


ಮೀನಾಕ್ಷಿ ಗೋಯತ್

ನವದೆಹಲಿ (ಪಿಟಿಐ): ಕುಸ್ತಿ ತಾರೆ ಮೀನಾಕ್ಷಿ ಗೋಯತ್ ಅವರು ಎರಡು ಬಾರಿಯ ವಿಶ್ವ ಚಾಂಪಿಯನ್‌ಷಿಪ್ ಪದಕ ವಿಜೇತೆ ಅಂತಿಮ್ ಪಂಘಲ್ ಅವರಿಗೆ ಆಘಾತ ನೀಡಿದರು. ಇದರೊಂದಿಗೆ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಸ್ಪರ್ಧಿಸುವ ಭಾರತ ತಂಡದಲ್ಲಿ ಸ್ಥಾನ ಗಿಟ್ಟಿಸಿಕೊಂಡರು.

ಏಷ್ಯನ್ ಚಾಂಪಿಯನ್‌ಷಿಪ್ ಏಪ್ರಿಲ್ 6ರಿಂದ 11 ರವರೆಗೆ ಕಿರ್ಗಿಸ್ತಾನದ ಬಿಷ್ಕೆಕ್‌ನಲ್ಲಿ ನಡೆಯಲಿವೆ. ರಾಷ್ಟ್ರೀಯ ತಂಡದ ಆಯ್ಕೆಗಾಗಿ ನಡೆದ ಟ್ರಯಲ್ಸ್‌ನಲ್ಲಿ ಮೀನಾಕ್ಷಿ 6–2ರಿಂದ ಅನುಭವಿ ಅಂತಿಮ್ ಅವರಿಗೆ ಸೋಲುಣಿಸಿದರು.

ಈ ಹಿಂದೆ ಅಂತಿಮ್ ವಿರುದ್ಧ ಮೂರು ಬಾರಿ ಟ್ರಯಲ್ಸ್‌ನಲ್ಲಿ ಸೋತಿದ್ದ 25 ವರ್ಷದ ಮೀನಾಕ್ಷಿ, ರಕ್ಷಣಾತ್ಮಕ ಆಟದೊಂದಿಗೆ ಗೆದ್ದು ಬೀಗಿದರು. ವಿನೇಶ್ ಫೋಗಟ್ ಅವರ ಬಳಿಕ 53 ಕೆಜಿ ತೂಕದ ವಿಭಾಗದಲ್ಲಿ ಹಿಡಿತ ಸಾಧಿಸಿದ್ದ ಅಂತಿಮ್ ಮುಖಭಂಗ ಅನುಭವಿಸಿದರು.

ಎರಡು ಬಾರಿಯ ರಾಷ್ಟ್ರೀಯ ಚಾಂಪಿಯನ್ ಆಗಿರುವ ಮೀನಾಕ್ಷಿ ಅವರು ರಾಷ್ಟ್ರೀಯ ಮಾಜಿ ಕೋಚ್ ಕುಲದೀಪ್ ಮಲಿಕ್ ಅವರ ಮಾರ್ಗದರ್ಶನದಲ್ಲಿ ಸೋನಿಪತ್‌ನಲ್ಲಿ ತರಬೇತಿ ಪಡೆಯುತ್ತಿದ್ದಾರೆ. ಅವರು 50 ಕೆ.ಜಿ ವಿಭಾಗದಲ್ಲಿ ಹಲವಾರು ಬಾರಿ ಸ್ಪರ್ಧಿಸಿದ್ದಾರೆ. ಆದರೆ ಈಗ 53 ಕೆ.ಜಿ ವಿಭಾಗಕ್ಕೆ ಸಜ್ಜುಗೊಂಡಿದ್ದಾರೆ.

ಅಂತಿಮ್ ಇದಕ್ಕೂ ಮುನ್ನ ಎರಡೂ ಪಂದ್ಯಗಳಲ್ಲಿ ರಿಯಾ ಮತ್ತು ಜೂಲಿ ವಿರುದ್ಧ ಒಂದೇ ಒಂದು ಅಂಕವನ್ನು ಬಿಟ್ಟುಕೊಡದೆ ಗೆಲುವು ಸಾಧಿಸಿದ್ದರು.

50 ಕೆ.ಜಿ ತೂಕ ವಿಭಾಗದಲ್ಲಿ ಭಾರತ ತಂಡದಲ್ಲಿ ಸ್ಥಾನ ಪಡೆದ ನೀಲಂ ಕೂಡ ಅಮೋಘ ಪ್ರದರ್ಶನ ನೀಡಿದರು. ಶಿವಾನಿ ಅವರನ್ನು 7–3ರಿಂದ ಮಣಿಸಿ ದಿನದ ಆರಂಭ ಮಾಡಿದ್ದ ನೀಲಂ, ಫೈನಲ್ ಸುತ್ತಿನಲ್ಲಿ ಪ್ರಿಯಾಂಶಿ ಅವರನ್ನು ತಾಂತ್ರಿಕ ಶ್ರೇಷ್ಠತೆಯ ಆಧಾರದಲ್ಲಿ ಮಣಿಸಿದರು.

ಮಾನ್ಸಿ ಅಹ್ಲಾವತ್ (62 ಕೆ.ಜಿ) ಮತ್ತು ಮನೀಷಾ ಭನ್ವಾಲಾ (57 ಕೆ.ಜಿ), ಹಂಶಿಕಾ (55 ಕೆ.ಜಿ), ನೇಹಾ ಸಾಂಗ್ವಾನ್ (59 ಕೆ.ಜಿ), ಮೋನಿಕಾ (65 ಕೆ.ಜಿ), ಮಾನ್ಸಿ ಲಾಥರ್ (68 ಕೆ.ಜಿ), ಹರ್ಷಿತಾ (72 ಕೆಜಿ) ಮತ್ತು ಕಾಜಲ್ (76 ಕೆಜಿ) ತಂಡದಲ್ಲಿ ಸ್ಥಾನ ಪಡೆದ ಇತರರು.

ಪುರುಷರ ತಂಡ: ಅಂಕುಶ್ (57 ಕೆ.ಜಿ), ಅಮನ್ ಸೆಹ್ರಾವತ್ (61 ಕೆ.ಜಿ), ಸುಜೀತ್ ಕಲ್ಕಲ್ (65 ಕೆ.ಜಿ), ಅಭಿಮನ್ಯು (70 ಕೆ.ಜಿ) ಜೈದೀಪ್ (74 ಕೆ.ಜಿ), ಸಂದೀಪ್ ಮಾನ್ (79 ಕೆ.ಜಿ), ಮುಕುಲ್ ದಹಿಯಾ (86 ಕೆ.ಜಿ), ಪುನೀತ್ ಕುಮಾರ್ (92 ಕೆ.ಜಿ), ವಿಕ್ಕಿ (97 ಕೆ.ಜಿ) ಮತ್ತು ದಿನೇಶ್ (125 ಕೆ.ಜಿ).

ಕಾನ್ವೆ ಮಿಂಚು, ಕಿವೀಸ್‌ಗೆ ಜಯ

ಹ್ಯಾಮಿಲ್ಟನ್ (ನ್ಯೂಜಿಲೆಂಡ್), (ಎಎಫ್‌ಪಿ): ಡೆವಾನ್ ಕಾನ್ವೆ ಅವರ ಬಿರುಸಿನ ಅರ್ಧ ಶತಕದ ನೆರವಿನಿಂದ ನ್ಯೂಜಿಲೆಂಡ್ ತಂಡ ಎರಡನೇ ಟಿ20 ಪಂದ್ಯದಲ್ಲಿ ಮಂಗಳವಾರ ದಕ್ಷಿಣ ಆಫ್ರಿಕಾ ತಂಡವನ್ನು 68 ರನ್‌ಗಳಿಂದ ಸೋಲಿಸಿತು.

ಇದರಿಂದ ಐದು ಪಂದ್ಯಗಳ ಸರಣಿ ಈಗ 1–1 ರಲ್ಲಿ ಸಮಬಲಗೊಂಡಿದೆ. ಭಾನುವಾರ ನಡೆದ ಮೊದಲ ಪಂದ್ಯವನ್ನು ಹರಿಣಗಳ ಪಡೆ 7 ವಿಕೆಟ್‌ಗಳಿಂದ ಜಯಿಸಿತ್ತು. ಸರಣಿಯ ಮೂರನೇ ಪಂದ್ಯ ಆಕ್ಲೆಂಡ್‌ನಲ್ಲಿ ಶುಕ್ರವಾರ ನಡೆಯಲಿದೆ.

ಬ್ಯಾಟ್ ಮಾಡಲು ಕಳುಹಿಸಲ್ಪಟ್ಟ ನ್ಯೂಜಿಲೆಂಡ್ 6 ವಿಕೆಟ್‌ಗೆ 175 ರನ್‌ಗಳ ಹೋರಾಟದ ಮೊತ್ತ ಗಳಿಸಿತು. ಎಡಗೈ ಬ್ಯಾಟರ್ ಕಾನ್ವೆ 49 ಎಸೆತಗಳಿಂದ 60 ರನ್ ಬಾರಿಸಿದರು. ದಕ್ಷಿಣ ಆಫ್ರಿಕಾ 15.3 ಓವರುಗಳಲ್ಲಿ 107 ರನ್‌ಗಳಿಗೆ ಕುಸಿಯಿತು. ವೇಗದ ಬೌಲರ್‌ಗಳಾದ ಬೆನ್ ಸಿಯರ್ಸ್ ಮತ್ತು ಲಾಕಿ ಫರ್ಗ್ಯುಸನ್ ತಲಾ 3 ವಿಕೆಟ್ ಪಡೆದರು.

ಸಂಕ್ಷಿಪ್ತ ಸ್ಕೋರು: ನ್ಯೂಜಿಲೆಂಡ್: 20 ಓವರುಗಳಲ್ಲಿ 6 ವಿಕೆಟ್‌ಗೆ 175 (ಡೆವಾನ್ ಕಾನ್ವೆ 60, ಜೋಶ್ ಕ್ಲಾರ್ಕ್‌ಸನ್ ಔಟಾಗದೇ 26; ವಿಯಾನ್ ಮುಲ್ಡರ್ 14ಕ್ಕೆ2); ದಕ್ಷಿಣ ಆಫ್ರಿಕಾ: 15.3 ಓವರುಗಳಲ್ಲಿ 107 (ಜಾರ್ಜ್ ಲಿಂಡೆ 33; ಲಾಕಿ ಫರ್ಗ್ಯುಸನ್ 16ಕ್ಕೆ3, ಬೆನ್ ಸಿಯರ್ಸ್ 14ಕ್ಕೆ3, ಮಿಚೆಲ್ ಸ್ಯಾಂಟ್ನರ್ 19ಕ್ಕೆ2).

'ಪ್ರಜಾವಾಣಿ'–'ಡೆಕ್ಕನ್ ಹೆರಾಲ್ಡ್' ಶೈಕ್ಷಣಿಕ ಮೇಳ ಏಪ್ರಿಲ್ 4–5ಕ್ಕೆ

'ಎಡ್ಯುವರ್ಸ್'ನ ಪ್ರೋಮೊ ಅನಾವರಣ ಮಾಡಿದ ಸಚಿವ ಮಧು ಬಂಗಾರಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಪತ್ರಿಕೆಗಳು 'ಎಡ್ಯುವರ್ಸ್' ಶೈಕ್ಷಣಿಕ ಮೇಳವನ್ನು ಆಯೋಜಿಸಿ, ವಿದ್ಯಾರ್ಥಿಗಳಿಗೆ ನೆರವಾಗುತ್ತಿವೆ. ಇದರಿಂದ ವಿದ್ಯಾರ್ಥಿಗಳು, ಪೋಷಕರು ಮತ್ತು ಶೈಕ್ಷಣಿಕ ಸಂಸ್ಥೆಗಳಿಗೂ ಅನುಕೂಲವಾಗುತ್ತಿದೆ ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

ಮಂಗಳವಾರ ಆಯೋಜಿಸಲಾಗಿದ್ದ ಸುದ್ದಿಗೋಷ್ಠಿಯಲ್ಲಿ 'ಎಡ್ಯುವರ್ಸ್'ನ ಪ್ರೋಮೊವನ್ನು ಮಧು ಬಂಗಾರಪ್ಪ ಅವರು ಅನಾವರಣ ಮಾಡಿದರು. 'ನಗರ ಪ್ರದೇಶದಲ್ಲಿ ಇಂತಹ ಶೈಕ್ಷಣಿಕ ಮೇಳ ನಡೆಸುವುದರಿಂದ ಆ ಭಾಗದ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ಮುಂದಿನ ದಿನಗಳಲ್ಲಿ ಜಿಲ್ಲಾ ಮಟ್ಟದಲ್ಲೂ ಇಂತಹ ಮೇಳ ನಡೆಸಿದರೆ ಇನ್ನಷ್ಟು ಸಹಾಯವಾಗಲಿದೆ' ಎಂದರು.

16ನೇ ಆವೃತ್ತಿಯ 'ಎಡ್ಯುವರ್ಸ್' ಶೈಕ್ಷಣಿಕ ಮೇಳವು ಏಪ್ರಿಲ್ 4–5ರಂದು ಬೆಂಗಳೂರಿನ ಅರಮನೆ ಮೈದಾನದ ಗಾಯತ್ರಿ ಗ್ರ್ಯಾಂಡ್‌ನಲ್ಲಿ ಮತ್ತು ಏಪ್ರಿಲ್ 11–12ರಂದು ಹುಬ್ಬಳ್ಳಿಯ ನೆಹರೂ ಕ್ರೀಡಾಂಗಣದಲ್ಲಿ ನಡೆಯಲಿದೆ.

ಬೆಂಗಳೂರಿನಲ್ಲಿ ನಡೆಯುವ ಮೇಳದಲ್ಲಿ 90ಕ್ಕೂ ಹೆಚ್ಚು, ಹುಬ್ಬಳ್ಳಿಯಲ್ಲಿ 60ಕ್ಕೂ ಹೆಚ್ಚು ಶೈಕ್ಷಣಿಕ ಸಂಸ್ಥೆಗಳು ಭಾಗಿಯಾಗಲಿವೆ. ಎಂಜಿನಿಯರಿಂಗ್, ಬ್ಯುಸಿನೆಸ್ ಮ್ಯಾನೇಜ್‌ಮೆಂಟ್, ಕೃತಕ ಬುದ್ಧಿಮತ್ತೆ, ಡೇಟಾ ವಿಜ್ಞಾನ, ಮಾಧ್ಯಮ, ಆರೋಗ್ಯ ವಿಜ್ಞಾನ ಮತ್ತು ಕಾನೂನು ಪದವಿ ಕ್ಷೇತ್ರಗಳಲ್ಲಿ ಇರುವ ಅವಕಾಶಗಳ ಬಗ್ಗೆ ವಿದ್ಯಾರ್ಥಿಗಳು ಮಾಹಿತಿ ಪಡೆದುಕೊಳ್ಳಬಹುದಾಗಿದೆ.

ಸಿಇಟಿ, ಕೆಸಿಇಟಿ, ಕಾಮೆಡ್‌–ಕೆ ಪರೀಕ್ಷೆಗಳನ್ನು ಎದುರಿಸುವ ಬಗ್ಗೆ ಮಾರ್ಗದರ್ಶನವನ್ನೂ ನೀಡಲಾಗುತ್ತದೆ. ವಿಶ್ವವಿದ್ಯಾಲಯಗಳ ಪ್ರತಿನಿಧಿಗಳ ಜತೆಗೆ ವಿದ್ಯಾರ್ಥಿಗಳು ನೇರವಾಗಿ ಚರ್ಚೆ ನಡೆಸಬಹುದಾಗಿದೆ. ಅಣಕು ಪರೀಕ್ಷೆಗಳು ನಡೆಯಲಿದ್ದು, ವಿದ್ಯಾರ್ಥಿಗಳಿಗೆ ಆಕರ್ಷಕ ಬಹುಮಾನವನ್ನೂ ನೀಡಲಾಗುತ್ತದೆ.

ಈ ಹಿಂದಿನ 15 ಆವೃತ್ತಿಗಳ 'ಎಡ್ಯುವರ್ಸ್'ನಲ್ಲಿ 1 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಮಾರ್ಗದರ್ಶನ ಪಡೆದಿದ್ದಾರೆ. 16ನೇ ಆವೃತ್ತಿಯಲ್ಲಿ 10,000 ವಿದ್ಯಾರ್ಥಿಗಳು ಭಾಗವಹಿಸುವ ನಿರೀಕ್ಷೆ ಇದೆ.



ಎಡ್ಯುವರ್ಸ್ ಶೈಕ್ಷಣಿಕ ಮೇಳ ಕುರಿತು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಮಾತನಾಡಿದರು –ಪ್ರಜಾವಾಣಿ ಚಿತ್ರ

ತಿಮರೋಡಿ ಮೇಲ್ಮನವಿ ವಜಾ

ಪ್ರಜಾವಾಣಿ ವಾರ್ತೆ


ಮಹೇಶ್ ತಿಮರೋಡಿ

ಬೆಂಗಳೂರು: ಗಡಿಪಾರು ಪ್ರಶ್ನಿಸಿದ ಪ್ರಕರಣದಲ್ಲಿ ಏಕಸದಸ್ಯ ನ್ಯಾಯಪೀಠ ನೀಡಿದ್ದ ಆದೇಶ ರದ್ದುಪಡಿಸುವಂತೆ ಕೋರಿದ್ದ ಮಹೇಶ್ ತಿಮರೋಡಿ ಮೇಲ್ಮನವಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

'ಏಕಸದಸ್ಯ ನ್ಯಾಯಪೀಠ 2026ರ ಜನವರಿ 31ರಂದು ಹೊರಡಿಸಿರುವ ಆದೇಶ ರದ್ದುಪಡಿಸಬೇಕು' ಎಂದು ಕೋರಿ ಮಹೇಶ್ ತಿಮರೋಡಿ ಸಲ್ಲಿಸಿದ್ದ ರಿಟ್ ಮೇಲ್ಮನವಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿ, 'ಏಕಸದಸ್ಯ ನ್ಯಾಯಪೀಠದ ಆದೇಶ ಸೂಕ್ತವಾಗಿದೆ. ಅದರಲ್ಲಿ ಮಧ್ಯಪ್ರವೇಶ ಮಾಡುವ ಅಗತ್ಯ ಇಲ್ಲ' ಎಂದು ಆದೇಶಿಸಿತು.

ಇದೇ ವೇಳೆ, 'ಏಕಸದಸ್ಯ ನ್ಯಾಯಪೀಠ ಜನವರಿ 31ರಂದು ನೀಡಿದ್ದ ಆದೇಶವನ್ನು ಆಧರಿಸಿ ಹೊಸದಾಗಿ ವಿಚಾರಣೆ ನಡೆಸಿ ಮಹೇಶ್ ತಿಮರೋಡಿ ಅವರನ್ನು ಗಡಿಪಾರು ಮಾಡಿ ಮೂರನೇ ಬಾರಿಗೆ ಪುತ್ತೂರು ಉಪ ವಿಭಾಗಾಧಿಕಾರಿ ಆದೇಶಿಸಿದ್ದಾರೆ' ಎಂಬ ಅಂಶವನ್ನು ಸರ್ಕಾರಿ ವಕೀಲರು ನ್ಯಾಯಪೀಠದ ಗಮನಕ್ಕೆ ತಂದರು.

'ಬೆಳ್ತಂಗಡಿ ವಿದ್ಯಾರ್ಥಿನಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಾರ್ವಜನಿಕ ಹೋರಾಟ ನಡೆಸುತ್ತಿದ್ದ ಮಹೇಶ್ ತಿಮರೋಡಿ ಅವರನ್ನು 9 ತಿಂಗಳು ರಾಯಚೂರಿನ ಮಾನ್ವಿ ಪೊಲೀಸ್ ಠಾಣಾ ವ್ಯಾಪ್ತಿಗೆ ಗಡಿಪಾರು ಮಾಡಿದ ಕ್ರಮವನ್ನು ಮರು ಪರಿಶೀಲಿಸಿ ಹೊಸದಾಗಿ ಆದೇಶಿಸಿ' ಎಂದು ಏಕಸದಸ್ಯ ನ್ಯಾಯಪೀಠ ಪುತ್ತೂರು ಉಪ ವಿಭಾಗಾಧಿಕಾರಿಗೆ ನಿರ್ದೇಶಿಸಿತ್ತು.

ಗೋಡೆ ಕುಸಿದು ಮಹಿಳೆ ಸಾವು


ಪರ್ವಿನ್

ಬೆಳಗಾವಿ: ತಾಲ್ಲೂಕಿನ ಹೊಸೂರ ಗ್ರಾಮದಲ್ಲಿ ಮಂಗಳವಾರ ಮಳೆಗೆ ಮನೆ ಗೋಡೆ ಕುಸಿದು ವಂಟಮೂರಿ ಗ್ರಾಮದ ಪರ್ವಿನ್ ಬೇಪಾರಿ (34) ಮೃತಪಟ್ಟಿದ್ದಾರೆ. ಅವರ ಪತಿ ಶರೀಫ್ ಬೇಪಾರಿ ಅವರಿಗೆ ಗಾಯಗಳಾಗಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ.

'ಗ್ರಾಮದ ಪಾಳು ಮನೆ ಬಳಿ ಬೇಪಾರಿ ದಂಪತಿ ಆಶ್ರಯ ಪಡೆದ ವೇಳೆ ದಿಢೀರ್‌ನೇ ಮನೆಯ ಗೋಡೆ ಕುಸಿದು ಬಿತ್ತು' ಎಂದು ಕಾಕತಿ ಠಾಣೆ ಪೊಲೀಸರು ತಿಳಿಸಿದ್ದಾರೆ.

ಪರಿಹಾರದಿಂದ ಗುಂಪು ವಿಮೆ ಮೊತ್ತ ಕಡಿತ ಇಲ್ಲ: ಸುಪ್ರೀಂ ಕೋರ್ಟ್

ಪ್ರಜಾವಾಣಿ ವಾರ್ತೆ



ನವದೆಹಲಿ: ಉದ್ಯೋಗದಾತರು ಒದಗಿಸುವ ಗುಂಪು ವಿಮಾ ಯೋಜನೆಗಳು ಹಾಗೂ ಸಾಮಾಜಿಕ ಭದ್ರತಾ ಯೋಜನೆಗಳಲ್ಲಿ ಉದ್ಯೋಗಿಗಳ ಕುಟುಂಬದವರು ಪಡೆದ ಮೊತ್ತವನ್ನು 1988ರ ಮೋಟಾರು ವಾಹನ ಕಾಯ್ದೆಯ ಅಡಿಯಲ್ಲಿ ನೀಡಲಾಗುವ ಪರಿಹಾರದಿಂದ ಕಡಿತಗೊಳಿಸಲಾಗುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಪುನರುಚ್ಚರಿಸಿದೆ.

ಮೃತರ ಮರಣದ ನಂತರ ಗುಂಪುವಿಮಾ ಯೋಜನೆಗಳ ಅಡಿಯಲ್ಲಿ ಕುಟುಂಬದವರು ಪಡೆದ ಮೊತ್ತವನ್ನು ಮೋಟಾರು ವಾಹನ ಕಾಯ್ದೆಯ ಪರಿಹಾರದಿಂದ ಕಡಿತಗೊಳಿಸಲು ಅನುಮತಿಸದ ಕರ್ನಾಟಕ ಹೈಕೋರ್ಟ್‌ಗಳ ತೀರ್ಪಿನ ವಿರುದ್ಧ ಕೆಎಸ್‌ಆರ್‌ಟಿಸಿ ಸಲ್ಲಿಸಿದ್ದ ವಿಶೇಷ ಮೇಲ್ಮನವಿ ಅರ್ಜಿಗಳನ್ನು ನ್ಯಾಯಮೂರ್ತಿಗಳಾದ ಪಂಕಜ್ ಮಿತ್ತಲ್ ಮತ್ತು ಪ್ರಸನ್ನ ಬಿ. ವರಾಳೆ ಅವರ ಪೀಠ ವಜಾಗೊಳಿಸಿದೆ.

ಮೃತರ ಕುಟುಂಬದವರು ಎರಡೂ ಕಡೆಗಳಿಂದ ಪ್ರಯೋಜನ ಪಡೆಯುತ್ತಾರೆ ಎಂಬ ಕೆಎಸ್‌ಆರ್‌ಟಿಸಿಯ ವಾದವನ್ನು ತಿರಸ್ಕರಿಸಿದ ಪೀಠವು, 'ಉದ್ಯೋಗದಾತರು ಒದಗಿಸುವ ವಿಮೆಯು ಸ್ವತಂತ್ರ ಒಪ್ಪಂದದಿಂದ ರೂಪುಗೊಂಡಿರುತ್ತದೆ. ಇದು ಮೋಟಾರು ವಾಹನ ಕಾಯ್ದೆಯ ಶಾಸನಬದ್ಧ ಪರಿಹಾರದೊಂದಿಗೆ ಸಂಬಂಧ ಹೊಂದಿರುವುದಿಲ್ಲ' ಎಂದು ಅಭಿಪ್ರಾಯಪಟ್ಟಿದೆ.

ಮೃತರ ಕುಟುಂಬವು ಪಡೆದ ಗುಂಪು ವಿಮಾ ಮೊತ್ತವನ್ನು ಗಮನದಲ್ಲಿಟ್ಟುಕೊಂಡು ಪರಿಹಾರ ಕಡಿಮೆ ಮಾಡಿ ಬೆಂಗಳೂರಿನ ಮೋಟಾರು ಅಪಘಾತ ಕ್ಲೇಮುಗಳ ನ್ಯಾಯಮಂಡಳಿ ಆದೇಶ ಹೊರಡಿಸಿತ್ತು. ಈ ಆದೇಶವನ್ನು ಹೈಕೋರ್ಟ್ ರದ್ದುಗೊಳಿಸಿತ್ತು.

ಚಿತ್ತೂರಿನಲ್ಲಿ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದು ಪಿ.ವಿಶ್ವೇಶ್ವರ್ ಎಂಬವರು 2018ರಲ್ಲಿ ಮೃತಪಟ್ಟಿದ್ದರು. 34 ವರ್ಷದ ಅವರು ಬೆಂಗಳೂರಿನ ಆಕ್ಸೆಂಚರ್‌ನಲ್ಲಿ ಉದ್ಯೋಗಿಯಾಗಿದ್ದರು. ಆಗ ಅವರ ವೇತನ ₹70 ಸಾವಿರ ಇತ್ತು. ಕೆಎಸ್‌ಆರ್‌ಟಿಸಿ ₹1 ಕೋಟಿ ಪರಿಹಾರ ನೀಡಬೇಕು ಎಂದು ಕೋರಿ ಕುಟುಂಬದವರು ನ್ಯಾಯಮಂಡಳಿ ಮೆಟ್ಟಿಲೇರಿದ್ದರು. ನ್ಯಾಯಮಂಡಳಿಯು ₹69 ಲಕ್ಷ ಪರಿಹಾರ ನಿಗದಿಪಡಿಸಿತ್ತು. ಆದರೆ, ಕುಟುಂಬದವರು ಪಡೆದ ಗುಂಪು ವಿಮಾ ಮೊತ್ತ ₹35.48 ಲಕ್ಷವನ್ನು ಕಡಿತಗೊಳಿಸಿ ₹33.59 ಲಕ್ಷವನ್ನು ವಾರ್ಷಿಕ ಶೇ 6 ಬಡ್ಡಿಯೊಂದಿಗೆ ನೀಡಲು ಆದೇಶಿಸಿತ್ತು.

ಮತ್ತೊಂದು ಪ್ರಕರಣದಲ್ಲಿ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದು ಖಾಸಗಿ ಕಂಪನಿ ಉದ್ಯೋಗಿ ಸೆಲೆಸ್ಟಿನ್ ಡಿಸೋಜ ಮೃತಪಟ್ಟಿದ್ದರು. ಆಗ ಅವರಿಗೆ ತಿಂಗಳಿಗೆ ₹47 ಸಾವಿರ ವೇತನ ಇತ್ತು. ನ್ಯಾಯಮಂಡಳಿಯು ₹63.04 ಲಕ್ಷ ಪರಿಹಾರ ನಿಗದಿಪಡಿಸಿತ್ತು. ಆದರೆ, ಉದ್ಯೋಗದಾತರ ಗುಂಪು ವಿಮಾ ಯೋಜನೆಯಲ್ಲಿ ಕುಟುಂಬದವರು ಪಡೆದ ₹10 ಲಕ್ಷವನ್ನು ಕಡಿತಗೊಳಿಸಿತ್ತು.

ರೈಲ್ವೆ ಇಲಾಖೆ ಪರೀಕ್ಷೆ ಮುಂದೂಡಿಕೆ

ಕರವೇ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈಲ್ವೆ ವ್ಯವಸ್ಥಾಪಕ ಹುದ್ದೆಗೆ ಬಡ್ತಿ ನೀಡುವುದಕ್ಕಾಗಿ ಹಿಂದಿ ಮತ್ತು ಇಂಗ್ಲಿಷ್‌ನಲ್ಲಿ ಪರೀಕ್ಷೆ ನಡೆಸುವುದಕ್ಕೆ ತೀವ್ರ ವಿರೋಧ ವ್ಯಕ್ತವಾದ ಬೆನ್ನಲ್ಲೇ ಹುಬ್ಬಳ್ಳಿ, ಬೆಂಗಳೂರು ಮತ್ತು ಮೈಸೂರು ಕೇಂದ್ರಗಳಲ್ಲಿ ಮಂಗಳವಾರ ನಡೆಯಬೇಕಿದ್ದ ಪರೀಕ್ಷೆಗಳನ್ನು ರೈಲ್ವೆ ಇಲಾಖೆ ಮುಂದೂಡಿದೆ.

ಕನ್ನಡದಲ್ಲಿ ಪರೀಕ್ಷೆ ಬರೆಯಲು ಅವಕಾಶ ನೀಡದೆ ಇರುವುದನ್ನು ವಿರೋಧಿಸಿ ಬೆಂಗಳೂರು ನಗರ ಸೇರಿದಂತೆ ರಾಜ್ಯದ ವಿವಿಧೆಡೆ ಕರ್ನಾಟಕ ರಕ್ಷಣಾ ವೇದಿಕೆ ನೇತೃತ್ವದಲ್ಲಿ ಮಂಗಳವಾರ ಪ್ರತಿಭಟನೆ ನಡೆಯಿತು.

ಹುಬ್ಬಳ್ಳಿ ಮತ್ತು ಮೈಸೂರಿನಲ್ಲಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ಹುಬ್ಬಳ್ಳಿ ನೈರುತ್ಯ ರೈಲ್ವೆ ಪ್ರಧಾನ ಕಚೇರಿ ಎದುರು ಕಾರ್ಯಕರ್ತರು ಪರೀಕ್ಷೆಗಳನ್ನು ರದ್ದುಪಡಿಸುವಂತೆ ಆಗ್ರಹಿಸಿದರು. ಬಳಿಕ ಪರೀಕ್ಷಾ ಕೇಂದ್ರಗಳಿಗೆ ನುಗ್ಗಲು ಮುಂದಾದರು.

ಈ ಸಂದರ್ಭದಲ್ಲಿ ಮುಖಂಡರೊಂದಿಗೆ ಮಾತುಕತೆ ನಡೆಸಿದ ರೈಲ್ವೆ ಅಧಿಕಾರಿಗಳು, ಪರೀಕ್ಷೆಗಳನ್ನು ಮುಂದೂಡಿರುವುದಾಗಿ ಘೋಷಿಸಿದರು. ಪರೀಕ್ಷೆಗೆ ಬಂದಿದ್ದ ಪರೀಕ್ಷಾರ್ಥಿಗಳನ್ನು ಹೊರಗೆ ಕಳುಹಿಸಲಾಯಿತು.

ಮೈಸೂರಿನಲ್ಲಿ ಪರೀಕ್ಷಾ ಕೇಂದ್ರಕ್ಕೆ ನುಗ್ಗಲು ಯತ್ನಿಸಿದ ಜಿಲ್ಲಾ ಘಟಕದ ಅಧ್ಯಕ್ಷ ಪ್ರವೀಣ್ ಕುಮಾರ್ ಹಾಗೂ ಪ್ರತಿಭಟನಕಾರರನ್ನು ಪೊಲೀಸರು ವಶಕ್ಕೆ ಪಡೆದು ಕರೆದೊಯ್ದರು.

'ಮಾರ್ಚ್ 17 ಮತ್ತು18ರಂದು ನಡೆಯಬೇಕಿದ್ದ ಇಲಾಖಾ ಬಡ್ತಿ ಪರೀಕ್ಷೆಗಳನ್ನು ಮುಂದೂಡಲಾಗಿದೆ. ಹೊಸ ದಿನಾಂಕಗಳನ್ನು ನಂತರ ತಿಳಿಸಲಾಗುವುದು' ಎಂದು ನೈruತ್ಯ ರೈಲ್ವೆ ಪ್ರಕಟಣೆ ತಿಳಿಸಿದೆ.

'ಇಲಾಖಾ ಪರೀಕ್ಷೆಗಳಲ್ಲಿ ಕನ್ನಡ ಭಾಷೆ ವಿಷಯವನ್ನು ಸೇರಿಸುವ ಸಂಬಂಧ ಚರ್ಚೆ ನಡೆಸಿ, ಈ ಬಗ್ಗೆ ಅಂತಿಮ ನಿರ್ಧಾರವನ್ನು ತೆಗೆದುಕೊಳ್ಳಲಾಗುವುದು' ಎಂದು ಹೇಳಿದೆ.

'ಕನ್ನಡದಲ್ಲಿ ಪರೀಕ್ಷೆಗೆ ಒತ್ತಾಯಿಸಿ'

ಬೆಂಗಳೂರು: 'ರೈಲ್ವೆ ಇಲಾಖೆಯು ವಿವಿಧ ಹುದ್ದೆಗಳ ನೇಮಕಾತಿ ಮತ್ತು ಪದೋನ್ನತಿಗೆ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಕನ್ನಡ ಸೇರಿದಂತೆ ಎಲ್ಲ ಪ್ರಾದೇಶಿಕ ಭಾಷೆಗಳಲ್ಲಿ ನಡೆಸುವಂತೆ ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಬೇಕು' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ರಾಜ್ಯವನ್ನು ಪ್ರತಿನಿಧಿಸುವ ಸಂಸದರಿಗೆ ಪತ್ರ ಬರೆದಿದ್ದಾರೆ.

'ಕನ್ನಡ ಭಾಷೆಯಲ್ಲಿ ಪರೀಕ್ಷೆ ಬರೆಯಲು ಅವಕಾಶ ಇಲ್ಲದಿರುವುದರಿಂದ, ಕನ್ನಡಾಭಿಮಾನಿಗಳಲ್ಲಿ ಹಾಗೂ ಅಭ್ಯರ್ಥಿಗಳಲ್ಲಿ ತೀವ್ರ ಅಸಮಾಧಾನ ಉಂಟಾಗಿದೆ. ರಾಜ್ಯ ಭಾಷೆಯಲ್ಲಿ ಪರೀಕ್ಷೆ ಬರೆಯುವುದು ಅಭ್ಯರ್ಥಿಗಳ ಸಾಂವಿಧಾನಿಕ ಹಕ್ಕಾಗಿದ್ದು, ಇದು ಸಮಾನ ಅವಕಾಶಗಳ ಸಿದ್ಧಾಂತಕ್ಕೆ ಅನುಗುಣವಾಗಿದೆ' ಎಂದಿದ್ದಾರೆ.

'ಪ್ರತಿಭಟನೆಯ ಕಾರಣಕ್ಕೆ ಇಲಾಖೆಯು ಪರೀಕ್ಷೆಗಳನ್ನು ಅನಿರ್ದಿಷ್ಟಾವಧಿಗೆ ಮುಂದೂಡಿರುವುದು ಕನ್ನಡಿಗರ ತಾತ್ಕಾಲಿಕ ಗೆಲುವಾದರೂ ಇದನ್ನು ಶಾಶ್ವತ ಪರಿಹಾರವೆಂದು ಭಾವಿಸಲು ಸಾಧ್ಯವಿಲ್ಲ. ರಾಜ್ಯದ ಎಲ್ಲ ಸಂಸದರು ಒಗ್ಗಟ್ಟಾಗಿ ಈ ವಿಷಯವನ್ನು ಸಂಸತ್ತಿನಲ್ಲಿ ಪ್ರಸ್ತಾಪಿಸಬೇಕು' ಎಂದು ಆಗ್ರಹಿಸಿದ್ದಾರೆ.

'ರೈಲ್ವೆ ಇಲಾಖೆಯ ಪರೀಕ್ಷೆಗಳನ್ನು ಕನ್ನಡ ಭಾಷೆಯಲ್ಲಿಯೂ ನಡೆಸಲು, ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಎಲ್ಲ ಸಂಸದರು ಒತ್ತಾಯಿಸಬೇಕು. ಕನ್ನಡಿಗರ ಭಾಷಾ ಹಕ್ಕುಗಳ ದೃಷ್ಟಿಯಿಂದ ಈ ಕ್ರಮ ಅತ್ಯಂತ ಮಹತ್ವದ್ದಾಗಿದೆ' ಎಂದು ಅಭಿಪ್ರಾಯಪಟ್ಟಿದ್ದಾರೆ.

ಸಂಭ್ರಮ ಮೂಡಿಸಿದ ಬೇಸಿಗೆ ಮಳೆ

ಒಂದನೇ ಪುಟದಿಂದ...

ರಂಜಾನ್ ಅಂಗವಾಗಿ ವೀರಭದ್ರ ನಗರದಲ್ಲಿ ಇಫ್ತಾರ್‌ಕೂಟಕ್ಕೆ ನಿರ್ಮಿಸಿದ್ದ ಶಾಮಿಯಾನ ಹಾಗೂ ಬಟ್ಟೆ ಮಳಿಗೆಗಳು ಮಳೆ–ಗಾಳಿಯಿಂದ ಮುರಿದುಬಿದ್ದವು.

ವಿಜಯಪುರ, ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿ, ಗದಗ ಜಿಲ್ಲೆಯ ರೋಣ, ಬಳ್ಳಾರಿ ಜಿಲ್ಲೆಯ ಸಿರುಗುಪ್ಪ, ಕುರುಗೋಡು ಮತ್ತು ಬಾಗಲಕೋಟೆ ತಾಲ್ಲೂಕು, ವಿಜಯನಗರ ಜಿಲ್ಲೆಯ ಹೊಸಪೇಟೆ ನಗರ, ಹಂಪಿ, ಕಮಲಾಪುರ ಭಾಗದಲ್ಲಿ ಮಳೆ ಸುರಿಯಿತು.

'ಇದು ಬೇಸಿಗೆ ಮಳೆ. ರೈತರಿಗೆ ಕ್ರೆಸ್ಟ್‌ಗೇಟ್ ಕುರಿತು ಆತಂಕಬೇಡ. ಸದ್ಯ 18 ಗೇಟ್‌ಗಳ ಅಳವಡಿಕೆ ಮುಗಿದಿದೆ' ಎಂದು ತುಂಗಭದ್ರಾ ಮಂಡಳಿಯ ಮೂಲಗಳು ತಿಳಿಸಿವೆ.

ಬೆಳೆಗೆ ಹಾನಿ: ಚಾಮರಾಜನಗರ ಜಿಲ್ಲೆಯಾದ್ಯಂತ ಮಂಗಳವಾರ ಆಲಿಕಲ್ಲು ಸಹಿತ ಮಳೆ ಸುರಿದಿದ್ದು, ತೋಟಗಾರಿಕಾ ಬೆಳೆಗಳಿಗೆ ಹಾನಿಯಾಗಿದೆ. ಚಾಮರಾಜನಗರ, ಯಳಂದೂರು ಹಾಗೂ ಕೊಳ್ಳೇಗಾಲ ತಾಲ್ಲೂಕಿನ ಹಲವು ಗ್ರಾಮಗಳಲ್ಲಿ ಆಲಿಕಲ್ಲು ಸಹಿತ ಮಳೆಯಾಗಿದೆ.

ಮಾವು ಕಾಯಿಕಟ್ಟುವ ಹಂತದಲ್ಲಿ ಆಲಿಕಲ್ಲು ಬಿದ್ದಿದೆ. ಇಳುವರಿ ಕುಸಿತ ಭೀತಿ ಎದುರಾಗಿದೆ. ಟೊಮೆಟೊ, ಕಲ್ಲಂಗಡಿ, ಕೋಸು, ಬೀನ್ಸ್ ಮೊದಲಾದ ಬೆಳೆಗೆ ಹಾನಿಯಾಗಿದೆ.

ಬೀದರ್ ನಗರ ಸೇರಿದಂತೆ ಸುತ್ತಮುತ್ತಲಿನ ಭಾಗಗಳಲ್ಲಿ ಮಂಗಳವಾರ ರಾತ್ರಿ ಆಲಿಕಲ್ಲು ಮಳೆಯಾಗಿದೆ. ಸಂಜೆ 7.15ಕ್ಕೆ ರಾತ್ರಿ ಆರಂಭವಾಗಿ ಬಹುಹೊತ್ತಿನವರೆಗೆ ಮಳೆಯಾಯಿತು.

ಕೊಪ್ಪಳ ಜಿಲ್ಲೆ ಕುಷ್ಟಗಿಯಲ್ಲಿ ಆಲಿಕಲ್ಲು ಸಹಿತ ಮಳೆ ಸುರಿದರೆ, ಕೊಪ್ಪಳ, ಕುಕನೂರಿನಲ್ಲಿ ಜಿಟಿಜಿಟಿ ಬಂದಿದೆ. ರಾಯಚೂರು ಜಿಲ್ಲೆ ಕವಿತಾಳದಲ್ಲಿ ಆಲಿಕಲ್ಲು ಸಹಿತ ಮಳೆಯಾಗಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕಿನಾದ್ಯಂತ ಮಂಗಳವಾರ ಸುಮಾರು 20 ನಿಮಿಷ ಮಳೆಯಾಯಿತು.

ಗುಡುಗು, ಮಿಂಚು, ಗಾಳಿ ಆರ್ಭಟ ಜೋರಾಗಿತ್ತು. ಯುಗಾದಿ ನಂತರ ರೇವತಿ ಮಳೆ ಆರಂಭವಾದರೆ ಉತ್ತಮ ಮುಂಗಾರಿನ ನಿರೀಕ್ಷೆ ಇರಲಿದೆ ಎನ್ನುವ ನಂಬಿಕೆ ರೈತರದ್ದು.

ಸಿಡಿಲು ಬಡಿದು ರೈತ ಸಾವು: ಗದಗ ಜಿಲ್ಲೆಯ ರೋಣ ತಾಲ್ಲೂಕಿನ ಹೊಳೆಆಲೂರು ಬಳಿಯ ಮೆಣಸಗಿ ಗ್ರಾಮ ವ್ಯಾಪ್ತಿಯ ಬೆಣ್ಣೆಹಳ್ಳದ ಬಳಿ ಮಂಗಳವಾರ ಸಂಜೆ ಸಿಡಿಲು ಬಡಿದು ರೈತ ನಿಂಗಪ್ಪ ಅಮಾತ್ಯ (58) ಮೃತಪಟ್ಟಿದ್ದಾರೆ.

ಆರ್‌ಸಿಬಿಗೆ ಬೌಲಿಂಗ್ ವಿಭಾಗದ ಚಿಂತೆ

ರಜತ್ ಪಡೆಗೆ ಪ್ರಶಸ್ತಿ ಉಳಿಸಿಕೊಳ್ಳುವ ಗುರಿ

● ಐಪಿಎಲ್ ಉದ್ಘಾಟನೆಗೆ 10 ದಿನ ಬಾಕಿ

• ಸಿದ್ದಿ ಕಿರಣ್

ಬೆಂಗಳೂರು: ಹೋದ ಜೂನ್‌ನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಮೊದಲ ಬಾರಿ ಐಪಿಎಲ್ ಗೆದ್ದ ಮರುದಿನವೇ ಕಾಲ್ತುಳಿತದ ದುರಂತ ನಡೆದಿತ್ತು. ಆ ಕಹಿ ಮರೆಯುವ ಸವಾಲಿನ ಜೊತೆಗೆ ಈಗ ಫ್ರಾಂಚೈಸಿಯ ಮುಂದಿನ ಮಾಲೀಕತ್ವದ ಭವಿಷ್ಯವೂ ನಿರ್ಧಾರವಾಗುವ ಹಂತದಲ್ಲಿದೆ. ಇದೆಲ್ಲದರ ನಡುವೆ ಆರ್‌ಸಿಬಿ ಪ್ರಶಸ್ತಿ ಉಳಿಸಿಕೊಳ್ಳುವ ಅಭಿಯಾನಕ್ಕೆ ಸಜ್ಜಾಗಿದೆ.

ಇದೇ ತಿಂಗಳ 28ರಂದು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುವ 19ನೇ ಆವೃತ್ತಿಯ ಐಪಿಎಲ್ ಉದ್ಘಾಟನಾ ಪಂದ್ಯದಲ್ಲಿ ತಂಡವು, ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಎದುರಿಸಲಿದೆ.

17 ವರ್ಷಗಳ ಬಳಿಕ ಅಹಮದಾಬಾದಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ರಜತ್ ಪಾಟೀದಾರ್ ನೇತೃತ್ವದ ತಂಡವು ಟ್ರೋಫಿ ಗೆದ್ದಾಗ ಮಧ್ಯರಾತ್ರಿ ಸಮೀಪಿಸಿದ್ದು, ಅಭಿಮಾನಿಗಳ ಸಂಭ್ರಮ ಮುಗಿಲುಮುಟ್ಟಿತು. ದಿಗ್ಗಜ ಆಟಗಾರ ವಿರಾಟ್ ಕೊಹ್ಲಿ ಸೇರಿದಂತೆ ಹಲವು ಆಟಗಾರರು ಅಂದು ಭಾವೋದ್ವೇಗಕ್ಕೆ ಒಳಗಾಗಿದ್ದರು. ಮರುದಿನ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ವಿಜಯೋತ್ಸವದ ವೇಳೆ ಕಾಲ್ತುಳಿತ ಸಂಭವಿಸಿ 11 ಮಂದಿ ಅಭಿಮಾನಿಗಳು ಸಾವಿಗೀಡಾಗಿದ್ದರು. ವಿಜಯದ ಸಂಭ್ರಮ ಒಂದೇ ದಿನಕ್ಕೆ ಕಳೆಗುಂದಿತು.

ಈ ಮಧ್ಯೆ, ಆರ್‌ಸಿಬಿಯ ಮಾಲೀಕತ್ವ ವಹಿಸಿರುವ ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್ (ಡಿಯಾಜಿಯೊ ಅಂಗಸಂಸ್ಥೆ) ನವೆಂಬರ್‌ನಲ್ಲಿ ಫ್ರಾಂಚೈಸಿಯ ಮಾರಾಟಕ್ಕೆ ಆಸಕ್ತಿ ತೋರಿತು. ಈ ತಿಂಗಳ ಕೊನೆಯಲ್ಲಿ ಹೊಸ ಮಾಲೀಕತ್ವ ಅಂತಿಮಗೊಳ್ಳುವ ನಿರೀಕ್ಷೆಯಿದೆ.

ಇದರ ನಡುವೆ ಆರ್‌ಸಿಬಿ ಕಿರೀಟ ಉಳಿಸಿಕೊಳ್ಳುವ ಗುರಿಯಲ್ಲಿದೆ. ಪ್ರಮುಖ ಆಟಗಾರರು ತಂಡದಲ್ಲಿ ಉಳಿದುಕೊಂಡಿದ್ದಾರೆ. ಪ್ರಧಾನ ಆಕರ್ಷಣೆ ವಿರಾಟ್ ಕೊಹ್ಲಿ, ಉತ್ಸಾಹಿ ನಾಯಕ ರಜತ್ ಪಾಟೀದಾರ್, ಇಂಗ್ಲೆಂಡ್‌ನ ತಾರೆ ಫಿಲ್ ಸಾಲ್ಟ್ ಜೊತೆ ಅತ್ಯುತ್ತಮ ಲಯದಲ್ಲಿರುವ ಸ್ಥಳೀಯ ಯುವ ಬ್ಯಾಟರ್ ದೇವದತ್ತ ಪಡಿಕ್ಕಲ್ ತಂಡದ ಬ್ಯಾಟಿಂಗ್ ಶಕ್ತಿಯಾಗಿದ್ದಾರೆ.

ಫ್ರಾಂಚೈಸಿಯು ಈ ಬಾರಿ ಆಲ್‌ರೌಂಡರ್ ವೆಂಕಟೇಶ ಅಯ್ಯರ್ ಮತ್ತು ಇಂಗ್ಲೆಂಡ್‌ನ ಎಡಗೈ ಆಟಗಾರ ಜೇಕಬ್ ಬೆಥೆಲ್ ಅವರನ್ನೂ ಸೆಳೆದಿದೆ. ಕಳೆದ ಋತುವಿನಲ್ಲಿ ಕೆಕೆಆರ್ ತಂಡದಲ್ಲಿ ವಿಫಲರಾಗಿದ್ದ ಅಯ್ಯರ್ ಈ ಬಾರಿ ಅದನ್ನು ಸರಿದೂಗಿಸಲು ಕಾತರರಾಗಿದ್ದಾರೆ. ಬೆಥೆಲ್ ತಮ್ಮ ಸಾಮರ್ಥ್ಯ ಏನೆಂಬುದನ್ನು ಇತ್ತೀಚಿನ ವಿಶ್ವಕಪ್‌ನಲ್ಲೂ ತೋರಿದ್ದಾರೆ. ಅವರು ಪಂದ್ಯಕ್ಕೆ ತಿರುವು ನೀಡಬಲ್ಲವರು. ಒಟ್ಟಿನಲ್ಲಿ ತಂಡವು ಅನುಭವಿ ಮತ್ತು ಯುವಶಕ್ತಿಯ ಹದವಾದ ಮಿಶ್ರಣವಾಗಿದೆ.

ಆದರೆ ಸ್ವಲ್ಪ ಕಳವಳಕ್ಕೆ ಕಾರಣವಾಗಿರುವ ಅಂಶವೇನಾದರೂ ಇದ್ದರೆ ಅದು ಬೌಲಿಂಗ್ ವಿಭಾಗದ್ದು. ಗಾಯದಿಂದ ಚೇತರಿಸಿಕೊಳ್ಳುತ್ತಿರುವ ಪ್ರಮುಖ ವೇಗದ ಬೌಲರ್ ಜೋಶ್ ಹ್ಯಾಜಲ್‌ವುಡ್ ಆರಂಭದ ಕೆಲವು ಪಂದ್ಯಗಳನ್ನು ಕಳೆದುಕೊಳ್ಳಲಿದ್ದಾರೆ. ವರ್ಷದಿಂದ ವೈಯಕ್ತಿಕ ಜೀವನದ ತುಮುಲಗಳಲ್ಲಿ ಸಿಲುಕಿ ಕಾನೂನು ಹೋರಾಟದಲ್ಲಿರುವ ಯಶ್ ದಯಾಳ್ ಮನೋಬಲ ಯಾವ ಮಟ್ಟದಲ್ಲಿದೆ ಎಂದು ಹೇಳುವುದು ಕಷ್ಟ. ಹೀಗಾಗಿ ಭುವನೇಶ್ವರ ಕುಮಾರ್ ಮತ್ತು ಜೇಕಬ್ ಡಫಿ ಮೇಲೆ ಹೆಚ್ಚಿನ ವೇಗದ ದಾಳಿಯ ಹೊಣೆಯಿದೆ.

ಆರ್‌ಸಿಬಿ ತಂಡವು ಚಾಂಪಿಯನ್ ಕಿರೀಟ ಉಳಿಸಿಕೊಳ್ಳಬೇಕಾದರೆ ಬ್ಯಾಟಿಂಗ್ ಪಡೆಯ ಪಾತ್ರ ನಿರ್ಣಾಯಕ. ಬೌಲಿಂಗ್ ವಿಭಾಗವು ಹಿಂದೆಯೂ ಅದರ ಶಕ್ತಿಯಾಗಿರಲಿಲ್ಲ.



2025ರಲ್ಲಿ ಗೆದ್ದ ಟ್ರೋಫಿಯೊಂದಿಗೆ ಆರ್‌ಸಿಬಿ ತಂಡದ ನಾಯಕ ರಜತ್ ಪಾಟೀದಾರ್ (ಬಲ) ಹಾಗೂ ವಿರಾಟ್ ಕೊಹ್ಲಿ ಪಿಟಿಐ ಸಂಗ್ರಹ ಚಿತ್ರ

ಆರ್‌ಸಿಬಿ ತಂಡ

ರಜತ್ ಪಾಟೀದಾರ್ (ನಾಯಕ), ದೇವದತ್ತ ಪಡಿಕ್ಕಲ್, ವಿರಾಟ್ ಕೊಹ್ಲಿ, ಫಿಲ್ ಸಾಲ್ಟ್, ಜಿತೇಶ್ ಶರ್ಮಾ, ಜೋರ್ಡಾನ್ ಕಾಕ್ಸ್ (ಮೂವರೂ ವಿಕೆಟ್ ಕೀಪರ್ಸ್), ಕೃಣಾಲ್ ಪಾಂಡ್ಯ, ಸ್ವಪ್ನಿಲ್ ಸಿಂಗ್, ಟಿಮ್ ಡೇವಿಡ್, ರೊಮಾರಿಯೊ ಶೆಫರ್ಡ್, ಜೇಕಬ್ ಬೆಥೆಲ್, ವೆಂಕಟೇಶ್ ಅಯ್ಯರ್, ಸಾತ್ವಿಕ್ ದೇಶ್ವಾಲ್, ಮಂಗೇಶ್ ಯಾದವ್, ವಿಕಿ ಒಟ್ಸ್ವಾಲ್, ವಿಹಾನ್ ಮಲ್ಹೋತ್ರ, ಕನಿಷ್ಕ್ ಚೌಹಾನ್, ಜೋಶ್ ಹ್ಯಾಜಲ್‌ವುಡ್, ರಸಿಕ್ ಧಾರ್, ಸುಯಾಶ್ ಶರ್ಮಾ, ಭುವನೇಶ್ವರ ಕುಮಾರ್, ನುವಾನ್ ತುಷಾರ, ಅಭಿನಂದನ್ ಸಿಂಗ್, ಜೇಕಬ್ ಡಫಿ, ಯಶ್ ದಯಾಳ್.

ಐಪಿಎಲ್‌ಗೆ ಹರ್ಷಿತ್ ರಾಣಾ ಅಲಭ್ಯ?

ಕೋಲ್ಕತ್ತ (ಪಿಟಿಐ): ಮೊಣಕಾಲು ಶಸ್ತ್ರಚಿಕಿತ್ಸೆಗೆ ಒಳಗಾಗಿರುವ ಕೋಲ್ಕತ್ತ ನೈಟ್ ರೈಡರ್ಸ್ ತಂಡದ ವೇಗಿ ಹರ್ಷಿತ್ ರಾಣಾ ಅವರು ಮುಂಬರುವ ಐಪಿಎಲ್‌ನ ಆರಂಭಿಕ ಪಂದ್ಯಗಳನ್ನು ಕಳೆದುಕೊಳ್ಳುವ ಸಾಧ್ಯತೆಯಿದೆ.

ಫೆಬ್ರುವರಿಯಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧದ ಟಿ20 ವಿಶ್ವಕಪ್ ಅಭ್ಯಾಸ ಪಂದ್ಯದ ವೇಳೆ ಗಾಯಗೊಂಡಿದ್ದ ರಾಣಾ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು.

98 ನೇ ಅಕಾಡೆಮಿ ಪ್ರಶಸ್ತಿಗಳು

ಖುಷಿಯ ಅಲೆಯಲ್ಲಿ ನಾಯಕ ಸೂರ್ಯಕುಮಾರ್

ಓದಿನಲ್ಲಿ ಸಿಗದ ಅಂಕ ಕ್ರಿಕೆಟ್‌ನಲ್ಲಿ ಸಿಕ್ತು

ನವದೆಹಲಿ (ಪಿಟಿಐ): ಶೈಕ್ಷಣಿಕವಾಗಿ ಸಾಧಿಸಲಾಗದ್ದನ್ನು ಸೂರ್ಯಕುಮಾರ್ ಯಾದವ್ ಕ್ರಿಕೆಟ್ ಮೈದಾನದಲ್ಲಿ ಸಾಧಿಸಿದ್ದಾರೆ. ಕೆಲವೇ ದಿನಗಳ ಹಿಂದೆ ಟಿ20 ವಿಶ್ವಕಪ್ ಗೆದ್ದುಕೊಂಡ ಸಂಭ್ರಮದಲ್ಲಿ ತೇಲಾಡುತ್ತಿರುವ ಸೂರ್ಯ, ನಾಯಕನಾಗಿ ಈ ಮಾದರಿಯಲ್ಲಿ ಶೇ 80 ರಷ್ಟು ವಿಜಯದ ದಾಖಲೆ ಸಾಧಿಸಿದ್ದಾರೆ.

ಶೈಕ್ಷಣಿಕವಾಗಿ ಸಾಧಿಸಲಾಗದ್ದನ್ನು ಆಟದಲ್ಲಿ ಸಾಧಿಸಿದ್ದರಿಂದ ಮುಂಬೈಕರ್ ಸಂತಸದಲ್ಲಿದ್ದಾರೆ. 'ಶಾಲಾ ಕಾಲೇಜು ಅಧ್ಯಯನ ಮಾಡುತ್ತಿದ್ದ ಸಮಯದಲ್ಲಿ ಶೇ 80 ಅಂಕ ಗಳಿಸಲಾಗುತ್ತಿರಲಿಲ್ಲ. ಇಂದು ಕ್ರಿಕೆಟ್‌ನಲ್ಲಿ ಸಾಧಿಸುತ್ತಿದ್ದೇನೆ' ಎಂದು ಅವರು ಹೇಳಿದ್ದಾರೆ.

2024ರಲ್ಲಿ ಅವರು ಭಾರತ ಟಿ20 ತಂಡದ ನಾಯಕರಾಗಿ ನೇಮಕಗೊಂಡ ನಂತರ ಅವರು 52 ಪಂದ್ಯಗಳನ್ನು ಆಡಿದ್ದಾರೆ. ಅದರಲ್ಲಿ ಭಾರತ 42 ಪಂದ್ಯಗಳನ್ನು ಗೆದ್ದುಕೊಂಡಿದೆ. 'ಅಂದಿನ ದಿನಗಳಲ್ಲಿ (ಶಾಲೆ ಅಥವಾ ಕಾಲೇಜು) ನಾನು ಎಂದೂ ಶೇ 50–60ಕ್ಕಿಂತ ಮೇಲೆ ಹೋಗಲಿಲ್ಲ. ನಿಜ, ಈಗಿನ ಸಾಧನೆಯಿಂದ ಅತೀವ ಸಂತಸವಾಗಿದೆ' ಎಂದಿದ್ದಾರೆ.

ಸೂರ್ಯ ಅವರ ತಂದೆ ಅಶೋಕ್ ಕುಮಾರ್ ಯಾದವ್ ಅವರು ಭಾಭಾ ಅಣುಶಕ್ತಿ ಸಂಶೋಧನಾ ಕೇಂದ್ರದಲ್ಲಿ ಎಲೆಕ್ಟ್ರಿಕಲ್ ಎಂಜಿನಿಯರ್ ಆಗಿದ್ದಾರೆ.

'ಶೈಕ್ಷಣಿಕವಾಗಿ ನಾನು ಉತ್ತಮ ಸಾಧನೆ ಮಾಡಲು ನನ್ನ ಕುಟುಂಬ ಎಲ್ಲಾ ಪ್ರಯತ್ನ ಮಾಡಿತು. ಆದರೆ ನನಗೆ ಓದಿನಲ್ಲಿ ಹೆಚ್ಚು ಆಸಕ್ತಿಯಿಲ್ಲ ಎಂಬುದು ಸ್ವಲ್ಪ ಕಾಲದಲ್ಲೇ ಅವರಿಗೆ ಮನವರಿಕೆಯಾಯಿತು. ಈ ಹುಡುಗ ನಮ್ಮ ಕೈಗೆ (ನಿಯಂತ್ರಣಕ್ಕೆ) ಸಿಗುವುದಿಲ್ಲ ಎಂಬ ನಿರ್ಧಾರಕ್ಕೆ ಬಂದಿದ್ದರು' ಎಂದು ಅವರು ನೆನಪಿಸಿಕೊಂಡರು. ಆದರೆ ಕ್ರಿಕೆಟ್‌ನಲ್ಲಿ ಮಹತ್ವಾಕಾಂಕ್ಷೆಗಳನ್ನು ಈಡೇರಿಸಲು ಕುಟುಂಬ ಬೆನ್ನಿಗೆ ನಿಂತಿತು.

'ಕ್ರೀಡೆಯಲ್ಲಿ ಅವರ ಬೆಂಬಲ ನನಗೆ ಸದಾ ಇತ್ತು. ನಾನು ಖುಷಿಯಿಂದ ತೊಡಗಲು ನೆರವಾದರು. ಹೋಗು, ಆಡು. ಅಲ್ಲಿ ಏನೂ ಆಗದಿದ್ದರೆ ಮುಂದಿನದರ ಬಗ್ಗೆ ನಾವು ನೋಡಿಕೊಳ್ಳುತ್ತೇವೆ' ಎಂದು ಧೈರ್ಯ ನೀಡಿದ್ದನ್ನು ಅವರು ಸ್ಮರಿಸಿಕೊಂಡರು. ಆದರೆ, ಅಂಥ ಸಾಧ್ಯತೆಗೆ ಚೆಂಬೂರಿನ ಆಟಗಾರ ಅವಕಾಶ ನೀಡಲಿಲ್ಲ.



ಪತ್ನಿ ದೇವಿಕಾ ಶೆಟ್ಟಿ ಜೊತೆಗೆ ಸೂರ್ಯಕುಮಾರ್ ಯಾದವ್ ಪಿಟಿಐ ಚಿತ್ರ

ಪತ್ನಿಯನ್ನು ಪ್ರಶಂಸಿಸಿದ ಸೂರ್ಯ

ಪತ್ನಿ ದೇವಿಶಾ ಶೆಟ್ಟಿ ಜೊತೆಗಿನ ಸಂಭಾಷಣೆಯೊಂದನ್ನು ನೆನಪಿಸಿಕೊಂಡಿರುವ ಸೂರ್ಯಕುಮಾರ್ ಯಾದವ್ ಅದು ತಮ್ಮ ಕ್ರಿಕೆಟ್ ಜೀವನದ ಏಳಿಗೆಗೆ ಹೇಗೆ ಪ್ರೇರಣೆಯಾಯಿತು ಎಂಬುದನ್ನೂ ಮೆಲುಕು ಹಾಕಿದ್ದಾರೆ.

'2016ರಲ್ಲಿ ನನ್ನ ಮದುವೆಯಾಗಿತ್ತು. ನಾನು ಆಗ ಕೋಲ್ಕತ್ತ ನೈಟ್‌ರೈಡರ್ಸ್‌ಗೆ ಆಡುತ್ತಿದ್ದೆ. ಎಲ್ಲವೂ ಚೆನ್ನಾಗಿಯೇ ಸಾಗಿತ್ತು. ಬಳಿಕ ಮುಂಬೈ ಇಂಡಿಯನ್ಸ್‌ಗೆ ಸೇರ್ಪಡೆಯಾದೆ' ಎಂದಿದ್ದಾರೆ.

'ಅದು 2018ರ ಸುಮಾರು. ದೇವಿಶಾ ನನಗೆ ಕೇಳಿದಳು– ನಿಮ್ಮ ಜೊತೆ ವಯೋವರ್ಗ ಟೂರ್ನಿಗಳಲ್ಲಿ ಆಡಿದವರಲ್ಲಿ ಹೆಚ್ಚಿನವರು ಈಗ ಭಾರತ ತಂಡದಲ್ಲಿದ್ದಾರೆ. ನಿಮ್ಮ ಮನಸ್ಸಲ್ಲಿ ಏನಿದೆ?'. ಆ ಪ್ರಶ್ನೆಗೆ 'ನನಗೂ ಭಾರತ ತಂಡಕ್ಕೆ ಆಡಬೇಕೆಂಬ ಆಸೆಯಿದೆ' ಎಂದಿದ್ದೆ. ಅದಕ್ಕೆ ಯಾವ ರೀತಿಯ ಪ್ಲಾನ್ ಮಾಡಿದ್ದೀರಿ ಎಂದು ಕೇಳಿದ್ದಳು' ಎಂದು ಅವರು ಅಂದಿನ ಸಂಭಾಷಣೆ ನೆನಪಿಸಿದ್ದಾರೆ. 'ನನ್ನ ಗುರಿಯತ್ತ ಹೆಜ್ಜೆ ಮುಂದಿಡಲು ಅದು ಪ್ರೇರಣೆಯಾಯಿತು' ಎಂದಿದ್ದಾರೆ.

'ನಾನು ನಂತರ ಕಠಿಣ ಪರಿಶ್ರಮ ಹಾಕಿದೆ. ಐಪಿಎಲ್‌ನಲ್ಲಿ ಸತತ ಮೂರು ವರ್ಷ ಸಾಕಷ್ಟು ರನ್ ಗಳಿಸಿದೆ. ದೇಶಿ ಕ್ರಿಕೆಟ್‌ನಲ್ಲೂ ಉತ್ತಮ ಪ್ರದರ್ಶನ ನೀಡಿದೆ. ಪರಿಣಾಮ 2021ರಲ್ಲಿ ಭಾರತ ತಂಡಕ್ಕೆ ಆಯ್ಕೆಯಾದೆ ಎಂದು ನೆನಪಿಸಿದ್ದಾರೆ. 'ದೇವಿಶಾ ನನ್ನ ಸಾಧನೆಯ ಹಿಂದಿನ ಶಕ್ತಿ. ಆಕೆಯಿಂದ ಸಾಕಷ್ಟು ಜೀವನಪಾಠ ಕಲಿತೆ' ಎಂದು ಪ್ರಶಂಸಿಸಿದ್ದಾರೆ. ದೇವಿಶಾ ಅವರ ಪೋಷಕರು ಕರ್ನಾಟಕ ಮೂಲದವರು.

'ಮಿಚೆಲ್ ಕ್ಷಮೆ ಕೇಳಿದ್ದೆ'

ನವದೆಹಲಿ (ಪಿಟಿಐ): ಫೈನಲ್ ಪಂದ್ಯದ ವೇಳೆ ನ್ಯೂಜಿಲೆಂಡ್ ಬ್ಯಾಟರ್ ಡ್ಯಾರಿಲ್ ಮಿಚೆಲ್ ಅವರತ್ತ ಅರ್ಷದೀಪ್ ಸಿಂಗ್ ಚೆಂಡನ್ನು ಜೋರಾಗಿ ಎಸೆದಿದ್ದಕ್ಕೆ ಅವರ ಬಳಿ ಕ್ಷಮೆ ಕೇಳಿದ್ದೆ ಎಂದು ಸೂರ್ಯ ತಿಳಿಸಿದ್ದಾರೆ. ಒಳ್ಳೆಯ ನಾಯಕತ್ವಕ್ಕೆ ಮಾದರಿಯಾಗುವ ಉದ್ದೇಶದಿಂದ ಹಾಗೆ ಮಾಡಿದೆ ಎಂದಿದ್ದಾರೆ.

ಸವಾಲಿಗೆ ಪ್ರಜ್ಞಾನಂದ ಸಜ್ಜು: ಆನಂದ್



ವಿಶ್ವನಾಥನ್ ಆನಂದ್



ಆರ್. ಪ್ರಜ್ಞಾನಂದ

ನವದೆಹಲಿ (ಪಿಟಿಐ): ಫಿಡೆ ಕ್ಯಾಂಡಿಡೇಟ್ಸ್ ಟೂರ್ನಿಗೆ ಮುಂಚಿತವಾಗಿ ನಡೆದ ಟೂರ್ನಿಗಳಲ್ಲಿ ಭಾರತದ ಚೆಸ್ ಯುವತಾರೆ ಆರ್.ಪ್ರಜ್ಞಾನಂದ ಅವರ ಆಟ ಸ್ವಲ್ಪ ಕಳೆಗುಂದಿರಬಹುದು. ಆದರೆ ಅವರು ಫಿಡೆ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಸವಾಲಿಗೆ ಮಾನಸಿಕವಾಗಿ ಸಜ್ಜಾಗುತ್ತಿದ್ದಾರೆ ಎಂದು ಭಾರತದ ದಿಗ್ಗಜ ಆಟಗಾರ ವಿಶ್ವನಾಥನ್ ಆನಂದ್ ಹೇಳಿದ್ದಾರೆ.

ವಿಶ್ವಕಪ್, ಫಿಡೆ ಸರ್ಕಿಟ್, ರ‍್ಯಾಂಕಿಂಗ್ ಮೊದಲಾದ ದಾರಿಯಲ್ಲಿ ಅರ್ಹತೆ ಪಡೆದ ಒಟ್ಟು ಎಂಟು ಮಂದಿ ಆಟಗಾರರು ಸೈಪ್ರಸ್‌ನಲ್ಲಿ ಇದೇ 28ರಿಂದ ನಡೆಯುವ ಈ ಟೂರ್ನಿಯ ಓಪನ್ ವಿಭಾಗದಲ್ಲಿ ಆಡುತ್ತಿದ್ದಾರೆ. ಇದರಲ್ಲಿ ಗೆಲ್ಲುವ ಆಟಗಾರ, ಈ ವರ್ಷದ ಕೊನೆಯಲ್ಲಿ ಹಾಲಿ ವಿಶ್ವ ಚಾಂಪಿಯನ್ ಡಿ.ಗುಕೇಶ್ ಅವರಿಗೆ ಚಾಲೆಂಜರ್ ಆಗಲಿದ್ದಾರೆ.

ಪ್ರಜ್ಞಾನಂದ ಓಪನ್ ವಿಭಾಗದಲ್ಲಿ ಪಾಲ್ಗೊಳ್ಳುತ್ತಿರುವ ಭಾರತದ ಏಕೈಕ ಆಟಗಾರ. ಅವರಿಗೆ ಫ್ಯಾಬಿಯಾನೊ ಕರುವಾನ, ಹಿಕಾರು ನಕಾಮುರಾ ಮೊದಲಾದ ಆಟಗಾರರಿಂದ ಸವಾಲು ಎದುರಾಗಲಿದೆ.

ವೈಯಕ್ತಿವಾಗಿ ಪ್ರಶಸ್ತಿಗೆ ನೆಚ್ಚಿನ ಆಟಗಾರ ಯಾರು ಎಂಬ ಪ್ರಶ್ನೆಗೆ ಫಿಡೆ ಉಪಾಧ್ಯಕ್ಷರೂ ಆಗಿರುವ ಆನಂದ್ ನೇರ ಉತ್ತರ ಹೇಳಲಿಲ್ಲ. 'ಪ್ರಜ್ಞಾನಂದ ಅನುಭವಿ. ಇತ್ತೀಚಿನ ಕೆಲ ತಿಂಗಳಲ್ಲಿ ಅವರು ಉತ್ತಮವಾಗಿ ಆಡದೇ ಇರಬಹುದು. ಆದರೆ ಟೂರ್ನಿಯ ವೇಳೆಗೆ ಅವರು ಆಟದ ಉತ್ತುಂಗ ತಲುಪಬಹುದು' ಎಂದು ಅವರು ಫಿಡೆಯ ಯುಟ್ಯೂಬ್ ಚಾನೆಲ್‌ಗೆ ತಿಳಿಸಿದರು.

ಕರುವಾನ, ನಕಾಮುರ ಮತ್ತು ಅನಿಶ್ ಗಿರಿ ಅವರಿಗೂ ಒಳ್ಳೆಯ ಅವಕಾಶವಿದೆ ಎಂದಿದ್ದಾರೆ ಆನಂದ್.

ಇಂಡಿಯನ್ ಓಪನ್ ಸ್ಕ್ವಾಷ್ ಇಂದಿನಿಂದ

ಮುಂಬೈ: ಇಲ್ಲಿನ ಬ್ರೆಬೋರ್ನ್ ಕ್ರೀಡಾಂಗಣದಲ್ಲಿ ಬುಧವಾರ ಎರಡನೇ ಆವೃತ್ತಿಯ ಜೆಎಸ್‌ಡಬ್ಲ್ಯು ಇಂಡಿಯನ್ ಓಪನ್ ಸ್ಕ್ವಾಷ್ ಟೂರ್ನಿ ಆರಂಭವಾಗಲಿದ್ದು, ಉನ್ನತ ಮಟ್ಟದ ಸ್ಪರ್ಧೆಗಳಿಗೆ ವೇದಿಕೆ ಸಿದ್ಧವಾಗಿದೆ.

ಭಾರತದ ತಾರಾ ಆಟಗಾರರು ಮತ್ತು ಅಂತರರಾಷ್ಟ್ರೀಯ ಸ್ಪರ್ಧಿಗಳನ್ನು ಒಳಗೊಂಡ ಈ ಟೂರ್ನಿಯಲ್ಲಿ ಪುರುಷರ ಮತ್ತು ಮಹಿಳೆಯರ ವಿಭಾಗಗಳಲ್ಲಿ ಒಟ್ಟು 30 ಪಂದ್ಯಗಳು ನಡೆಯಲಿವೆ.

ಇದೇ 18 ಮತ್ತು 19ರಂದು ಮೊದಲೆರಡು ಸುತ್ತಿನ ಪಂದ್ಯಗಳು, 20ರಂದು ಕ್ವಾರ್ಟರ್ ಫೈನಲ್, 21ರಂದು ಸೆಮಿಫೈನಲ್ ಮತ್ತು 22ರಂದು ಫೈನಲ್ ಪಂದ್ಯಗಳು ನಡೆಯಲಿವೆ.

ಹಾಲಿ ಚಾಂಪಿಯನ್ ಅನಾಹತ್ ಸಿಂಗ್ ಮೇಲೆ ಎಲ್ಲರ ಕಣ್ಣು ನೆಟ್ಟಿದೆ. ಇವರೊಂದಿಗೆ ಭಾರತದ ರಮಿತ್ ಟಂಡನ್, ವೀರ್ ಚೋತ್ರಾನಿ, ಅಭಯ್ ಸಿಂಗ್ ಮತ್ತು ಅನುಭವಿ ಜೋಷ್ನಾ ಚಿನ್ನಪ್ಪ ಅವರು ಉತ್ತಮ ಪ್ರದರ್ಶನ ನೀಡಲು ಸಜ್ಜಾಗಿದ್ದಾರೆ. ವಿದೇಶಿ ಆಟಗಾರರಾದ ಯಾಹ್ಯಾ ಎಲ್ನಾವಾಸ್ಸಿ, ನದೀನ್ ಎಲ್ಹಮ್ಮಮ್ ಮತ್ತು ಎನೋರಾ ವಿಲ್ಲಾರ್ಡ್ ಕೂಡ ಕಣದಲ್ಲಿದ್ದಾರೆ.



ಕಂಚು ವಿಜೇತ ಕರ್ನಾಟಕ ಮಹಿಳಾ ತಂಡ. (ಎಡದಿಂದ) ಹಿಮಾಂಶಿ ಚೌಧರಿ, ಖುಷಿ ವಿಶ್ವನಾಥ್, ತೃಪ್ತಿ ಪುರೋಹಿತ್, ಸಹನಾ ಮೂರ್ತಿ, ತನಿಷ್ಕಾ ಕಪಿಲ್ ಕಾಲಭೈರವ ಹಾಗೂ ಅನಿರ್ಬನ್ ತರಫ್‌ದಾರ್ (ಕೋಚ್ ಹಾಗೂ ಮ್ಯಾನೇಜರ್)

ಟಿ.ಟಿ: ಪಿಎಸ್‌ಪಿಬಿ ಚಾಂಪಿಯನ್

ಇಂದೋರ್ (ಪಿಟಿಐ): ಪೆಟ್ರೋಲಿಯಂ ಸ್ಪೋರ್ಟ್ಸ್ ಪ್ರೊಮೋಷನ್ ಬೋರ್ಡ್ (ಪಿಎಸ್‌ಪಿಬಿ) ಹಾಗೂ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (ಆರ್‌ಬಿಐ) ತಂಡಗಳು ಇಲ್ಲಿ ನಡೆಯುತ್ತಿರುವ 87ನೇ ಯುಟಿಟಿ ಸೀನಿಯರ್ ರಾಷ್ಟ್ರೀಯ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ವಿಭಾಗದ ಪ್ರಶಸ್ತಿ ಗೆದ್ದುಕೊಂಡವು.

ಪಿಎಸ್‌ಪಿಬಿ ತಂಡವು ಮಂಗಳವಾರ ನಡೆದ ಪುರುಷರ ಫೈನಲ್ ನಲ್ಲಿ 3–0ಯಿಂದ ಪಶ್ಚಿಮ ಬಂಗಾಳ ತಂಡವನ್ನು ಸುಲಭವಾಗಿ ಮಣಿಸಿತು. ಎರಡು ರಿವರ್ಸ್ ಪಂದ್ಯಗಳವರೆಗೆ ಸಾಗಿದ ಮಹಿಳೆಯರ ವಿಭಾಗದ ಫೈನಲ್‌ನಲ್ಲಿ ಆರ್‌ಬಿಐ ತಂಡವು 3–2ರಿಂದ ಪಿಎಸ್‌ಪಿಬಿ ತಂಡವನ್ನು ಸೋಲಿಸಿತು.

ಕರ್ನಾಟಕ ವನಿತೆಯರಿಗೆ ಕಂಚು: ಸೆಮಿಫೈನಲ್‌ನಲ್ಲಿ 1–3ರಿಂದ ಆರ್‌ಬಿಐ ತಂಡದ ಎದುರು ಪರಾಭವಗೊಂಡ ಕರ್ನಾಟಕ ಮಹಿಳಾ ತಂಡವು ಕಂಚಿನ ಪದಕ ತನ್ನದಾಗಿಸಿಕೊಂಡಿತು. ತನಿಷ್ಕಾ ಕಪಿಲ್ ಕಾಲಭೈರವ ನಾಯಕತ್ವದ ಕರ್ನಾಟಕ ತಂಡವು ಎಂಟರ ಘಟ್ಟದ ಪಂದ್ಯದಲ್ಲಿ 3–1ರಿಂದ ತಮಿಳುನಾಡು ವಿರುದ್ಧ ಗೆಲುವು ಸಾಧಿಸಿತ್ತು.